ಗುರುವಾರ, ಏಪ್ರಿಲ್ 7, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 96 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ಸಿವಿಲ್ ಸರ್ವೀಸಸ್ ಪರೀಕ್ಷೆಗಳಿಗೆ ಸಿದ್ಧವಾಗಲು ವಿಶೇಷ ತರಬೇತಿ ಅನಿವಾರ್ಯವೇ ಅಥವಾ ಸ್ವಯಂ ತಯಾರಿ ಸಾಕಾಗುತ್ತದೆಯೋ? ಇದಕ್ಕೆ ಉತ್ತರ ಇಲ್ಲಿದೆ



ಆಳ-ಅಗಲ

ಉತ್ತರ ಭಾರತ: ನವರಾತ್ರಿ ಅವಧಿಯಲ್ಲಿ ಮಾಂಸದಂಗಡಿ ಬಂದ್‌ಗೆ ಆಗ್ರಹ

ಸಂಪುಟ: ಬಿಜೆಪಿ ವರಿಷ್ಠರ ನಿರಾಸಕ್ತಿ 6

ಜುಲೈ 17ಕ್ಕೆ 'ನೀಟ್' • ಜೆಇಇ ಮೇನ್ ಪರೀಕ್ಷೆ ಮುಂದಕ್ಕೆ 4

ಸೆನ್ಸೆಕ್ಸ್	ನಿಫ್ಟಿ	₹/$
59,610 ▼	17,807 ▼	75.84 ▼

ಭಾರತ ವಿರುದ್ಧ ಅಲ್‌ಕೈದಾ ಹೇಳಿಕೆ ಹಿಜಾಬ್ ಪ್ರಸ್ತಾವ

ನವದೆಹಲಿ (ಪಿಟಿಐ): ಜಾಗತಿಕ ಉಗ್ರ ಸಂಘಟನೆ ಅಲ್‌ಕೈದಾ ಮುಖ್ಯಸ್ಥ ಆಯ್ಮಾನ್ ಅಲ್ ಝುವಾಹಿರಿ, ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆ ವಿರುದ್ಧ ವಾಗ್ದಾಳಿ ನಡೆಸಿದ್ದು, ಇದಕ್ಕೆ ಕರ್ನಾಟಕದಲ್ಲಿ ಇತ್ತೀಚೆಗೆ ಪ್ರತಿಧ್ವನಿಸಿದ ಹಿಜಾಬ್ ವಿವಾದವನ್ನು ಬಳಸಿಕೊಂಡಿದ್ದಾನೆ.

ಅಲ್ಲದೇ, ಕಾಲೇಜು ಆವರಣದಲ್ಲಿ 'ಅಲ್ಲಾ ಹು ಅಕ್ಬರ್' ಎಂದು ಘೋಷಣೆ ಕೂಗಿದ ಮಂಡ್ಯದ ವಿದ್ಯಾರ್ಥಿನಿ ಮುಸ್ಕಾನ್ ಖಾನ್ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದ್ದಾನೆ. 'ನಮ್ಮ ಮುಜಾಹಿದ್ ಸಹೋದರಿಯ ದಿಟ್ಟ ನಡೆ' ಮೆಚ್ಚಿ ಕವನ ಬರೆದಿದ್ದೇನೆ ಎಂದು ಹೇಳಿರುವ ಝುವಾಹಿರಿ, ಆ ಕವನವನ್ನು ಓದಿದ್ದಾನೆ.

'ಹಿಂದೂಗಳ ಭಾರತ ಹಾಗೂ ಅಲ್ಲಿನ ಅಸಂಸ್ಕೃತ ಪ್ರಜಾಪ್ರಭುತ್ವದ ವಾಸ್ತವ ಚಿತ್ರಣವನ್ನು ಬಹಿರಂಗಪಡಿಸಿರುವ ಆಕೆಗೆ ಅಲ್ಲಾ ತಕ್ಕ ಪ್ರತಿಫಲ ಕರುಣಿಸಲಿ' ಎಂದೂ ಝುವಾಹಿರಿ ಹೇಳಿದ್ದಾನೆ.

6ನೇ ಪುಟ ನೋಡಿ

ಮುಸ್ಕಾನ್ ತಂದೆಯ ಪ್ರತಿಕ್ರಿಯೆ 6

ಮುಂಬೈ: ಪ್ರಥಮ 'ಎಕ್ಸ್.ಇ' ತಳಿ ಪತ್ತೆ?

ಮುಂಬೈ/ನವದೆಹಲಿ: ಕೊರೊನಾ ವೈರಸ್‌ನ ಇತರೆ ತಳಿಗಳಿಗಿಂತ ವೇಗವಾಗಿ ಪ್ರಸರಣವಾಗಬಲ್ಲ ನೂತನ 'ಎಕ್ಸ್.ಇ' ತಳಿ ಸೋಂಕಿನ ಮೊದಲ ಪ್ರಕರಣ ನಗರದಲ್ಲಿ ಪತ್ತೆಯಾಗಿದೆ ಎಂದು ಬೃಹನ್ ಮುಂಬೈ ಮಹಾನಗರಪಾಲಿಕೆ ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

'ಫೆಬ್ರುವರಿಯಲ್ಲಿ ದಕ್ಷಿಣ ಆಫ್ರಿಕಾದಿಂದ ವಾಪಸಾಗಿದ್ದ ಮಹಿಳೆಯೊಬ್ಬರಲ್ಲಿ ಈ 'ಎಕ್ಸ್.ಇ' ತಳಿ ಸೋಂಕು ಪತ್ತೆಯಾಗಿದೆ. ಅವರಲ್ಲಿ ಯಾವುದೇ ರೋಗಲಕ್ಷಣ ಇಲ್ಲ. ಅವರು ಗುಣಮುಖರಾಗಿದ್ದಾರೆ' ಎಂದೂ ಅಧಿಕಾರಿಗಳು ಹೇಳಿದ್ದಾರೆ.

'ಮುಂಬೈನಲ್ಲಿ ವರದಿಯಾಗಿರುವ ಕೋವಿಡ್–19ಗೆ ಕೊರೊನಾ ವೈರಸ್‌ನ 'ಎಕ್ಸ್.ಇ' ತಳಿಯೇ ಕಾರಣ ಎಂದು ಹೇಳಲು ಈವರೆಗೆ ಯಾವುದೇ ವೈಜ್ಞಾನಿಕ ಆಧಾರಗಳಿಲ್ಲ. ಈ ಪ್ರಕರಣ ಕುರಿತು ವೈರಾಣು ಸಂರಚನೆ ವಿಶ್ಲೇಷಣೆ ಸಂಸ್ಥೆಯ ತಜ್ಞರು ಜಿನೋಮ್ ಸೀಕ್ವೆನ್ಸಿಂಗ್ ವಿಶ್ಲೇಷಣೆ ನಡೆಯುತ್ತಿದ್ದಾರೆ' ಎಂದು ಸಂಸ್ಥೆಯ ಅಧಿಕಾರಿಗಳು ನವದೆಹಲಿಯಲ್ಲಿ ತಿಳಿಸಿದ್ದಾರೆ.

ಆಕಾರ್ ಪಟೇಲ್ ಪ್ರಯಾಣಕ್ಕೆ ತಡೆ

ಬೆಂಗಳೂರು: ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಇಂಡಿಯಾ ಅಧ್ಯಕ್ಷ ಆಕಾರ್ ಪಟೇಲ್ ಅವರ ವಿದೇಶ ಪ್ರಯಾಣಕ್ಕೆ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನನಿಲ್ದಾಣದಲ್ಲಿ ಬುಧವಾರ ತಡೆಯೊಡ್ಡಲಾಗಿದೆ.

ಅಮೆರಿಕದ ಬಾಸ್ಟನ್‌ಗೆ ತೆರಳಲು ಆಕಾರ್ ಪಟೇಲ್ ಉದ್ದೇಶಿಸಿದ್ದರು.

'ಅಮ್ನೆಸ್ಟಿ ಇಂಡಿಯಾ ಇಂಟರ್‌ನ್ಯಾಷನಲ್ ವಿರುದ್ಧ ದಾಖಲಿಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಲುಕ್‌ಔಟ್ ನೋಟಿಸ್ ಜಾರಿಗೊಳಿಸಿರುವುದರಿಂದ ವಿದೇಶ ಪ್ರಯಾಣಕ್ಕೆ ನಿರ್ಬಂಧ ವಿಧಿಸಿರುವುದಾಗಿ ವಲಸೆ ಅಧಿಕಾರಿಗಳು ನನಗೆ ತಿಳಿಸಿದರು' ಎಂದು ಆಕಾರ್ ಪಟೇಲ್ ವಿವರಿಸಿದ್ದಾರೆ.

6ನೇ ಪುಟ ನೋಡಿ

ಎಫ್‌ಪಿಐ: ದಾಖಲೆಯ ಬಂಡವಾಳ ಹೊರಹರಿವು

ನವದೆಹಲಿ (ಪಿಟಿಐ): ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಮಾರ್ಚ್ 31ಕ್ಕೆ ಕೊನೆಗೊಂಡ 2021–22ನೇ ಹಣಕಾಸು ವರ್ಷದಲ್ಲಿ ಭಾರತದ ಬಂಡವಾಳ ಮಾರುಕಟ್ಟೆಗಳಿಂದ ಒಟ್ಟು ₹ 1.4 ಲಕ್ಷ ಕೋಟಿ ಬಂಡವಾಳ ಹಿಂದಕ್ಕೆ ಪಡೆದಿದ್ದಾರೆ.

ವಿವರ 12

ಚಿನಕುರಳಿ

ಪ್ರಕಾಶ್ ಶೆಟ್ಟಿ

ಯುವಕನ ಕೊಲೆ: ಸಾಮರಸ್ಯ ಕದಡುವ ಆರಗ ಹೇಳಿಕೆಗೆ ಆಕ್ರೋಶ

ಸಚಿವ ಜ್ಞಾನೇಂದ್ರ ಯಡವಟ್ಟು

ಪ್ರಜಾವಾಣಿ ವಾರ್ತೆ

ಆರಗ ಜ್ಞಾನೇಂದ್ರ

ಬೆಂಗಳೂರು: ಜೆ.ಜೆ.ನಗರದ ಚಂದ್ರಶೇಖರ್ ಕೊಲೆಗೆ ಸಂಬಂಧಿಸಿದಂತೆ ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಕೋಮು ಸೌಹಾರ್ದ ಕದಡುವ ರೀತಿಯಲ್ಲಿ ನೀಡಿದ ಹೇಳಿಕೆ ಕುರಿತು ವ್ಯಾಪಕ ಆಕ್ರೋಶ ವ್ಯಕ್ತವಾದ ಬೆನ್ನಲ್ಲೇ, ಪೇಚಿಗೆ ಸಿಲುಕಿದ ಅವರು ಕಡೆಗೆ ತಪ್ಪೊಪ್ಪಿಕೊಂಡಿದ್ದಾರೆ.

ರಾಜ್ಯದಲ್ಲಿ ಹಿಜಾಬ್ ಮುಂದಿಟ್ಟುಕೊಂಡು ಶುರುಮಾಡಿದ ವಿವಾದಗಳ ಸರಣಿ ಹಲಾಲ್, ಜಾತ್ರೆ- ಹಬ್ಬಗಳಲ್ಲಿ ಮುಸ್ಲಿಮ್ ವರ್ತಕರಿಗೆ ಬಹಿಷ್ಕಾರ, ಮಸೀದಿಗಳ ಧ್ವನಿವರ್ಧಕ ಬಳಕೆಗೆ ತಕರಾರು ಹೀಗೆ ದಿನಕ್ಕೊಂದು ವಿವಾದ ತಲೆ ಎತ್ತುತ್ತಲೇ ಇದೆ. ಇದರ ಮಧ್ಯೆಯೇ, ಬೆಂಗಳೂರಿನ ಜೆ.ಜೆ. ನಗರದಲ್ಲಿ ಸೋಮವಾರ ರಾತ್ರಿ ಬೈಕ್ ಡಿಕ್ಕಿ ವಿಚಾರಕ್ಕೆ ನಡೆದ ಗಲಾಟೆ ಕೊಲೆಯಲ್ಲಿ ಅಂತ್ಯಕಂಡಿತ್ತು.

ಈ ವಿಷಯವನ್ನು ಶಾಂತಿಯುತವಾಗಿ ಇತ್ಯರ್ಥ ಮಾಡಬೇಕಾದ ಗೃಹ ಸಚಿವರೇ, ಕೋಮುದ್ವೇಷಕ್ಕೆ ಕುಮ್ಮಕ್ಕು ನೀಡುವಂತೆ ಮಾತನಾಡಿದ್ದಕ್ಕೆ ವ್ಯಾಪಕ ಖಂಡನೆ ವ್ಯಕ್ತವಾಗಿದೆ.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನ ಪರಿಷತ್ ವಿರೋಧಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಮತ್ತು ಕನ್ನಡ ಚಳವಳಿ ನಾಯಕ ವಾಟಾಳ್ ನಾಗರಾಜ್ ಅವರು ಗೃಹ ಸಚಿವರ ನಡವಳಿಕೆಯನ್ನು ಖಂಡಿಸಿದ್ದು, 'ಅಜ್ಞಾನ ಪ್ರದರ್ಶಿಸಿರುವ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು' ಎಂದೂ ಆಗ್ರಹಿಸಿದ್ದಾರೆ.

ಸಚಿವರು ಮೊದಲು ಹೇಳಿದ್ದು: 'ಚಂದ್ರು ಹತ್ಯೆಯಾಗಿದೆ. ಮಾಹಿತಿ ತೆಗೆದುಕೊಂಡಿದ್ದೇನೆ. ಉರ್ದು ಮಾತನಾಡಲಿಕ್ಕೆ ಹೇಳಿದಾಗ ಆತ ಆ ಭಾಷೆ ಬರಲ್ಲ ಎಂದ. ಕನ್ನಡ ಬಿಟ್ಟು ಬೇರೆ ಭಾಷೆ ಬರಲ್ಲ ಎಂದು ಹೇಳಿದಾಗ ಚೂರಿಯಿಂದ ಚುಚ್ಚಿ ಚುಚ್ಚಿ ಅಮಾನುಷವಾಗಿ ಕೊಂದಿದ್ದಾರೆ. ಅವನೊಬ್ಬ ದಲಿತ ಯುವಕ. ಇದರಲ್ಲಿ ಭಾಗಿಯಾಗಿದ್ದ ಕೆಲವು ವ್ಯಕ್ತಿಗಳನ್ನು ಬಂಧಿಸಲಾಗಿದೆ'.

ಬದಲಾದ ಹೇಳಿಕೆ: 'ಚೂರಿ ಇರಿತದ ಘಟನೆಯ ಬಗ್ಗೆ ಬೆಳಿಗ್ಗೆ ಆ ಕ್ಷಣದಲ್ಲಿ ಯಾವ ಮಾಹಿತಿ ಸಿಕ್ಕಿತೋ ಅದನ್ನು ಹೇಳಿ ಬಿಟ್ಟೆ. ಆದರೆ, ಈಗ ವಿಸ್ತೃತ ವರದಿ ಬಂದಿದೆ.

6ನೇ ಪುಟ ನೋಡಿ

ಬೈಕ್ ಡಿಕ್ಕಿ ಗಲಾಟೆಯಿಂದ ಚಂದ್ರು ಕೊಲೆ

'ಬೈಕ್ ಡಿಕ್ಕಿ ವಿಚಾರವಾಗಿ ನಡೆದ ಗಲಾಟೆಯಿಂದಾಗಿಯೇ ಜಗಜೀವನರಾಮ್ ನಗರ ಠಾಣೆ ವ್ಯಾಪ್ತಿಯಲ್ಲಿ ಚಂದ್ರಶೇಖರ್ (22) ಎಂಬುವರ ಕೊಲೆ ನಡೆದಿದೆ' ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಸ್ಪಷ್ಟಪಡಿಸಿದ್ದಾರೆ.

'ಸ್ನೇಹಿತ ಸೈಮನ್ ರಾಜ್ ಜನ್ಮದಿನ ಆಚರಿಸಲೆಂದು ಚಂದ್ರು, ಛಲವಾದಿಪಾಳ್ಯದಲ್ಲಿರುವ ಕೊಠಡಿಯೊಂದಕ್ಕೆ ಹೋಗಿದ್ದರು. ರಾತ್ರಿ 2.30ರ ಸುಮಾರಿಗೆ ಊಟಕ್ಕೆಂದು ಹಳೆ ಗುಡ್ಡದಹಳ್ಳಿಗೆ ತೆರಳಿದ್ದರು. ಅಲ್ಲಿ ಅಂಗಡಿಗಳೆಲ್ಲಾ ಮುಚ್ಚಿದ್ದರಿಂದ ಬೇರೆಡೆ ಹೊರಟಿದ್ದರು. ಆಗ ಚಂದ್ರು ಹಾಗೂ ಸೈಮನ್ ಅವರಿದ್ದ ಬೈಕ್ ಮತ್ತೊಂದು ಬೈಕ್‌ಗೆ ಡಿಕ್ಕಿಯಾಗಿತ್ತು. ಮತ್ತೊಂದು ಬೈಕ್‌ನಲ್ಲಿದ್ದ ಆರೋಪಿ ಶಾಹಿದ್, ಜಗಳ ತೆಗೆದಿದ್ದಲ್ಲದೇ ಚಾಕುವಿನಿಂದ ಚಂದ್ರು ಬಲತೊಡೆಗೆ ಇರಿದು ಪರಾರಿಯಾಗಿದ್ದ' ಎಂದು ಮಾಹಿತಿ ನೀಡಿದ್ದಾರೆ.

'ಚಂದ್ರು ಅವರು ಚಿಕಿತ್ಸೆಗೆ ಸ್ಪಂದಿಸದೇ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಪ್ರಕರಣದ ಸಂಬಂಧ ಮೂವರನ್ನು ಬಂಧಿಸಲಾಗಿದೆ. ತನಿಖೆ ಮುಂದುವರಿದಿದೆ' ಎಂದು ಹೇಳಿದ್ದಾರೆ.

> ಗೃಹ ಸಚಿವರಾಗಲು ಆರಗ ಜ್ಞಾನೇಂದ್ರ ಅಸಮರ್ಥರು. ಇಲಾಖೆ ನಿರ್ವಹಣೆಯೇ ಗೊತ್ತಿಲ್ಲ. ಯಾರೇ ಸತ್ತರೂ ಎಲ್ಲರೂ ಮನುಷ್ಯರೇ. ಯಾರ ಸಾವಿನಲ್ಲೂ ರಾಜಕಾರಣ ಮಾಡಬಾರದು
>
> **ಸಿದ್ದರಾಮಯ್ಯ,** ವಿರೋಧ ಪಕ್ಷದ ನಾಯಕ

> ಕೊಲೆಯಾದವನನ್ನು 'ದಲಿತ ಯುವಕ' ಎಂದ ಗೃಹ ಸಚಿವರು, ಎಲ್ಲಿಯೂ ಆತನನ್ನು 'ಹಿಂದೂ ಯುವಕ' ಎನ್ನಲಿಲ್ಲ. ದಲಿತ ಯುವಕ ಹಿಂದೂ ಅಲ್ಲವೇ? ಯಾಕೀ ತಾರತಮ್ಯ?
>
> **ಎಚ್‌.ಡಿ. ಕುಮಾರಸ್ವಾಮಿ,** ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಪದವಿ: ಕನ್ನಡ ಕಡ್ಡಾಯಕ್ಕೆ ಹೈಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿ ಹಂತದಲ್ಲಿ ಕನ್ನಡವನ್ನು ಒಂದು ಭಾಷಾ ವಿಷಯವಾಗಿ ಕಲಿಯುವುದನ್ನು ಕಡ್ಡಾಯಗೊಳಿಸಿ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಆದೇಶ ಪ್ರಶ್ನಿಸಿ, ಸಂಸ್ಕೃತ ಭಾರತಿ (ಕರ್ನಾಟಕ) ಟ್ರಸ್ಟ್ ಸೇರಿದಂತೆ ಕೆಲ ಸಂಘ–ಸಂಸ್ಥೆಗಳು ಹಾಗೂ ವಿದ್ಯಾರ್ಥಿಗಳು ಸಲ್ಲಿಸಿದ್ದ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

'ರಾಷ್ಟ್ರೀಯ ಶಿಕ್ಷಣ ನೀತಿಯಡಿ (ಎನ್‌ಇಪಿ) ಪ್ರಾದೇಶಿಕ ಭಾಷೆಗಳನ್ನು ಕಡ್ಡಾಯ ಮಾಡಲಾಗಿಲ್ಲ ಎಂದು ಕೇಂದ್ರ ಸ್ಪಷ್ಟಪಡಿಸಿದೆ. ಹೀಗಿರುವಾಗ ಹೊರಗಿನಿಂದ ಬಂದ ವಿದ್ಯಾರ್ಥಿಗಳ ಮೇಲೆ ಕನ್ನಡ ಭಾಷೆ ಕಲಿಕೆಯನ್ನು ಏಕೆ ಹೇರುತ್ತೀರಿ. ಸರ್ಕಾರದ ನೀತಿಯಿಂದ ಪದವಿಗೂ ಮುನ್ನ ಕನ್ನಡ ಕಲಿಯದೇ ಇರುವ ವಿದ್ಯಾರ್ಥಿಗಳಿಗೆ ತೊಂದರೆಯಾಗಲಿದೆ. ಈ ನಿರ್ಧಾರವನ್ನು ಸರ್ಕಾರ ಮರು ಪರಿಶೀಲಿಸಬೇಕು. ಇಲ್ಲವಾದರೆ ಅರ್ಜಿದಾರರ ಮಧ್ಯಂತರ ಮನವಿ ಪರಿಗಣಿಸಿ ಸರ್ಕಾರದ ಆದೇಶಕ್ಕೆ ತಡೆ ನೀಡಲಾಗುವುದು' ಎಂದು ನ್ಯಾಯಪೀಠ ಈ ಮೊದಲು ಎಚ್ಚರಿಕೆ ನೀಡಿತ್ತು.

ಆದೇಶ ಮರು ಪರಿಶೀಲಿಸುವ ಬಗ್ಗೆ ರಾಜ್ಯ ಸರ್ಕಾರ, ಬುಧವಾರವೂ ಯಾವುದೇ ಸ್ಪಷ್ಟ ನಿಲುವು ತಿಳಿಸದೇ ಹೋದ ಕಾರಣ, 2021ರ ಆಗಸ್ಟ್ 7 ಹಾಗೂ ಸೆಪ್ಟೆಂಬರ್ 15ರಂದು ಹೊರಡಿಸಿದ್ದ ಆದೇಶಕ್ಕೆ ನ್ಯಾಯಪೀಠ ಮಧ್ಯಂತರ ತಡೆ ನೀಡಿತು.

ಇದೇ ವೇಳೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಪರ ವಕೀಲರು ಮಧ್ಯಂತರ ಅರ್ಜಿ ಸಲ್ಲಿಸಿದರು. ಪ್ರಕರಣದಲ್ಲಿ ತಮ್ಮನ್ನೂ ಪ್ರತಿವಾದಿಯನ್ನಾಗಿಸಿ, ವಾದ ಆಲಿಸುವಂತೆ ಕೋರಿದರು.

'ಈ ಮಧ್ಯಂತರ ಅರ್ಜಿಗೆ ಆಕ್ಷೇಪಣೆ ಸಲ್ಲಿಸಿ' ಎಂದು ಅರ್ಜಿದಾರರ ಪರ ವಕೀಲ ಶ್ರೀಧರ ಪ್ರಭು ಅವರಿಗೆ ಸೂಚಿಸಿದ ನ್ಯಾಯಪೀಠ, ವಿಚಾರಣೆಯನ್ನು ಜುಲೈಗೆ ಮುಂದೂಡಿದೆ.





ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿ., 8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560055.

ಬಹಿರಂಗ ಹರಾಜು ಇಸಿಹಾರ್

ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ,

ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿ.441) ಹಾಗೂ ವಸೂಲಾಧಿಕಾರಿಗಳು ಕ.ರಾ.ಸ.ಪ.ಬ್ಯಾಂಕುಗಳ ಮಹಾಮಂಡಳ ನಿ., ನಂ-32, ಕೆ.ಹೆಚ್. ರಸ್ತೆ, ಬೆಂಗಳೂರು – 560027. ಇವರ ಹುಕ್ಕುಂ ಈ ಕೆಳಗೆ ನಮೂದಿಸಿರುವ ಸಿ.ಇ.ಪಿ **ಸಂಖ್ಯೆಗಳಂತೆ** ಅಧಿಕಾರ ಹೊಂದಿರುವ ಮಾರಾಟಾಧಿಕಾರಿಯಾದ ನಾನು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಸೂಚಿಸಿರುವ ಸುಸ್ತಿದಾರರು **ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿ.**, 8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-55 ಇವರಲ್ಲಿ ತಮ್ಮ ಸ್ಥಿರಾಸ್ತಿಯ ಮೇಲೆ ಸಾಲ ಪಡೆದು ಸುಸ್ತಿದಾರರಾಗಿ ಸಾಲದ ಬಾಬ್ತು ಡಿಕ್ರಿಯಾಗಿ ಬ್ಯಾಂಕಿಗೆ ಆಧಾರ ಮಾಡಿದ ಈ ಕೆಳಗೆ ನಮೂದಿಸಿರುವ ಸ್ವತ್ತುಗಳನ್ನು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 38 ರನ್ವಯ ಬಹಿರಂಗ ಹರಾಜು ಮಾಡಲಾಗುವುದು. ಸಾರ್ವಜನಿಕರು ಬಹಿರಂಗ ಹರಾಜಿನಲ್ಲಿ ಭಾಗವಹಿಸಿ ಈ ಸ್ವತ್ತುಗಳನ್ನು ಹರಾಜಿನಲ್ಲಿ ಪಡೆದುಕೊಳ್ಳಬಹುದು. ಹೆಚ್ಚಿನ ವಿವರಗಳನ್ನು ಪ್ರಧಾನ ವ್ಯವಸ್ಥಾಪಕರು, **ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿ., ನಂ.156, 2ನೇ ಅಂತಸ್ತು, 8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 55** ಇವರಲ್ಲಿ ಪಡೆಯಬಹುದು. ದೂರವಾಣಿ ಸಂಖ್ಯೆ: 23442648, 23449450, ಮೊಬೈಲ್ 9845515981.

ಸುಸ್ತಿದಾರರ ಹೆಸರು	ಸಿ.ಇ.ಪಿ. ಸಂಖ್ಯೆ	ಹರಾಜು ಮಾಡುವ ಆಸ್ತಿಗಳ ವಿವರ	ಹರಾಜು ನಡೆಯಲಿರುವ ಸ್ಥಳ, ದಿನಾಂಕ ಸಮಯ ಮತ್ತು ವಸೂಲಾಗಬೇಕಾಗಿರುವ ಮೊತ್ತ
ಶ್ರೀಮತಿ. ಚನ್ನಮ್ಮ	ಎ.ಆರ್.ಇ/ಯು.ಬಿ.ಎಕ್ಸ್/213 & 214/ 2021-22	ನಂ.37, ಖಾತಾ ನಂ.98/ಎ, ಮನೆ ನಂ.242, ಲಗ್ಗೆರೆ, 12ನೇ ಮುಖ್ಯ ರಸ್ತೆ, ಜೆ.ಸಿ. ನಗರ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು. ಇಲ್ಲಿರುವ ಪೂರ್ವ ಪಶ್ಚಿಮ 30 ಅಡಿಗಳು & ಉತ್ತರ ದಕ್ಷಿಣ 40 ಅಡಿಗಳು ನಿವೇಶನದಲ್ಲಿರುವ ಕಟ್ಟಡಕ್ಕೆ ಚೆಕ್ಕುಬಂದಿ ಪೂರ್ವಕ್ಕೆ – ಸೈಟ್ ನಂ.38; ಪಶ್ಚಿಮಕ್ಕೆ – ಸೈಟ್ ನಂ.36; ಉತ್ತರಕ್ಕೆ – ರಸ್ತೆ ದಕ್ಷಿಣಕ್ಕೆ – ಬೇರೆಯವರ ಸ್ವತ್ತು	ನಂ.37, ಖಾತಾ ನಂ.98/ಎ, ಮನೆ ನಂ.242, ಲಗ್ಗೆರೆ, 12ನೇ ಮುಖ್ಯ ರಸ್ತೆ, ಜೆ.ಸಿ. ನಗರ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು. ದಿನಾಂಕ: 11.04.2022 ರ ಸೋಮವಾರ ಬೆಳಿಗ್ಗೆ 11-30 ಘಂಟೆ ರೂ.18,00,000/- (ದಿನಾಂಕ.31.01.2022 ರವರೆಗೆ ಮಾತ್ರ ಲೆಕ್ಕಾಚಾರ ಮಾಡಲಾಗಿದೆ).

ಹರಾಜಿನ ಷರತ್ತುಗಳು ಮತ್ತು ನಿಯಮಗಳು

1. ಹರಾಜಿನ ಮುನ್ನ ಸಾಲ ಮರುಪಾವತಿಯಾದ್ದಲ್ಲಿ ಸದರೀಯವರ ಸ್ವತ್ತನ್ನು ಹರಾಜು ಮಾಡಲಾಗುವುದಿಲ್ಲ.
2. ಕಟ್ಟಡ ಯಾವರೀತಿಯಲ್ಲಿದೆಯೋ ಅದೇ ರೀತಿಯಲ್ಲಿ ಹರಾಜು ಮಾಡಲಾಗುವುದು.
3. **ಹರಾಜಿನಲ್ಲಿ ಭಾಗವಹಿಸುವವರು ಹರಾಜಿಗೆ ಮುಂಚೆ ರೂ.50,00,000/- ಗಳ ಕೆಳಗೆ ಬಾಕಿ ಇರುವ ಪ್ರಕರಣಗಳಲ್ಲಿ ರೂ.50,000/- ಗಳನ್ನು ಠೇವಣಿಯಾಗಿ ಪಾವತಿಸಿ ರಸೀತಿಯನ್ನು ಪಡೆಯತಕ್ಕದ್ದು.**
4. **ರೂ.50,00,001/- ಮೇಲೆ ಬಾಕಿಯಿರುವ ಪ್ರಕರಣಗಳಲ್ಲಿ ರೂ.1,00,000/- ಗಳನ್ನು ಠೇವಣಿಯಾಗಿ ಪಾವತಿಸಿ ರಸೀತಿಯನ್ನು ಪಡೆಯತಕ್ಕದ್ದು.**
5. **ಹರಾಜಿನಲ್ಲಿ ಬಿಡ್ ನಿಂತ ತಕ್ಷಣವೇ ಹರಾಜು ಮೊಬಲಗಿನ ಶೇ.15 ರಷ್ಟು ಹಣವನ್ನು ಸ್ಥಳದಲ್ಲಿಯೇ ಪಾವತಿಸಿ ರಸೀತಿಯನ್ನು ಪಡೆಯುವುದು. ಉಳಿದ ಹಣವನ್ನು ನೋಂದಣಿ ವೆಚ್ಚ ಸಹಿತ 45 ದಿನಗೊಳಗಾಗಿ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಬಿಡ್‌ದಾರರು ಪಾವತಿ ಮಾಡಿರುವ ಹಣವನ್ನು ಕಾನೂನು ರೀತ್ಯ ಮುಟ್ಟುಗೋಲು ಹಾಕಿಕೊಂಡು ಬದಲಿ ಹರಾಜು ಮಾಡಲಾಗುವುದು.**
6. ಬಿಡ್ ಮೊಬಲಗು ಆಸ್ತಿಯ ಬೆಲೆಗಿಂತ ಕಡಿಮೆಯಾದ್ದಲ್ಲಿ ಆಸ್ತಿಯನ್ನು ಅಂತಹ ಬಿಡ್‌ದಾರರಿಗೆ ಬಿಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆ.ಸಿ.ಎಸ್.ನಿಯಮಗಳ ಪ್ರಕಾರ ಮಾರಾಟಾಧಿಕಾರಿಯವರು ಹೊಂದಿರುತಾರೆ.
7. ಹರಾಜಿನಲ್ಲಿ ಯೋಗ್ಯ ಬೆಲೆ ಬಾರದಿದ್ದಲ್ಲಿ ಹರಾಜಿಗಿಟ್ಟಿರುವ ಸ್ಥಿರಾಸ್ತಿಯನ್ನು ಖರೀದಿಸುವ ಮತ್ತು ಆಸ್ತಿ ವರ್ಗಾವಣೆ ಮಾಡಿಕೊಳ್ಳುವ ಹಕ್ಕನ್ನು ಬ್ಯಾಂಕು ಹೊಂದಿರುತ್ತದೆ.
8. ಹರಾಜಿಗಿಟ್ಟಿರುವ ಸ್ಥಿರಾಸ್ತಿಯ ವಿವರಣೆ ಮತ್ತು ಅಂದಾಜು ವಿಸ್ತೀರ್ಣದ ವಿಷಯದಲ್ಲಿಯಾವುದಾದರೂ ತಪ್ಪುಗಳಿದ್ದರೆ ಸರ್ಕಾದವರುಜವಾಬ್ದಾರರಾಗುವುದಿಲ್ಲ.
9. ಸ್ಥಿರಾಸ್ತಿ ಹರಾಜಿನ ಮಾರಾಟ ಸ್ಥಿರೀಕರಣವು ಹರಾಜಿನ ಷರತ್ತಿಗಳಿಗೊಳಪಟ್ಟಿರುತ್ತದೆ. ಬಿಡ್‌ದಾರರು ಷರತ್ತುಗಳನ್ನು ಪಾಲಿಸದಿದ್ದಲ್ಲಿ ಮಾರಾಟ ಸ್ಥಿರೀಕರಣಕ್ಕೆ ಸರ್ಕಾರದವರು ಜವಾಬ್ದಾರರಾಗುವುದಿಲ್ಲ.
10. ಮೂಲ ಸಾಲಗಾರರಾಗಲೀ, ಜಾಮೀನುದಾರರಾಗಲೀ ಅಥವಾ ಅವರ ಹಿತೈಷಿಗಳಾಗಲೀ ಬಹಿರಂಗ ಹರಾಜಿನಲ್ಲಿ ಆಸ್ತಿ ಮಾರಾಟ ಮಾಡಿದ 30 ದಿನಗಳೊಳಗಾಗಿ ಸಾಲದ ಪೂರ್ಣ ಬಾಕಿ ಮತ್ತು ಹರಾಜಿನಲ್ಲಿ ಆಸ್ತಿ ಖರೀದಿಸಿದ ಬಿಡ್‌ದಾರರು ಬ್ಯಾಂಕಿಗೆ ಠೇವಣಿ ಮಾಡಿದ ಹಣದ ಮೇಲೆ ಶೇ.5 ರಷ್ಟು ಹಣವನ್ನು ಬ್ಯಾಂಕಿಗೆ ಪಾವತಿ ಮಾಡಿದ್ದಲ್ಲಿ ಹರಾಜಿನಲ್ಲಿ ಆಸ್ತಿ ಖರೀದಿಸಿದವರು ಅವರು ಪಾವತಿಸಿದ ಮೊತ್ತ ಮತ್ತು ಅದರ ಮೇಲೆ ಶೇ.5 ರಷ್ಟು ಹಣ ಪಡೆಯಲು ಮಾತ್ರ ಹಕ್ಕುಳ್ಳವರಾಗಿರುತ್ತಾರೆ ಹಾಗೂ ಹರಾಜಿನಲ್ಲಿ ಕೂಗಿದ ಆಸ್ತಿಗೆ ಹಕ್ಕು ಇರುವುದಿಲ್ಲ.

ದಿನಾಂಕ: 28.02.2022
ಬೆಂಗಳೂರು.

ಮಾರಾಟಾಧಿಕಾರಿ
ದಿ ಜನತಾ ಕೋ-ಆಪರೇಟಿವ್ ಬ್ಯಾಂಕ್ ಲಿ.,
ಮಲ್ಲೇಶ್ವರಂ, ಬೆಂಗಳೂರು – 55.

'ಶಾಸನಗಳ ವೈಜ್ಞಾನಿಕ ದಾಖಲೀಕರಣ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಾಸನಗಳು ಇತಿಹಾಸವನ್ನು ದೃಢಪಡಿಸುತ್ತವೆ. ಐತಿಹಾಸಿಕ ದಾಖಲೆಗಳು ಎನಿಸಿಕೊಳ್ಳುವ ಶಾಸನಗಳ ವೈಜ್ಞಾನಿಕ ದಾಖಲೀಕರಣ ಅಗತ್ಯ' ಎಂದು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ನಿವೃತ್ತ ಪ್ರಾದೇಶಿಕ ನಿರ್ದೇಶಕ ಎಸ್.ವಿ.ವೆಂಕಟೇಶಯ್ಯ ಹೇಳಿದರು.

ದಿ ಮಿಥಿಕ್ ಸೊಸೈಟಿ, ಭಾರತೀಯ ಇತಿಹಾಸ ಸಂಶೋಧನಾ ಪರಿಷತ್ (ಐಸಿಎಚ್‌ಆರ್) ಮತ್ತು ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯವು ಬುಧವಾರ ಆಯೋಜಿಸಿದ್ದ 'ಶಾಸನಗಳ ಅಧ್ಯಯನ ಮತ್ತು ಸಂರಕ್ಷಣೆಯಲ್ಲಿ ಆಧುನಿಕ ವಿಧಾನಗಳು' ಕುರಿತ ಕಮ್ಮಟದಲ್ಲಿ ಅವರು ಮಾತನಾಡಿದರು.

'ಇತಿಹಾಸ ಅಧ್ಯಯನದಲ್ಲಿ ತಂತ್ರಜ್ಞಾನದ ಬಳಕೆ ಅಗತ್ಯ. ಇತಿಹಾಸ ಮತ್ತು ಪುರಾತನ ದಾಖಲೆಗಳು ನಮಗೆ ಶಾಸನಗಳ ಮೂಲಕ ದೊರೆಯುತ್ತವೆ. ಅವುಗಳ ಸಂರಕ್ಷಣೆಗಾಗಿ ಇಂದಿನ ಆಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಳ್ಳುವುದು ಉತ್ತಮ ಮಾರ್ಗ' ಎಂದರು.

'3ಡಿ ಸ್ಕ್ಯಾನಿಂಗ್ ಸೇರಿದಂತೆ ಹಲವು ತಂತ್ರಜ್ಞಾನಗಳಿಂದ ಶಾಸನಗಳನ್ನು ಸುಭದ್ರಪಡಿಸಬಹುದು. ಇದರಿಂದ ಓದಲು ಮತ್ತು ಅರ್ಥೈಸಲು ಸಹಕಾರಿಯಾಗಲಿದೆ. ಈ ಹೊಸ ತಂತ್ರಜ್ಞಾನಗಳ ಬಗ್ಗೆ ಇತಿಹಾಸ ಶಿಕ್ಷಕರು ಮತ್ತು ಸಂಶೋಧಕರಲ್ಲಿ ಹೆಚ್ಚಿನ ಜಾಗೃತಿ ಮೂಡಿಸಬೇಕು' ಎಂದೂ ಸಲಹೆ ನೀಡಿದರು.

'ಶಾಸನಗಳ ಅಧ್ಯಯನಕ್ಕೆ ಸಂಬಂಧಿಸಿದಂತೆ ಕಾಶ್ಮೀರ ಮತ್ತು ಈಶಾನ್ಯ ಭಾರತದ ಪ್ರದೇಶಗಳಲ್ಲಿ ದಾಖಲೀಕರಣ ಪ್ರಕ್ರಿಯೆ ಮತ್ತಷ್ಟು ಹೆಚ್ಚಾಗಬೇಕು. ಸಿಂಧೂ ನಾಗರಿಕತೆಯ ಲಿಪಿಗೆ ಸಂಬಂಧಿಸಿದಂತೆ ನಿಖರವಾದ ಸಂಶೋಧನೆಗಳು ಇನ್ನೂ ಮುಂದುವರಿದಿವೆ' ಎಂದರು.

ಕಾರ್ಯಕ್ರಮದಲ್ಲಿ ಇಡಲಾಗಿದ್ದ ಶಾಸನವನ್ನು ಎಸ್.ವಿ.ವೆಂಕಟೇಶಯ್ಯ ವೀಕ್ಷಿಸಿದರು. ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಕುಲಸಚಿವರಾದ(ಪರೀಕ್ಷಾಂಗ) ವಿ.ಅನುರಾಧ, ಮಿಥಿಕ್ ಸೊಸೈಟಿ ಅಧ್ಯಕ್ಷ ಕೆ.ನರಹರಿ, ಗೌರವ ಕಾರ್ಯದರ್ಶಿ ವಿ.ನಾಗರಾಜ್, ಐಸಿಎಚ್‌ಆರ್ ಉಪನಿರ್ದೇಶಕ ಎಸ್.ಕೆ.ಅರುಣಿ ಇದ್ದಾರೆ —ಪ್ರಜಾವಾಣಿ ಚಿತ್ರ

PUBLIC NOTICE

General public is hereby notified that our clients intend to purchase residential property bearing No.31; having BBMP PID No.100-727-31, situated at: 3rd Cross, Judicial Officers Layout, RMV 2nd Stage, Sanjaynagar, Bengaluru-94, measuring East to West: 18.29 mtrs and North to South: 12.19 mts, in all measuring 222.95 Sq.mts (2400 sq.ft.) together with residential building constructed thereon and bounded on the East by: Road, West By: Site No.45, North by: Site No.32 and South by: Site No.30, from its owner Sri. Ravindra Roikar. Any person/s having claim/objections of whatsoever nature with regard to the proposed sale transaction/ Schedule Property or any portion thereof, may write to the undersigned with all documentary proof, within 10 days from the date of this publication, failing which, our client shall proceed with the transaction as if there are no claims of whatsoever nature.

Lakshmish G., Advocate
LG Associates, Advocates & Solicitors,
#75/2, Railway Parallel Road,
Kumara Park West, Bangalore-20.
lakshmish@lgassociates.in
Date : 06.04.2022

ನಾಳೆಯಿಂದ ಚಿತ್ರಕಲಾ ಪ್ರದರ್ಶನ

ಬೆಂಗಳೂರು: ಚಿತ್ರ ಕಲಾವಿದೆ ಆಶಾ ವಿವೇಕ್ ಅವರ 'ಬ್ಲೆಂಡ್ ಆಫ್ ನೇಚರ್' ಚಿತ್ರಕಲಾ ಪ್ರದರ್ಶನವನ್ನು ಕರ್ನಾಟಕ ಚಿತ್ರಕಲಾ ಪರಿಷತ್‌ನಲ್ಲಿ ಏ.8ರಿಂದ 10ರವರೆಗೆ ಆಯೋಜಿಸಲಾಗಿದೆ.

ಪ್ರದರ್ಶನವನ್ನು ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ ಉದ್ಘಾಟನೆ ಮಾಡಲಿದ್ದಾರೆ. ಅತಿಥಿಗಳಾಗಿ ಹಿನ್ನೆಲೆ ಗಾಯಕಿ ಅರ್ಚನಾ ಉಡುಪ ಅವರು ಭಾಗವಹಿಸಲಿದ್ದಾರೆ. ಬೆಳಿಗ್ಗೆ 10.30ರಿಂದ ಸಂಜೆ 7.30ರವರೆಗೆ ಪ್ರದರ್ಶನ ಇರಲಿದೆ ಎಂದು ಪ್ರಕಟಣೆ ತಿಳಿಸಿದೆ.

ನಾಳೆಯಿಂದ ರಾಷ್ಟ್ರೀಯ 'ಸಂಜೀವಿನಿ ಸರಸ್' ಮೇಳ

ಬೆಂಗಳೂರು: ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ, ವಸತಿ ಮತ್ತು ನಗರ ವ್ಯವಹಾರ ಸಚಿವಾಲಯಗಳ ಆಶ್ರಯದಲ್ಲಿ ಇಲ್ಲಿನ ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಇದೇ 8ರಿಂದ 18ರವರೆಗೆ ರಾಷ್ಟ್ರೀಯ 'ಸಂಜೀವಿನಿ ಸರಸ್ ಮೇಳ' ನಡೆಯಲಿದೆ. ಮೇಳವನ್ನು 8ರಂದು ಸಂಜೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಲಿದ್ದಾರೆ.

ಮೇಳದ ಲಾಂಛನವನ್ನು ಬುಧವಾರಅನಾವರಣಗೊಳಿಸಿಮಾತನಾಡಿದ ಕೌಶಲಾಭಿವೃದ್ಧಿ ಮತ್ತು ಜೀವನೋಪಾಯ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, 'ಮಹಿಳೆಯರ ಆರ್ಥಿಕ ಸಬಲೀಕರಣದ ಆಶಯದಿಂದ ಹಮ್ಮಿಕೊಂಡಿರುವ ಈ ಮೇಳದಲ್ಲಿ ಮಹಿಳಾ ಸ್ವಸಹಾಯ ಸಂಘಗಳು ತಯಾರಿಸಿದ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಇರಲಿದೆ. 300ಕ್ಕೂ ಹೆಚ್ಚು ಮಳಿಗೆಗಳಿಗೆ ಅವಕಾಶ ಕಲ್ಪಿಸಲಾಗಿದ್ದು, ಅಖಿಲ ಭಾರತ ಮಟ್ಟದ ಉತ್ಪನ್ನಗಳು ಗ್ರಾಹಕರಿಗೆ ಸಿಗಲಿವೆ' ಎಂದರು.

'ರಾಷ್ಟ್ರೀಯ ಗ್ರಾಮೀಣ ಮತ್ತು ನಗರ ಜೀವನೋಪಾಯ ಅಭಿಯಾನದಡಿ ನಡೆಯಲಿರುವ ಈ ಮೇಳದಲ್ಲಿ ಕೈಮಗ್ಗದ ಉತ್ಪನ್ನಗಳು, ಕರಕುಶಲ ವಸ್ತುಗಳು, ಬುಡಕಟ್ಟು ಮತ್ತು ಸಾವಯವ ಉತ್ಪನ್ನಗಳು, ಅಲಂಕಾರಿಕ ವಸ್ತುಗಳು, ಮಣ್ಣಿನಿಂದ ತಯಾರಿಸಿದ ಪಾತ್ರೆಗಳು, ಮರದಿಂದ ಮಾಡಿದ ವಸ್ತುಗಳು, ಬಿದಿರು ಮತ್ತು ಸೆಣಬಿನ ವಸ್ತುಗಳು, ಸಾಂಬಾರ ಪದಾರ್ಥಗಳು, ಸಾಂಪ್ರದಾಯಿಕ ವಸ್ತ್ರಗಳು, ಕಲಾಕೃತಿಗಳು, ವರ್ಣಚಿತ್ರಗಳು, ಟೆರ್ರಾಕೋಟ ಮತ್ತು ಪಾರಂಪರಿಕ ಉತ್ಪನ್ನಗಳು ಹಾಗೂ ಸಂಸ್ಕರಿತ ಆಹಾರ ಪದಾರ್ಥಗಳು ಮುಂತಾದವು ಸಿಗಲಿವೆ' ಎಂದು ಮಾಹಿತಿ ನೀಡಿದರು.

'ಮೇಳದಲ್ಲಿ ಸ್ವಸಹಾಯ ಸಂಘಗಳ ಮಹಿಳಾ ಸದಸ್ಯರು ತಮ್ಮ ಕೌಶಲಗಳನ್ನು ಪ್ರದರ್ಶಿಸುವ ಜತೆಗೆ, ಗ್ರಾಹಕರ ಜೊತೆ ನೇರ ಸಂವಾದ ಮಾಡಬಹುದು. ಅಲ್ಲದೆ, ಉದ್ಯಮಶೀಲತೆ ಉತ್ತೇಜಿಸುವ ಗುರಿಯೊಂದಿಗೆ ತರಬೇತಿ, ಕಾರ್ಯಾಗಾರ, ವಿಚಾರ ಸಂಕಿರಣ, ಕಾರ್ಪೊರೇಟ್ ಪ್ರಮುಖರ ಮಾತುಕತೆ ಸಿಎಸ್‌ಆರ್ ದುಂಡು ಮೇಜಿನ ಸಭೆಗಳು ಮತ್ತು ನವೋದ್ಯಮ ಹಾಗೂ ಎನ್‌ಜಿಒ ಅಧಿವೇಶನಗಳನ್ನು ಕೂಡ ಏರ್ಪಡಿಸಲಾಗಿದೆ' ಎಂದರು.

'ಸರ್ಕಾರದ ವಿವಿಧ ಇಲಾಖೆಗಳು ಮತ್ತು ಬ್ಯಾಂಕುಗಳು ಉದ್ಯಮಶೀಲ ಮಹಿಳೆಯರಿಗೆ ನೀಡುತ್ತಿರುವ ವಿವಿಧ ಸಾಲ ಮತ್ತು ಸೇವಾ ಸೌಲಭ್ಯಗಳ ಬಗ್ಗೆಯೂ ಮಾಹಿತಿ ಒದಗಿಸಲು ವ್ಯವಸ್ಥೆ ಮಾಡಲಾಗಿದೆ' ಎಂದು ಸಚಿವರು ತಿಳಿಸಿದರು.

ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್. ಸೆಲ್ವಕುಮಾರ್, ರಾಷ್ಟ್ರೀಯ ಜೀವನೋಪಾಯ ಅಭಿಯಾನದ ನಿರ್ದೇಶಕಿ ಮಂಜುಶ್ರೀ, ಜಂಟಿ ನಿರ್ದೇಶಕಿ ಸ್ವರೂಪಾ, ಉಪ ನಿರ್ದೇಶಕಿ ನಯನಾ ಇದ್ದರು.

ನಗರಸಭಾ ಕಾರ್ಯಾಲಯ, ರಾಮನಗರ

ರಾಮನಗರ ಜಿಲ್ಲೆ-562159

ದೂರವಾಣಿ: 080-27271286, ಹೆಲ್ಪ್‌ಲೈನ್ ನಂ.: 080-27276070

Website: www.ramanagaracity.mrc.gov.in e-Mail: itstaff_ulb_ramanagaram@yahoo.com

ಸಂಖ್ಯೆ: ನಸರಾ/ಆ.ಶಾ/ಸಿ.ಆರ್/15ನೇ ಹಕಾ/ಸಿಆರ್/56/2021-22 ದಿನಾಂಕ: 04.04.2022

ಮರು ಟೆಂಡರ್ ಪ್ರಕಟಣೆ

2020-21ನೇ ಸಾಲಿನ 15ನೇ ಹಣಕಾಸು ಯೋಜನೆಯ ಅನುದಾನದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಈ ಕೆಳಕಂಡ ಟೆಂಡರ್‌ಗಳನ್ನು ಕರೆಯಲಾಗಿರುತ್ತದೆ. ತಾಂತ್ರಿಕವಾಗಿ ಅರ್ಹತೆ ಹೊಂದಿರುವ ಇಚ್ಛೆಯುಳ್ಳ ಸರಬರಾಜುದಾರರು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ **ದಿನಾಂಕ: 19.04.2022**ರ ಒಳಗೆ ಭಾಗವಹಿಸಬಹುದಾಗಿರುತ್ತದೆ. **"ಹೆಚ್ಚಿನ ವಿವರಗಳನ್ನು ಈ ಕಛೇರಿಯ ಆರೋಗ್ಯ ಶಾಖೆಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ."**

ಕ್ರ. ಸಂ.	ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)
1	ಘನ ತ್ಯಾಜ್ಯ ವಿಲೇವಾರಿಗಾಗಿ 5 ಕ್ಯೂ.ಮೀ ಸಾಮರ್ಥ್ಯದ 02 ಸಂಖ್ಯೆ ಟಿಪ್ಪರ್‌ಗಳ ಖರೀದಿ	39.46	98,650.00

ಸಹಿ/- ಅಧ್ಯಕ್ಷರು ನಗರಸಭೆ, ರಾಮನಗರ — ವಾಸಾಸಂಇ/ರಾನ/ಬ್ರಾಂಚ್/5/2022-23 — ಸಹಿ/- ಪೌರಾಯುಕ್ತರು ನಗರಸಭೆ, ರಾಮನಗರ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

ಬೆವಿಕಂ BESCOM

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)

(CIN: U04010KA2002SGC030438)

ಸಾರ್ವಜನಿಕ ಪ್ರಕಟಣೆ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತದ ಆರ್ಥಿಕ ವರ್ಷ-23ರ ಅನ್ವಯದಂತೆ ವಿದ್ಯುತ್ ದರ ಪರಿಷ್ಕರಣೆ

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ವಿದ್ಯುಚ್ಛಕ್ತಿ ಕಾಯಿದೆ, ಪರಿಚ್ಛೇದ 62, 64 ಮತ್ತು ಇತರೆ ನಿಯಮಾನುಸಾರ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ದಿನಾಂಕ: 04.04.2022ರಂದು ಆರ್ಥಿಕ ವರ್ಷ-23, ವಿದ್ಯುತ್ ದರಗಳನ್ನು ಪರಿಷ್ಕರಿಸಿದೆ.

ಸದರಿ ವಿದ್ಯುತ್ ದರ ಪರಿಷ್ಕರಣೆಯ ಮುಖ್ಯಾಂಶಗಳು:

- ಪರಿಷ್ಕೃತ ದರಗಳು 2022 ರ ಏಪ್ರಿಲ್ 1 ರಂದು ಅಥವಾ ಅದರ ನಂತರದ ಮೊದಲ ಮೀಟರ್ ಓದುವ ದಿನಾಂಕದಿಂದ ಬಳಕೆ ಮಾಡುವ ವಿದ್ಯುಚ್ಛಕ್ತಿಗೆ ಅನ್ವಯವಾಗುತ್ತದೆ.
- ಎಲ್‌ಟಿ ಮತ್ತು ಎಚ್‌ಟಿ ವರ್ಗದ ಎಲ್ಲಾ ಪ್ರವರ್ಗಗಳಿಗೆ ವಿದ್ಯುತ್ ಬಳಕೆ ಶುಲ್ಕದಲ್ಲಿ ಪ್ರತಿ ಯೂನಿಟ್‌ಗೆ 5 ಪೈಸೆ ಹೆಚ್ಚಿಸಲಾಗಿದೆ.
- ಎಲ್ಲಾ ವರ್ಗದ ಗ್ರಾಹಕರಿಗೆ ಪ್ರತಿ ಕಿಲೋವ್ಯಾಟ್ / ಎಚ್‌ಪಿ / ಕೆವಿಎಗೆ ನಿಗದಿತ ಶುಲ್ಕವನ್ನು ರೂ. 10 ರಿಂದ ರೂ. 30 ರಷ್ಟು ಹೆಚ್ಚಿಸಲಾಗಿದೆ.
- ಒಟ್ಟಾರೆ ಜಕಾತಿ ಹೆಚ್ಚಳವು ಶೇ. 4.19ರಷ್ಟಿರುತ್ತದೆ.
- ಕಡಿಮೆ ಮತ್ತು ಮಧ್ಯಮ ವರ್ಗದ ಗೃಹಬಳಕೆಯ ಗ್ರಾಹಕರ ವಿದ್ಯುಚ್ಛಕ್ತಿಯ ಬಳಕೆಯನ್ನು ಉತ್ತೇಜಿಸಲು, 0-30 ಯೂನಿಟ್‌ಗಳ ಮೊದಲ ಹಂತವನ್ನು 0-50 ಯೂನಿಟ್ ಅನ್ನು ಮುಂದುವರೆಸಲಾಗಿದೆ.
- ಕೋವಿಡ್-19 ರ ದುಷ್ಪರಿಣಾಮಗಳಿಂದಾಗಿ ಸೂಕ್ಷ್ಮ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳು ಎದುರಿಸುತ್ತಿರುವ ಆರ್ಥಿಕ ಬಿಕ್ಕಟ್ಟನ್ನು ತಗ್ಗಿಸಲು, ಸರ್ಕಾರವು ಪ್ರಮಾಣೀಕರಿಸಿದಂತೆ **LT-5(a)** ಮತ್ತು **LT-5(b)** ವರ್ಗಕ್ಕೆ ಆಯೋಗವು 12 ತಿಂಗಳ ಅವಧಿಗೆ ಬಳಸುವ ವಿದ್ಯುತ್‌ಗೆ ಇಂಧನ ಶುಲ್ಕದಲ್ಲಿ ಪ್ರತಿ ಯೂನಿಟ್‌ಗೆ 50 ಪೈಸೆ ರಿಯಾಯಿತಿ ನೀಡಲು ನಿರ್ಧರಿಸಿದೆ.
- **ಕರ್ನಾಟಕ ರಾಜ್ಯದ ಕರಾವಳಿ ತೀರಪ್ರದೇಶದ ಸಮುದ್ರದಿಂದ 5 ಕಿಮೀ ವ್ಯಾಪ್ತಿಯೊಳಗೆ ನೆಲೆಗೊಂಡ ಮೀನುಗಾರಿಕೆ ಉದ್ದೇಶಕ್ಕಾಗಿ ಬಳಸಲಾಗುವ ಐಸ್ ತಯಾರಿಕಾ ಘಟಕಗಳು/ಕೋಲ್ಡ್ ಸ್ಟೋರೇಜ್ ಸ್ಥಾವರಗಳಿಗೆ ಈಗಾಗಲೇ ವಿಸ್ತರಿಸಲಾದ ಸ್ಥಿರ ಶುಲ್ಕಗಳು/ಬೇಡಿಕೆ ಶುಲ್ಕಗಳಲ್ಲಿನ ರಿಯಾಯಿತಿಯ ಜೊತೆಗೆ ವರ್ಷದಲ್ಲಿ ಮಾಡಿದ ಬಳಕೆಗಾಗಿ ಇಂಧನ ಶುಲ್ಕದಲ್ಲಿ ಪ್ರತಿ ಯೂನಿಟ್‌ಗೆ ರೂ.1 ರ ರಿಯಾಯಿತಿಯನ್ನು ವಿಸ್ತರಿಸಲು ಆಯೋಗವು ನಿರ್ಧರಿಸಿದೆ.**
- ಸಮಯಾಧಾರಿತ ವಿದ್ಯುತ್ (ಟಿಒಡಿ) ಜಕಾತಿಯಡಿಯಲ್ಲಿ, ಜುಲೈನಿಂದ ನವೆಂಬರ್ ವರೆಗಿನ ಮಳೆಗಾಲದ ಅವಧಿಯಲ್ಲಿ ಹೆಚ್.ಟಿ-1, ಹೆಚ್.ಟಿ-2 (ಎ), (ಬಿ) ಮತ್ತು (ಸಿ) ಪ್ರವರ್ಗಗಳಿಗೆ ಸಂಬಂಧಿಸಿದಂತೆ ಸಂಜೆಯ ಗರಿಷ್ಠ ಅವಧಿಯಲ್ಲಿ 18:00 ಗಂಟೆಯಿಂದ 22:00 ಗಂಟೆಯವರೆಗಿನ ವಿದ್ಯುತ್ ಬಳಕೆಗೆ ವಿಧಿಸಲಾಗುತ್ತಿದ್ದ ದಂಡವನ್ನು ಹಿಂಪಡೆಯಲಾಗಿದೆ. ಆದಾಗ್ಯೂ, ಈ ಆದೇಶದಲ್ಲಿ ಬಿಎಂಆರ್‌ಸಿಎಲ್ ಮತು ರೈಲ್ವೆಟ್ರಾಕ್ಷನ್ ಸ್ಥಾವರಗಳನ್ನು ಹೊರತುಪಡಿಸಿ ಸಂಜೆಯ ಗರಿಷ್ಠ ಬಳಕೆಗೆ ದಂಡವನ್ನು ಡಿಸೆಂಬರ್ ನಿಂದ ಜೂನ್ ವರೆಗೆ ಮುಂದುವರಿಸಲಾಗುತ್ತದೆ.
- ಜುಲೈ ತಿಂಗಳಿಂದ ನವೆಂಬರ್ ವರೆಗೆ ಮಳೆಗಾಲದಲ್ಲಿ 22:00 ಗಂಟೆಯಿಂದ 06:00 ಗಂಟೆಯವರೆಗೆ (ಮುಂದಿನ ದಿನ) ವಿದ್ಯುತ್ ಬಳಕೆಗಾಗಿ ಪ್ರತಿ ಯೂನಿಟ್‌ಗೆ 100 ಪೈಸೆಗಳ ಟಿಒಡಿ ರಿಯಾಯಿತಿಯನ್ನು ಹಿಂಪಡೆಯಲಾಗಿದೆ. ಆದಾಗ್ಯೂ, ಡಿಸೆಂಬರ್‌ನಿಂದ ಜೂನ್‌ವರೆಗೆ 22:00 ಗಂಟೆಯಿಂದ 06:00 ಗಂಟೆಯವರೆಗೆ ವಿದ್ಯುತ್ ಬಳಕೆಗಾಗಿ ಪ್ರತಿ ಯೂನಿಟ್‌ಗೆ 100 ಪೈಸೆಗಳ ಟಿಒಡಿ ಪ್ರೋತ್ಸಾಹವನ್ನು ಮುಂದುವರಿಸಲಾಗಿದೆ.
- **ಹೆಚ್ಚುವರಿ ವಿದ್ಯುತ್ ಮಾರಾಟವನ್ನು ಉತ್ತೇಜಿಸುವ ಸಲುವಾಗಿ, ಎಚ್‌ಟಿ 2 (ಎ), (ಬಿ) ಮತ್ತು (ಸಿ) ಪ್ರವರ್ಗಗಳಿಗೆ ಆರ್ಥಿಕ ವರ್ಷ-23ರಲ್ಲಿ ಮೂಲ/ಕ್ರಮಬದ್ಧ ಬಳಕೆಗಿಂತ ಹೆಚ್ಚಿನ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.6 ರಂತೆ ವಿದ್ಯುತ್ ಮಾರಾಟ ಮಾಡಲು "ರಿಯಾಯಿತಿ ವಿದ್ಯುಚ್ಛಕ್ತಿ ದರ" ಯೋಜನೆಯನ್ನು ಮುಂದುವರೆಸಿದೆ.**
- ವಿದ್ಯುತ್ ಮಾರಾಟವನ್ನು ಹೆಚ್ಚಿಸಲು ಮತ್ತು ಗ್ರಾಹಕರನ್ನು ಎಸ್ಕಾಂಗಳ ಕಡೆಗೆ ಆಕರ್ಷಿಸುವ ಸಲುವಾಗಿ, ಆಯೋಗವು ಅಸ್ತಿತ್ವದಲ್ಲಿರುವ "ವಿಶೇಷ ಪ್ರೋತ್ಸಾಹಕ ಯೋಜನೆ"ಯನ್ನು ಎಚ್‌ಟಿ ವರ್ಗಕ್ಕೆ ಆರ್ಥಿಕ ವರ್ಷ-23ರ ಅವಧಿಯಲ್ಲಿ ಇನ್ನೂ ಒಂದು ವರ್ಷ ಮುಂದುವರಿಸಲು ನಿರ್ಧರಿಸಿದೆ.
- ಆಯೋಗವು ರೈಲ್ವೇ ಟ್ರಾಕ್ಷನ್ ಸ್ಥಾವರಗಳಿಗೆ ಪ್ರತಿ ಯೂನಿಟ್‌ಗೆ ರೂ.6.60 ರ ರಿಯಾಯಿತಿ ದರವನ್ನು ಅನುಮತಿಸುವುದನ್ನು ಮುಂದುವರೆಸಿದೆ.
- ಗ್ರಾಹಕರ ಸ್ಥಾವರಗಳ ಆವರಣಗಳಲ್ಲಿ ಸ್ಥಾಪಿತವಾದ ತ್ಯಾಜ್ಯ ಸಂಸ್ಕರಣಾ ಘಟಕ ಮತ್ತು ಒಳಚರಂಡಿ/ಕೊಳಚೆನೀರು ಸಂಸ್ಕರಣಾ ಘಟಕಗಳಿಗೆ ಆಯಾ ವರ್ಗದ ಸ್ಥಾವರಗಳಿಗೆ ಅನ್ವಯವಾಗುವ ದರದಲ್ಲಿ ಬಿಲ್ಲು ಮಾಡುವುದನ್ನು ಮುಂದುವರೆಸಲಾಗಿದೆ.
- ಘನ ತ್ಯಾಜ್ಯಗಳ ಸಂಸ್ಕರಣೆಯಿಂದಾಗುವ ಪರಿಸರ ಮತ್ತು ಸಾಮಾಜಿಕ ಪರಿಣಾಮಗಳನ್ನು ಪರಿಗಣಿಸಿ ಆಯೋಗವು, ಕೈಗಾರಿಕೆಗಳ ಆವರಣದಲ್ಲಿ ಇರುವ ಘನತ್ಯಾಜ್ಯ ಸಂಸ್ಕರಣಾ ಘಟಕಗಳಿಗೆ ಎಲ್‌ಟಿ ಮತ್ತು ಹೆಚ್.ಟಿ ಕೈಗಾರಿಕಾ ವರ್ಗದದರ ಅನ್ವಯಿಸುವುದನ್ನು ಮುಂದುವರಿಸಿದೆ.
- **GoI/GoK** ನೀತಿಗೆ ಅನುಗುಣವಾಗಿ ರಾಜ್ಯದಲ್ಲಿ ಪರಿಸರಸ್ನೇಹಿ ಎಲೆಕ್ಟ್ರಿಕ್ ಮೋಟಾರು ವಾಹನದ ಬಳಕೆಯನ್ನು ಉತ್ತೇಜಿಸಲು ಆಯೋಗವು **LT-6 (c)** ನ ಉಪ-ವರ್ಗವನ್ನು **LT-6** ಜಕಾತಿ ಪ್ರವರ್ಗದಡಿಯಲ್ಲಿ ಎಲೆಕ್ಟ್ರಿಕ್ ವೆಹಿಕಲ್ ಬ್ಯಾಟರಿ ವಿನಿಮಯ ಕೇಂದ್ರಗಳು ಸೇರಿದಂತೆ ಎಲೆಕ್ಟ್ರಿಕ್ ವೆಹಿಕಲ್ ಚಾರ್ಜಿಂಗ್ ಸ್ಟೇಷನ್‌ಗಳಿಗೆ ವಿದ್ಯುತ್ ಸರಬರಾಜು, ಸ್ಥಿರ/ಬೇಡಿಕೆ ಶುಲ್ಕಗಳು ಮತ್ತು ಶಕ್ತಿಯ ಶುಲ್ಕಗಳನ್ನು ಹೆಚ್ಚಿಸದೇ ರಿಯಾಯಿತಿಯನ್ನು ಮುಂದುವರಿಸಿದೆ.
- **ಆಯೋಗವು ನವೀಕರಿಸಬಹುದಾದ ಮೂಲಗಳಿಂದ ಶಕ್ತಿಯ ಖರೀದಿ ಮತ್ತು ಬಳಕೆಯನ್ನು ಉತ್ತೇಜಿಸಲು, ಹೆಚ್.ಟಿ ಇಂಡಸ್ಟ್ರೀಸ್ ಮತ್ತು ಹೆಚ್.ಟಿ ವಾಣಿಜ್ಯ ಗ್ರಾಹಕರಿಗೆ, ಅವರು ಇಚ್ಛಿಸಿದಲ್ಲಿ, ಅವರಿಗೆ ಅನ್ವಯವಾಗುವ ದರಕ್ಕಿಂತ ಪ್ರತಿ ಯೂನಿಟ್ಟಿಗೆ 50 ಪೈಸೆಯಷ್ಟು ಹೆಚ್ಚಿನ ಹಸಿರು ದರವನ್ನು ಮುಂದುವರಿಸಿದೆ.**
- ವಿವರವಾದ ಜಕಾತಿ ಆದೇಶವು ಕವಿನಿ ಆಯೋಗದ ಜಾಲತಾಣದ ಈ ಕೆಳಗಿನ ಲಿಂಕ್ ನಲ್ಲಿ ಲಭ್ಯವಿರುತ್ತದೆ. **https://karunadu.karnataka.gov.in/kerc/Pages/tariff-orders-2022.aspx.**

ಸಹಿ/- ನಿರ್ದೇಶಕರು (ಹಣಕಾಸು), ಬೆವಿಕಂ

'ಅರಣ್ಯ ಭವನ ಚಲೋ'

ಮೈಸೂರು: 'ಸೇವೆ ಕಾಯಂಗೊಳಿಸುವುದು ಸೇರಿದಂತೆ ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ರಾಜ್ಯ ಅರಣ್ಯ ಇಲಾಖೆ ದಿನಗೂಲಿ ನೌಕರರ ಸಂಘ ಏ.11ರಂದು ಅರಣ್ಯ ಭವನ ಚಲೋ ಮುಷ್ಕರ ಹಮ್ಮಿಕೊಂಡಿದೆ' ಎಂದು ಸಂಘದ ರಾಜ್ಯ ಅಧ್ಯಕ್ಷ ಎ.ಎಂ.ನಾಗರಾಜು ತಿಳಿಸಿದರು.

ಅಂದು ಬೆಳಿಗ್ಗೆ 11 ಗಂಟೆಗೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ನಡೆಸಲಿದ್ದೇವೆ ಎಂದರು.

ನಿಧನ ವಾರ್ತೆ

'ಅಜ್ಜಿಮನೆ'ಯ ಸಬಿಹಾ ಹಷ್ಮಿ

ಮಾಗಡಿ: ತಾಲ್ಲೂಕಿನ ಜ್ಯೋತಿಪಾಳ್ಯದ 'ಅಜ್ಜಿ ಮನೆ'ಯ ಸಂಸ್ಥಾಪಕಿ ಸಬಿಹಾ ಹಷ್ಮಿ (73) ಅನಾರೋಗ್ಯದಿಂದ ಮಂಗಳವಾರ ರಾತ್ರಿ ನಿಧನರಾದರು.

ಮೂಲತಃ ಉತ್ತರ ಪ್ರದೇಶದ ಅಲಿಗಡದ ಸಬಿಹಾ ದೆಹಲಿಯಲ್ಲಿ ಲಲಿತ ಕಲೆ ವಿಷಯದಲ್ಲಿ ಪದವಿ ಮುಗಿಸಿ ಅಲ್ಲಿಯೇ ಕಲಾ ಶಿಕ್ಷಕಿಯಾಗಿ ಸೇವೆಗೆ ಸಲ್ಲಿಸಿದ್ದರು. 2007ರಲ್ಲಿ ಸ್ವಯಂ ನಿವೃತ್ತಿ ಪಡೆದು ಮಗನ ಜೊತೆ ಬೆಂಗಳೂರಿಗೆ ಬಂದು ನೆಲೆಸಿದ್ದರು. ಜ್ಯೋತಿಪಾಳ್ಯದಲ್ಲಿ ಜಮೀನು ಖರೀದಿಸಿ ಇಲ್ಲಿಯೇ 'ಅಜ್ಜಿ ಕಲಿಕಾ ಕೇಂದ್ರ' ಹೆಸರಿನ ತರಬೇತಿ ಕೇಂದ್ರ ಆರಂಭಿಸಿದ್ದರು. ಸುತ್ತಲಿನ ಬಡ ಮಕ್ಕಳಿಗೆ ವಿವಿಧ ರೀತಿಯ ತರಬೇತಿ ನೀಡುತ್ತಿದ್ದರು. ಸುತ್ತಮುತ್ತಲಿನ ಗ್ರಾಮಗಳ ಮಕ್ಕಳಿಗೆ ಪ್ರೀತಿಯ 'ಅಜ್ಜಿ'ಯಾಗಿದ್ದರು.

ಅವರಿಗೆ ಮಗಳು ಶಬನಾ ಮಿತ್ರ, ಪುತ್ರರಾದ ಗೆನೆ, ಫರ್ವೇಜ್ ಹಾಗೂ ತಂಗಿ ಶಬನಂ ಹಷ್ಮಿ ಸೇರಿದಂತೆ ಸಹೋದರ- ಸಹೋದರಿಯರು ಇದ್ದಾರೆ. ಜ್ಯೋತಿಪಾಳ್ಯದಲ್ಲಿ ಬುಧವಾರ ಬೆಳಿಗ್ಗೆ ಪಾರ್ಥಿವ ಶರೀರವನ್ನು ದರ್ಶನಕ್ಕೆ ಇಡಲಾಗಿತ್ತು, ಬಳಿಕ ಕೆಂಗೇರಿಯ ವಿದ್ಯುತ್ ಚಿತಾಗಾರದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಬಿ.ಎನ್. ರಂಗಶೆಟ್ಟಿ

ಬೆಂಗಳೂರು: ಲೋಕೋಪಯೋಗಿ ಇಲಾಖೆಯ ನಿವೃತ್ತ ಸೂಪರಿಂಟೆಂಡೆಂಟ್ ಎಂಜಿನಿಯರ್ ಬಿ.ಎನ್. ರಂಗಶೆಟ್ಟಿ(92) ಅವರು ಹೃದಯಾಘಾತದಿಂದ ವಿಲ್ಸನ್ ಗಾರ್ಡನ್‌ನ ತಮ್ಮ ನಿವಾಸದಲ್ಲಿ ಬುಧವಾರ ನಿಧನರಾದರು.

ಇವರಿಗೆ ಪತ್ನಿ, ಮಗ, ಸೊಸೆ ಮತ್ತು ಮೊಮ್ಮಗ ಇದ್ದಾರೆ. ವಿಲ್ಸನ್ ಗಾರ್ಡನ್ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಯಿತು.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

ST.ANNE'S FIRST GRADE COLLEGE FOR WOMEN
#2, Miller Road
Bangalore - 560052
WANTED
Full Time Lecturers in: Commerce, Management, Computer Science and Mathematics.
Physical Education Instructor.
Typist-cum-Clerk: Computer Knowledge,
Attender: SC/ST Candidates will be given preference
Apply Immediately
The Principal
St.Anne's First Grade College for Women
No.2, Miller Road, Bangalore - 560052
Contact: 080-22383421

WANTED EXPERIENCED TEACHERS B.A/ BSc, B.Ed English Literature, Computer Science. Florence High school, Sanjaynagar :23416499

Graphic Designers

WANTED DTP Operator/ Graphic Designer Corel Draw, Illustrator & Photoshop for a Pvt Limited Company in around Rajajinagar Contact: 23307910/ 9108458798

Security & Detectives

WANTED SECURITY & Security SUPERVISOR SSLC & PUC Education, for Bangalore Harohalli. Room available. Contact: 944812246, 9483520246

Wanted

WANTED FEMALE Office Assistant Knowing Accounts with Tally Having Fluency In English & Hindi In & Around Rajajinagar Contact: 9108458798/ 23384085

ADMISSION CORNER

M. R. AMBEDKAR DENTAL COLLEGE & HOSPITAL
#1/36, CLINE ROAD, COOKE TOWN, BANGALORE - 05.
BDS
ADMISSION OPEN
ALL NEET Qualified students are invited to the College for spot counseling on From 7th April 2022 onwards, 9. A. M. to 3.00 P. M.
• Hostel & Mess Facility
• Study Material & Uniform
Email: chairmanmradc@gmail.com
Mobile: 78298 88255 (WhatsApp)

WANTED:WANTED DIPLOMA in Special Education on Hearing Impairment to work in Samuha Koppal District. Interested candidates can apply to hnbsamuha@gmail.com or contact 9945802204

BUSINESS

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

WANTED BUSINESS Partner Non Veg Hotel 10 Lakhs Investment Monthly Income 2 Lakhs: 9606701007/ 8892501007

PROPERTY CORNER

HOUSSO
Where smiles become wider
THE GOLDEN WATTLE @ WHITEFIELD
☞ 1km From Sai Baba Ashram
☞ 5 Acres Gated Community
☞ CC Roads
☞ Bank Loans Available
DC converted sites
Ph: 7338271412 / 9986949224

REAL ESTATE SELLING

Sites

Electronic City

SALE. SITE 30'x40' AECS-BDA Approved Layout, Kudlu- Singasandra 'A' Block, Clear Title. Rs. 8500/- sqft. Negotiable. Brokers Excuse. Genuine Buyers. 9513999347.

Hosur Road

5-ACRE-LAND-SALE Bank Seased With Rera Approval For 600 FLAT Construction Just Rs.24 Crore Market Rate Rs 38 Crore+ Only Genuine Investors /Builders Contact: 99009 76000

PERSONAL

Change of Name

I, AAKULU SURYAPRAKASH SHWETHA PRAKASH (old name) residing at A16-A17, 2nd Floor, 10th Main Road, Jayanagar 3rd Block, Bangalore 560011, have changed my name to SHWETHA KARTHIK B. (New Name) w.e.f. 06/04/2022 vide Affidavit sworn before Advocate & Notary Mahesha J.J.

I, VADIRAJ GR HATHWAR R/o, #46, 2nd Main, 1st Cross, Srinidhi Layout Konanakunte, Bengaluru-62 have changed my Son's name from AMOGHA HATHWAR to AMOGH HATHWAR Vide affidavit dated 30/03/2022 before Notary Jayappa. A, Bangalore

MAHENDRA PRASAD Father/o 14841437A HAV /MT, AMIT KUMAR PASWAN, Vill- Dibiya (Dhobitola) Khorabar Sadar Gorakhpur, Uttar Pradesh, changed name from MAHENDRA PRASAD to MAHENDRA, 05/04/2022, Notary K.V. Mani, Bangalore

I, BASAMMA, residing at #172, Maruthinagar 4th cross Mahadeshwarnagar, Herohalli cross, Bangalore-91, have changed my name to LAKSHMI vide affidavit dated 19.02.2022 before Notary Prakasha .C Bangalore. Henceforth I shall be called LAKSHMI only.

PATI DEVI Mother/o 14841437A HAV /MT AMIT KUMAR PASWAN, Vill- Dibiya (Dhobitola) Khorabar Sadar Gorakhpur, Uttar Pradesh, changed name from PATI DEVI to PATTI DEVI, 05/04/2022, Notary K.V. Mani, Bangalore

Lost

ಕಳೆದಿದೆ
ಕುಮಾರ G.E. ಆದ ನಾನು ಹಾರೋಕ್ಯಾತನಹಳ್ಳಿ ಗ್ರಾಮ ದಾಸನಪುರ (ಹೋ) ಅಡಕಮಾರನಹಳ್ಳಿ ಗ್ರಾಮ ಪಂಚಾಯಿತಿ ಬೆಂಗಳೂರು ಉತ್ತರ (ತಾ) ಬೆಂಗಳೂರು ಇಲ್ಲಿ ವಾಸವಾಗಿದ್ದು ದಿನಾಂಕ 15-02-2022 ರಂದು ಹಾರೋಕ್ಯಾತನಹಳ್ಳಿ ಗ್ರಾಮದ ಖಾತೆ ನಂ. 67 ರಲ್ಲಿ ಶ್ರೀ ಪ್ರವೀಣ್ ಕುಮಾರ್ C. A. ಶ್ರೀಮತಿ ನಮ್ರತ ಮಾಲೆ ಶ್ರೀ ಪ್ರೀತಮ್ ಶೆಟ್ಟಿ ಅವರು ಶ್ರೀಮತಿ ರಾಧ N. K. ರವರಿಗೆ ಕೊಟ್ಟಿರುವ ಕ್ರಯ ಪತ್ರ ಮನೆ ಬದಲಾವಣೆ ಮಾಡುವಾಗ ಕಳೆದು ಹೋಗಿರುತ್ತದೆ. ಯಾರಿಗಾದರೂ ಸಿಕ್ಕಿದ್ದಲ್ಲಿ ದಯವಿಟ್ಟು ಸಂಪರ್ಕಿಸಿ: ಫೋನ್: 9844709847, 9686714099 ಅಥವಾ ಹತ್ತಿರದ ಪೊಲೀಸ್ ಠಾಣೆಗೆ ತಿಳಿಸಿ

ಕಳೆದುಹೋಗಿದೆ
ಶ್ರೀ ವಿ ಮಂಜುನಾಥ, ವಯಸ್ಸು 56 ವರ್ಷ, ಫ್ಲಾಟ್ ನಂ.204, ಲೋಟಸ್ ಬ್ಲಾಕ್, ಪಾವನಿ ರೆಸಿಡೆನ್ಸಿ, ಪುಟ್ಟೇನಹಳ್ಳಿ, ಯಲಹಂಕ, ಬೆಂಗಳೂರು - 64 ಈ ವಿಳಾಸದಲ್ಲಿ ವಾಸವಿರುವ ನಾನು, ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನಮ್ಮ ತಂದೆ ಟಿ. ಸಿ. ವೆಂಕಟಗಿರಿಯಪ್ಪ ರವರ ಹೆಸರಿನಲ್ಲಿ ಚಿಂತಾಮಣಿಯಲ್ಲಿರುವ ಮನೆಯ **ನಂ.1675/1576** ರ ಶುದ್ಧ ಕ್ರಯ ಪತ್ರ **ನಂ.1253/71-72** ಒರಿಜಿನಲ್ ಪತ್ರವು ಕಳೆದು ಹೋಗಿರುತ್ತದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ : 23.03.2022 ರಂದು ದೂರನ್ನು ದಾಖಲಿಸಲಾಗಿದೆ, ದೂರಿನ ಉಲೇಖ ಸಂಖ್ಯೆ : ಪಿ01356220600256.
ಸಿಕ್ಕಿದಲ್ಲಿ ಸಂಪರ್ಕಿಸಿ: 98453 30002

FUTURE FOCUS

Astrology

COSMIC THERAPY Treatment through Photograph for successful life Profession Business Relationship. Contact- VARADARAJPAI- 9591773396/ 9482603396

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH ಪ್ರಜಾವಾಣಿ
BOOK YOUR REAL ESTATE
Classified Advertisement In Deccan Herald & Prajavani
SATURDAY & SUNDAY COMBO OFFER

Ordinary Per word	Bold Per word	Ordinary Semi Display Per word	Bold Semi Display Per word	Single Col CD Per sqcm
80	125	95	155	570

condition apply*
For More Details Contact:
Ph:080- 45557160 | 163 | 164 | M: 9880856233 |
9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com

ಬೆಂಗಳೂರು ವಿಶ್ವವಿದ್ಯಾಲಯ ಘಟಿಕೋತ್ಸವ ಮುಂದೂಡಿಕೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ 56ನೇ ಘಟಿಕೋತ್ಸವವನ್ನು ಈ ತಿಂಗಳ ಅಂತ್ಯಕ್ಕೆ ಮುಂದೂಡಲಾಗಿದೆ.

ಈ ಮೊದಲು ಏಪ್ರಿಲ್ 8ಕ್ಕೆ ಘಟಿಕೋತ್ಸವ ನಿಗದಿಯಾಗಿತ್ತು. ಆದರೆ, ಕುಲಪತಿ ಪ್ರೊ.ಕೆ.ಆರ್. ವೇಣು ಗೋಪಾಲ್ ಅವರ ನೇಮಕಾತಿ ಗೊಂದಲ ಹೈಕೋರ್ಟ್, ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ನೇಮಕಾತಿಯನ್ನು ರದ್ದುಪಡಿಸಿ ಹೈಕೋರ್ಟ್ ವಿಭಾಗೀಯ ಪೀಠದ ಆದೇಶಕ್ಕೆ ಸುಪ್ರೀಂ ಕೋರ್ಟ್ ಸೋಮವಾರ ತಡೆಯಾಜ್ಞೆ ನೀಡಿತ್ತು.

'ಘಟಿಕೋತ್ಸವ ದಿನಾಂಕ, ಸಮಯ ಸ್ಥಳವನ್ನು ಶೀಘ್ರ ಪ್ರಕಟಿಸಲಾಗುವುದು' ಎಂದು ಕುಲಸಚಿವರು ತಿಳಿಸಿದ್ದಾರೆ.



ಹೆಚ್ ಡಿ ಎಫ್ ಸಿ ಬ್ಯಾಂಕ್ ಹೆಚ್ ಡಿ ಎಫ್ ಸಿ ಲಿಮಿಟೆಡ್‌ನೊಂದಿಗೆ ವಿಲೀನವಾಗಿದೆ.

'ಮತ ಬ್ಯಾಂಕಿಗಾಗಿ ಸಮಾಜ ಒಡೆಯುವ ಕಾಂಗ್ರೆಸ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮತಾಂಧತೆ ಕಾಂಗ್ರೆಸ್ ಪಕ್ಷವನ್ನು ಆವರಿಸಿಕೊಂಡಿದ್ದು, ಮತ ಬ್ಯಾಂಕಿಗಾಗಿ ಸಮಾಜವನ್ನು ಒಡೆಯುವ ಕೆಲಸವನ್ನು ಕಾಂಗ್ರೆಸ್ ಮಾಡುತ್ತಿದೆ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ದೂರಿದರು.

ಬುಧವಾರ ನಗರದದಲ್ಲಿ ಪಕ್ಷದ ಸಂಸ್ಥಾಪನಾ ದಿನಾಚರಣೆಯ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿ, 'ಶಾದಿಭಾಗ್ಯದಂತ ಸಮಾಜ ಒಡೆಯುವ ಯೋಜನೆಯನ್ನು ನರೇಂದ್ರಮೋದಿ, ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಅವರಾಗಲೀ ಕೊಟ್ಟಿದ್ದಲ್ಲ. ಅದನ್ನು ಸಿದ್ದರಾಮಯ್ಯ ಕೊಟ್ಟಿದ್ದು' ಎಂದು ಹೇಳಿದರು.

'ವಿರೋಧ ಪಕ್ಷಗಳಿಗೆ ಟೀಕೆ ಮಾಡಲೇಬೇಕು ಎಂಬ ಧೋರಣೆ ಇದೆ. ಮೆಚ್ಚುವ ಔದಾರ್ಯ ಅವರಲ್ಲಿಲ್ಲ. ಸಮವಸ್ತ್ರ ವಿರುದ್ಧ ಹಿಜಾಬ್ ವಿಷಯವನ್ನು ಎತ್ತಿಕೊಂಡು ಬಂದವರಿಗೆ ಅವರು ಪಾಠ ಹೇಳಬೇಕಿತ್ತು. ದೇಶದ ಶಾಲಾ–ಕಾಲೇಜುಗಳಲ್ಲಿ 1983 ರಿಂದ ಸಮವಸ್ತ್ರ ಕಡ್ಡಾಯವಿದೆ. ಬಿಜೆಪಿ ಇದ್ದನ್ನು ಕಡ್ಡಾಯಗೊಳಿಸಿದ್ದಲ್ಲ. ಹಿಜಾಬ್ ವರ್ಸಸ್ ಸಮವಸ್ತ್ರದ ವಿಷಯ ಬಂದಾಗ ಸಮವಸ್ತ್ರ ಪರ ನಿಲ್ಲುತ್ತಾರೋ ಹಿಜಾಬವ್ ಪರ ನಿಲ್ಲುತ್ತಾರೋ ಎಂಬುದನ್ನು ಕಾಂಗ್ರೆಸ್‌ನವರು ಸ್ಪಷ್ಟಪಡಿಸಲಿ. ನಾವಂತೂ ಸಮವಸ್ತ್ರದ ಪರ ಇದ್ದೇವೆ' ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಬಿಜೆಪಿ ಕೋಮುವಾದಕ್ಕೆ ಕುಮ್ಮಕ್ಕು ನೀಡಿದೆ ಎಂಬ ಸಿದ್ದರಾಮಯ್ಯ ಅವರ ಆರೋಪದ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, 'ಪ್ರಧಾನಿಯವರ ಹೆಸರು ಮತ್ತು ಕೆಲಸ ಕಾರ್ಯಗಳು ನಮಗೆ ಗೆಲುವು ತಂದು ಕೊಟ್ಟಿವೆ. ನಮಗೆ ಕೋಮು ಭಾವನೆಗೆ ಕುಮ್ಮಕ್ಕು ನೀಡುವ ಅವಶ್ಯಕತೆ ಇಲ್ಲ. ಅವರಿಗೆ ಪ್ರಾಮಾಣಿಕತೆ ಇದೆಯೇ? ಹಿಜಾಬ್ ಸಂಘರ್ಷಕ್ಕೆ ನೆರವು ಒದಗಿಸಿದವರು ಯಾರು? ಹಿಜಾಬ್ ಪರ ಎಲ್ಲ ವಕೀಲರು ಕಾಂಗ್ರೆಸ್‌ನವರೇ ಆಗಿದ್ದರು. ನಾವು ಹೈಕೋರ್ಟ್ ತೀರ್ಪನ್ನು ಸ್ವಾಗತಿಸುತ್ತೇವೆ. ಕಾಂಗ್ರೆಸ್ ನಿಲುವೇನು' ಎಂದು ರವಿ ಪ್ರಶ್ನಿಸಿದರು.

ಬಿಜೆಪಿ ಸಂಸ್ಥಾಪನಾ ದಿನಾಚರಣೆಯ ಅಂಗವಾಗಿ ಕಾಡುಮಲ್ಲೇಶ್ವರ ದೇವಸ್ಥಾನದಿಂದ ಪಕ್ಷದ ಕಚೇರಿವರೆಗೆ ಮೆರವಣಿಗೆಯಲ್ಲಿ ಬಂದ ಸಿ.ಟಿ.ರವಿ, ಡಾ.ಸಿ.ಎನ್.ಅಶ್ವತ್ಥನಾರಾಯಣ ಮತ್ತು ಇತರರು

ಬಿಜೆಪಿ ಸಂಸ್ಥಾಪನಾ ದಿನಾಚರಣೆ

ಬಿಜೆಪಿಯ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಬುಧವಾರ ಪಕ್ಷದ ಸ್ಥಾಪನಾ ದಿನಾಚರಣೆಯ ಅಂಗವಾಗಿ ಮಲ್ಲೇಶ್ವರ ಕಾಡು ಮಲ್ಲೇಶ್ವರ ದೇವಸ್ಥಾನದಲ್ಲಿ ಪೂಜೆ ನೆರವೇರಿಸಿ, ಪಕ್ಷಕ್ಕಾಗಿ ಪ್ರಾರ್ಥನೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ, ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ, ಪಕ್ಷದ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಸಿದ್ದರಾಜು ಮುಂತಾದವರು ಇದ್ದರು. ಬಳಿಕ ಸಚಿವರು, ಶಾಸಕರು ಮತ್ತು ಕಾರ್ಯಕರ್ತರು ಪಕ್ಷದ ಕಾರ್ಯಾಲಯ ಜಗನ್ನಾಥ ಭವನಕ್ಕೆ ಮೆರವಣಿಗೆ ಮೂಲಕ ಧ್ವಜಾರೋಹಣ ನೆರವೇರಿಸಿದರು.

ಗೃಹ ಸಚಿವ ಆರಗ ಜ್ಞಾನೇಂದ್ರ, ಸಚಿವ ಎಸ್.ಅಂಗಾರ, ಉಪಸಭಾಧ್ಯಕ್ಷ ಆನಂದ ಮಾಮಾನಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಮತ್ತು ವಿಧಾನಪರಿಷತ್ ಸದಸ್ಯರಾದ ಎನ್ ರವಿಕುಮಾರ್, ಪ್ರತಾಪಸಿಂಹ ನಾಯಕ್ ಇದ್ದರು.

ಕಾರ್ಮಿಕ ಸಾವು

ಬೆಂಗಳೂರು: ಕಟ್ಟಡ ಕಾರ್ಮಿಕನಾಗಿ ಕೆಲಸ ಮಾಡುತ್ತಿದ್ದ ಯುವಕನೊಬ್ಬ ಅನುಮಾನಾಸ್ಪದವಾಗಿ ಮೃತಪಟ್ಟಿದ್ದು, ನಂದಿನಿ ಲೇಔಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಚಾಮರಾಜನಗರದ ವೆಂಕಟೇಶ್ (23) ಮೃತಪಟ್ಟವರು. ಏ. 3ರಂದು ಗಾಯಗೊಂಡ ಸ್ಥಿತಿಯಲ್ಲಿ ವೆಂಕಟೇಶ್ ಮನೆಗೆ ಬಂದಿದ್ದರು. ಅವರ ತೋಳು, ಕಾಲು, ತಲೆಗೆ ಗಾಯಗಳಾಗಿದ್ದವು. ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಸ್ಪಂದಿಸದೆ ಬುಧವಾರ ಮೃತಪಟ್ಟರು. ವೆಂಕಟೇಶ್ ಗೋಣಿಚೀಲ ಸುತ್ತಿಕೊಂಡು ಮನೆಗೆ ಹೋಗುತ್ತಿದ್ದ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ' ಎಂದು ಪೊಲೀಸರು ಹೇಳಿದ್ದಾರೆ.

ನಗರದಲ್ಲಿ ಇಂದು

ಕಾಲೇಜು ವಾರ್ಷಿಕೋತ್ಸವ: ಅತಿಥಿಗಳು–ಅರುಣ್ ಜೆಜಿ ಚಕ್ರವರ್ತಿ, ಬೆನೆಡಿಕ್ಟ್ ಮೇರಿ ಜೋಸೆಫ್, ಆಯೋಜನೆ ಮತ್ತು ಸ್ಥಳ–ಜ್ಯೋತಿ ನಿವಾಸ್ ಸ್ವಾಯತ್ತ ಕಾಲೇಜು, ಜ್ಯೋತಿ ಸಭಾಂಗಣ, ಬೆಳಿಗ್ಗೆ 10

ವಿಶ್ವ ಆರೋಗ್ಯ ದಿನ: ಅತಿಥಿಗಳು–ಎಸ್.ಕೆ.ಸತೀಶ್, ಕೀರ್ತಿ ಸಾಹೂ, ಅಧ್ಯಕ್ಷತೆ–ಪ್ರತಿಮಾ ಮೂರ್ತಿ, ಆಯೋಜನೆ–ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯ (ನಿಮ್ಹಾನ್ಸ್) ಸಮಾವೇಶ ಕೇಂದ್ರ, ಹೊಸೂರು ರಸ್ತೆ, ಮಧ್ಯಾಹ್ನ 3

ಬಿಷಪ್ ಕಾಟನ್ ಬಾಲಕರ ಶಾಲೆಯ ಪದವಿ ಪ್ರದಾನ: ಅತಿಥಿಗಳು–ರೆವರೆಂಡ್ ಪಿ.ಕೆ.ಸ್ಯಾಮುಯಲ್, ಗೋಪಾಲ ಶಂಕರನಾರಾಯಣನ್, ಸ್ಥಳ–ಸಂಸ್ಥೆಯ ಆವರಣ, ರೆಸಿಡೆನ್ಸಿ ರಸ್ತೆ, ಸಂಜೆ 5.30

ಶಾಂತವೇರಿ ಗೋಪಾಲಗೌಡರ ಕುರಿತು ಉಪನ್ಯಾಸ: ಸಿ.ಕೆ.ರಾಮೇಗೌಡ, ಅತಿಥಿ–ಎಂ.ಸಿ.ನರೇಂದ್ರ, ಅಧ್ಯಕ್ಷತೆ–ಜಗದೀಶ ರೆಡ್ಡಿ, ಮಹಾಂತೇಶ ದೇಗಾವಿ, ಆಯೋಜನೆ ಮತ್ತು ಸ್ಥಳ–ಕನ್ನಡ ಯುವಜನ ಸಂಘ, ವಿಲ್ಸನ್ ಗಾರ್ಡನ್, ಸಂಜೆ 6.30

ಶ್ರೀರಾಮೋತ್ಸವ: ರಮ್ಯಾ ಸುಧೀರ್ ಅವರಿಂದ ಹರಿನಾಮ ಸಂಕೀರ್ತನೆ, ವಾದ್ಯ ಸಹಕಾರ–ಶ್ರೀನಿವಾಸ ಕಾಖಂಡಕಿ, ಅಮಿತ್ ಶರ್ಮಾ, ಸ್ಥಳ–ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30

84ನೇ ಶ್ರೀರಾಮನವಮಿ ಉತ್ಸವ ಮತ್ತು ಅಂತರರಾಷ್ಟ್ರೀಯ ಸಂಗೀತೋತ್ಸವ: ಕರ್ನಾಟಕ ಸಂಗೀತ ಕಾರ್ಯಕ್ರಮ–ಸಿಕ್ಕಿಲ್ ಗುರುಚರಣ್, ಚಾರುಲತಾ ರಾಮಾನುಜಂ, ಸುಮೇಶ್ ನಾರಾಯಣ್, ಜಿ.ಗುರುಪ್ರಸನ್ನ, ಆಯೋಜನೆ–ಶ್ರೀರಾಮಸೇವಾ ಮಂಡಳಿಯ ರಾಮನವಮಿ ಉತ್ಸವ ಟ್ರಸ್ಟ್, ಸ್ಥಳ–ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಮೈದಾನ, ಸಂಜೆ 5ರಿಂದ



ಸಿಕ್ಕಿಲ್ ಗುರುಚರಣ್

ಏರ್‌ಫೇರ್‌ಗಳು ಆಕಾಶ ಮುಟ್ಟುತ್ತಿವೆ, ಹೋಟೆಲ್‌ಗಳು ತುಂಬಿಹೋಗಿವೆ!

ಬೇಸಿಗೆಯ ಹಾಲಿಡೇಗಳು ಸೋಲ್ಡ್ ಔಟ್!

ಪ್ರವಾಸ ಹೋಗುತ್ತಿದೆ ಭಾರತ, ಆದರೆ ನೀವು ಯಾಕೆ ಹೋಗುತ್ತಿಲ್ಲ? ಇಂದೇ ಬುಕ್ ಮಾಡಿರಿ ನಿಮ್ಮ ಬೇಸಿಗೆಯ ಹಾಲಿಡೇಯನ್ನು!

ಸರಿ, ಬ್ಯಾಗ್ ತುಂಬಿಸಿ, ಹೊರಡಿ! ವೀಣಾ ವರ್ಲ್ಡ್‌ನೊಂದಿಗೆ!!

ಕಾಶ್ಮೀರದ ಮುಖ್ಯ ಸ್ಥಳಗಳು 6 Days 47000 onwards

ಏರ್‌ಫೇರ್‌ನೊಂದಿಗೆ ಎಲ್ಲವೂ ಒಳಗೊಂಡ ಪ್ರವಾಸಗಳು (ಮುಂಬೈನಿಂದ ಮುಂಬೈಗೆ)

ಶಿಮ್ಲಾ ಮನಾಲಿ ಮಣಿಕರಣ್ 8 Days 45000 onwards

ಪುಣೆ ಅಹಮದಾಬಾದ್ ಕೋಲ್ಕತ್ತಾ ಬೆಂಗಳೂರಿನಿಂದ ಬೆಂಗಳೂರಿಗೆ ವಿಮಾನದ ಪ್ರವಾಸಗಳು ಕೂಡ ಲಭ್ಯ

ನೈನಿತಾಲ್ ಮಸ್ಸೂರಿ ಹರಿದ್ವಾರ 9 Days 52000 onwards

Travel Now Pay Later! 0 Processing Fee Interest Down Payment SanKash

ಮಹಿಳೆಯರ ಸ್ಪೆಶಲ್ ಅಸ್ಸಾಂ ಅರುಣಾಚಲ ಮೇಘಾಲಯ 85000 12D-May 3

ವೀಣಾ ವರ್ಲ್ಡ್ MICE ಕಾರ್ಪೊರೇಟ್ ಪ್ರವಾಸಗಳು -ಕಾನ್ಫರೆನ್ಸ್‌ಗಳಿಗೆ -ಇನ್‌ಸೆಂಟಿವ್ ಗ್ರೂಪ್‌ಗಳಿಗೆ ಇಂದೇ ಕರೆ ಮಾಡಿರಿ!

ಜಗತ್ತಿನ ಯಾವುದೇ ಭಾಗದಲ್ಲಾದರೂ ವೀಣಾ ವರ್ಲ್ಡ್ ವ್ಯಕ್ತಿಗತ ಹಾಲಿಡೇಗಳು ನಿಮ್ಮ ಇಷ್ಟದ ಪ್ರಕಾರ

ಗುಂಪು ಪ್ರವಾಸ ಸ್ವಿಟ್ಜರ್‌ಲ್ಯಾಂಡ್ 235000 10 Days May 29

ಗುಂಪು ಪ್ರವಾಸ ಇಂಗ್ಲೆಂಡ್ ಸ್ಕಾಟ್ಲೆಂಡ್ 250000 10D-June 22

ಗುಂಪು ಪ್ರವಾಸ ಐಸ್‌ಲ್ಯಾಂಡ್ ಜ್ಯೂಯಲ್ 325000 10D-June 19

ಗುಂಪು ಪ್ರವಾಸ ನೇಪಾಳ 60000 onwards 8 Days

ಮಾರಿಟಿಮ್ ಕ್ರಿಸ್ಟಲ್ ಬೀಚ್ ಗುಂಪು ಪ್ರವಾಸ ಮಾರಿಶಸ 115000 7D-May 13

ಕಾಶ್ಮೀರದಿಂದ ಕನ್ಯಾಕುಮಾರಿಯ ವರೆಗೆ ಮತ್ತು ಗುಜರಾತ್‌ನಿಂದ ಗೌಹಾಟಿಯ ವರೆಗೆ - ಭಾರತದಾದ್ಯಂತ ಸಾವಿರಾರು ಅತಿಥಿಗಳು ಇದೀಗ ಪ್ರವಾಸ ಹೋಗುತ್ತಿದ್ದಾರೆ ವೀಣಾ ವರ್ಲ್ಡ್‌ನೊಂದಿಗೆ. ವೀಣಾ ವರ್ಲ್ಡ್ ವೆಬ್‌ಸೈಟ್, ಇನ್‌ಸ್ಟಾಗ್ರ್ಯಾಮ್ ಮತ್ತು ಎಫ್‌ಬಿ-ಯಲ್ಲಿ ತುಂಬಾ ಸಂತುಷ್ಟ ಅತಿಥಿಗಳ ಸಮೀಕ್ಷೆಗಳು ಮತ್ತು ಫೋಟೋಗಳನ್ನು ನೋಡಿ. ಎಲ್ಲೆಲ್ಲಿ ನೀವು ಹೋದರೂ ಅಲ್ಲಿ ನಿಮಗೆ ಹಳದಿ ಟೀ ಶರ್ಟ್ ತೊಟ್ಟ ವೀಣಾ ವರ್ಲ್ಡ್‌ನ ಟ್ಯೂರ್ ಮ್ಯಾನೇಜರ್‌ರು ನೋಡಿ ನಮ್ಮ ದೇಶ ಎಂಬ ಕಾರ್ಯಕ್ರಮವನ್ನು ಹರಡುತ್ತಿರುವುದು ಕಂಡುಬರುತ್ತದೆ. ಪ್ರವಾಸದ ಮೋಜುಮಜಾ ಗುಂಪಿಗೆ ಈಗ ನೀವೂ ಸೇರಿಕೊಳ್ಳಿ! ತ್ವರೆ ಮಾಡಿ, ಹಿಂದುಳಿಯಬೇಡಿ, ಪ್ರತಿದಿನವೂ ಟ್ಯೂರ್‌ಗಳು ಸೋಲ್ಡ್ ಔಟ್ ಆಗುತ್ತಿವೆ!

ಕುಟುಂಬ ಪ್ರವಾಸಗಳು
ಸಂಪೂರ್ಣ ಲೇಹ್ (13D) May 29 – 87000
ಲೇಹ್ ನುಬ್ರಾ ಪ್ಯಾನ್‌ಗಾಂಗ್ (7D/9D Kargil) 51K-68K
ಸಂಪೂರ್ಣ ಕಾಶ್ಮೀರ (11D) June 12 - 73000
ಕಾಶ್ಮೀರ (5D/6D/8D) 43000 - 63000
ಸಂಪೂರ್ಣ ಹಿಮಾಚಲ (15D) 84000 - 86000
ಡಾಲ್‌ಹೌಸಿ, ಡಿ'ಶಾಲಾ ಅಮೃತಸರ, ಶಿಮ್ಲಾ ಮನಾಲಿ (13D) 72K-75K
ಡಾಲ್‌ಹೌಸಿ, ಡಿ'ಶಾಲಾ ಅಮೃತಸರ (8D) 47000-50000
ಡಿಶಾಲಾ, ಡಾಲ್‌ಹೌಸಿ, ಪಾಲಂಪುರ್, ಪ್ರಾಗ್‌ಪುರ್ (8D) 51K-52K
ಶಿಮ್ಲಾ, ಮನಾಲಿ (6D/8D) 36000 - 48000
ನೈನಿತಾಲ್ ಮಸ್ಸೂರಿ ಕಾರ್ಬೆಟ್ ಪಾರ್ಕ್ (9D) 51K - 57K
ನೈನಿತಾಲ್ ಕಾರ್ಬೆಟ್ ಪಾರ್ಕ್ (6D) 39000 - 42000
ವಾರಾಣಸಿ, ಅಯೋಧ್ಯಾ, ಲಕ್ನೋ (8D) 46000
ಸಿಕ್ಕಿಂ ಡಾರ್ಜಿಲಿಂಗ್ ಗ್ಯಾಂಗ್ಟಕ್, ಲಾಚುಂಗ್ (9D) 69K-72K
ಸಿಕ್ಕಿಂ ಡಾರ್ಜಿಲಿಂಗ್ ಗ್ಯಾಂಗ್ಟಕ್ (7D) 58000 - 60000
ಅಸ್ಸಾಂ ಅರುಣಾಚಲ ಮೇಘಾಲಯ (12D) 82K - 84K
ಅಸ್ಸಾಂ ಅರುಣಾಚಲ ಪ್ರದೇಶ (10D) 72K - 75K
ಸಂಪೂರ್ಣ ಮೇಘಾಲಯ (8D) 64000 - 66000
ಮಧ್ಯಪ್ರದೇಶದ ಮ್ಯಾಜಿಕ್ (9D) 51000 - 55000
ರಾಜಾಸ್ತಾನ್ (6D) 31000-34000
ಗುಜರಾತ್ + ಏಕತೆಯ ಪ್ರತಿಮೆ (10D) 46000-50000
ಕೊಡಗು, ಮೈಸೂರು, ಬೆಂಗಳೂರು (7D) 42000-45000
ಕೇರಳ (6D) 34000-37000
ಅಂಡಮಾನ್ (7D/8D) 61000 - 65000

ಮಹಿಳಾ ವಿಶೇಷ ಪ್ರವಾಸಗಳು
ಲೇಹ್ ಕಾರ್ಗಿಲ್ ನುಬ್ರಾ ಪ್ಯಾನ್‌ಗಾಂಗ್ (9D) May 2 - 61000
ಲೇಹ್ ಲಡಾಖ್ ನುಬ್ರಾ ಪ್ಯಾನ್‌ಗಾಂಗ್ (7D) May 1 - 51000
ಕಾಶ್ಮೀರ (6D) May 3 - 48000
ಡಿಶಾಲಾ ಡಾಲ್‌ಹೌಸಿ ಪಾಲಂಪುರ್ ಪ್ರಾಗ್‌ಪುರ್ (8D) May 6-50K
ಶಿಮ್ಲಾ ಮನಾಲಿ (6D) Apr 21 - 37000
ಅಟ್ಟಾರಿ ವಾಘಾ ಗಡಿಯೊಂದಿಗೆ ಅಮೃತಸರ (4D) May 9-28K
ನೈನಿತಾಲ್ ಮಸ್ಸೂರಿ ಕಾರ್ಬೆಟ್ ಪಾರ್ಕ್ (9D) May 23-55K
ಸಿಕ್ಕಿಂ ಡಾರ್ಜಿಲಿಂಗ್ ಗ್ಯಾಂಗ್ಟಕ್ ಲಾಚುಂಗ್ (9D) May 5 -68K
ಸಂಪೂರ್ಣ ಮೇಘಾಲಯ (8D) May 26 - 65000
ಜೈಪುರ ಉದಯಪುರ ಪುಷ್ಕರ್ (6D) May 8 - 32000
ಕೇರಳ (6D) May 8 - 35000
ನೇಪಾಳ ಪೋಖರಾ ಚಿತ್ವಾನ್ (8D) May 17 - 60K
ಐಸ್‌ಲ್ಯಾಂಡ್ (10D) June 19 - 325000
ಇಂಗ್ಲೆಂಡ್ ಸ್ಕಾಟ್ಲೆಂಡ್ (10D) Jun 22 - 250000

ದಂಪತಿಗಳು ಮಾತ್ರ (ಮಧ್ಯವಯಸ್ಸಿನ ದಂಪತಿಗಳಿಗೆ)
ಲೇಹ್ ಕಾರ್ಗಿಲ್ ನುಬ್ರಾ ಪ್ಯಾನ್‌ಗಾಂಗ್ (9D) May 21 - 65K
ಕಾಶ್ಮೀರ (8D) June 18 – 60000

ರಸ್ತೆ ಪ್ರವಾಸಗಳು–ಭಾರತ್ ಜೋಡೋ ಪರ್ಯಟನ್ ಅಭಿಯಾನ
ಲೇಹ್ ಲಡಾಖ್ ಮನಾಲಿ (11D) Jun 10 - 76000
ಲೇಹ್ ಲಡಾಖ್ ಮನಾಲಿ ಕಾಶ್ಮೀರ (15D) June 10 - 90K
ಲಾಹೌಲ್ ಸ್ಪಿಟಿ ಚಂದ್ರತಾಲ್ (12D) May 31 - 65000
ಕಾಶ್ಮೀರದಿಂದ ಕನ್ಯಾಕುಮಾರಿ ವರೆಗೆ (40D) Nov 12 - 200000

ಹನಿಮೂನ್ ವಿಶೇಷ ಪ್ರವಾಸಗಳು (ಯುವ ದಂಪತಿಗಳಿಗೆ)
ಲೇಹ್ ಲಡಾಖ್ (7D) 53000 - 56000
ಕಾಶ್ಮೀರ (6D) 46000 - 50000
ಶಿಮ್ಲಾ ಮನಾಲಿ (6D/8D) 37000-48000
ಡಿಶಾಲಾ ಡಾಲ್‌ಹೌಸಿ ಪಾಲಂಪುರ್ ಪ್ರಾಗ್‌ಪುರ್ (8D) 52K-54K
ಅಸ್ಸಾಂ ಮೇಘಾಲಯ (8D) 63000 - 65000
ಸಿಕ್ಕಿಂ ಗ್ಯಾಂಗ್ಟಕ್ (6D) 53000 - 55000
ಕೊಡಗು ಮೈಸೂರು ಬೆಂಗಳೂರು (7D) 42K - 45K
ಮುನ್ನಾರ್ ಪೆರಿಯಾರ್ ಕುಮಾರಕೋಮ್ (7D) 38K - 40K

ಯೋಲೋ ಸಾಹಸಪ್ರಿಯರು (18-35 ವರ್ಷ ವಯಸ್ಸಿನವರಿಗೆ)
ಲೇಹ್ ನುಬ್ರಾ ಪಾಂಗಾಂಗ್ ಹಾನ್ಲೆ (10D) May 31 - 72000
ಪಹಲ್‌ಗಾಮ್ ಗುಲ್ಮಾರ್ಗ್ ಸೋನ್ಮಾರ್ಗ್ ಶ್ರೀನಗರ (10D) May 13-69K
ಮೇಘಾಲಯ ಶಿಲ್ಲಾಂಗ್ ಚೆರಾಪುಂಜಿ (8D) May 28 - 70K

ಸಣ್ಣ ಪ್ರವಾಸಗಳು
ಹೊಲದಲ್ಲಿ ವಾಸದೊಂದಿಗೆ ಅಮೃತಸರ (4D) 27000 - 30000
ಹರಿದ್ವಾರ ಋಷಿಕೇಶ (4D) 32000 - 35000
ಸಾರನಾಥ ವಾರಾಣಸಿ (5D) 31000 - 35000
ಏಕತೆಯ ಪ್ರತಿಮೆ + ನರ್ಮದಾ ಟೆಂಟ್ ಸಿಟಿ (3D) 26K-30K
ಇಂದೋರ್ ಉಜ್ಜಯಿನಿ ಮಾಂಡು (5D) 33000 - 36000

ಯುವ ಪರಿಶೋಧಕರು (8-18 ವರ್ಷ ವಯಸ್ಸಿನವರಿಗೆ)
ಶಿಮ್ಲಾ ಮನಾಲಿ (6D) May 28 - 40000

ಹಿರಿಯರ ವಿಶೇಷ ಪ್ರವಾಸಗಳು (55+ ಗೆ ಸುವರ್ಣಯುಗ ಆಚರಣೆ)
ಲೇಹ್ ಲಡಾಖ್ ಕಾರ್ಗಿಲ್ (7D) June 27 - 53000
ಕಾಶ್ಮೀರ (6D) May 9 - 50000
ಶಿಮ್ಲಾ ಮನಾಲಿ (8D) May 2 - 46000
ಡಿಶಾಲಾ ಡಾಲ್‌ಹೌಸಿ ಪಾಲಂಪುರ್ ಪ್ರಾಗ್‌ಪುರ್ (8D) Jun 13-50K
ಡಾಲ್‌ಹೌಸಿ ಡಿಶಾಲಾ ಅಮೃತಸರ (8D) May 2 - 48000
ನೈನಿತಾಲ್ ಮಸ್ಸೂರಿ ಕಾರ್ಬೆಟ್ ಪಾರ್ಕ್ (9D) May 23 - 55K
ಅಸ್ಸಾಂ ಮೇಘಾಲಯ (8D) Apr 25 - 62000
ಸಿಕ್ಕಿಂ ಡಾರ್ಜಿಲಿಂಗ್ (7D) May 16 - 59000
ಗುಜರಾತ್+ಏಕತೆಯ ಪ್ರತಿಮೆ (10D) May 4 - 47000
ಕೇರಳ (6D) Apr 17 - 34000
ನೇಪಾಳ ಪೋಖರಾ ಚಿತ್ವಾನ್ (8D) May 6 - 60000

ಅಂತರರಾಷ್ಟ್ರೀಯ ಪ್ರವಾಸಗಳು (ಏರ್‌ಫೇರ್, ವೀಸಾ ಶುಲ್ಕ ಮತ್ತು ವಿಮೆಯೊಂದಿಗೆ)
ಇಂಗ್ಲೆಂಡ್ ಸ್ಕಾಟ್ಲೆಂಡ್ ಐರ್ಲೆಂಡ್ ವೇಲ್ಸ್ (15D) Jul 20 - 335000
ಸಂಪೂರ್ಣ ನೇಪಾಳ–ಮುಕ್ತಿನಾಥ ಲುಂಬಿನಿ (13D) May 10-117000
ಮಾರಿಶಸ್–ಮಾರಿಟಿಮ್ ರೆಸಾರ್ಟ್ (7D)May 13-115000
ಮಾಲ್ಡಿವ್ಸ್–ಎರಿಯಾಡು ರೆಸಾರ್ಟ್ (4D)May10-80K
ROE @1USD=₹77, 1EURO=₹86. Prevailing rate will apply.

ವ್ಯಕ್ತಿಗತ ಹಾಲಿಡೇಗಳು (–ಸ್ಥಳದಿಂದ)
ಹಿಮಾಚಲದಲ್ಲಿ ಹನಿಮೂನ್ (7D) 40000
ನೈನಿತಾಲ್ ಮಸ್ಸೂರಿ ಕಾರ್ಬೆಟ್ (6D) 40000
ಅಬೂ ಧಾಬಿಯೊಂದಿಗೆ ದುಬೈ (6D) 65000
ಗ್ಲೇಸಿಯರ್ 3000 ನೊಂದಿಗೆ ಸ್ವಿಟ್ಜರ್‌ಲ್ಯಾಂಡ್ (7D) 102000

ಗುಂಪು ಪ್ರವಾಸದ ಬೆಲೆ ಇವನ್ನು ಒಳಗೊಳ್ಳುತ್ತದೆ: ಹೋಗುವ ಬರುವ ಏರ್‌ಫೇರ್, ಟ್ರಾನ್ಸ್‌ಪೋರ್ಟ್, ವಸತಿ, ಎಲ್ಲಾ ಆಹಾರಗಳು: ಬೆಳಗಿನ ತಿಂಡಿ, ಹಗಲು–ರಾತ್ರಿ ಊಟ, ಪ್ರವೇಶದ ಫೀಸಿನೊಂದಿಗೆ ಪ್ರೇಕ್ಷಣೀಯ ಸ್ಥಳಗಳು, ಟಿಪ್ಸ್ ಮತ್ತು ಟ್ಯೂರ್ ಮ್ಯಾನೇಜರ್‌ರ ಸರ್ವಿಸ್‌ಗಳು.

veenaworld.com | Call: 1800 22 7979 | Mon-Sat 10 to 7
9/2, Queens Rd, Shivajinagar-560001 Bengaluru, Call: 8879972217/080-22257979
Belgaum 9980428880 • Belagavi 9845092772 • Dharwad 9036715969 • Malleshwaram 9845066469 • Basavanagudi 9900268233 • Vijayapur 9980857595 • Chikodi 9448627771
Nipani 9880266555 • Udupi 9448372824 • Mangalore 7204422007 • Gulburga 8197831234 • Gulburga 9632655010 • Tamil Nadu: Coimbatore 9994666522
Tours can also be booked at the Veena World Sales Offices in Maharashtra, Gujarat, Rajasthan, Goa, Madhya Pradesh, West Bengal, Assam... For office addresses & contact details, visit veenaworld.com

Opportunity for Sales Partners/Agents across Southern Region. Applications invited

VEENA WORLD
Travel. Explore. Celebrate.

All group tours are ex-Mumbai (ex-destination price available). Tour price is per person and on twin sharing basis. These 'Super Deal Tour Prices' are nett and no discount is applicable. At the time of booking, tour price to be paid in full INR by Google Pay/PhonePe/Pay-TM/Card/NEFT/RTGS, in the name of 'Veena Patil Hospitality Pvt. Ltd.' No cash transactions at Veena World. Government taxes apply. Any increase in YQ taxes, fuel surcharges, airport taxes will have to be borne by the travellers. T&C apply.

ಗುರುವಾರ • ಏಪ್ರಿಲ್ 7, 2022 ಪ್ರಜಾವಾಣಿ

ಟೆಂಡರ್ ಶ್ಯೂರ್: ಆಗ ಆರೋಪ– ಈಗ ವೆಚ್ಚ ಹೆಚ್ಚಳ

ಐದು ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಗುತ್ತಿಗೆ ಮೊತ್ತಕ್ಕಿಂತ ₹34.40 ಕೋಟಿ ಹೆಚ್ಚು ವೆಚ್ಚ ಮಾಡಲು ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಟೆಂಡರ್‌ಶ್ಯೂರ್ ಯೋಜನೆಯೇ ಅವೈಜ್ಞಾನಿಕ. ಇದು ಸರ್ಕಾರದ ಬೊಕ್ಕಸಕ್ಕೆ ಅನಗತ್ಯ ಹೊರೆ' ಎಂದು ವಿರೋಧಪಕ್ಷದಲ್ಲಿದ್ದಾಗ ಬಿಜೆಪಿ ಆರೋಪಿಸಿತ್ತು. ಆದರೆ, ಬಿಜೆಪಿ ನೇತೃತ್ವದ ಸರ್ಕಾರ ಈಗ ಈ ಯೋಜನೆಯ ಐದು ರಸ್ತೆ ಕಾಮಗಾರಿಗಳಿಗೆ ₹ 34.40 ಕೋಟಿಗಳಷ್ಟು ಹೆಚ್ಚುವರಿ ವೆಚ್ಚವನ್ನೂ ಸೇರಿಸಿ ಅನುಷ್ಠಾನಗೊಳಿಸಲು ಸಿದ್ಧತೆ ನಡೆಸಿದೆ.

'ಬಿಜೆಪಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದರೆ ಈ ಯೋಜನೆಯನ್ನೇ ರದ್ದುಪಡಿಸುತ್ತೇವೆ. ಈಗಾಗಲೇ ಜಾರಿಯಾಗುತ್ತಿರುವ ಕಾಮಗಾರಿಗಳ ಬಗ್ಗೆಯೂ ಸಮಗ್ರ ತನಿಖೆ ನಡೆಸಿ, ದುಂದುವೆಚ್ಚಕ್ಕೆ ಕಾರಣವಾದವರ ವಿರುದ್ಧ ಕ್ರಮಕೈಗೊಳ್ಳುತ್ತೇವೆ' ಎಂದು ಬಿಜೆಪಿ ಮುಖಂಡರು ಈ ಹಿಂದೆ ಆರೋಪಿಸಿದ್ದರು. ಈಗ ಕೆಂಪೇಗೌಡ ರಸ್ತೆ, ನೃಪತುಂಗ ರಸ್ತೆ, ಮೋದಿ ಆಸ್ಪತ್ರೆ ರಸ್ತೆ, ಸಿದ್ದಯ್ಯಪುರಾಣಿಕ ರಸ್ತೆ ಮತ್ತು ಜಯನಗರ 11ನೇ ಮುಖ್ಯ ರಸ್ತೆಗಳಲ್ಲಿ ಟೆಂಡರ್‌ಶ್ಯೂರ್ ಯೋಜನೆಯಡಿ ಕೈಗೊಂಡ ಕಾಮಗಾರಿಗಳಿಗೆ ಹೆಚ್ಚುವರಿಯಾಗಿ ₹ 34.40 ಕೋಟಿ ವೆಚ್ಚ ಮಾಡಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸೂಚನೆ ಮೇರೆಗೆ ಬಿಬಿಎಂಪಿಯು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಅವರಿಗೆ ಪ್ರಸ್ತಾವ ಸಲ್ಲಿಸಿದೆ.

ಈ ಐದು ರಸ್ತೆಗಳನ್ನು ₹ 61.56 ಕೋಟಿ ಮೊತ್ತದಲ್ಲಿ ಟೆಂಡರ್ ಶ್ಯೂರ್ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ಕಾಮಗಾರಿಗೆ ಬಿಬಿಎಂಪಿ 2014ರಲ್ಲಿ ಟೆಂಡರ್ ಕರೆದಿತ್ತು. ಒಟ್ಟು ₹ 86.46 ಕೋಟಿ ಮೊತ್ತದ ಗುತ್ತಿಗೆಯನ್ನು ಮೆ.ಆರ್‌ಎನ್‌ಆರ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ಸಂಸ್ಥೆಗೆ ವಹಿಸಲಾಗಿತ್ತು. ಈ ಐದು ಕಾಮಗಾರಿಗಳಲ್ಲಿ 1.15 ಕಿ.ಮೀ ಉದ್ದದ ಕೆಂಪೇಗೌಡ ರಸ್ತೆ, 0.80 ಕಿ.ಮೀ ಉದ್ದದ ನೃಪತುಂಗ ರಸ್ತೆ ಹಾಗೂ 1.02 ಕಿ.ಮೀ ಉದ್ದದ ಮೋದಿ ಆಸ್ಪತ್ರೆ ರಸ್ತೆಗಳ ಕಾಮಗಾರಿಗಳು ಪೂರ್ಣಗೊಂಡಿವೆ. 2.12 ಕಿ.ಮೀ ಉದ್ದದ ಸಿದ್ದಯ್ಯ ಪುರಾಣಿಕ ರಸ್ತೆ ಕಾಮಗಾರಿ ಶೇ 90ರಷ್ಟು ಹಾಗೂ ಜಯನಗರ 11ನೇ ಮುಖ್ಯರಸ್ತೆ ಕಾಮಗಾರಿ ಶೇ 70ರಷ್ಟು ಪೂರ್ಣಗೊಂಡಿದೆ.

ಐದು ರಸ್ತೆಗಳ ಅಭಿವೃದ್ಧಿ: ಪರಿಷ್ಕೃತ ಮೊತ್ತದ ವಿವರ

₹61.56 ಕೋಟಿ — ಐದು ರಸ್ತೆ ಕಾಮಗಾರಿಗಳ ಅಂದಾಜು ಮೊತ್ತ (2012–13ನೇ ಸಾಲಿನ ದರಪಟ್ಟಿ)	₹56.15 ಕೋಟಿ — ಟೆಂಡರ್‌ಗೆ ಇಟ್ಟ ಮೊತ್ತ
₹86.46 ಕೋಟಿ — ಅನುಮೋದಿತ ಗುತ್ತಿಗೆ ಮೊತ್ತ	47.89% — ಅನುಮೋದಿತ ಗುತ್ತಿಗೆ ಮೊತ್ತದ ಟೆಂಡರ್ ಪ್ರೀಮಿಯಂ
₹34.40 ಕೋಟಿ — ಹೆಚ್ಚುವರಿ ಕಾಮಗಾರಿಗಳಿಗೆ ತಗಲುವ ಮೊತ್ತ	₹120.86 ಕೋಟಿ — ಕಾಮಗಾರಿಯ ಪರಿಷ್ಕೃತ ಮೊತ್ತ

ಈ ರಸ್ತೆಗಳಲ್ಲಿ ಒಳಚರಂಡಿ, ನೀರು ಸರಬರಾಜು ಮತ್ತು ಸಂಪರ್ಕ, ಬೆಸ್ಕಾಂನ ವಿದ್ಯುತ್ ಕೇಬಲ್, ಒಎಫ್‌ಸಿ ಮತ್ತು ಅಡುಗೆ ಅನಿಲ ಕೊಳವೆಗಳನ್ನು ರಸ್ತೆಯ ಇಕ್ಕೆಲಗಳಲ್ಲಿ ಪ್ರತ್ಯೇಕವಾಗಿ ಅಳವಡಿಸುವ ಸಂದರ್ಭದಲ್ಲಿ ಈಗಿದ್ದ ಒಳಚರಂಡಿ ಕೊಳವೆಗಳು ಮತ್ತು ಮನೆ ಸಂಪರ್ಕ ಕೊಳವೆಗಳಿಗೆ ಹಾಗೂ ಮ್ಯಾನ್‌ಹೋಲ್ ಚೇಂಬರ್‌ಗಳಿಗೆ ಅಡ್ಡಿ ಉಂಟಾಗಿತ್ತು. ಸ್ಥಳೀಯ ಶಾಸಕರ ಸೂಚನೆ ಮೇರೆಗೆ ಹಾಗೂ ಬೆಸ್ಕಾಂ ಮತ್ತು ಜಲಮಂಡಳಿಯವರ ಕೋರಿಕೆ ಮೇರೆಗೆ ಹೆಚ್ಚುವರಿ ಡಕ್ಟ್‌ಗಳನ್ನು ನಿರ್ಮಿಸಬೇಕಾದ ಮತ್ತು ಕೊಳವೆಗಳನ್ನು ಅಳವಡಿಸಬೇಕಾದ ಪ್ರಮೇಯ ಎದುರಾಗಿತ್ತು. ಕೆಲವು ಕಡೆ ಛೇಂಬರ್‌ಗಳ ವಿನ್ಯಾಸದಲ್ಲಿ ಮಾರ್ಪಾಡು ಮಾಡಲಾಗಿತ್ತು.

ಮಂಜೂರಾದ ಪಟ್ಟಿಯಲ್ಲಿರದ ಹೆಚ್ಚುವರಿ ಕಾಮಗಾರಿಗಳನ್ನು (ಇಐಆರ್‌ಎಲ್) ಟೆಂಡರ್‌ಶ್ಯೂರ್ ಮಾದರಿಯಲ್ಲೇ ನಿರ್ವಹಿಸಬೇಕಾಗಿದೆ. ಇಲ್ಲದಿದ್ದರೆ ಒಳಚರಂಡಿ, ಕುಡಿಯುವ ನೀರು ಕೊಳವೆ ಹಾಗೂ ಬೆಸ್ಕಾಂನ ಕೇಬಲ್‌ಗಳು ಹಾಗೂ ಒಎಫ್‌ಸಿ ಕೇಬಲ್‌ಗಳ ಡಕ್ಟ್‌ಗಳಲ್ಲಿ ನಿರಂತರತೆ ಕಾಯ್ದುಕೊಳ್ಳುವುದು ಸಾಧ್ಯವಾಗದು. ಆಗ ಈಗ ಅಳವಡಿಸಿರುವ ಕೊಳವೆಗಳು ಹಾಗೂ ನಿರ್ವಹಿಸಿರುವ ಕಾಮಗಾರಿಗಳು ವ್ಯರ್ಥವಾಗುವ ಸಂಭವವಿದೆ. ಬಾಕಿ ಕಾಮಗಾರಿಗಳನ್ನು ಪೂರ್ಣಗೊಳಿಸಿದ ಬಳಿಕವೇ ಜೋಡಣೆ ಕಾರ್ಯವನ್ನು ಕೈಗೆತ್ತಿಕೊಳ್ಳಬಹುದು ಎಂದು ಬಿಬಿಎಂಪಿಯು ಪ್ರಸ್ತಾವದಲ್ಲಿ ವಿವರಿಸಿದೆ.

ಬಾಕಿ ಕಾಮಗಾರಿಗಳನ್ನು ಚಾಲ್ತಿ ದರಪಟ್ಟಿ ಆಧಾರದಲ್ಲಿ ಈಗಿನ ಗುತ್ತಿಗೆದಾರರಿಂದಲೇ ಮಾಡಿಸಬೇಕು. ಇದಕ್ಕಾಗಿ ಟೆಂಡರ್ ಆಹ್ವಾನಿಸಿದರೂ ಗುತ್ತಿಗೆದಾರರು ಭಾಗವಹಿಸದೇ ಇರುವ ಸಾಧ್ಯತೆಗಳಿವೆ. ಒಂದು ವೇಳೆ ಭಾಗವಹಿಸಿದರೂ ಹೆಚ್ಚು ಮೊತ್ತ ನಮೂದಿಸುವ ಸಾಧ್ಯತೆ ಹೆಚ್ಚು. ಹೆಚ್ಚುವರಿ ಕಾಮಗಾರಿಗಳನ್ನು ಬೇರೆಯ ಗುತ್ತಿಗೆದಾರರಿಗೆ ವಹಿಸಿದರೆ ಸಂಪರ್ಕ ಹಾಗೂ ಜೋಡಣೆ ಕಾರ್ಯದಲ್ಲಿ ಸಮನ್ವಯ ಕಾಪಾಡಲು ಸಾಧ್ಯವಾಗದು ಎಂದು ಬಿಬಿಎಂಪಿ ಅಭಿಪ್ರಾಯಪಟ್ಟಿದೆ.

ಹೆಚ್ಚುವರಿ ಕಾಮಗಾರಿಗಳನ್ನು ನಿರ್ವಹಿಸಲು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ ಸಚಿವ ಕೆ.ಗೋಪಾಲಯ್ಯ, ಶಾಸಕರಾದ ಎಸ್.ಸುರೇಶ್ ಕುಮಾರ್ ಅವರು ಮುಖ್ಯಮಂತ್ರಿ ಅವರಿಗೆ ಪತ್ರ ಬರೆದಿದ್ದರು. ಶಾಸಕಿ ಸೌಮ್ಯಾ ರೆಡ್ಡಿ ಅವರು ವಿಧಾನ ಮಂಡಲ ಅಧಿವೇಶನದಲ್ಲಿ ಈ ಕುರಿತು ಗಮನ ಸೆಳೆಯುವ ಸೂಚನೆ ಮಂಡಿಸಿದ್ದರು.

ಈ ಕಾಮಗಾರಿಯನ್ನು (2012–13ರ ದರಪಟ್ಟಿ ಪ್ರಕಾರ) ಟೆಂಡರ್ ಮೊತ್ತಕ್ಕಿಂತ ಶೇ 47ರಷ್ಟು ಹೆಚ್ಚು ಮೊತ್ತಕ್ಕೆ ಗುತ್ತಿಗೆ ನೀಡಲಾಗಿತ್ತು. ಟೆಂಡರ್ ಮೊತ್ತಕ್ಕೆ (₹ 56.14 ಕೋಟಿ) ಹೋಲಿಸಿದರೆ, ಒಟ್ಟು ₹ 64.72 ಕೋಟಿ ಹೆಚ್ಚುವರಿ ವೆಚ್ಚ ಮಾಡಿದಂತಾಗುತ್ತದೆ.

ಸುದ್ದಿ 2 ನಿಮಿಷ

ಪದನ್ನೋತಿ ಪಡೆದವರು ಬಿಡಿಎ ಆಯುಕ್ತರಾಗಬಹುದೇ?

ಬೆಂಗಳೂರು: 'ಕೆಎಎಸ್ ಶ್ರೇಣಿಯಿಂದ ಐಎಎಸ್‌ಗೆ ಪದೋನ್ನತಿ ಪಡೆದಿರುವ ಅಧಿಕಾರಿಯನ್ನು ಬಿಡಿಎ ಆಯುಕ್ತರ ಹುದ್ದೆಗೆ ನೇಮಕ ಮಾಡಬಹುದೇ' ಎಂದು ರಾಜ್ಯ ಸರ್ಕಾರವನ್ನು ಹೈಕೋರ್ಟ್ ಪ್ರಶ್ನಿಸಿದೆ.

'ಎಂ.ಬಿ. ರಾಜೇಶ್ ಗೌಡ ಅವರನ್ನು ಬಿಡಿಎ ಆಯುಕ್ತರನ್ನಾಗಿ ನೇಮಕ ಮಾಡಿರುವ ಆದೇಶ ರದ್ದುಪಡಿಸಬೇಕು' ಎಂದು ಕೋರಿ ವಕೀಲ ಜಿ.ಮೋಹನ್ ಕುಮಾರ್ ಸಲ್ಲಿಸಿರುವ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ, ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ಇನ್ನಷ್ಟು ಕಾಲಾವಕಾಶ ನೀಡುವಂತೆ ಕೋರಿದ ಸರ್ಕಾರಿ ವಕೀಲರ ಮನವಿಯನ್ನು ತಿರಸ್ಕರಿಸಿದ ನ್ಯಾಯಪೀಠ, 'ಇಂತಹ ವಿಚಾರಗಳಲ್ಲಿ ನ್ಯಾಯಾಲಯ ಕಣ್ಣು ಮುಚ್ಚಿ ಕೂರಲು ಸಾಧ್ಯವಿಲ್ಲ. ಆಯುಕ್ತರ ನೇಮಕಾತಿಯಲ್ಲಿ ಮೇಲ್ನೋಟಕ್ಕೆ ಲೋಪ ಎಸಗಿರುವಂತೆ ಕಂಡುಬರುತ್ತಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿತು.

'ಬಾರಿಬಾರಿಗೂ ಕಾಲಾವಕಾಶ ಕೋರುತ್ತೀರಿ. ಕೆಎಎಸ್ ಶ್ರೇಣಿಯಿಂದ ಐಎಎಸ್‌ಗೆ ಪದೋನ್ನತಿ ಹೊಂದಿದವರು ಬಿಡಿಎ ಆಯುಕ್ತರಾಗಬಹುದೇ, ಪ್ರಕರಣದಲ್ಲಿ ನಿಮ್ಮ ನಿಲುವೇನು ಎನ್ನುವುದನ್ನು ಮುಂದಿನ ವಾರದೊಳಗೆ ಆಕ್ಷೇಪಣೆ ಮೂಲಕ ತಿಳಿಸಿ' ಎಂದು ಸರ್ಕಾರಕ್ಕೆ ತಾಕೀತು ಮಾಡಿ ವಿಚಾರಣೆ ಮುಂದೂಡಿತು.

ಅಧ್ಯಕ್ಷರ ನೇಮಕಾತಿ: ಬಿಡಿಎ ಅಧ್ಯಕ್ಷರಾಗಿ ಶಾಸಕ ಎಸ್.ಆರ್. ವಿಶ್ವನಾಥ್ ಅವರನ್ನು ನೇಮಕ ಮಾಡಿರುವ ಕ್ರಮ ಪ್ರಶ್ನಿಸಿ ನಗರದ ವಕೀಲ ಎ.ಎಸ್. ಹರೀಶ್ ಸಲ್ಲಿಸಿರುವ ಅರ್ಜಿ ವಿಚಾರಣೆಯನ್ನು ಜುಲೈ 27ಕ್ಕೆ ಮುಂದೂಡಲಾಗಿದೆ.

ಶಾಂತಿ ಸುವ್ಯವಸ್ಥೆಗೆ ಭಂಗ ತಂದರೆ ಕ್ರಮ: ಪ್ರವೀಣ್ ಸೂದ್

ಬೆಂಗಳೂರು: 'ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಉತ್ತಮವಾಗಿದೆ. ಅದಕ್ಕೆ ಭಂಗ ತರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ತಿಳಿಸಿದ್ದಾರೆ.

ಪೊಲೀಸ್ ಕಮಿಷನರ್ ಕಚೇರಿಯಲ್ಲಿ ನಡೆದ ಉನ್ನತ ಅಧಿಕಾರಿಗಳ ಸಭೆಯ ಬಳಿಕ ಅವರು ಬುಧವಾರ ಮಾತನಾಡಿದರು.

'ಪೊಲೀಸರ ಅಹವಾಲು ಆಲಿಸುವ ಸಲುವಾಗಿ ಪ್ರತಿ ಜಿಲ್ಲೆಗೂ ಭೇಟಿ ನೀಡುತ್ತೇನೆ. ಬೆಂಗಳೂರು ಕಮಿಷನರೇಟ್ ವ್ಯಾಪ್ತಿಯ ಪೊಲೀಸರ ಸಮಸ್ಯೆ ಹಾಗೂ ಅಗತ್ಯತೆಗಳ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿದ್ದೇನೆ. ಕಾನೂನು ಸುವ್ಯವಸ್ಥೆಗೆ ಭಂಗ ತರುವವರ ವಿರುದ್ಧ ಹಿಂದೆಯೂ ಕ್ರಮ ಕೈಗೊಂಡಿದ್ದೇವೆ. ಮುಂದೆಯೂ ಕ್ರಮ ಕೈಗೊಳ್ಳುತ್ತೇವೆ' ಎಂದರು.

ಚಿನ್ನಾಭರಣವಿದ್ದ ಸೂಟ್‌ಕೇಸ್ ಮರೆತ ವ್ಯಕ್ತಿ

ಬೆಂಗಳೂರು: ₹20 ಲಕ್ಷ ಮೌಲ್ಯದ ಚಿನ್ನಾಭರಣವಿದ್ದ ಸೂಟ್‌ಕೇಸ್‌ವೊಂದು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದ ಟಿಕೆಟ್ ಕೌಂಟರ್ ಬಳಿ ಪತ್ತೆಯಾಗಿದ್ದು, ಅದನ್ನು ರೈಲ್ವೆ ಪೊಲೀಸರು ವಾರಸುದಾರರಿಗೆ ಒಪ್ಪಿಸಿದ್ದಾರೆ.

'ನಗರದ ಹೊಂಗಸಂದ್ರ ನಿವಾಸಿಯಾಗಿರುವ ರಮೇಶ್ ಚಂದ್ ಎಂಬುವರು ಅಜ್ಮೇರ್‌ಗೆ ತೆರಳಲು ಮಂಗಳವಾರ ರಾತ್ರಿ 9.30ರ ಸುಮಾರಿಗೆ ಕುಟುಂಬ ಸಮೇತರಾಗಿ ರೈಲು ನಿಲ್ದಾಣಕ್ಕೆ ಬಂದಿದ್ದರು. ಬಟ್ಟೆ ಹಾಗೂ ಇತರೆ ಸಾಮಗ್ರಿಗಳು ತುಂಬಿದ್ದ 20 ಬ್ಯಾಗ್‌ಗಳನ್ನು ಜೊತೆಯಲ್ಲಿ ತಂದಿದ್ದರು. 350 ಗ್ರಾಂ ಚಿನ್ನಾಭರಣವಿದ್ದ ಸೂಟ್‌ಕೇಸ್ ಕೂಡ ಅವರ ಬಳಿ ಇತ್ತು. ಅದನ್ನು ಟಿಕೆಟ್ ಕೌಂಟರ್ ಬಳಿ ಮರೆತು ಹೋಗಿದ್ದರು' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಎರಡು ಗಂಟೆಯ ನಂತರ ಸೂಟ್‌ಕೇಸ್ ಮರೆತಿರುವುದು ರಮೇಶ್ ಅವರ ಗಮನಕ್ಕೆ ಬಂದಿತ್ತು. ಅವರು ನಿಲ್ದಾಣದಲ್ಲೆಲ್ಲಾ ಹುಡುಕಾಡಿದ್ದರು. ಸಿಗದಿದ್ದಾಗ ಠಾಣೆಗೆ ಬಂದು ಮಾಹಿತಿ ನೀಡಿದ್ದರು. ಕರ್ತವ್ಯದಲ್ಲಿದ್ದ ಗೃಹ ರಕ್ಷಕ ದಳದ ಸಿಬ್ಬಂದಿ ಗುರುರಾಜ್ ಎಂಬುವರಿಗೆ ಸೂಟ್‌ಕೇಸ್ ಸಿಕ್ಕಿತ್ತು. ರಮೇಶ್ ಸಮ್ಮುಖದಲ್ಲೇ ಅದನ್ನು ತೆರೆದು ನೋಡಿದಾಗ ಚಿನ್ನಾಭರಣ ಪತ್ತೆಯಾಗಿತ್ತು. ಬಳಿಕ ಅದನ್ನು ಅವರಿಗೆ ಹಸ್ತಾಂತರಿಸಲಾಯಿತು' ಎಂದರು.

ಸ್ವದೇಶಿ ಮೇಳಕ್ಕೆ ಚಾಲನೆ: ವೈವಿಧ್ಯಮಯ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ

'ಸ್ಥಳೀಯರನ್ನು ಉತ್ತೇಜಿಸಲು ಸ್ವದೇಶಿ ವಸ್ತು ಬಳಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಾಗೃತ ಮನಸ್ಸುಗಳು ಆರಂಭಿಸಿರುವ ಅಭಿಯಾನದಿಂದಾಗಿ ಜನರು ಸ್ವದೇಶಿ ವಸ್ತು ಬಳಸಲು ಒಲವು ತೋರುತ್ತಿದ್ದಾರೆ. ಇದರಿಂದ, ಸ್ಥಳೀಯರು ತಯಾರಿಸುವ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಿದಂತಾಗುತ್ತದೆ' ಎಂದು ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

'ಸ್ವದೇಶಿ ಜಾಗರಣ ಮಂಚ್–ಕರ್ನಾಟಕ' ಜಯನಗರದ ಚಂದ್ರಗುಪ್ತ ಮೌರ್ಯ ಆಟದ ಮೈದಾನದಲ್ಲಿ (ಶಾಲಿನಿ ಮೈದಾನ) ಆಯೋಜಿಸಿರುವ ಸ್ವದೇಶಿ ಮೇಳದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಸ್ವದೇಶಿ ವಸ್ತುಗಳನ್ನು ಖರೀದಿಸುವ ಮೂಲಕ ಗ್ರಾಮೀಣ ಪ್ರತಿಭೆಗಳಿಗೂ ಪ್ರೋತ್ಸಾಹ ನೀಡಬೇಕು. ಪಾಶ್ಚಾತ್ಯರ ಅನುಕರಣೆ ಕಡಿಮೆ ಮಾಡಿದರೆ ದೇಶಕ್ಕೆ ಕೊಡುವ ಭಕ್ತಿ ಇದಾಗಲಿದೆ' ಎಂದು ಸಲಹೆ ನೀಡಿದರು.

'ಭಾರತ ಈಗ ಸ್ವಾವಲಂಬನೆ ರಾಷ್ಟ್ರವಾಗಿದೆ. ಈ ಹಿಂದೆ ಎಲ್ಲ ವಸ್ತುಗಳಿಗೂ ಇತರ ರಾಷ್ಟ್ರಗಳನ್ನು ಅವಲಂಬಿಸಬೇಕಾದ ಪರಿಸ್ಥಿತಿ ಇತ್ತು. ಆದರೆ, ಕಾಲ ಬದಲಾದಂತೆ ಜನರಿಗೆ ವಿದೇಶಿ ವಸ್ತುಗಳ ಮೇಲಿನ ವ್ಯಾಮೋಹ ಬೆಳೆದು ಸ್ವದೇಶಿ ವಸ್ತುಗಳನ್ನು ಕಡೆಗಣಿಸಿದರು. ಈಗ ಪರಿಸ್ಥಿತಿ ಮತ್ತೆ ಬದಲಾಗುತ್ತಿದೆ. ಸ್ವದೇಶಿ ವಸ್ತುಗಳ ಬಗ್ಗೆ ಅರಿವು ಮೂಡುತ್ತಿದೆ' ಎಂದರು.

ನಗರದ ಜಯನಗರದ ಶಾಲಿನಿ ಮೈದಾನದಲ್ಲಿ ಬುಧವಾರ ಆರಂಭವಾದ 'ಸ್ವದೇಶಿ ಮೇಳ'ದ ಮಳಿಗೆಗಳಲ್ಲಿ ಖರೀದಿ ಮಾಡುತ್ತಿರುವ ಮಹಿಳೆಯರು –ಪ್ರಜಾವಾಣಿ ಚಿತ್ರ

ಮೇಳ ಉದ್ಘಾಟಿಸಿದ ಶಾಸಕ ಬಿ.ಎಸ್. ಯಡಿಯೂರಪ್ಪ ಮಾತನಾಡಿ, 'ಮೇಳದಂತಹ ಕಾರ್ಯಕ್ರಮಗಳ ಮೂಲಕ ಜನರಲ್ಲಿ ಸ್ವದೇಶಿ ವಸ್ತುಗಳ ಬಗ್ಗೆ ಜಾಗೃತಿ ಮೂಡಿಸಲು ಸಾಧ್ಯ. ಜತೆಗೆ, ಪೂರ್ಣ ಪ್ರಮಾಣದ ಸ್ವಾಲಂಬನೆ ಸಾಧಿಸುವ ಮೂಲಕ ರಾಷ್ಟ್ರವನ್ನು ಸದೃಢಗೊಳಿಸಬಹುದು' ಎಂದರು.

ಅರ್ಥಶಾಸ್ತ್ರಜ್ಞ ಪ್ರೊ. ಬಿ. ಕುಮಾರಸ್ವಾಮಿ ಮಾತನಾಡಿ, 'ದೇಶದಲ್ಲಿ ಕಿರು ಉದ್ಯಮ ವಿಸ್ತಾರವಾದ ಜಾಲವನ್ನು ಹೊಂದಿದೆ. ಕಿರು ಕೈಗಾರಿಕೆಯಲ್ಲಿ ಶೇ 51ರಷ್ಟು ಗ್ರಾಮೀಣ ಹಾಗೂ ಶೇ 49ರಷ್ಟು ನಗರ ಪ್ರದೇಶದಲ್ಲಿವೆ. ಸಣ್ಣ ಉದ್ಯಮದ ಉತ್ಪನ್ನಗಳಲ್ಲಿ ಶೇ 48ರಷ್ಟು ವಿದೇಶಿ ರಫ್ತು ಮಾಡಲಾಗುತ್ತಿದೆ. ಆದರೆ, ನಮ್ಮಲ್ಲಿ ಇಂದಿಗೂ ದೊಡ್ಡ ಕೈಗಾರಿಕೆಯಿಂದಲೇ ಅಭಿವೃದ್ಧಿಯಾಗುತ್ತಿದೆ ಎನ್ನುವ ಭ್ರಮೆಯಲ್ಲಿದ್ದೇವೆ' ಎಂದರು.

'ಅಭಿವೃದ್ಧಿಯಲ್ಲಿ ಮುಖ್ಯ ಪಾತ್ರವಹಿಸಿರುವುದು ಕಿರು ಉದ್ಯಮ. ಪಠ್ಯ ಪುಸ್ತಕಗಳಲ್ಲಿಯೂ ಕೇವಲ ಬೃಹತ್ ಕೈಗಾರಿಕೆ ಬಗ್ಗೆ ಮಾತ್ರ ಉಲ್ಲೇಖಿಸಲಾಗಿದೆ. ಇದರಿಂದಾಗಿ ಯುವಜನರಿಗೆ ಕಿರು ಉದ್ಯಮದ ಬಗ್ಗೆ ಮಾಹಿತಿ ಕೊರತೆಯಿಂದ ದೂರ ಉಳಿದಿದ್ದಾರೆ' ಎಂದು ವಿವರಿಸಿದರು.

> **ದೇಶದಲ್ಲಿ ಸ್ವದೇಶಿ ಅಭಿಯಾನ ಹೊಸದಲ್ಲ. ಈಗಲೂ ಸ್ವದೇಶಿ ಅಭಿಯಾನ ಗಟ್ಟಿಯಾಗಿ ಬೆಳೆಯುತ್ತಿದೆ. ಸೌಲಭ್ಯಗಳನ್ನು ಬಳಸಿಕೊಂಡು ಆರ್ಥಿಕವಾಗಿ ಸ್ವಾವಲಂಬನೆ ಸಾಧಿಸಬೇಕು.**
> **ಸೌಮ್ಯರೆಡ್ಡಿ,** ಶಾಸಕಿ

> **ದೇಶದ ಭದ್ರತೆಯ ಬಗ್ಗೆ ಪ್ರತಿಯೊಬ್ಬರು ಗಮನಹರಿಸಬೇಕು. ದೇಶದಲ್ಲಿ ತಯಾರಾಗುವ ವಸ್ತುಗಳನ್ನು ಕಡ್ಡಾಯವಾಗಿ ನಾವೆಲ್ಲರೂ ಖರೀದಿಸಬೇಕು.**
> **ತೇಜಸ್ವಿನಿ ಅನಂತ್‌ಕುಮಾರ್,** ಅದಮ್ಯ ಚೇತನ ಪ್ರತಿಷ್ಠಾನ ಅಧ್ಯಕ್ಷೆ

ಸೆಲ್ಕೋ ಕಂಪನಿ ಸಂಸ್ಥಾಪಕ ಹರೀಶ್ ಹಂದೆ ಮಾತನಾಡಿ, 'ಭಾರತವನ್ನು ಬಲಿಷ್ಠ ರಾಷ್ಟ್ರವನ್ನಾಗಿ ತಯಾರು ಮಾಡುವುದಕ್ಕೆ ಸ್ವದೇಶಿ ಅಭಿಯಾನ ಸಹಕಾರಿಯಾಗಿದೆ. ಕೃಷಿ ಜೀವನ ನಡೆಸುವವರಿಗೆ ಹೆಚ್ಚಿನ ಗೌರವ ನೀಡಬೇಕು. ಕೃಷಿಕರಿಗೆ ಹೆಚ್ಚಿನ ಜ್ಞಾನ ಇರುತ್ತದೆ. ಅವರನ್ನು ಗೌರವಿಸಿ ಡಾಕ್ಟರೇಟ್ ಪದವಿ ನೀಡುವ ಮೂಲಕ ಹೊಸ ಆಂದೋಲನ ಆರಂಭಿಸಬೇಕು' ಎಂದು ಹೇಳಿದರು.

ಏಪ್ರಿಲ್ 10ರವರೆಗೆ ಸ್ವದೇಶಿ ಮೇಳವು ನಡೆಯಲಿದೆ.



ಮೈಸೂರಿನ ಚಾಮರಾಜೇಂದ್ರ ಮೃಗಾಲಯದಲ್ಲಿ ವಿವಿಧ ಪ್ರಾಣಿ, ಪಕ್ಷಿ ದತ್ತು ಪಡೆದ 'ವಾಕ್‌ಮೇಟ್ ಫುಟ್‌ವೇರ್' ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಬಾಸ್ಟಿಯನ್ ಜೆ.ಕೊಟ್ಟೂಕಪಲ್ಲಿ ಅವರಿಗೆ ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಅಜಿತ್ ಕುಲಕರ್ಣಿ ಪ್ರಮಾಣಪತ್ರ ನೀಡಿದರು

'ವಾಕ್‌ಮೇಟ್ ಫುಟ್‌ವೇರ್'ನಿಂದ ಪ್ರಾಣಿ–ಪಕ್ಷಿ ದತ್ತು ಸ್ವೀಕಾರ

ಮೈಸೂರು: ಚಾಮರಾಜೇಂದ್ರ ಮೃಗಾಲಯದಲ್ಲಿ 'ಪ್ರಾಣಿಗಳ ದತ್ತು ಸ್ವೀಕಾರ ಯೋಜನೆ'ಯಡಿಯಲ್ಲಿ ಲೂನಾರ್ ಎಕ್ಸ್‌ಪೋರ್ಟ್ ಪ್ರೈವೇಟ್ ಲಿಮಿಟೆಡ್ (ವಾಕ್‌ಮೇಟ್ ಫುಟ್‌ವೇರ್) ₹ 10 ಲಕ್ಷ ನೀಡಿ ವರ್ಷದ ಅವಧಿಗೆ ವಿವಿಧ ಪ್ರಾಣಿ, ಪಕ್ಷಿಗಳನ್ನು ದತ್ತು ಸ್ವೀಕರಿಸಿದೆ.

ಒರಾಂಗುಟಾನ್, ಹುಲಿ, ಜಿರಾಫೆ, ಚಿಂಪಾಂಜಿ, ಚೀತಾ, ಸಿಂಗಳಿಕ (ಲಯನ್ ಟೇಲ್ಡ್ ಮಕಾಕ್), ಗ್ರೇಟ್ ವೈಟ್ ಪೆಲಿಕಾನ್, ಹೂಲಾಕ್ ಗಿಬ್ಬನ್, ಮಲಬಾರ್ ಜೈಂಟ್ ಅಳಿಲು, ಗ್ರೀನ್ ಅನಕೊಂಡ, ಆಸ್ಟ್ರಿಚ್, ಮೀರ್ಕಟ್ ಮತ್ತು ಎಮು ದತ್ತು ಪಡೆದಿದೆ.

'ಪ್ರಾಣಿ– ಪಕ್ಷಿಗಳ ಸಂರಕ್ಷಣೆ ವಿಚಾರದಲ್ಲಿ 'ವಾಕ್‌ಮೇಟ್ ಫುಟ್‌ವೇರ್' ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಬಾಸ್ಟಿಯನ್ ಜೆ.ಕೊಟ್ಟೂಕಪಲ್ಲಿ ತೋರುತ್ತಿರುವ ಕಾಳಜಿ ಪ್ರಶಂಸನೀಯ. ಇದು ಉಳಿದವರಿಗೂ ಪ್ರೇರಣೆಯಾಗಲಿದೆ' ಎಂದು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಅಜಿತ್ ಕುಲಕರ್ಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಿತ್ರಾವಳಿ

ನಗರದ ಲಾಲ್‌ಬಾಗ್ ರಸ್ತೆಯಲ್ಲಿರುವ ಅಲ್–ಅಮೀನ್ ಎಜುಕೇಷನ್ ಸೊಸೈಟಿ ಆವರಣದಲ್ಲಿ ಬ್ಯಾಂಕ್ ಆಫ್ ಬರೋಡಾದ ಮೊದಲ ಡಿಜಿಟಲ್ ಎಜು ಔಟ್‌ಲೆಟ್‌ಅನ್ನು ಬ್ಯಾಂಕ್‌ನ ಕಾರ್ಯನಿರ್ವಾಹಕ ನಿರ್ದೇಶಕ ಅಜಯ್ ಕೆ. ಖುರಾನಾ ಉದ್ಘಾಟಿಸಿದರು. ಅಲ್–ಅಮೀನ್ ಕಾಲೇಜಿನ ಕಾರ್ಯದರ್ಶಿ ಜುಬೈರ್ ಅನ್ವರ್, ಕಾರ್ಯಕಾರಿ ಮಂಡಳಿ ಸದಸ್ಯ ಎಂ.ಜೆಡ್ ಅಲಿ, ಕಾಲೇಜಿನ ಪ್ರಾಂಶುಪಾಲ ಸರ್ತಾಜ್ ಖಾನ್ ಮತ್ತಿತರರು ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಖಾತೆ ತೆರೆಯುವುದು, ಸಾಲಕ್ಕೆ ಅರ್ಜಿ ಸಲ್ಲಿಸುವುದು ಸೇರಿದಂತೆ ಈ ಔಟ್‌ಲೆಟ್‌ನಲ್ಲಿ 30ಕ್ಕೂ ಹೆಚ್ಚು ಸೇವೆಗಳು ಲಭ್ಯವಿವೆ ಎಂದು ಬ್ಯಾಂಕ್ ತಿಳಿಸಿದೆ.

ಕರ್ನಾಟಕ ರಾಜ್ಯ ವಹ್ನಿಕುಲ ಕ್ಷತ್ರಿಯ ಸಂಘವು ಇಲ್ಲಿನ ಧರ್ಮರಾಯಸ್ವಾಮಿ ದೇವಸ್ಥಾನದಲ್ಲಿ ಇದೇ 16 ರಂದು ಹಮ್ಮಿಕೊಂಡಿರುವ 'ಬೆಂಗಳೂರು ಕರಗ ಮಹೋತ್ಸವ'ಕ್ಕೆ ಪುದುಚೇರಿಯ ಮುಖ್ಯಮಂತ್ರಿ ಎನ್. ರಂಗಸ್ವಾಮಿ ಅವರನ್ನು ಸಂಘದ ರಾಜ್ಯ ಘಟಕದ ಅಧ್ಯಕ್ಷ ವರ್ತೂರು ಗಿರೀಶ್ ಆಹ್ವಾನಿಸಿದರು. ಧರ್ಮರಾಯಸ್ವಾಮಿ ದೇವಸ್ಥಾನ ವ್ಯವಸ್ಥಾಪನಾ ಸಮಿತಿಯ ಕೆ.ಸತೀಶ್ ಮತ್ತು ಬಾಲಕೃಷ್ಣ ಇದ್ದಾರೆ.

ನಗರದಲ್ಲಿ ಮಂಗಳವಾರ ಶ್ರೀ ಸಿದ್ಧಗಂಗಾ ಶಿವಕುಮಾರ ಸ್ವಾಮೀಜಿಗಳ ವಕೀಲರ ಭಕ್ತವೃಂದ ಆಯೋಜಿಸಿದ್ದ ಶ್ರೀ ಶಿವಕುಮಾರ ಸ್ವಾಮಿಜಿಗಳ 115ನೇ ಜಯಂತಿ ಹಾಗೂ ಗುರುವಂದನಾ ಮಹೋತ್ಸವ ಕಾರ್ಯಕ್ರಮದಲ್ಲಿ (ಎಡದಿಂದ) ಕರ್ನಾಟಕ ಹೈಕೋರ್ಟ್ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ. ನಾವದಗಿ, ನ್ಯಾಯಮೂರ್ತಿ ಬಿ. ವೀರಪ್ಪ, ಸಿದ್ಧಗಂಗಾ ಮಠದ ಅಧ್ಯಕ್ಷ ಸಿದ್ಧಲಿಂಗ ಸ್ವಾಮೀಜಿ, ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್, ನಿವೃತ್ತ ನ್ಯಾಯಮೂರ್ತಿ ಡಿ.ವಿ. ಶೈಲೇಂದ್ರ ಕುಮಾರ್ ಇದ್ದರು

ರಾಜ್ಯಮಟ್ಟದ ಅಧ್ಯಯನ ಶಿಬಿರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರೊ. ಜಿ.ಕೆ. ಗೋವಿಂದರಾವ್, ಡಾ. ಸಿದ್ದಲಿಂಗಯ್ಯ, ಸುರೇಶ್ ಮಣ್ಣೂರ ನೆನಪಿನಲ್ಲಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಮತ್ತು ದಲಿತ ಸಂಘಟನೆಗಳ ಜಂಟಿ ವೇದಿಕೆಯ ಪದಾಧಿಕಾರಿಗಳ ರಾಜ್ಯ ಮಟ್ಟದ ಅಧ್ಯಯನ ಶಿಬಿರ ಏ.8ರಿಂದ ಮೂರು ದಿನ ನಡೆಯಲಿದೆ.

ವಿಜಯಪುರ ಜಿಲ್ಲೆಯ ನಿಡಗುಂದಿ ತಾಲ್ಲೂಕಿನ ಆಲಮಟ್ಟಿ ಜಲಾಶಯದ ಕೆಬಿಜಿಎನ್‌ಎಲ್ ಸಮುದಾಯಭವನದಲ್ಲಿ ಶಿಬಿರ ನಡೆಯಲಿದೆ. ಬೀದರ್ ಬೌದ್ಧ ವಿಹಾರದ ವರಜ್ಯೋತಿ ಭಂತೆ ಸಾನ್ನಿಧ್ಯದಲ್ಲಿ ಶಿಬಿರವನ್ನು ಸಾಹಿತಿ ಎಸ್. ಜಿ. ಸಿದ್ಧರಾಮಯ್ಯ ಉದ್ಘಾಟಿಸುವರು. ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕ ಲಕ್ಷ್ಮೀನಾರಾಯಣ ನಾಗವಾರ ಅಧ್ಯಕ್ಷತೆ ವಹಿಸುವರು. ಕಾಂಗ್ರೆಸ್ ಮುಖಂಡ ಎಚ್.ಸಿ.ಮಹದೇವಪ್ಪ, ಬಸವನಬಾಗೇವಾಡಿ ಶಾಸಕ ಶಿವಾನಂದ ಪಾಟೀಲ, ಇಂಡಿ ಶಾಸಕ ಯಶವಂತರಾಯಗೌಡ ಪಾಟೀಲ ಸೇರಿ ಹಲವರು ಭಾಗವಹಿಸುವರು.

ಮೊದಲ ದಿನ 'ಅಂಬೇಡ್ಕರ್–ಲೋಹಿಯಾ ಚಿಂತನೆಗಳ ಮೂಲಕ ಜಾತಿ ವಿನಾಶ', 'ಮಹಿಳೆಯರು ಮತ್ತು ಜಾತಿ ನ್ಯಾಯ–ಲಿಂಗ ನ್ಯಾಯ' ಕುರಿತ ಗೋಷ್ಠಿಗಳು ನಡೆಯಲಿವೆ.

ಎರಡನೇ ದಿನ 'ಧರ್ಮಾಂತರ ಏಕೆ? ಮತಾಂತರ ನಿಷೇಧ ಕಾನೂನು ಹಿಂದಿರುವ ಹುನ್ನಾರ', 'ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಮೂಲಕ ಬ್ರಾಹ್ಮಣವಾದ ಮತ್ತು ಉನ್ನತ ಶಿಕ್ಷಣದಲ್ಲಿ ದಲಿತರ ಸ್ಥಿತಿಗತಿಗಳು', 'ಮೂಲ ನಿವಾಸಿಗಳೇ ನೀವೆಷ್ಟು ಬಲ್ಲಿರಿ ನಿಮ್ಮ ಇತಿಹಾಸ?', 'ದಲಿತ ಚಳವಳಿಯ ಮುಂದಿನ ಸವಾಲುಗಳು ಹಾಗೂ ಬಲಪಡಿಸುವ ಕುರಿತು', ಜಿ.ಕೆ. ಗೋವಿಂದರಾವ್, ಡಾ. ಸಿದ್ದಲಿಂಗಯ್ಯ, ಸುರೇಶ್ ಮಣ್ಣೂರ ಕುರಿತ ಗೋಷ್ಠಿಗಳು ನಡೆಯಲಿವೆ.

ಮೂರನೇ ದಿನ (ಏ.10ರಂದು) 'ದಲಿತ ಸಮುದಾಯದ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳು' ಮತ್ತು 'ಭೂಮಿ, ಉದ್ಯಮಶೀಲತೆ, ಕೈಗಾರಿಕರಣ, ಕೌಶಲ ಮತ್ತು ಮೀಸಲಾತಿ' ಕುರಿತ ಗೋಷ್ಠಿಗಳು ನಡೆಯಲಿವೆ. ಅಂದು ಮಧ್ಯಾಹ್ನ 1 ಗಂಟೆಗೆ ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಮತ್ತು ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ ಅವರು ಸಮಾರೋಪ ಭಾಷಣ ಮಾಡುವರು ಎಂದು ಲಕ್ಷ್ಮೀನಾರಾಯಣ ನಾಗವಾರ ತಿಳಿಸಿದ್ದಾರೆ.

ಸೂಲಿಕೆರೆ: ಚಿರತೆ ಓಡಾಟ ಸ್ಥಳೀಯರಲ್ಲಿ ಆತಂಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹೊರವಲಯದ ಸೂಲಿಕೆರೆ ಗ್ರಾಮದ ವ್ಯಾಪ್ತಿಯಲ್ಲಿ ಚಿರತೆ ಕಾಣಿಸಿಕೊಂಡಿದ್ದು, ಸ್ಥಳೀಯರ ಆತಂಕಕ್ಕೆ ಕಾರಣವಾಗಿದೆ. ಚಿರತೆಯನ್ನು ಹಿಡಿದು ಸುರಕ್ಷಿತ ಪ್ರದೇಶದಲ್ಲಿ ಬಿಡುವಂತೆ ಸ್ಥಳೀಯರು ಒತ್ತಾಯಿಸಿದ್ದಾರೆ.

'ಸೂಲಿಕೆರೆ ಪರಿಸರದಲ್ಲಿ ಕೆಲ ದಿನಗಳಿಂದ ಚಿರತೆ ಕಾಣಿಸಿಕೊಳ್ಳುತ್ತಿದೆ. ಕೆಂಗೇರಿ– ತಾವರೆಕೆರೆ ರಸ್ತೆಯಲ್ಲಿ ಬುಧವಾರ ರಾತ್ರಿ ಕಾರಿನಲ್ಲಿ ಹೋಗುತ್ತಿದ್ದಾಗ ಚಿರತೆ ಅಡ್ಡವಾಗಿ ಹಾದು ಹೋಯಿತು' ಎಂದು ಪ್ರತ್ಯಕ್ಷದರ್ಶಿಯೊಬ್ಬರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಈ ಕುರಿತು ಪ್ರತಿಕ್ರಿಯಿಸಿದ ಬೆಂಗಳೂರು ನಗರ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಜಿ.ಎಸ್.ಚರಣ್, 'ಸೂಲಿಕೆರೆ ಪರಿಸರದಲ್ಲಿ ಚಿರತೆ ಓಡಾಡುತ್ತಿರುವ ಬಗ್ಗೆ ಇಲಾಖೆಗೂ ಮಾಹಿತಿ ಇದೆ. ಇದುವರೆಗೆ ಯಾರಿಗೂ ಹಾನಿ ಮಾಡಿಲ್ಲ. ಇಲ್ಲಿ ಜನವಸತಿ ಪ್ರದೇಶದಲ್ಲಿ ನಾಯಿಗಳು ಹಾಗೂ ಕರುಗಳು ಚಿರತೆಗಳಿಗೆ ಸುಲಭವಾಗಿ ಸಿಗುತ್ತವೆ. ಹಾಗಾಗಿ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ ಹಾಗೂ ಆಸುಪಾಸಿನ ಪ್ರದೇಶಗಳ ಚಿರತೆ ಇಲ್ಲಿಗೆ ಬಂದು ಸೇರಿಕೊಂಡಿರುವ ಸಾಧ್ಯತೆ ಇದೆ' ಎಂದರು.

'ಚಿರತೆಯಿಂದ ಜೀವ ಭಯ ಉಂಟಾದ ಬಗ್ಗೆ ಸ್ಥಳೀಯರಿಂದ ದೂರುಗಳು ಬಂದಿವೆ. ಮುಖ್ಯ ವನ್ಯಜೀವಿ ಸಂರಕ್ಷಣಾಧಿಕಾರಿಯವರಿಗೆ ಅನುಮತಿ ಪಡೆದು ಬೋನು ಇಟ್ಟು ಚಿರತೆಯನ್ನು ಹಿಡಿದು ಸುರಕ್ಷಿತ ಆವಾಸ ಸ್ಥಾನದಲ್ಲಿ ಅದನ್ನು ಬಿಡಲು ವ್ಯವಸ್ಥೆ ಮಾಡುತ್ತೇವೆ' ಎಂದು ಅವರು ಭರವಸೆ ನೀಡಿದರು.

ರೌಡಿ ಸೈಯದ್ ಬಂಧನ

ಬೆಂಗಳೂರು: ರೌಡಿಶೀಟರ್ ಸೈಯದ್ ಮಾಜ್ ಯಾನೆ ಬಾಂಡ್ (20) ಎಂಬಾತನನ್ನು ಸಿಸಿಬಿ ಪೊಲೀಸರು ಗೂಂಡಾ ಕಾಯ್ದೆಯಡಿ ಬಂಧಿಸಿದ್ದಾರೆ.

'ಆರೋಪಿಯು ಕೆ.ಜಿ.ಹಳ್ಳಿ ಠಾಣೆ ವ್ಯಾಪ್ತಿಯ ವಿನೋಬಾ ನಗರದ ಮಜೀದ್ ಖೈರ್ ಬಳಿ ವಾಸವಿದ್ದ. 2019ರಿಂದ 2022ರ ಫೆಬ್ರುವರಿ ಅವಧಿಯಲ್ಲಿ ಈತನ ವಿರುದ್ಧ ಒಟ್ಟು ಆರು ಪೊಲೀಸ್ ಠಾಣೆಗಳಲ್ಲಿ 11 ಕ್ರಿಮಿನಲ್ ಪ್ರಕರಣಗಳು ದಾಖಲಾಗಿದ್ದವು. ಜಾಮೀನು ಪಡೆದ ನಂತರವೂ ಅಪರಾಧ ಚಟುವಟಿಕೆಗಳನ್ನು ಮುಂದುವರಿಸಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ. 'ಆರೋಪಿಯು ಗಾಂಜಾ ಮಾರಾಟ ಮಾಡಿ ಹಣ ಸಂಪಾದಿಸುತ್ತಿದ್ದ. ಸಹಚರರ ಜೊತೆಗೂಡಿ ಮಾರಕಾಸ್ತ್ರಗಳಿಂದ ಸಾರ್ವಜನಿಕರ ಮೇಲೆ ಹಲ್ಲೆ ನಡೆಸಿ ಸುಲಿಗೆ ಮಾಡುತ್ತಿದ್ದ. ಆ ಮೂಲಕ ಸಮಾಜದಲ್ಲಿ ಶಾಂತಿ ಕದಡಲು ಪ್ರಯತ್ನಿಸುತ್ತಿದ್ದ' ಎಂದು ಹೇಳಿದ್ದಾರೆ.

ವನ್ಯ ಪ್ರಾಣಿಗಳ ಮೃತದೇಹ ಸುಡುವುದು, ಹೂಳುವುದು ನಿಷೇಧ: ಸುತ್ತೋಲೆ

ಬೆಂಗಳೂರು: ಹುಲಿಯ ಹೊರತಾಗಿ ಇತರ ವನ್ಯ ಪ್ರಾಣಿಗಳು ಮತ್ತು ಪಕ್ಷಿಗಳ ಕಳೇಬರವನ್ನು ಹೂಳುವುದು, ಸುಡುವುದನ್ನು ನಿಷೇಧಿಸಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ ವಿಭಾಗ) ವಿಜಯಕುಮಾರ್ ಗೋಗಿ ಬುಧವಾರ ಸುತ್ತೋಲೆ ಹೊರಡಿಸಿದ್ದಾರೆ.

ವನ್ಯಜೀವಿಗಳ ಕಳೇಬರಗಳನ್ನು ಹೂಳುವುದು, ಸುಡುವುದರಿಂದ ಇತರ ಜೀವಿಗಳಿಗೆ ಆಹಾರದ ಸಮಸ್ಯೆಯಾಗುತ್ತದೆ ಎಂದು ವನ್ಯಜೀವಿ ತಜ್ಞ ಸಂಜಯ್ ಗುಬ್ಬಿ ಅಧ್ಯಯನ ವರದಿ ಸಲ್ಲಿಸಿದ್ದರು. ಕಳೇಬರಗಳನ್ನು ಅರಣ್ಯದಲ್ಲೇ ಕೊಳೆಯಲು ಬಿಡುವಂತೆ ಶಿಫಾರಸು ಮಾಡಿದ್ದರು. ಅದರಂತೆ ಸುತ್ತೋಲೆ ಹೊರಡಿಸಲಾಗಿದೆ. ಹುಲಿ ಹೊರತಾಗಿ ಇತರೆಲ್ಲ ಪ್ರಾಣಿ, ಪಕ್ಷಿಗಳ ಕಳೇಬರಗಳಿಗೆ ಇದು ಅನ್ವಯವಾಗಲಿದೆ.

'ಪ್ರಾಣಿಗಳ ಕಳೇಬರವು ಹೈನಾ, ಮುಳ್ಳು ಹಂದಿಗಳಂತಹ ಪ್ರಾಣಿಗಳಿಗೆ ಕ್ಯಾಲ್ಸಿಯಂನ ಪ್ರಮುಖ ಮೂಲ. ಅವು ಕೊಳೆಯುವ ಸ್ಥಳದಲ್ಲಿ ಸಾರಜನಕ, ರಂಜಕ, ಸೋಡಿಯಂ, ಗಂಧಕ ಮತ್ತಿತರ ರಾಸಾಯನಿಕ ವಸ್ತುಗಳು ಯಥೇಚ್ಛವಾಗಿರುತ್ತವೆ. ಪ್ರಾಣಿಗಳಿಗೆ ಬೇಕಾದ ಪೋಷಕಾಂಶಗಳು ವೃದ್ಧಿಸಲಿವೆ. ಆದ್ದರಿಂದ ಕಳೇಬರಗಳನ್ನು ಕೊಳೆಯಲು ಬಿಡಬೇಕು' ಎಂದು ಸಂಜಯ್ ಗುಬ್ಬಿ ಸಲಹಾ ಮಾಡಿದ್ದರು.

ಕೊಡಗಿನಲ್ಲಿ 'ಹಕ್ಕಿ ಹಬ್ಬ'ದ ಸಂಭ್ರಮ ನಾಳೆಯಿಂದ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಈಗ ಹಕ್ಕಿ ಹಬ್ಬದ ಸಂಭ್ರಮ. ಏ.8ರಿಂದ ಮೂರು ದಿನಗಳವರೆಗೆ ಕಾಫಿ ನಾಡಿನಲ್ಲಿ 'ಕರ್ನಾಟಕ ಹಕ್ಕಿ ಹಬ್ಬ' ನಡೆಯಲಿದ್ದು, ಅರಣ್ಯ ಇಲಾಖೆ ಸಿದ್ಧತೆ ನಡೆಸಿದೆ.

ರಾಜ್ಯದ ವಿವಿಧ ಭಾಗದ 70 ಪಕ್ಷಿಪ್ರೇಮಿಗಳು 8ನೇ ಆವೃತ್ತಿಯ ಹಬ್ಬದಲ್ಲಿ ಪಾಲ್ಗೊಳ್ಳಲು ನೋಂದಣಿ ಮಾಡಿಸಿದ್ದು, ಸ್ಥಳೀಯವಾಗಿಯೂ 10 ಪಕ್ಷಿ ತಜ್ಞರು ಪಾಲ್ಗೊಳ್ಳಲಿದ್ದಾರೆ.

ಉಪಕಾರ್ಯದರ್ಶಿ ವರ್ಗಾವಣೆ ತಡೆಯಲು ರೇಣುಕಾಚಾರ್ಯ ಶಿಫಾರಸು

ಸಿ.ಎಂ ದಾರಿ ತಪ್ಪಿಸಿದರೇ ರಾಜಕೀಯ ಕಾರ್ಯದರ್ಶಿ?

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಎಲಿಷಾ ಹಾಲಿ ಹುದ್ದೆಯಲ್ಲೇ ಮುಂದುವರಿಯುವಂತೆ ಪತ್ರ
- ರಾಜಕೀಯ ಕಾರ್ಯದರ್ಶಿ ಎಂ.ರೇಣುಕಾಚಾರ್ಯ ಶಿಫಾರಸು
- ಸರ್ಕಾರದ ಆದೇಶವನ್ನು ಪ್ರಶ್ನಿಸಿ ಎಲಿಷಾ ಕೆಎಟಿ ಮೊರೆ

ಬೆಂಗಳೂರು: ಕರ್ನಾಟಕ ಆಡಳಿತ ಸೇವೆಯ (ಕೆಎಎಸ್) ಅಧಿಕಾರಿಯೊಬ್ಬರ ವರ್ಗಾವಣೆ ಆದೇಶ ರದ್ದುಪಡಿಸಿ, ಅವರು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆಯಲ್ಲೇ ಮುಂದುವರಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಅವರ ರಾಜಕೀಯ ಕಾರ್ಯದರ್ಶಿ ಎಂ. ರೇಣುಕಾಚಾರ್ಯ ಪತ್ರ ಬರೆದಿದ್ದಾರೆ. ಈ ಶಿಫಾರಸು ಪತ್ರದಲ್ಲಿ ಅವರು ತಪ್ಪು ಮಾಹಿತಿ ನೀಡಿದ್ದಾರೆ ಎಂಬ ಆರೋಪ ಕೇಳಿಬಂದಿದೆ.

ಕೆಎಎಸ್ ಹಿರಿಯ ಶ್ರೇಣಿ ಅಧಿಕಾರಿ ಎಲಿಷಾ ಆ್ಯಂಡ್ರೂಸ್ ಅವರು 2020ರ ಮಾರ್ಚ್ 5ರಂದು ನಗರಾಭಿವೃದ್ಧಿ ಇಲಾಖೆಯ ಉಪಕಾರ್ಯದರ್ಶಿ–1 ಹುದ್ದೆಗೆ ವರ್ಗವಾಗಿದ್ದರು. ಬಳಿಕ ಅವರನ್ನು ಇಲಾಖೆಯ ಉಪಕಾರ್ಯದರ್ಶಿ –3 ಹುದ್ದೆಗೆ ನಿಯುಕ್ತಿಗೊಳಿಸಲಾಗಿತ್ತು. ಎರಡು ವರ್ಷಗಳಿಂದ ನಗರಾಭಿವೃದ್ಧಿ ಇಲಾಖೆಯ ಉಪಕಾರ್ಯದರ್ಶಿ ಹುದ್ದೆಯಲ್ಲೇ ಕಾರ್ಯನಿರ್ವಹಿಸುತ್ತಿದ್ದ ಅವರನ್ನು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಉಪ ಆಯುಕ್ತರಾಗಿ (ಆಡಳಿತ) ಸರ್ಕಾರ ಇತ್ತೀಚೆಗೆ ವರ್ಗಾವಣೆ ಮಾಡಿದೆ.

ಎಲಿಷಾ ಅವರನ್ನು ಅದೇ ಹುದ್ದೆಯಲ್ಲಿ ಮುಂದುವರಿಸುವಂತೆ ರೇಣುಕಾಚಾರ್ಯ ಅವರು ಮುಖ್ಯಮಂತ್ರಿ ಅವರಿಗೆ ಇತ್ತೀಚೆಗೆ ಪತ್ರ ಬರೆದಿದ್ದಾರೆ. ಎಲಿಷಾ ಅವರು ಐದು ತಿಂಗಳುಗಳಿಂದ ನಗರಾಭಿವೃದ್ಧಿ ಇಲಾಖೆಯ ಉಪಕಾರ್ಯದರ್ಶಿ ಹುದ್ದೆಯಲ್ಲಿದ್ದಾರೆ ಎಂದು ರೇಣುಕಾಚಾರ್ಯ ಅವರು ಆ ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಈ ಶಿಫಾರಸ್ಸನ್ನು ಆಧರಿಸಿ ಮುಖ್ಯಮಂತ್ರಿ ಅವರು ಎಲಿಷಾ ಅವರನ್ನು ಈಗಿರುವ ಹುದ್ದೆಯಲ್ಲೇ ಮುಂದುವರಿಸುವಂತೆ ಟಿಪ್ಪಣಿ ಬರೆದಿದ್ದಾರೆ. ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಉಪಾಯುಕ್ತರಾಗಿ ವರ್ಗವಾದ ಬಳಿಕವೂ ಎಲಿಷಾ ಅವರು ನಗರಾಭಿವೃದ್ಧಿ ಇಲಾಖೆಯ ಉಪ ಕಾರ್ಯದರ್ಶಿ ಹುದ್ದೆಯಲ್ಲೇ ಮುಂದುವರಿದಿದ್ದಾರೆ. ಸರ್ಕಾರದ ಆದೇಶವನ್ನು ಪ್ರಶ್ನಿಸಿ ಅವರು ಕೆಎಟಿ ಮೊರೆ ಹೋಗಿದ್ದಾರೆ.

'ಬಿಬಿಎಂಪಿ ಎಂಜಿನಿಯರ್‌ಗಳ ಬಡ್ತಿಗೆ ಮುಖ್ಯಮಂತ್ರಿ ಹೆಸರಿನಲ್ಲೇ ₹4.50 ಕೋಟಿ ಲಂಚ ಪಡೆಯಲಾಗಿದೆ. ಇದರಲ್ಲಿ ನಗರಾಭಿವೃದ್ಧಿ ಇಲಾಖೆಯ ಕೆಲವು ಅಧಿಕಾರಿಗಳು ಭಾಗಿಯಾಗಿದ್ದಾರೆ' ಎಂದು ಆರೋಪಿಸಿ ಕರ್ನಾಟಕ ರಾಷ್ಟ್ರ ಸಮಿತಿ (ಕೆಎಸ್‌ಆರ್) ಪಕ್ಷವು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಇತ್ತೀಚೆಗೆ ದೂರು ನೀಡಿತ್ತು.

ಟುಮ್ಯಾಕ್ ಆ್ಯಪ್‌ನಲ್ಲಿ ಡಿಜಿಟಲ್ ಪಾವತಿ ಮೂಲಕ ಪಾಸ್ ಖರೀದಿಗೆ ಅವಕಾಶ

ಬಿಎಂಟಿಸಿ ಪಾಸ್ ಇನ್ನು ಮೊಬೈಲ್ ಆ್ಯಪ್‌ನಲ್ಲಿ

ಪ್ರಜಾವಾಣಿ ವಾರ್ತೆ

ವಿ.ಅನ್ಬು ಕುಮಾರ್

ಬೆಂಗಳೂರು: ಬಿಎಂಟಿಸಿ ಪಾಸ್ ಪಡೆಯಲು ಇನ್ನು ಮುಂದೆ ಕಚೇರಿ ಮತ್ತು ಕೌಂಟರ್‌ಗಳಿಗೆ ಪ್ರಯಾಣಿಕರು ಅಲೆದಾಡ ಬೇಕಿಲ್ಲ. ಮೊಬೈಲ್ ಆ್ಯಪ್ ಮೂಲಕವೇ ಡಿಜಿಟಲ್ ಪಾಸ್ ವಿತರಿಸುವ ವ್ಯವಸ್ಥೆಯನ್ನು ಬಿಎಂಟಿಸಿ ಜಾರಿಗೆ ತಂದಿದೆ.

ನಗದು ರಹಿತ ಮತ್ತು ಕಾಗದ ರಹಿತ ವಹಿವಾಟಿನ ಕಡೆ ಮುಖ ಮಾಡಿರುವ ಬಿಎಂಟಿಸಿ, ಟುಮ್ಯಾಕ್ ಆ್ಯಪ್‌ನಲ್ಲಿ ಡಿಜಿಟಲ್ ಪಾವತಿ ಮೂಲಕವೇ ಪಾಸ್ ಖರೀದಿಸಲು ಅವಕಾಶ ಕಲ್ಪಿಸಿದೆ. ಹೊಸ ಆ್ಯಪ್ ಅನ್ನು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್ ಅವರು ಬುಧವಾರ ಬಿಡುಗಡೆ ಮಾಡಿದರು.

'ಬಿಎಂಟಿಸಿ ಪ್ರಯಾಣಿಕರು ಪಾಸ್ ಪಡೆಯಲು ಟಿಟಿಎಂಸಿ ಅಥವಾ ಬಸ್ ನಿಲ್ದಾಣಗಳಿಗೆ ಪ್ರಯಾಣಿಕರು ಹೋಗಬೇಕಿತ್ತು. ಅಲ್ಲಿ ಮುದ್ರಿತ ಪಾಸ್ ವಿತರಣೆ ಮಾಡಲಾಗುತ್ತಿತ್ತು. ಟುಮ್ಯಾಕ್ ಆ್ಯಪ್ ಡೌನ್‌ಲೋಡ್ ಮಾಡಿಕೊಂಡರೆ ದಿನದ, ವಾರದ ಮತ್ತು ತಿಂಗಳ ಪಾಸ್‌ಗಳನ್ನು ಪ್ರಯಾಣಿಕರು ಕುಳಿತಲ್ಲೇ ಖರೀದಿಸಬಹುದು' ಎಂದು ತಿಳಿಸಿದರು.

'ಮೊದಲ ಹಂತದಲ್ಲಿ ವೋಲ್ವೊ ಬಸ್ ಮತ್ತು 200 ಸಾಮಾನ್ಯ ಬಸ್‌ಗಳಲ್ಲಿ ಈ ಪಾಸ್‌ಗಳನ್ನು ಪರಿಚಯಿಸಲು ಉದ್ದೇಶಿಸಲಾಗಿದೆ. ಡಿಜಿಟಲ್ ಪಾಸ್ ಹೊಂದಿದವರು ನಿರ್ವಾಹಕರ ಬಳಿ ಇರುವ ಕ್ಯೂಆರ್ ಕೋಡ್‌ಗೆ ಸ್ಕ್ಯಾನ್ ಮಾಡಿ ಟಿಕೆಟ್ ಪಡೆದುಕೊಳ್ಳಬೇಕಾಗುತ್ತದೆ. ಈ ಪ್ರಾಯೋಗಿಕ ಯೋಜನೆ ಯಶಸ್ವಿಯಾದರೆ ಮುಂದಿನ ದಿನಗಳಲ್ಲಿ ಎಲ್ಲ ಬಸ್‌ಗಳಿಗೂ ವಿಸ್ತರಿಸಲಾಗುವುದು' ಎಂದರು.

'ಸದ್ಯಕ್ಕೆ ಡಿಜಿಟಲ್ ಪಾಸ್ ಪಡೆದವರಿಗೆ ರಿಯಾಯಿತಿ ನೀಡುತ್ತಿಲ್ಲ. ಮುಂದಿನ ದಿನಗಳಲ್ಲಿ ರಿಯಾಯಿತಿ ನೀಡುವ ಬಗ್ಗೆ ಯೋಚಿಸಲಾಗುವುದು. ಪ್ರಯಾಣಿಕರು ಯಾವಾಗ ಪಾಸ್ ಪಡೆದರೂ ತಿಂಗಳ ಅಂತ್ಯಕ್ಕೆ ಅದರ ಮಾನ್ಯತೆ ಅಂತ್ಯವಾಗುತ್ತಿತ್ತು. ಡಿಜಿಟಲ್ ಪಾಸ್‌ನಲ್ಲಿ ಈ ವ್ಯವಸ್ಥೆ ಬದಲಾಗಲಿದೆ. ಖರೀದಿಸಿದ ದಿನದಿಂದ ಒಂದು ತಿಂಗಳ ತನಕ ಅದರ ಮಾನ್ಯತೆ ಇರಲಿದೆ' ಎಂದು ವಿವರಿಸಿದರು.

ಆ್ಯಪ್ ಡೌನ್‌ಲೋಡ್ ಮಾಡಿ ಕೊಂಡವರು ತಮ್ಮ ಕನಿಷ್ಠ ವಿವರ ದಾಖಲಿಸಬೇಕು. ಯಾವ ಪಾಸ್ ಬೇಕು ಎಂಬುದನ್ನು ನಿರ್ಧರಿಸಿ ಅದಕ್ಕೆ ತಕ್ಕಂತೆ ಮೊತ್ತವನ್ನು ಯುಪಿಐ ಪಾವತಿ, ಡೆಬಿಟ್ ಕಾರ್ಡ್ ಮತ್ತು ಕ್ರೆಡಿಟ್ ಕಾರ್ಡ್ ಮೂಲಕ ಪಾವತಿಸಬಹುದು ಎಂದರು.

ಡಿಜಿಟಲ್ ಟಿಕೆಟ್ ಚಿಂತನೆ

ಡಿಜಿಟಲ್ ಪಾಸ್ ವ್ಯವಸ್ಥೆ ಯಶಸ್ವಿಯಾದರೆ ಡಿಜಿಟಲ್ ಟಿಕೆಟ್ ವಿತರಿಸುವ ಬಗ್ಗೆಯೂ ಚಿಂತಿಸಲಾಗಿದೆ ಎಂದು ಅನ್ಬುಕುಮಾರ್ ವಿವರಿಸಿದರು.

ಮುಂದಿನ ದಿನಗಳಲ್ಲಿ ನಗದು ವಹಿವಾಟು ಇರುವುದಿಲ್ಲ. ಚಿಲ್ಲರೆ ಸಮಸ್ಯೆ ಮತ್ತು ಆದಾಯ ಸೋರಿಕೆಗೆ ಕಡಿವಾಣ ಬೀಳಲಿದೆ ಎಂದು ಅವರು ಹೇಳಿದರು.

'ಡಿಜಿಟಲ್ ಪಾಸ್ ಅಥವಾ ಟಿಕೆಟ್‌ನಿಂದ ನಿರ್ವಾಹಕರ ಕೆಲಸಕ್ಕೆ ಕುತ್ತು ಬರುವುದಿಲ್ಲ. ಬಿಎಂಟಿಸಿಯಲ್ಲಿ 6,500 ಬಸ್‌ಗಳಿದ್ದು, ಆದರೂ ಪ್ರಯಾಣಿಕರ ಅಗತ್ಯಕ್ಕೆ ತಕ್ಕಂತೆ ಬಸ್ ವ್ಯವಸ್ಥೆ ಮಾಡಲು ಸಾಧ್ಯವಾಗುತ್ತಿಲ್ಲ. ನಗರದ ಹೊರ ವಲಯಕ್ಕೂ ಬಸ್ ಜಾಲ ವಿಸ್ತರಿಸಬೇಕಿದೆ. ಅದ್ದರಿಂದ ನಿರ್ವಾಹಕರ ಕೆಲಸಕ್ಕೆ ತೊಂದರೆ ಆಗದು' ಎಂದು ಅವರು ಸ್ಪಷ್ಟಪಡಿಸಿದರು.

ದರ ಹೆಚ್ಚಳ ತೀರ್ಮಾನ ಇಲ್ಲ

ಡೀಸೆಲ್ ದರ ಶೇ 50ರಷ್ಟು ಹೆಚ್ಚಾಗಿದ್ದು, ಸಂಸ್ಥೆಗೆ ಹೊರೆಯಾಗುತ್ತಿದೆ. ಆದರೂ, ದರ ಹೆಚ್ಚಳದ ಬಗ್ಗೆ ತೀರ್ಮಾನ ಮಾಡಿಲ್ಲ ಎಂದು ವಿ.ಅನ್ಬುಕುಮಾರ್ ಸ್ಪಷ್ಟಪಡಿಸಿದರು.

2015ರ ನಂತರ ಟಿಕೆಟ್ ದರ ಪರಿಷ್ಕರಣೆ ಮಾಡಿಲ್ಲ. ಆಗ ಡೀಸೆಲ್ ದರ ಲೀಟರ್‌ಗೆ ₹51 ಇತ್ತು, ಈಗ ₹107ಕ್ಕೆ ಏರಿಕೆಯಾಗಿದೆ. ಡೀಸೆಲ್‌ಗೆ ಫೆಬ್ರುವರಿಯಲ್ಲಿ ದಿನಕ್ಕೆ ₹2 ಕೋಟಿ ವೆಚ್ಚವಾಗುತ್ತಿತ್ತು, ಈಗ ಅದು ₹2.46 ಕೋಟಿಗೆ ಹೆಚ್ಚಳವಾಗಿದೆ. ಟಿಕೆಟ್ ದರ ಪರಿಷ್ಕರಣೆ ಆಗಬೇಕಿದ್ದರೆ ಅದು ಸರ್ಕಾರದ ಹಂತದಲ್ಲಿ ತೀರ್ಮಾನ ಆಗಬೇಕಾಗುತ್ತದೆ ಎಂದರು.

ನಗರೋತ್ಥಾನ: ₹ 705 ಕೋಟಿ ಮೊತ್ತದ ಯೋಜನೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಏಳು ಜಿಲ್ಲೆಗಳ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅಮೃತ ನಗರೋತ್ಥಾನ ಯೋಜನೆಯ ನಾಲ್ಕನೇ ಹಂತದಲ್ಲಿ ₹ 705 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಿರುವ ವಿವಿಧ ಕಾಮಗಾರಿಗಳ ಕ್ರಿಯಾ ಯೋಜನೆಗಳಿಗೆ ಪೌರಾಡಳಿತ ಸಚಿವ ಎಂ.ಟಿ.ಬಿ. ನಾಗರಾಜು ಅಧ್ಯಕ್ಷತೆಯ ರಾಜ್ಯಮಟ್ಟದ ಸಮಿತಿ ಬುಧವಾರ ಅನುಮೋದನೆ ನೀಡಿದೆ.

ಮೈಸೂರು, ಉಡುಪಿ, ರಾಮನಗರ, ಕೊಡಗು, ಬಳ್ಳಾರಿ, ದಾವಣಗೆರೆ ಮತ್ತು ಬೆಳಗಾವಿ ಜಿಲ್ಲೆಗಳ ನಗರ ಸ್ಥಳೀಯ ಸಂಸ್ಥೆಗಳಲ್ಲಿ 2022-23 ಹಾಗೂ 2024-25ನೇ ಆರ್ಥಿಕ ವರ್ಷದವರೆಗೆ ಮುಖ್ಯಮಂತ್ರಿಯವರ ಅಮೃತ ನಗರೋತ್ಥಾನ ಯೋಜನೆಯಡಿ ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತದೆ.

ಮೈಸೂರು ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ₹ 75 ಕೋಟಿ, ಕೊಡಗು ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ₹ 55 ಕೋಟಿ, ಬಳ್ಳಾರಿ ಜಿಲ್ಲೆಯಲ್ಲಿ ₹ 80 ಕೋಟಿ, ರಾಮನಗರ ಜಿಲ್ಲೆಯಲ್ಲಿ ₹ 125 ಕೋಟಿ, ದಾವಣಗೆರೆ ಜಿಲ್ಲೆಯಲ್ಲಿ ₹ 70, ಬೆಳಗಾವಿ ಜಿಲ್ಲೆಯಲ್ಲಿ ₹ 260 ಕೋಟಿ ಮತ್ತು ಉಡುಪಿ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ₹ 40 ಕೋಟಿ ವೆಚ್ಚದ ಕಾಮಗಾರಿಗಳನ್ನು ಕೈಗೊಳ್ಳಲು ಸಮಿತಿ ಒಪ್ಪಿಗೆ ನೀಡಿದೆ.

ಅಮೃತ ನಗರೋತ್ಥಾನ ಯೋಜನೆಯ ನಾಲ್ಕನೇ ಹಂತದಲ್ಲಿ ರಾಜ್ಯದ 302 ನಗರ ಸ್ಥಳೀಯ ಸಂಸ್ಥೆಗಳಲ್ಲಿ ₹ 3,885 ಕೋಟಿ ರೂಪಾಯಿ ವೆಚ್ಚದ ಕಾಮಗಾರಿಗಳನ್ನು ಆರಂಭಿಸುವ ಪ್ರಸ್ತಾವಕ್ಕೆ ಸಂಪುಟ ಸಭೆ ಜನವರಿಯಲ್ಲಿ ಒಪ್ಪಿಗೆ ನೀಡಿತ್ತು. ಅದಕ್ಕೆ ಪೂರಕವಾಗಿ ತಯಾರಿಸಿದ್ದ ಕ್ರಿಯಾ ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ.

ಬೆಳಗಾವಿ, ರಾಮನಗರ, ಬಳ್ಳಾರಿ, ಚಿಕ್ಕಮಗಳೂರು, ಬಾಗಲಕೋಟೆ, ಉತ್ತರ ಕನ್ನಡ ಮತ್ತು ವಿಜಯನಗರ ಜಿಲ್ಲೆಗಳ ಸ್ಥಳೀಯ ಸಂಸ್ಥೆಗಳಲ್ಲಿ ಅಮೃತ ನಗರೋತ್ಥಾನ ಯೋಜನೆಯ ಮೂರನೇ ಹಂತದ ಅನುದಾನದಲ್ಲಿ ಉಳಿಕೆಯಾಗಿರುವ ಮೊತ್ತವನ್ನು ಬಳಸಿಕೊಂಡು ಬದಲಿ ಕಾಮಗಾರಿಗಳನ್ನು ಕೈಗೊಳ್ಳುವ ಪ್ರಸ್ತಾವಕ್ಕೂ ಸಮಿತಿ ಒಪ್ಪಿಗೆ ಸೂಚಿಸಿದೆ.

ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಡಾ. ಅಜಯ್ ನಾಗಭೂಷಣ್, ಪೌರಾಡಳಿತ ಇಲಾಖೆ ನಿರ್ದೇಶಕಿ ಅರ್ಚನಾ, ಮುಖ್ಯ ಎಂಜಿನಿಯರ್ ಸತ್ಯನಾರಾಯಣ ಸಭೆಯಲ್ಲಿದ್ದರು.

ಪುಷ್ಪ ನಮನ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಗರದಲ್ಲಿ ಬುಧವಾರ ಹಮ್ಮಿಕೊಂಡ ದೇವರ ದಾಸಿಮಯ್ಯ ಜಯಂತಿ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ನೇಕಾರ ಸಮುದಾಯಗಳ ಒಕ್ಕೂಟದ ಅಧ್ಯಕ್ಷ ಬಿ.ಎಸ್. ಸೋಮಶೇಖರ್, ನೇಕಾರ ಸಮುದಾಯದ ಮುಖಂಡ ಎಂ.ಡಿ. ಲಕ್ಷ್ಮೀನಾರಾಯಣ, ಸಂಘದ ಕಾರ್ಯಾಧ್ಯಕ್ಷ ಅಂಬಾದಾಸ್ ಕಾಮೂರ್ತಿ, ಬಾಗಲಕೋಟೆಯ ಘನಲಿಂಗ ಸ್ವಾಮೀಜಿ, ಶಾಸಕ ಉದಯ್ ಬಿ. ಗರುಡಾಚಾರ್ ಹಾಗೂ ಬಿಜೆಪಿ ಮುಖಂಡ ಎಸ್. ಹರೀಶ್ ಅವರು ದೇವರ ದಾಸಿಮಯ್ಯ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು

–ಪ್ರಜಾವಾಣಿ ಚಿತ್ರ

ಸಚಿವರ ಜತೆ ಇಸ್ರೇಲ್ ನಿಯೋಗದ ಮಾತುಕತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಸ್ರೇಲ್ ಪ್ರತಿಷ್ಠಿತ ನ್ಯಾಷನಲ್ ಡಿಫೆನ್ಸ್ ಕಾಲೇಜಿನ ಉನ್ನತ ನಿಯೋಗವು ಐಟಿ ಮತ್ತು ಬಿಟಿ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರನ್ನು ಬುಧವಾರ ಭೇಟಿಯಾಗಿ ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ನವೋದ್ಯಮ ಕಾರ್ಯ ಪರಿಸರ ಕುರಿತು ವಿಚಾರ ವಿನಿಮಯ ನಡೆಸಿತು.

ವಿಕಾಸಸೌಧದಲ್ಲಿ ನಡೆದ ಭೇಟಿಯಲ್ಲಿ ಸಚಿವರು, ರಾಜ್ಯದಲ್ಲಿರುವ ಐಟಿ, ಬಿಟಿ, ನವೋದ್ಯಮ ಮತ್ತು ರಕ್ಷಣಾ ಸಂಶೋಧನೆ ಹಾಗೂ ತಂತ್ರಜ್ಞಾನದ ಕುರಿತು ಹಲವು ವಿಚಾರಗಳನ್ನು ಆ ದೇಶದ ನಿಯೋಗದೊಂದಿಗೆ ಹಂಚಿಕೊಂಡರು.

ಈ ಸಂದರ್ಭದಲ್ಲಿ ಇಸ್ರೇಲ್ ನಿಯೋಗದ ಸದಸ್ಯರು, ತಮ್ಮ ದೇಶದಲ್ಲಿರುವ ನ್ಯಾಷನಲ್ ಡಿಫೆನ್ಸ್ ಕಾಲೇಜಿನಲ್ಲಿ ಒಂದು ಶೈಕ್ಷಣಿಕ ವರ್ಷದ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಭದ್ರತೆ, ಅಂತರರಾಷ್ಟ್ರೀಯ ಸಂಬಂಧಗಳು, ವಿಶ್ವಸಂಸ್ಥೆ, ಐರೋಪ್ಯ ಒಕ್ಕೂಟ, ಅಮೆರಿಕ ಮತ್ತು ನ್ಯಾಟೋ ಮುಂತಾದ ವಿಷಯಗಳನ್ನು ಕುರಿತು ನಾಲ್ಕು ಹಂತಗಳಲ್ಲಿ ಹೇಗೆ ಬೋಧನೆ ಮಾಡಲಾಗುತ್ತದೆ ಎನ್ನುವುದನ್ನು ವಿವರಿಸಿದರು.

ಇಸ್ರೇಲ್‌ನ ನ್ಯಾಷನಲ್ ಡಿಫೆನ್ಸ್ ಕಾಲೇಜಿನ ನಿಯೋಗದ ಸದಸ್ಯರು ವಿಕಾಸಸೌಧದಲ್ಲಿ ಬುಧವಾರ ಐಟಿ ಮತ್ತು ಬಿಟಿ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು

ಕರ್ನಾಟಕದಲ್ಲಿ ನವೋದ್ಯಮವು ದೃಢವಾಗಿ ಬೆಳೆಯುತ್ತಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ ನಿಯೋಗವು ರಾಜ್ಯಕ್ಕೆ ಅಗತ್ಯ ನೆರವು ಮತ್ತು ಮಾರ್ಗದರ್ಶನ ನೀಡುವುದಾಗಿ ಹೇಳಿತು.

ಇದಕ್ಕೆ ಪ್ರತಿಕ್ರಿಯಿಸಿದ ಅಶ್ವತ್ಥನಾರಾಯಣ ಅವರು, ರಾಜ್ಯದಲ್ಲಿ ನವೋದ್ಯಮವು ಶಕ್ತಿಶಾಲಿಯಾಗಿ ಬೆಳೆಯುತ್ತಿರುವುದು ಮತ್ತು 34ಕ್ಕೂ ಹೆಚ್ಚಿನ ನವೋದ್ಯಮ ಕಂಪನಿಗಳು ಯೂನಿಕಾರ್ನ್ ಸ್ಥಾನಮಾನ ಹೊಂದಿರುವುದನ್ನು 'ಇಸ್ರೇಲ್ ನಿಯೋಗದ ಗಮನಕ್ಕೆ ತಂದರು.

ಈ ಸಂದರ್ಭದಲ್ಲಿ ನಿಯೋಗದ ಪ್ರತಿನಿಧಿಗಳು ಮಾತನಾಡಿ, ಕಳೆದ 30 ವರ್ಷಗಳಿಂದ ಈಚೆಗೆ ಭಾರತ ಮತ್ತು ಇಸ್ರೇಲ್ ನಡುವೆ ದ್ವಿಪಕ್ಷೀಯ ರಾಜತಾಂತ್ರಿಕ ಬಾಂಧವ್ಯ ಮತ್ತು ರಕ್ಷಣಾ ಸಹಕಾರ ಹೇಗೆ ವೃದ್ಧಿಸಿಕೊಂಡು ಬಂದಿದೆ ಎನ್ನುವ ಬಗ್ಗೆ ವಿವರಿಸಿದರು.

ಇಸ್ರೇಲ್ ನಿಯೋಗದಲ್ಲಿ ಕರ್ನಲ್ ಯೆಹುದಾ ಯೋಹನಾನಾಫ್, ಕರ್ನಲ್ ಸ್ಯಾಮ್ಯುಯಲ್ ಬೌಮ್‌ಸ್ಟೀನ್, ಅಲ್ಲಿನ ಪ್ರಧಾನಮಂತ್ರಿಗಳ ಕಚೇರಿಯ ಉನ್ನತಾಧಿಕಾರಿ ಶಾಯ್ ಜೊಂಟ್ಯಾಗ್, ಕಮಾಂಡರ್ ನಾವಾ ಬ್ಯಾರಿನಾ ಬೆನ್ ಸರ್, ಲೆಫ್ಟಿನೆಂಟ್ ಕರ್ನಲ್ ಕೆಲಿ ಬೊರುಕ್ ಹುಬೆಕ್ ಮತ್ತು ಬಿಲ್ ವ್ಯಾಲೇಸ್, ಅಲ್ಲಿನ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಅಧಿಕಾರಿ ಶರೋನ್ ರಿವೆನ್, ನ್ಯಾಷನಲ್ ಡಿಫೆನ್ಸ್ ಕಾಲೇಜಿನ ಅವಿ ಜುಬೈಯಾ ಇದ್ದರು.

ಐಟಿ-ಬಿಟಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇ.ವಿ.ರಮಣ ರೆಡ್ಡಿ, ನಿರ್ದೇಶಕಿ ಮೀನಾ ನಾಗರಾಜ್, ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ ಸಿಇಒ ಸಂಜೀವ್ ಗುಪ್ತ ಇದ್ದರು.

'ಕ್ರಿಯಾ' – 'ಅನ್ವೇಷಣಾ' ಕಾರ್ಯಕ್ರಮ

ವಿಜ್ಞಾನ ಕಲಿಕೆ ಯೋಜನೆ: ಶಾಲೆಗಳ ಸಹಭಾಗಿತ್ವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲಾ ಹಂತದಲ್ಲಿ ವಿಜ್ಞಾನದ ಪ್ರಯೋಗಗಳಿಗೆ ಒತ್ತು ನೀಡುವ, ಅನುಭವಾತ್ಮಕ ಕಲಿಕೆ ಮತ್ತು ವಿಜ್ಞಾನ ಕಲಿಕೆಯ ಮೂಲಕ ರಾಷ್ಟ್ರದ ನಿರ್ಮಾಣಕ್ಕೆ ಕೊಡುಗೆ ನೀಡುವ ಉದ್ದೇಶದಿಂದ 'ಪ್ರಯೋಗ ಶೈಕ್ಷಣಿಕ ಸಂಶೋಧನಾ ಸಂಸ್ಥೆ' ವಿವಿಧ ಶಿಕ್ಷಣ ಸಂಸ್ಥೆಗಳ ಜತೆ ಪಾಲುದಾರಿಕೆ ವಹಿಸಲು ಮುಂದಾಗಿದೆ.

ಇದಕ್ಕಾಗಿ 'ಕ್ರಿಯಾ' ಮತ್ತು 'ಅನ್ವೇಷಣಾ' ಎಂಬ ಎರಡು ಯೋಜನೆಗಳನ್ನು ಆರಂಭಿಸಿದ್ದು, ಇವುಗಳಲ್ಲಿ ಯಾವುದೇ ಶಾಲೆಗಳು ಉಚಿತವಾಗಿ ಪಾಲುದಾರಿಕೆ ಹೊಂದಬಹುದಾಗಿದೆ ಎಂದು ಪ್ರಯೋಗ ಸಂಸ್ಥೆಯ ಸಂಶೋಧನಾ ನಿರ್ದೇಶಕ ಡಾ.ಕೆ.ಎಸ್.ನಾಗಭೂಷಣ ತಿಳಿಸಿದ್ದಾರೆ.

'ಕ್ರಿಯಾ' ಯೋಜನೆಯು ಶಿಕ್ಷಣದಲ್ಲಿನ ವಿಜ್ಞಾನ ಸಂಶೋಧನಾ ಯೋಜನೆ. ಶಾಲಾ ಹಂತದಲ್ಲಿ ಅನುಭವಾತ್ಮಕ ವಿಜ್ಞಾನ ಕಲಿಕೆಯ ಮೂಲಕ ರಾಷ್ಟ್ರ ನಿರ್ಮಾಣಕ್ಕೆ ಪ್ರತಿಯೊಬ್ಬ ವಿದ್ಯಾರ್ಥಿಯೂ ಕೊಡುಗೆ ನೀಡಬಹುದಾಗಿದೆ. ಈ ಯೋಜನೆಯ ಮೂಲಕ ವಿದ್ಯಾರ್ಥಿಗಳು ವಿಜ್ಞಾನವನ್ನು ಅನುಭವಾತ್ಮಕವಾಗಿ ಕಲಿಯುವಂತೆ ಮಾಡಲು ಅಪೇಕ್ಷೆ ಹೊಂದಿರುವ ಶಾಲೆಗಳೊಂದಿಗೆ ಪಾಲುದಾರಿಕೆ ಮಾಡಲು ಉದ್ದೇಶಿಸಿದೆ. ಬಹುವಾರ್ಷಿಕ ಸಹಯೋಗದ ಭಾಗವಾಗಿ, ಪ್ರಯೋಗ ಸಂಸ್ಥೆಯು ಶಾಲಾ ವ್ಯವಸ್ಥಾಪಕರು, ಪ್ರಾಂಶುಪಾಲರು, ಮುಖ್ಯ ಶಿಕ್ಷಕರು ಮತ್ತು ಶಿಕ್ಷಕರೊಂದಿಗೆ ಕೆಲಸ ಮಾಡುತ್ತದೆ. ಇದು 6 ರಿಂದ 10 ನೇ ತರಗತಿ ವಿದ್ಯಾರ್ಥಿಗಳಿಗೆ ಅನ್ವಯಿಸುತ್ತದೆ ಎಂದು ಹೇಳಿದ್ದಾರೆ.

ಈ ಯೋಜನೆಯಡಿ ಶಾಲೆಗಳಿಗೆ ಅಗತ್ಯವಿರುವ ವಿಷಯ, ಶೈಕ್ಷಣಿಕ ಕಾರ್ಯಾಚರಣೆ ಜ್ಞಾನ, ಶಿಕ್ಷಕರ ತರಬೇತಿ ಮತ್ತು ಬೆಂಬಲವನ್ನು ಪ್ರಯೋಗ ಸಂಸ್ಥೆ ನೀಡುತ್ತದೆ. ಇವೆಲ್ಲವುಗಳಿಂದ ಶಾಲೆಯಲ್ಲಿನ ಬೋಧನಾ ಮತ್ತು ಕಲಿಕೆಯ ವಿಧಾನಗಳಿಂದ, ವಿದ್ಯಾರ್ಥಿಗಳಿಗೆ ವಿಜ್ಞಾನ ಕಲಿಕೆಯನ್ನು ಅನುಭವಾತ್ಮಕ ಕಲಿಕೆಯನ್ನಾಗಿ ಪರಿವರ್ತಿಸುವ ಸಾಮರ್ಥ್ಯ ಪಡೆಯಲು ಸಹಾಯ ಮಾಡುವ ಗುರಿಯನ್ನು ಹೊಂದಿದೆ ಎಂದು ಅವರು ಹೇಳಿದ್ದಾರೆ.

'ಅನ್ವೇಷಣಾ' ಯೋಜನೆಯು ಪ್ರಯೋಗ ಕ್ಯಾಂಪಸ್‌ನಲ್ಲಿ 9 ರಿಂದ 12 ನೇ ತರಗತಿ ವಿದ್ಯಾರ್ಥಿಗಳಿಗೆ ವೈಜ್ಞಾನಿಕ ಸಂಶೋಧನಾ ಯೋಜನೆಗಳಲ್ಲಿ ಭಾಗವಹಿಸಲು ಅವಕಾಶ ನೀಡುತ್ತದೆ. ಇಲ್ಲಿ ಉತ್ತಮ ಗುಣಮಟ್ಟದ ಸಂಶೋಧನೆಯನ್ನು ಕೈಗೊಳ್ಳಲು ಅಗತ್ಯವಾದ ಮೂಲಸೌಕರ್ಯಗಳನ್ನು ಅತ್ಯುತ್ತಮ ದರ್ಜೆಯ ಉಪಕರಣಗಳೊಂದಿಗೆ ಸ್ಥಾಪಿಸಲಾಗಿದೆ. ರಾಷ್ಟ್ರೀಯ ಶಿಕ್ಷಣ ನೀತಿಯ ಶಿಫಾರಸುಗಳಿಗೆ ಅನುಗುಣವಾಗಿಯೇ ರೂಪಿಸಲಾಗಿದೆ. ವಿಶ್ವ ದರ್ಜೆಯ ಸಂಶೋಧಕರನ್ನು ಗುರುತಿಸಿ, ಪೋಷಿಸಲು ಚೌಕಟ್ಟನ್ನು ರೂಪಿಸಲು ಸಹಾಯ ಮಾಡುತ್ತದೆ ಎಂದು ಹೇಳಿದ್ದಾರೆ.

ಈ ಯೋಜನೆಗಳಲ್ಲಿ ಪಾಲುದಾರಿಕೆ ವಹಿಸಲು ಇಚ್ಛಿಸುವ ಶಾಲೆಗಳು ಈ ಬಗ್ಗೆ ಹೆಚ್ಚಿನ ವಿವರಗಳಿಗೆ www.prayoga.org.in ಅಥವಾ info@prayoga.org.in ಸಂಪರ್ಕಿಸುವುದು.

ಹುಲಿ ಗಣತಿಗೆ ಅಳವಡಿಸಿದ್ದ ಕ್ಯಾಮೆರಾ ಕಳವು

ಕನಕಪುರ: ಅರಣ್ಯದಲ್ಲಿ ಹುಲಿ ಗಣತಿಗೆ ಅಳವಡಿಸಿದ್ದ ಸ್ವಯಂಚಾಲಿತ ಕ್ಯಾಮೆರಾಗಳು ಕಳ್ಳತನವಾಗಿದ್ದು, ಈ ಬಗ್ಗೆ ಸಾತನೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ತಾಲ್ಲೂಕಿನ ಸಾತನೂರು ಹೋಬಳಿಯ ಕಬ್ಬಾಳು ಮೀಸಲು ಅರಣ್ಯದ ಕಂಚನಹಳ್ಳಿ ಸಮೀಪದ ಹೊಸಹಳ್ಳ ಕಟ್ಟೆ ಪ್ರದೇಶದಲ್ಲಿ ಕ್ಯಾಮೆರಾ ಟ್ರ್ಯಾಪಿಂಗ್ ನಡೆಯುತ್ತಿದೆ. 2021-22ನೇ ಸಾಲಿನ ಹುಲಿ ಗಣತಿಗೆ ಅಳವಡಿಸಿದ್ದ ಎರಡು ಕ್ಯಾಮೆರಾಗಳನ್ನು ಕಿಡಿಗೇಡಿಗಳು ಕಳವು ಮಾಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ಜಾಮೀನು ಅರ್ಜಿ ಪರಿಶೀಲನೆ: ತಂತ್ರಜ್ಞಾನ ಅಭಿವೃದ್ಧಿಗೆ ನಿರ್ದೇಶನ

ಬೆಂಗಳೂರು: 'ನಿರೀಕ್ಷಣಾ ಜಾಮೀನು ಕೋರಿ ಏಕಕಾಲಕ್ಕೆ ನಾನಾ ಕೋರ್ಟ್‌ಗಳಲ್ಲಿ ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸುವ ಪ್ರವೃತ್ತಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಆಧುನಿಕ ತಂತ್ರಜ್ಞಾನದ ಕಾರ್ಯತಂತ್ರ ರೂಪಿಸಿ' ಎಂದು ರಿಜಿಸ್ಟ್ರಾರ್ ಜನರಲ್ ಮತ್ತು ಜಿಲ್ಲಾ ನ್ಯಾಯಾಲಯಗಳಿಗೆ ಹೈಕೋರ್ಟ್ ಆದೇಶಿಸಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಾದಹಳ್ಳಿಯ ನವರತ್ನ ಅಗ್ರಹಾರದ ನಂಜಪ್ಪ ಎಂಬುವರು ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ, 'ನಿರೀಕ್ಷಣಾ ಅಥವಾ ನಿಯಮಿತ ಜಾಮೀನು ಪಡೆಯಲು ಮೋಸದ ತಂತ್ರ ಅನುಸರಿಸುವುದನ್ನು ತಡೆಯಲು ತಂತ್ರಜ್ಞಾನ ಆಧಾರಿತ ಕಾರ್ಯವಿಧಾನ ಅಭಿವೃದ್ಧಿಪಡಿಸಿ ಮಾರ್ಗಸೂಚಿಗಳನ್ನು ಹೊರಡಿಸಬೇಕು' ಎಂದು ನಿರ್ದೇಶಿಸಿದೆ.

'ಹೊಸ ತಂತ್ರಜ್ಞಾನ ಆಧಾರಿತ ಕಾರ್ಯವಿಧಾನವು, ಈ ರೀತಿ ಸಲ್ಲಿಕೆಯಾಗುವ ಪ್ರತಿ ಅರ್ಜಿಯನ್ನು, ಪ್ರತಿಯೊಂದು ಕೋರ್ಟ್‌ಗಳಲ್ಲಿ ಪರಿಶೀಲಿಸಲು ಅನುವಾಗುವಂತೆ ಇರಬೇಕು' ಎಂದು ಸೂಚಿಸಿದೆ.

ಮಕ್ಕಳ ಅಪೌಷ್ಟಿಕತೆ: ವರದಿ ಸಲ್ಲಿಕೆಗೆ ಗಡುವು

ಬೆಂಗಳೂರು: ಮಕ್ಕಳಲ್ಲಿನ ಅಪೌಷ್ಟಿಕತೆ ನಿವಾರಣೆಗೆ ಸಂಬಂಧಿಸಿದಂತೆ ಪರಿಶೀಲನೆ ನಡೆಸಿ ವರದಿ ಸಲ್ಲಿಸಲು ನೇಮಿಸಲಾಗಿರುವ ನಿವೃತ್ತ ನ್ಯಾಯಮೂರ್ತಿ ಎ.ಎನ್. ವೇಣುಗೋಪಾಲಗೌಡ ನೇತೃತ್ವದ ಸಮಿತಿ ಮೂರು ವಾರಗಳಲ್ಲಿ ವರದಿ ಸಲ್ಲಿಸುವಂತೆ ಹೈಕೋರ್ಟ್ ಮನವಿ ಮಾಡಿದೆ.

ಈ ಸಂಬಂಧ ಸಲ್ಲಿಸಲಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಕಾನೂನು ಸೇವೆಗಳ ಪ್ರಾಧಿಕಾರದ ಪರ ವಕೀಲರು, ವರದಿ ಸಲ್ಲಿಕೆಗೆ ಇನ್ನಷ್ಟು ಕಾಲಾವಕಾಶ ನೀಡುವಂತೆ ಕೋರಿದರು. ಇದನ್ನು ಮನ್ನಿಸಿದ ನ್ಯಾಯಪೀಠ ಮೂರು ವಾರಗಳಲ್ಲಿ ವರದಿ ಸಲ್ಲಿಸುವಂತೆ ಸೂಚಿಸಿ ವಿಚಾರಣೆ ಮುಂದೂಡಿತು.

ಇದೇ ವೇಳೆ ಕೇಂದ್ರ ಸರ್ಕಾರದ ಪರ ವಕೀಲ ಉನ್ನಿಕೃಷ್ಣನ್, 'ರಾಜ್ಯಕ್ಕೆ ಹೆಚ್ಚುವರಿಯಾಗಿ 4,244 ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡುವ ಕೇಂದ್ರ ಯಾವುದೇ ನಿರ್ಧಾರ ಕೈಗೊಂಡಿಲ್ಲ. ಸಮಿತಿ ನೀಡುವ ಶಿಫಾರಸ್ಸಿಗೆ ಅನುಗುಣವಾಗಿ ಕೇಂದ್ರ ಸರ್ಕಾರ ನಿರ್ಧಾರ ಕೈಗೊಳ್ಳಲಿದೆ' ಎಂದು ತಿಳಿಸಿದರು.

ವಡೇರಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ನಾಮಫಲಕಗಳನ್ನು ಪೊಲೀಸ್ ಅಧಿಕಾರಿಗಳು ಮತ್ತು ಸ್ಥಳೀಯರು ಪರಿಶೀಲಿಸಿದರು

ಅಂಬೇಡ್ಕರ್ ನಾಮಫಲಕ ತೆರವು: ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕಾನ್ಶಿರಾಮ್ ನಗರದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಮತ್ತು ಕಾನ್ಶಿರಾಮ್ ಅವರ ಹೆಸರಿನಲ್ಲಿದ್ದ ಒಂಬತ್ತು ಫಲಕಗಳನ್ನು ತೆರವುಗೊಳಿಸಲಾಗಿದೆ ಎಂದು ಬಿಎಸ್‌ಪಿ ರಾಜ್ಯ ಸಂಯೋಜಕ ಮಾರಸಂದ್ರ ಮುನಿಯಪ್ಪ ದೂರಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಈ ಪ್ರದೇಶದಲ್ಲಿ ಹದಿನೈದು ವರ್ಷಗಳ ಹಿಂದೆಯೇ ನಾಮಫಲಕಗಳನ್ನು ಹಾಕಲಾಗಿತ್ತು. ಆದರೆ, ಇತ್ತೀಚೆಗೆ, ಯಲಹಂಕ ಶಾಸಕ ಎಸ್.ಆರ್ ವಿಶ್ವನಾಥ್ ಅವರ ಕುಮ್ಮಕ್ಕಿನಿಂದ ವಡೇರಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ವೆಂಕಟ ಲಕ್ಷ್ಮಮ್ಮ, ಉಪಾಧ್ಯಕ್ಷ ವಿಶ್ವನಾಥ್, ಗ್ರಾಮ ಪಂಚಾಯಿತಿ ಸದಸ್ಯ ಹರೀಶ್ ರಾಮಾಂಜಿನಪ್ಪ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ಇವರ ಹಿಂಬಾಲಕರು ಡಾ. ಬಿ.ಆರ್ ಅಂಬೇಡ್ಕರ್ ಮತ್ತು ಕಾನ್ಶಿರಾಮ್ ಅವರ ನಾಮಫಲಕಗಳನ್ನು ಧ್ವಂಸ ಮಾಡಿ ಅವಮಾನ ಮಾಡಿದ್ದಾರೆ ಎಂದು ದೂರಿದ್ದಾರೆ.

ಜಾತಿ ಗಲಭೆ ಸೃಷ್ಟಿಸಲು ಈ ಕೃತ್ಯವೆಸಗಲಾಗಿದೆ. ಗಂಗಮ್ಮನಗುಡಿ ಪೊಲೀಸ್ ಠಾಣೆಗೆ ಈ ಬಗ್ಗೆ ದೂರು ನೀಡಿದ್ದರೂ ಯಾವುದೇ ಕ್ರಮಕೈಗೊಂಡಿಲ್ಲ. ಬಿಬಿಎಂಪಿ ದಾಸರಹಳ್ಳಿ ವಲಯದ ಜಂಟಿ ಆಯುಕ್ತರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಬಿಬಿಎಂಪಿ ಸಹ ಯಾವುದೇ ಕ್ರಮಕೈಗೊಂಡಿಲ್ಲ. ನಾಮಫಲಕಗಳನ್ನು ತೆರವುಗೊಳಿಸಿದವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು. ಎರಡು–ಮೂರು ದಿನಗಳಲ್ಲಿ ಕ್ರಮಕೈಗೊಳದಿದ್ದರೆ ಪ್ರತಿಭಟನೆ ನಡೆಸಲಾಗುವುದು ಎಂದು ತಿಳಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಶಾಸಕ ಎಸ್.ಆರ್. ವಿಶ್ವನಾಥ್ ಅವರಿಗೆ ಕರೆ ಮಾಡಿ ಸಂಪರ್ಕಿಸಲು ಪ್ರಯತ್ನಿಸಲಾಯಿತು. ಆದರೆ, ಅವರು ಕರೆ ಸ್ವೀಕರಿಸಲಿಲ್ಲ.

ಕಾರ್ಖಾನೆ ಮಾಲೀಕರ ಮನೆಯಲ್ಲಿ ಚಿನ್ನಾಭರಣ ಕಳವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊರಮಾವು ನಿವಾಸಿ ನಿರ್ಮಲ್ ಶರ್ಮ ಎಂಬುವರ ಮನೆಯಲ್ಲಿ ₹10 ಲಕ್ಷ ನಗದು ಹಾಗೂ ₹10 ಲಕ್ಷ ಮೌಲ್ಯದ ಚಿನ್ನಾಭರಣ ಕಳವು ಆಗಿದೆ. ಹೆಣ್ಣೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ನಿರ್ಮಲ್ ಅವರು ಬಿದರಹಳ್ಳಿಯಲ್ಲಿ ಕಾರ್ಖಾನೆಯೊಂದನ್ನು ನಡೆಸುತ್ತಾರೆ. ಎಂದಿನಂತೆ ಅವರು ಬೆಳಿಗ್ಗೆ ಕಾರ್ಖಾನೆಗೆ ಹೋಗಿದ್ದರು. ಕುಟುಂಬದ ಸದಸ್ಯರು ಮಂಗಳವಾರ ಮಧ್ಯಾಹ್ನ 2 ಗಂಟೆ ಸುಮಾರಿಗೆ ಹೊರಗೆ ಹೋಗಿದ್ದರು. 3 ಗಂಟೆ ವೇಳೆಗೆ ವಾಪಸ್ ಆಗಿದ್ದರು. ಆಗ ಮನೆಗೆ ಬಾಗಿಲು ತೆರೆದಿತ್ತು. ಒಳಗೆ ಹೋಗಿ ನೋಡಿದಾಗ ಚಿನ್ನಾಭರಣ ಹಾಗೂ ನಗದು ಕಳವಾಗಿರುವುದು ಗಮನಕ್ಕೆ ಬಂದಿತ್ತು' ಎಂದು ಪೊಲೀಸರು ಹೇಳಿದ್ದಾರೆ.

'ಮನೆಯ ಭದ್ರತಾ ಸಿಬ್ಬಂದಿ ನಾಪತ್ತೆಯಾಗಿದ್ದಾನೆ. ಆತನೇ ಕಳವು ಮಾಡಿರುವ ಶಂಕೆ ಇದೆ. ಮನೆಯ ಸುತ್ತಲಿನ ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾಗಿರುವ ದೃಶ್ಯಗಳನ್ನು ಪರಿಶೀಲಿಸುತ್ತಿದ್ದೇವೆ' ಎಂದು ಅವರು ತಿಳಿಸಿದ್ದಾರೆ.

ಬೈಕ್ ಕಳ್ಳನ ಬಂಧನ

ಬೆಂಗಳೂರು: ಸಾರ್ವಜನಿಕ ಸ್ಥಳ ಹಾಗೂ ಮನೆಯ ಎದುರು ನಿಲ್ಲಿಸಿರುತ್ತಿದ್ದ ದ್ವಿಚಕ್ರ ವಾಹನಗಳನ್ನು ಕಳವು ಮಾಡುತ್ತಿದ್ದ ಆರೋಪಿಯನ್ನು ಚಂದ್ರಾಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ನಾಗರಬಾವಿಯ ಗಣೇಶ್ (21) ಬಂಧಿತ. ಈತನಿಂದ ₹3 ಲಕ್ಷ ಮೌಲ್ಯದ ನಾಲ್ಕು ದ್ವಿಚಕ್ರ ವಾಹನ ಹಾಗೂ ಒಂದು ಆಟೋ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದ್ದಾರೆ.

'ಠಾಣೆ ವ್ಯಾಪ್ತಿಯಲ್ಲಿ ವಾಸವಿದ್ದ ವ್ಯಕ್ತಿಯೊಬ್ಬರು ಫೆಬ್ರುವರಿ 9ರ ರಾತ್ರಿ ಮನೆಯ ಎದುರು ಹೊಂಡಾ ಶೈನ್ ಬೈಕ್ ನಿಲುಗಡೆ ಮಾಡಿದ್ದರು. ಬೆಳಿಗ್ಗೆ ಸ್ಥಳಕ್ಕೆ ಬಂದು ನೋಡಿದಾಗ ಬೈಕ್ ನಾಪತ್ತೆಯಾಗಿತ್ತು. ಅವರು ನೀಡಿದ ದೂರಿನ ಆಧಾರದಲ್ಲಿ ಮಾರ್ಚ್ 31ರಂದು ಆರೋಪಿಯನ್ನು ಬಂಧಿಸಲಾಗಿತ್ತು. ಆತ ನೀಡಿದ ಮಾಹಿತಿ ಮೇರೆಗೆ ಕಳವಾಗಿದ್ದ ಸ್ವತ್ತುಗಳನ್ನು ಜಪ್ತಿ ಮಾಡಲಾಗಿದೆ' ಎಂದು ತಿಳಿಸಿದ್ದಾರೆ.

'ಆರೋಪಿಯ ಬಂಧನದಿಂದ ಚಂದ್ರಾಲೇಔಟ್, ಕೆಂಗೇರಿ, ಬ್ಯಾಟರಾಯನಪುರ ಹಾಗೂ ಜೆ.ಜೆ.ನಗರ ಪೊಲೀಸ್ ಠಾಣೆ ವ್ಯಾಪ್ತಿಯ ಕಳವು ಪ್ರಕರಣಗಳು ಪತ್ತೆಯಾಗಿವೆ' ಎಂದಿದ್ದಾರೆ.

ನಕಲಿ ಅಂಕಪಟ್ಟಿ: ವಕೀಲ ಜಗದೀಶ್ ವಿರುದ್ಧ ದೂರು

ಬೆಂಗಳೂರು: 'ವಕೀಲ ಜಗದೀಶ್ ಕೆ.ಎನ್.ಮಹಾದೇವ್ ಅವರ ದ್ವಿತೀಯ ಪಿಯುಸಿ ಅಂಕಪಟ್ಟಿ ನಕಲಿಯಾಗಿದ್ದು, ಅದನ್ನು ಸಲ್ಲಿಸಿ ಅವರು ಕಾನೂನು ಪದವಿ ಪಡೆದಿದ್ದಾರೆ' ಎಂದು ಆರೋಪಿಸಿ ಆರ್‌ಟಿಐ ಕಾರ್ಯಕರ್ತ ವೆಂಕಟೇಶ ಎಂಬುವರು ನೀಡಿದ ದೂರಿನಡಿ ಅಶೋಕನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ನಕಲಿಅಂಕಪಟ್ಟಿ ಬಗ್ಗೆ ಜಗದೀಶ್ ಅವರ ಫೇಸ್‌ಬುಕ್ ಸ್ನೇಹಿತನಿಂದ ತಿಳಿದಿತ್ತು. ಅಂಕಪಟ್ಟಿಯ ಜೆರಾಕ್ಸ್ ಪ್ರತಿ ಪಡೆದು ಪರಿಶೀಲಿಸಿದಾಗ ಅದು ಉದಯಪುರದ ರಾಜಸ್ಥಾನ ವಿದ್ಯಾಪೀಠದಿಂದ ನೀಡಿರುವುದು ಗಮನಕ್ಕೆ ಬಂದಿತ್ತು. ಅವರು 600ಕ್ಕೆ 388 ಅಂಕ ಗಳಿಸಿರುವುದನ್ನು ಅದರಲ್ಲಿ ಉಲ್ಲೇಖಿಸಲಾಗಿತ್ತು. ರಾಜಸ್ಥಾನ ವಿದ್ಯಾಪೀಠವು ರಾಜಸ್ಥಾನ ಸೆಕೆಂಡರಿ ಎಜುಕೇಷನ್ ಬೋರ್ಡ್‌ನಿಂದ ಯಾವುದೇ ಮಾನ್ಯತೆ ಗಳಿಸಿಲ್ಲ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಆರೋಪಗಳಲ್ಲಿ ಹುರುಳಿಲ್ಲ. ನಾನು ವ್ಯಾಸಂಗ ಮಾಡಿರುವ ರಾಜಸ್ಥಾನ ವಿದ್ಯಾಪೀಠವು ಯುಜಿಸಿಯಿಂದ ಮಾನ್ಯತೆ ಹೊಂದಿದೆ. ನ್ಯಾಕ್‌ನಿಂದ 'ಎ' ಗ್ರೇಡ್ ಪಡೆದಿದೆ' ಎಂದು ಜಗದೀಶ್ ಪ್ರತಿಕ್ರಿಯಿಸಿದ್ದಾರೆ.

ಬಯಲು ರಂಗ ಮಂದಿರವೂ ನಿರ್ಮಾಣ

ಯಲಹಂಕ: ನಿರುಪಯುಕ್ತ ಕಾರುಗಳ ಆಕರ್ಷಣೆ

ಪ್ರಜಾವಾಣಿ ವಾರ್ತೆ

ಯಲಹಂಕ: ದೊಡ್ಡಬಳ್ಳಾಪುರ ಮುಖ್ಯರಸ್ತೆಯ ಬೆಂಗಳೂರು ಜಲ ಮಂಡಳಿ ಕಚೇರಿಯ ಮುಂಭಾಗದಲ್ಲಿ ನಿರುಪಯುಕ್ತ ಹಳೆಯ ಕಾರುಗಳನ್ನು ಅಲಂಕೃತಗೊಳಿಸಿ, ಒಂದರ ಮೇಲೊಂದರಂತೆ ಎತ್ತರಕ್ಕೆ ನಿಲ್ಲಿಸಲಾಗಿದೆ. ಈ ಮಾದರಿಯು ಆಕರ್ಷಣೀಯವಾಗಿ ಕಾಣುವ ಮೂಲಕ ದಾರಿಹೋಕರ ಕಣ್ಮನ ಸೆಳೆಯುತ್ತಿದೆ.

ಹಳೆಯ ಕಾರುಗಳನ್ನು ಅಲಂಕೃತಗೊಳಿಸಿರುವುದು

ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲು ಅನುಕೂಲವಾಗುವಂತೆ ಈ ಜಾಗದಲ್ಲಿ ಬಯಲು ರಂಗಮಂದಿರ ಸಹ ನಿರ್ಮಿಸಲಾಗಿದೆ. ಎನ್.ಇ.ಎಸ್ ವೃತ್ತದ ಬಳಿ ಆಧುನಿಕ ರೀತಿಯಲ್ಲಿ ಪೇ ಆ್ಯಂಡ್ ಯೂಸ್ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ಇಲ್ಲಿ ಕಡಿಮೆ ದರದಲ್ಲಿ 60 ಕಾರುಗಳು ಮತ್ತು ದ್ವಿಚಕ್ರವಾಹನಗಳ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿದೆ.

ದೊಡ್ಡಬಳ್ಳಾಪುರ ಮುಖ್ಯರಸ್ತೆಯ ಅನಂತಪುರ ಗೇಟ್‌ವರೆಗೆ ಟಸ್ಕರ್ ವಿದ್ಯುತ್ ದೀಪ ಅಳವಡಿಸಲಾಗಿದ್ದು, ಈ ದೀಪಗಳು ಅಂದವಾದ ಬೆಳಕು ನೀಡುವುದರ ಜೊತೆಗೆ ಅಲಂಕಾರಿಕವಾಗಿ ಕಾಣುವ ಮೂಲಕ ಜನರ ಗಮನ ಸೆಳೆಯುತ್ತಿವೆ. ಅಟ್ಟೂರು ಕೆರೆಯಲ್ಲಿ 2 ಕಿ.ಮೀ ನಡಿಗೆಪಥ, ವಿದ್ಯುತ್ ದೀಪ ಮತ್ತು ಎಫ್.ಎಂ.ರೇಡಿಯೊ ಹಾಗೂ ಸಂದೀಪ್ ಉನ್ನಿಕೃಷ್ಣನ್ ರಸ್ತೆಯಲ್ಲಿ ಮರಗಳಿಗೆ ಅಳವಡಿಸಿರುವ ಶೇಡ್ ವಿದ್ಯುತ್ ದೀಪಗಳನ್ನು ಉದ್ಘಾಟಿಸಲಾಯಿತು. ಕೋಗಿಲು ವೃತ್ತದಲ್ಲಿ 'ಮೇಕ್-ಇನ್-ಇಂಡಿಯಾ' ಪರಿಕಲ್ಪನೆಯಡಿ ನಿರ್ಮಿಸಿರುವ ಅಲಂಕಾರಿಕ ಎತ್ತಿನ ಬಂಡಿಯ ಪ್ರತಿಕೃತಿಯನ್ನು ಅನಾವರಣಗೊಳಿಸಲಾಯಿತು.

ಈ ವೇಳೆ ಮಾತನಾಡಿದ ಶಾಸಕ ಎಸ್.ಆರ್. ವಿಶ್ವನಾಥ್, '₹8.50 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಈ ಎಲ್ಲ ಸೌಲಭ್ಯಗಳಿಗೆ ಚಾಲನೆ ನೀಡಲಾಗಿದೆ' ಎಂದರು.

ನ್ಯಾಯಮೂರ್ತಿಗಳ ವಿದೇಶ ಪ್ರವಾಸ: ಕೇಂದ್ರದ ಆದೇಶ ರದ್ದು

ನವದೆಹಲಿ: ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳು ವಿದೇಶಗಳಿಗೆ ಖಾಸಗಿ ಭೇಟಿಗೂ ಅನುಮತಿ ಪಡೆಯಬೇಕು ಎಂಬ ಕೇಂದ್ರದ ಆದೇಶವನ್ನು ದೆಹಲಿ ಹೈಕೋರ್ಟ್ ರದ್ದುಗೊಳಿಸಿದೆ. 'ರಾಯಭಾರಿ ಕಚೇರಿಗಳಿಗೆ, ವಿದೇಶಾಂಗ ಸಚಿವಾಲಯದ ಪಾಸ್‌ಪೋರ್ಟ್ ಹಾಗೂ ವೀಸಾ ವಿಭಾಗಗಳಿಗೆ ನ್ಯಾಯಮೂರ್ತಿಗಳ ವಿದೇಶ ಪ್ರವಾಸದ ಬಗ್ಗೆ ಮಾಹಿತಿ ನೀಡಲಾಗುತ್ತದೆ. ಹಾಗಾಗಿ, ಇಂಥ ಆದೇಶದ ಅಗತ್ಯವಿಲ್ಲ' ಎಂದು ನ್ಯಾಯಮೂರ್ತಿಗಳಾದ ರಾಜೀವ್ ಶಕ್ಧರ್ ಹಾಗೂ ಜಸ್ಮೀತ್ ಸಿಂಗ್ ಅವರಿದ್ದ ಪೀಠ ಹೇಳಿತು.



ವಸತಿ, ಊಟ ಕಲ್ಪಿಸಲು ರೋಗಿಗಳ ಸಂಬಂಧಿಕರ ಒತ್ತಾಯ • ವಾಹನ ನಿಲುಗಡೆಗೂ ಸೂಕ್ತ ಸ್ಥಳ ಇಲ್ಲ • ದಾಖಲಾತಿ ವಿಳಂಬ ದೂರು

ವಿಕ್ಟೋರಿಯಾ ಸಂಕೀರ್ಣ: ರಸ್ತೆಯಲ್ಲಿಯೇ ಆಕ್ರಂದನ

• ವರುಣ್ ಹೆಗಡೆ

530 ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವ ಸಾಮಾನ್ಯ ಹಾಸಿಗೆಗಳು

12 ಕಾರ್ಯನಿರ್ವಹಿಸುತ್ತಿರುವ ಐಸಿಯು ಹಾಸಿಗೆಗಳು

15 ನವೀಕರಣಗೊಳ್ಳುತ್ತಿರುವ ಐಸಿಯು ಹಾಸಿಗೆಗಳು

134 ಟ್ರಾಮಾ ಕೇರ್ ಕೇಂದ್ರದಲ್ಲಿನ ಸಾಮಾನ್ಯ ಹಾಸಿಗೆಗಳು

36 ಟ್ರಾಮಾ ಕೇರ್ ಕೇಂದ್ರದಲ್ಲಿನ ಐಸಿಯು ಹಾಸಿಗೆಗಳು

500-600 ವಿಕ್ಟೋರಿಯಾದಲ್ಲಿ ಚಿಕಿತ್ಸೆ ಪಡೆಯುವ ಸರಾಸರಿ ಒಳರೋಗಿಗಳು

1,000-1,200 ವಿಕ್ಟೋರಿಯಾಕ್ಕೆ ದಿನವೊಂದರಲ್ಲಿ ಭೇಟಿ ನೀಡುವ ಹೊರರೋಗಿಗಳ ಸರಾಸರಿ ಸಂಖ್ಯೆ

500 ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರು

ಬೆಂಗಳೂರು: ರಸ್ತೆಯ ಇಕ್ಕೆಲಗಳಲ್ಲಿ ನಿರ್ಮಿಸಿರುವ ಪಾದಚಾರಿ ಮಾರ್ಗಗಳಲ್ಲೇ ವಿಶ್ರಾಂತಿ. ಊಟ–ತಿಂಡಿಗಾಗಿ ಮಕ್ಕಳು ಮತ್ತು ವೃದ್ಧರೊಂದಿಗೆ ಅಲೆದಾಟ. ತಮ್ಮವರಿಗಾಗಿ ಬಿಸಿಲು–ಮಳೆ ಲೆಕ್ಕಿಸದೆ ಆಸ್ಪತ್ರೆಯ ಆವರಣದಲ್ಲಿಯೇ ವಾಸ...

ಇದು ನಗರದ ಹೃದಯ ಭಾಗದಲ್ಲಿರುವ ವಿಕ್ಟೋರಿಯಾ ಸಂಕೀರ್ಣದಲ್ಲಿ ಕಂಡುಬರುವ ದೃಶ್ಯ. ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಬಿಎಂಸಿಆರ್‌ಐ) ಅಡಿ ವಿಕ್ಟೋರಿಯಾ, ವಾಣಿವಿಲಾಸ, ಮಿಂಟೊ, ಟ್ರಾಮಾ ಕೇರ್ ಕೇಂದ್ರ, ನೆಫ್ರೊ-ಯೂರಾಲಜಿ ಸಂಸ್ಥೆ, ಪ್ರಧಾನಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ (ಪಿಎಂಎಸ್‌ಎಸ್‌ವೈ) ಆಸ್ಪತ್ರೆ ಹಾಗೂ ಇನ್‌ಸ್ಟಿಟ್ಯೂಟ್ ಆಫ್ ಗ್ಯಾಸ್ಟ್ರೊಎಂಟ್ರಾಲಜಿ ಸೈನ್ಸಸ್ ಆ್ಯಂಡ್ ಆರ್ಗನ್ ಟ್ರಾನ್ಸ್‌ಪ್ಲಾಂಟ್ ಆಸ್ಪತ್ರೆ ಇಲ್ಲಿ ಕಾರ್ಯನಿರ್ವಹಿಸುತ್ತಿವೆ. ಚಿಕಿತ್ಸೆ ಪಡೆಯಲು ಪ್ರತಿನಿತ್ಯ 2 ಸಾವಿರಕ್ಕೂ ಅಧಿಕ ರೋಗಿಗಳು ರಾಜ್ಯದ ವಿವಿಧೆಡೆಯಿಂದ ಇಲ್ಲಿಗೆ ಬರುತ್ತಾರೆ. ವಿಕ್ಟೋರಿಯಾ ಸಂಕೀರ್ಣದಲ್ಲಿ ರೋಗಿಗಳ ಕಡೆಯವರಿಗೆ ವಿಶ್ರಾಂತಿಗೆ ಸೂಕ್ತ ವ್ಯವಸ್ಥೆಯಿಲ್ಲ. ಪಾದಚಾರಿ ಮಾರ್ಗಗಳನ್ನೇ ವಿಶ್ರಾಂತಿ ತಾಣವಾಗಿ ಬಳಸಬೇಕಾದಅನಿವಾರ್ಯಅವರದು.

ನಗರದಲ್ಲಿ 2020ರ ಮಾರ್ಚ್ ತಿಂಗಳಲ್ಲಿ ಕೋವಿಡ್ ಕಾಣಿಸಿಕೊಂಡ ಬಳಿಕ ವಿಕ್ಟೋರಿಯಾ ಆಸ್ಪತ್ರೆಯನ್ನು ಕೋವಿಡ್ ಆಸ್ಪತ್ರೆಯನ್ನಾಗಿ ಪರಿವರ್ತಿಸಲಾಗಿತ್ತು. ಕೊರೊನಾ ಸೋಂಕಿತರ ಸಂಖ್ಯೆ ಏರಿಕೆಯಾದ ಬಳಿಕ ಅಕ್ಕಪಕ್ಕದ ಆಸ್ಪತ್ರೆಗಳಲ್ಲಿನ ಹಾಸಿಗೆಗಳನ್ನೂ ಕೋವಿಡ್ ಚಿಕಿತ್ಸೆಗೆ ಗುರುತಿಸಲಾಗಿತ್ತು. ಇದರಿಂದಾಗಿ ಕೋವಿಡೇತರ ರೋಗಿಗಳು ಸಮಸ್ಯೆ ಎದುರಿಸಿದ್ದರು. ಕೋವಿಡ್ ನಿಯಂತ್ರಣಕ್ಕೆ ಬಂದಿರುವುದರಿಂದ ಅನ್ಯ ಕಾಯಿಲೆಗಳ ಚಿಕಿತ್ಸೆಗೆ ಈಗ ಆದ್ಯತೆ ನೀಡಲಾಗುತ್ತಿದೆ. ಹೀಗಾಗಿ, ಪಶ್ಚಿಮ ಬಂಗಾಳ, ಆಂಧ್ರಪ್ರದೇಶ ಸೇರಿದಂತೆ ವಿವಿಧ ರಾಜ್ಯಗಳಿಂದಲೂ ಇಲ್ಲಿಗೆ ರೋಗಿಗಳು ಚಿಕಿತ್ಸೆಗೆ ಬರಲಾರಂಭಿಸಿದ್ದಾರೆ. ರೋಗಿಯ ಕಡೆಯವರಿಗೆ ಸೂಕ್ತ ವ್ಯವಸ್ಥೆ ಇಲ್ಲದಿರುವುದರಿಂದ ಆಸ್ಪತ್ರೆಗಳ ಆವರಣ ಹಾಗೂ ಪಾರ್ಕಿಂಗ್ ಸ್ಥಳದಲ್ಲಿಯೇ ಬಹುತೇಕರು ಮಲಗುತ್ತಿದ್ದಾರೆ.

ವಿಕ್ಟೋರಿಯಾ ಆಸ್ಪತ್ರೆ ಸಂಕೀರ್ಣದಲ್ಲಿ ರೋಗಿಗಳ ಸಂಬಂಧಿಕರು ರಸ್ತೆಯ ಪಕ್ಕದಲ್ಲಿ ವಿಶ್ರಾಂತಿ ಪಡೆಯುತ್ತಿರುವುದು –ಪ್ರಜಾವಾಣಿ ಚಿತ್ರಗಳು/ಪ್ರಶಾಂತ್ ಎಚ್‌.ಜಿ.

ಹೊರರೋಗಿ ವಿಭಾಗದಲ್ಲಿ ಚಿಕಿತ್ಸೆಗಾಗಿ ವೃದ್ಧರೊಬ್ಬರು ಕಾಯುತ್ತಿರುವುದು

ಸರ್ಕಾರಿ ಆಸ್ಪತ್ರೆ ಹೀಗಿದೆ ವ್ಯವಸ್ಥೆ 1

ವಿಕ್ಟೋರಿಯಾ ಸಂಕೀರ್ಣದಲ್ಲಿ ವಾಹನಗಳ ನಿಲುಗಡೆಗೂ ಸೂಕ್ತ ವ್ಯವಸ್ಥೆಯಿಲ್ಲ. ಹೀಗಾಗಿ, ಕೆಲವರು ರಸ್ತೆಯ ಅಕ್ಕ-ಪಕ್ಕದಲ್ಲಿಯೇ ವಾಹನ ನಿಲ್ಲಿಸಿ, ತೆರಳುತ್ತಿದ್ದಾರೆ. ಇದರಿಂದಾಗಿ ರೋಗಿಗಳನ್ನು ಕರೆದೊಯ್ಯುವಾಗ ಅವರ ಸಂಬಂಧಿಗಳು ಸಮಸ್ಯೆ ಎದುರಿಸುತ್ತಿದ್ದಾರೆ. ಸ್ಮಾರ್ಟ್ ಸಿಟಿ ಯೋಜನೆಯಡಿ ರಸ್ತೆಗಳು ಹಾಗೂ ಪಾದಚಾರಿ ಮಾರ್ಗ ನಿರ್ಮಿಸಿರುವುದರಿಂದ ಸಂಚಾರದ ಸಮಸ್ಯೆ ದೂರವಾಗಿದೆ. ಉದ್ಯಾನ ಸೇರಿದಂತೆ ವಿವಿಧ ಕಾಮಗಾರಿಗಳು ಬಾಕಿ ಉಳಿದಿವೆ.

ದಾಖಲಾತಿ ವಿಳಂಬ: 'ಆಸ್ಪತ್ರೆಗೆ ದಾಖಲಾಗಬೇಕಾದಲ್ಲಿ ದಿನವಿಡೀ ಕಾಯಬೇಕಾಗುತ್ತದೆ. ತುರ್ತು ಚಿಕಿತ್ಸೆ ಅಗತ್ಯವಿದ್ದರೆ ಮಾತ್ರ ಕೂಡಲೆ ದಾಖಲಿಸಿಕೊಳ್ಳುತ್ತಾರೆ. ಸ್ಕ್ಯಾನಿಂಗ್ ಸೇರಿದಂತೆ ವಿವಿಧ ಪರೀಕ್ಷೆಗಳು ವಿಳಂಬವಾಗುತ್ತಿವೆ. ಹೀಗಾಗಿ, ಖಾಸಗಿ ಪ್ರಯೋಗಾಲಯಗಳಿಗೆ ತೆರಳಬೇಕಾದ ಪರಿಸ್ಥಿತಿಯಿದೆ. ವಾರ್ಡ್‌ಗಳಿಗೆ ಬರುವ ಸಿಬ್ಬಂದಿ ಅನಗತ್ಯವಾಗಿ ರೇಗಾಡುತ್ತಾರೆ. ವೈದ್ಯರು ಉತ್ತಮವಾಗಿ ಚಿಕಿತ್ಸೆ ಒದಗಿಸುತ್ತಿದ್ದಾರೆ' ಎನ್ನುವುದು ರೋಗಿಗಳ ಅಭಿಮತ.

'ಆಸ್ಪತ್ರೆಗೆ ಸಹೋದರನನ್ನು ದಾಖಲಿಸಿ ಎರಡು ವಾರಗಳಾಗಿವೆ. ರೋಗಿಯ ಜತೆಗೆ ಒಬ್ಬರಿಗೆ ಮಾತ್ರ ಇರಲು ಅವಕಾಶ ಕಲ್ಪಿಸಲಾಗಿದೆ. ಇದರಿಂದಾಗಿ ರಸ್ತೆಯಲ್ಲಿಯೇ ದಿನ ಕಳೆಯುತ್ತಿದ್ದೇನೆ. ಆಸ್ಪತ್ರೆಯ ಕ್ಯಾಂಟೀನ್‌ನಲ್ಲಿ ಊಟ–ತಿಂಡಿಯ ದರ ಕಡಿಮೆ ಇದ್ದರೂ ಗುಣಮಟ್ಟ ಇಲ್ಲ. ಬಿಸಿ ನೀರು ಸಿಗುತ್ತಿಲ್ಲ. ರೋಗಿಗಳ ಕಡೆಯವರಿಗೆ ಉಳಿಯಲು ವ್ಯವಸ್ಥೆ ಮಾಡಬೇಕು. ಸಾರ್ವಜನಿಕ ಶೌಚಾಲಯ ನಿರ್ಮಿಸಬೇಕು' ಎಂದು ಅರಸೀಕರೆಯ ರಾಮಕೃಷ್ಣ ಹೇಳಿದರು.

'ಆಸ್ಪತ್ರೆಯಲ್ಲಿ ಉತ್ತಮ ಚಿಕಿತ್ಸೆ ದೊರೆಯುತ್ತಿದೆ. ರೋಗಿಗಳ ದಟ್ಟಣೆ ಇರುವುದರಿಂದ ಕೆಲ ಸಮಸ್ಯೆಗಳು ಕಾಣಿಸಿಕೊಳ್ಳುವುದು ಸಹಜ. ರಸ್ತೆ ಅಪಘಾತದಲ್ಲಿ ಗಾಯಗೊಂಡು, ಆಸ್ಪತ್ರೆಗೆ ದಾಖಲಾಗಿದ್ದೆ. ₹ 10 ಸಾವಿರದಲ್ಲಿ ಚಿಕಿತ್ಸೆ ದೊರೆತಿದೆ. ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರೆ ಇದೇ ಚಿಕಿತ್ಸೆಗೆ ₹ 50 ಸಾವಿರಕ್ಕೂ ಅಧಿಕ ಹಣ ವೆಚ್ಚವಾಗುತ್ತಿತ್ತು' ಎಂದು ಕೆಂಗೇರಿಯ ಮಂಜುನಾಥ್ ತಿಳಿಸಿದರು.

ರೋಗಿಗಳ ಕಡೆಯವರು ರಸ್ತೆಯಲ್ಲಿಯೇ ಕುಳಿತು ದಿನ ಕಳೆಯಬೇಕಾಗಿದೆ. ಊಟ ಮತ್ತು ವಸತಿ ವ್ಯವಸ್ಥೆ ಇಲ್ಲದಿರುವುದರಿಂದ ಸಮಸ್ಯೆಯಾಗಿದೆ. ಕುಡಿಯಲು ಬಿಸಿ ನೀರು ಸಿಗುತ್ತಿಲ್ಲ. ಸವಿತಾ, ಮದ್ದೂರು

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಉತ್ತಮ ಚಿಕಿತ್ಸೆ ದೊರೆಯುತ್ತದೆ. ಆದರೆ, ದಿನವಿಡೀ ಕಾಯಬೇಕಾದ ಪರಿಸ್ಥಿತಿಯಿದೆ. ದೂರದ ಊರುಗಳಿಂದ ಬಂದವರಿಗೆ ಸಮಸ್ಯೆ ಆಗುತ್ತಿದೆ. ಸೆಲ್ವಂ, ಅಗ್ರಹಾರ

ತಾಯಿಯನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಿದ್ದು, ಹತ್ತು ದಿನಗಳಿಂದ ಆಸ್ಪತ್ರೆಯ ಹೊರಗಡೆ ಕಾಯುತ್ತಿದ್ದೇನೆ. ಒಬ್ಬರಿಗೆ ಮಾತ್ರ ಆಸ್ಪತ್ರೆಯಲ್ಲಿ ರೋಗಿಯ ಜತೆಗೆ ಇರಲು ಅವಕಾಶವಿದೆ ಗೀತಾ, ಪಶ್ಚಿಮ ಬಂಗಾಳ

ಆಸ್ಪತ್ರೆಯ ಕ್ಯಾಂಟೀನ್‌ನಲ್ಲಿ ಗುಣಮಟ್ಟದ ಆಹಾರ ಸಿಗುತ್ತಿಲ್ಲ. ಹೊರಗಡೆ ಹೋಗಿ ಊಟ–ತಿಂಡಿ ಮಾಡುವುದು ಕಷ್ಟ. ಅಷ್ಟು ಹಣ ಕೂಡ ನಮ್ಮ ಬಳಿ ಇಲ್ಲ. ಇಸ್ಲಾಂ ಶೇಖ್, ಕೋಲ್ಕತ್ತ

ಗಡುವು ಮುಗಿದರೂ ಕಾರ್ಯಾರಂಭವಿಲ್ಲ

ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿ 11 ಮಹಡಿಗಳ ಕಟ್ಟಡ ನಿರ್ಮಾಣ ಮಾಡಲಾಗುತ್ತಿದೆ. ಇದರಲ್ಲಿ ಸಾವಿರ ಹಾಸಿಗೆಗಳ ಸೌಕರ್ಯ ಇರಲಿದೆ. 2019ರ ಡಿಸೆಂಬರ್‌ನಲ್ಲಿ ಈ ಕಟ್ಟಡದ ಶಂಕುಸ್ಥಾಪನೆ ನೆರವೇರಿಸಿದ್ದ ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, '2021ರ ಜೂನ್‌ಗೆ ಕಾಮಗಾರಿ ಪೂರ್ಣಗೊಳಿಸಿ, ಸೇವೆ ಆರಂಭಿಸಬೇಕು' ಎಂದು ಸೂಚಿಸಿದ್ದರು. ಆದರೆ, ಕೋವಿಡ್‌ನಿಂದ ಈ ಕಾಮಗಾರಿಗೆ ಹಿನ್ನಡೆಯಾಗಿದೆ. ₹ 68.53 ಕೋಟಿ ವೆಚ್ಚದಲ್ಲಿ 2 ಲಕ್ಷ ಚದರ ಅಡಿ ವಿಸ್ತೀರ್ಣದಲ್ಲಿ ಈ ಕಟ್ಟಡ ನಿರ್ಮಿಸಲಾಗುತ್ತಿದೆ. ಸದ್ಯ 7 ಮಹಡಿಗಳ ಕಟ್ಟಡ ತಲೆಯೆತ್ತಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.

1897ರಲ್ಲಿ ಸ್ಥಾಪನೆ

ವಿಕ್ಟೋರಿಯಾ ರಾಣಿಯ 60 ವರ್ಷಗಳ ಆಳ್ವಿಕೆಯ ಸವಿನೆನಪಿಗಾಗಿ 1897ರ ಜೂನ್ 22 ರಂದು ವಿಕ್ಟೋರಿಯಾ ಆಸ್ಪತ್ರೆ ನಿರ್ಮಿಸಲಾಗಿದೆ. ಮೈಸೂರಿನ ಅಂದಿನ ಮಹಾರಾಣಿ ರಾಜಪ್ರತಿನಿಧಿ ಕೆಂಪನಂಜಮ್ಮಣ್ಣಿ ಅವರು ಇದರ ರೂವಾರಿ. 1900ರ ಡಿಸೆಂಬರ್ 8ರಂದು ಅಂದಿನ ವೈಸ್‌ರಾಯ್ ಲಾರ್ಡ್ ಕರ್ಜನ್ ಅವರು ಆಸ್ಪತ್ರೆಯನ್ನು ಉದ್ಘಾಟಿಸಿದ್ದರು. ಆಗ 140 ಹಾಸಿಗೆಗಳನ್ನು ಈ ಆಸ್ಪತ್ರೆ ಒಳಗೊಂಡಿತ್ತು. ನರವಿಜ್ಞಾನ, ಮನೋವಿಜ್ಞಾನ, ಹೃದ್ರೋಗ ಸೇರಿದಂತೆ ವಿಭಾಗಗಳು ಆಸ್ಪತ್ರೆಯಲ್ಲಿವೆ. ಎಕ್ಸ್–ರೆ, ಸಿ.ಟಿ ಸ್ಕ್ಯಾನ್ ಸೇರಿದಂತೆ ವಿವಿಧ ಪರೀಕ್ಷೆಗಳು ಇಲ್ಲಿ ಲಭ್ಯ. ದೇಶದ ಅತೀ ದೊಡ್ಡ ಆಸ್ಪತ್ರೆಗಳಲ್ಲಿ ವಿಕ್ಟೋರಿಯಾ ಕೂಡ ಒಂದು.

ವಿಕ್ಟೋರಿಯಾ ಆಸ್ಪತ್ರೆಯ ಹೊರರೋಗಿ ವಿಭಾಗದ ಮುಂದೆ ಮಾತುಕತೆ ನಡೆಸುತ್ತಿರುವ ರೋಗಿಗಳು

ರೋಗಿಯನ್ನು ಸಾಗಿಸುವ ಸ್ಟ್ರೆಚರ್‌ನಲ್ಲಿ ಇಟ್ಟಿಗೆ ಸಾಗಿಸುತ್ತಿರುವ ವೈದ್ಯಕೀಯ ಸಿಬ್ಬಂದಿ

'ಗುಣಮಟ್ಟದ ಚಿಕಿತ್ಸೆಗೆ ಆದ್ಯತೆ'

'ಆಸ್ಪತ್ರೆಯ ಹೊರರೋಗಿ ವಿಭಾಗದಲ್ಲಿ ರೋಗಿಗಳ ಸಂಬಂಧಿಗಳಿಗೆ ವಿಶ್ರಾಂತಿ ಪಡೆಯಲು ವ್ಯವಸ್ಥೆ ಮಾಡಲಾಗಿದೆ. ಪ್ರತಿ ಮಹಡಿಯಲ್ಲಿಯೂ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಇದೆ. ಕೋವಿಡ್ ಮೂರನೇ ಅಲೆ ನಿಯಂತ್ರಣಕ್ಕೆ ಬಂದ ಬಳಿಕ ಚಿಕಿತ್ಸೆಗೆ ಬರುವವರ ಸಂಖ್ಯೆ ಹೆಚ್ಚಳವಾಗಿದೆ. ಸಾಮಾನ್ಯ ಹಾಸಿಗೆಗಳು ಸಾಕಷ್ಟು ಖಾಲಿ ಇವೆ. ಐಸಿಯು ಹಾಸಿಗೆಗಳು ಭರ್ತಿಯಾದಲ್ಲಿ ಜಯನಗರ ಸಾರ್ವಜನಿಕ ಆಸ್ಪತ್ರೆ, ಕೆ.ಸಿ. ಜನರಲ್ ಸೇರಿದಂತೆ ವಿವಿಧ ಸರ್ಕಾರಿ ಆಸ್ಪತ್ರೆಗಳಲ್ಲಿನ ಹಾಸಿಗೆ ಲಭ್ಯತೆಯ ಮಾಹಿತಿ ಪಡೆದು, ಅಲ್ಲಿಗೆ ಅವರನ್ನು ಶಿಫಾರಸು ಮಾಡಲಾಗುತ್ತದೆ'

ಡಾ. ರಮೇಶ್ ಕೃಷ್ಣ

ಎಂದು ವಿಕ್ಟೋರಿಯಾ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ರಮೇಶ್ ಕೃಷ್ಣ ತಿಳಿಸಿದರು.

'ಹೊರ ರೋಗಿಗಳಿಗೆ ಚಿಕಿತ್ಸೆ ಸಮಸ್ಯೆಯಾಗಬಾರದು ಎಂಬ ಕಾರಣಕ್ಕೆ ಎಲ್ಲ ವಿಭಾಗಗಳನ್ನು ಒಂದೇ ಕಡೆ ತರಲಾಗಿದೆ. ಸ್ಮಾರ್ಟ್ ಸಿಟಿ ಯೋಜನೆಯಡಿ ರಸ್ತೆ ನಿರ್ಮಾಣವಾಗಿದೆ. ಉದ್ಯಾನ ಮತ್ತು ಬೀದಿ ದೀಪ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ' ಎಂದರು.

ಕರೀಗೌಡ ಬೀಚನಹಳ್ಳಿ ಅವರ ಬದುಕು–ಕೃತಿಗಳ ವಿಮರ್ಶಾ ಗ್ರಂಥ 'ಸಾಂಗತ್ಯ' ಬಿಡುಗಡೆ

'ಸೌಹಾರ್ದ ಬದುಕಿನ ಮೌಲ್ಯ ಕಟ್ಟಿಕೊಟ್ಟಿರುವ ಕರೀಗೌಡ'

ಪ್ರಜಾವಾಣಿ ವಾರ್ತೆ

ಕೆಂಗೇರಿ: 'ಗ್ರಾಮೀಣ ಭಾಗದ ಜನಜೀವನ ಮತ್ತು ಮೌಲ್ಯಗಳನ್ನು ಲೇಖಕ ಕರೀಗೌಡ ಬೀಚನಹಳ್ಳಿ ಅವರು 40 ವರ್ಷಗಳ ತಮ್ಮ ಸಾಹಿತ್ಯದಲ್ಲಿ ಕಟ್ಟಿಕೊಟ್ಟಿದ್ದಾರೆ' ಎಂದು ಲೇಖಕ ಅಗ್ರಹಾರ ಕೃಷ್ಣಮೂರ್ತಿ ತಿಳಿಸಿದರು.

ಸಂಚಲನ ಸಾಂಸ್ಕೃತಿಕ ವೇದಿಕೆ, ಕಿರಂ ಪ್ರಕಾಶನ ಆಯೋಜಿಸಿದ್ದ ಡಾ.ಕರೀಗೌಡ ಬೀಚನಹಳ್ಳಿ ಅವರ ಬದುಕು–ಕೃತಿಗಳ ವಿಮರ್ಶಾ ಗ್ರಂಥ 'ಸಾಂಗತ್ಯ' ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ತಮ್ಮ ಕಥಾ ಗುಚ್ಛದೊಳಗೆ ಸಾಂಗತ್ಯದ ಪರಿಕಲ್ಪನೆಯನ್ನು ಅನೇಕ ಪಾತ್ರಗಳ ಮೂಲಕ ಕಟ್ಟಿಕೊಟ್ಟಿದ್ದಾರೆ. ಗ್ರಾಮೀಣ ಬದುಕಿನಲ್ಲಿ ಮುಸಲ್ಮಾನರು ಇತರ ಸಮುದಾಯಗಳ ಜತೆಗೆ ಹೇಗೆ ಸೌಹಾರ್ದಯುತವಾಗಿ ಜೀವನ ನಡೆಸುತ್ತಿದ್ದರು. ಒಂದೇ ಮನೆಯವರಂತೆ ಬದುಕುತ್ತಿದ್ದರು ಎಂಬುದನ್ನೂ ತಮ್ಮ ಬರಹಗಳಲ್ಲಿ ವಿವರಿಸಿದ್ದಾರೆ' ಎಂದು ಹೇಳಿದರು.

'700 ಪುಟಗಳ ಈ ಸಾಂಗತ್ಯದಲ್ಲಿ ಕರೀಗೌಡರ ಅನೇಕ ಗೆಳೆಯರು, ಶಿಷ್ಯರು, ಪಿಎಚ್‌.ಡಿ ಮಾರ್ಗದರ್ಶನ ಪಡೆದ ವಿದ್ಯಾರ್ಥಿಗಳು ಲೇಖನಗಳನ್ನು ಬರೆದಿದ್ದಾರೆ. ಕರೀಗೌಡರ ಬದುಕು ಮತ್ತು ಕೃತಿಗಳ ವಿಮರ್ಶೆಯಷ್ಟೇ ಅಲ್ಲದೇ, ಸಾಹಿತ್ಯದ ಹಲವು ಪ್ರಕಾರಗಳ ವಿಮರ್ಶೆಯನ್ನೂ ಈ ಕೃತಿ ಒಳಗೊಂಡಿದೆ. ಈ ಭಾಗವು ಕೃತಿಯ ಮೌಲ್ಯವನ್ನು ಇನ್ನಷ್ಟು ಹೆಚ್ಚಿಸಿದೆ. ಓದುಗರಿಗೆ ಉಪಯುಕ್ತವೂ ಆಗಿದೆ' ಎಂದು ಅವರು ವಿವರಿಸಿದರು.

ಅಧ್ಯಕ್ಷತೆ ವಹಿಸಿದ್ದ ಸಾಹಿತಿ ಕೆ.ಮರುಳಸಿದ್ದಪ್ಪ ಮಾತನಾಡಿ, 'ಅನ್ಯ ಭಾಷೆಗಳಿಗೆ ಹೋಲಿಸಿದರೆ ಕನ್ನಡ ಕಥಾ ಪರಂಪರೆ ಅತ್ಯಂತ ಶ್ರೀಮಂತವಾಗಿದೆ. ಕರೀಗೌಡ ಬೀಚನಹಳ್ಳಿ ಅವರಂತೆ ನೂರಾರು ಲೇಖಕರು ಕನ್ನಡ ಕಥಾ ಪರಂಪರೆಯನ್ನು ಸೃಜನಶೀಲವಾಗಿಸಿದ್ದಾರೆ' ಎಂದು ಬಣ್ಣಿಸಿದರು.

'ಸತ್ಸಮಾಜ ನಿರ್ಮಾಣದಲ್ಲಿ ಸಾಹಿತಿಗಳು ಹಾಗೂ ಶಿಕ್ಷಕರ ಪಾತ್ರ ಅತೀ ಮುಖ್ಯ' ಎಂದು ಕರೀಗೌಡ ಬೀಚನಹಳ್ಳಿ ಹೇಳಿದರು. ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥನಾರಾಯಣ ಅವರು ಕೃತಿ ಬಿಡುಗಡೆ ಮಾಡಿ ಮಾತನಾಡಿದರು.

ಡಾ.ಕರೀಗೌಡ ಬೀಚನಹಳ್ಳಿ ಅವರ ಬದುಕು– ಕೃತಿಗಳ ವಿಮರ್ಶಾ ಗ್ರಂಥವನ್ನು ಸಚಿವ ಸಿ.ಎನ್‌.ಅಶ್ವತ್ಥನಾರಾಯಣ ಬಿಡುಗಡೆ ಮಾಡಿದರು. ಅಗ್ರಹಾರ ಕೃಷ್ಣಮೂರ್ತಿ, ಪ್ರೊ.ಮಲ್ಲೇಪುರ ಜಿ. ವೆಂಕಟೇಶ್, ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಕೆ.ಆರ್. ವೇಣುಗೋಪಾಲ್, ಕೆ.ಮರುಳ ಸಿದ್ದಪ್ಪ, ಡಾ.ಕರೀಗೌಡ ಬೀಚನಹಳ್ಳಿ ಇದ್ದರು

ಆರಗ ರಾಜೀನಾಮೆಗೆ ವಾಟಾಳ್ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೊಲೆ ಪ್ರಕರಣದ ವಿಚಾರದಲ್ಲೂ ಗೃಹ ಸಚಿವ ಆರಗ ಜ್ಞಾನೇಂದ್ರ ಸಣ್ಣ ಮಕ್ಕಳಂತೆ ಹುಡುಗಾಟ ಆಡುತ್ತಿದ್ದಾರೆ. ಸುಳ್ಳು ಮಾಹಿತಿ ನೀಡಿರುವ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು' ಎಂದು ಕನ್ನಡ ಚಳವಳಿ ವಾಟಾಳ್ ಪಕ್ಷದ ಮುಖ್ಯಸ್ಥ ವಾಟಾಳ್ ನಾಗರಾಜ್ ಆಗ್ರಹಿಸಿದರು.

ವಾಟಾಳ್ ನಾಗರಾಜ್

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, 'ಉರ್ದು ಭಾಷೆಯಲ್ಲಿ ಮಾತನಾಡಿಲ್ಲ ಎಂಬ ಕಾರಣಕ್ಕಾಗಿ ಯುವಕನ ಕೊಲೆಯಾಗಿದೆ ಎಂದು ಗೃಹ ಸಚಿವರು ಹೇಳಿಕೆ ನೀಡಿದ್ದರು. ಈಗ ತಮ್ಮಿಂದ ತಪ್ಪಾಗಿದೆ ಎಂದು ಹೇಳಿಕೆ ನೀಡಿದ್ದಾರೆ. ಗುಪ್ತದಳದಿಂದ ಮಾಹಿತಿ ಪಡೆಯದೇ ಜ್ಞಾನೇಂದ್ರ ತಪ್ಪು ಮಾಹಿತಿ ನೀಡಿದ್ದಾರೆ. ಗುಪ್ತಚರ ವೈಫಲ್ಯವೂ ಎದ್ದು ಕಾಣುತ್ತಿದೆ' ಎಂದರು.

ಗೃಹಸಚಿವರ ಹೇಳಿಕೆಯನ್ನೇ ಆಧಾರವಾಗಿಟ್ಟುಕೊಂಡು, 'ಕನ್ನಡದವರು ಸುಮ್ಮನೆ ಕೂತಿದ್ದೀರಾ' ಎಂಬ ಸಂದೇಶಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಡಲಾಗಿದೆ. ಅವರಿಗೆ ಗೃಹ ಸಚಿವರ ಸ್ಥಾನ ಏಕೆ ಕೊಟ್ಟರು ಎಂಬ ಚರ್ಚೆ ಈಗ ಬೇಡ. ಕೂಡಲೇ ರಾಜೀನಾಮೆ ನೀಡುವುದು ಒಳ್ಳೆಯದು ಎಂದು ಹೇಳಿದರು.

'ಜ್ಞಾನೇಂದ್ರ ಅವರೇ ರಾಜೀನಾಮೆ ಪತ್ರವನ್ನು ಮುಖ್ಯಮಂತ್ರಿಯವರಿಗೆ ಸಲ್ಲಿಸಿ. ನೀವು ರಾಜೀನಾಮೆ ಕೊಟ್ಟರೆ ನಿಮಗೂ ಘನತೆ ಬರುತ್ತದೆ, ಗೃಹ ಸಚಿವರ ಸ್ಥಾನದ ಮಾನವೂ ಉಳಿಯುತ್ತದೆ' ಎಂದರು.

ಗೃಹಸಚಿವರ ಬಂಧನಕ್ಕೆ ಡಿ.ಕೆ.ಶಿವಕುಮಾರ್ ಒತ್ತಾಯ

ಕೆ.ಆರ್.ಪೇಟೆ (ಮಂಡ್ಯ ಜಿಲ್ಲೆ): 'ಧರ್ಮಗಳ ನಡುವೆ ಸಂಘರ್ಷ ಭಾವನೆ ಮೂಡಿಸಿ, ಅಶಾಂತಿ ಸೃಷ್ಟಿಗೆ ಕಾರಣವಾಗಿರುವ ಗೃಹ ಸಚಿವ ಆರಗ ಜ್ಞಾನೇಂದ್ರ ಅವರನ್ನು ಕೂಡಲೇ ಬಂಧಿಸಿ ಕ್ರಮ ಜರುಗಿಸಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಬುಧವಾರ ಒತ್ತಾಯಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಅಪಘಾತದ ನಂತರದ ಜಗಳದ ವೇಳೆ ಚಂದ್ರು ಕೊಲೆಯಾಗಿದ್ದರೂ, ಉರ್ದು ಭಾಷೆ ಬರುವುದಿಲ್ಲವೆಂಬ ಕಾರಣಕ್ಕೆ ದಲಿತ ಯುವಕನ ಕೊಲೆಯಾಗಿದೆ ಎಂದು ತಪ್ಪು ಮಾಹಿತಿ ನೀಡಿದ್ದಾರೆ. ಆದರೆ ಸಮಾಜಕ್ಕೆ ಸತ್ಯ ತಿಳಿಸಿರುವ ಪೊಲೀಸರು ಅಭಿನಂದನೆಗೆ ಅರ್ಹರು' ಎಂದರು.

'ಚಾಮುಂಡಿಬೆಟ್ಟಕ್ಕೆ ರೋಪ್ ವೇ ಅನಗತ್ಯ'

ಮೈಸೂರು: 'ನಗರದಿಂದ ಚಾಮುಂಡಿಬೆಟ್ಟಕ್ಕೆ ವಾಹನದಲ್ಲಿ ತೆರಳಲು 20 ನಿಮಿಷ ಸಾಕು. ಹೀಗಾಗಿ, ರೋಪ್ ವೇ ನಿರ್ಮಿಸುವ ಅಗತ್ಯವಿಲ್ಲ' ಎಂದು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಪ್ರತಿಪಾದಿಸಿದರು.

'ಬೆಟ್ಟದ ಮೇಲೆ ಟೌನ್‌ಶಿಪ್ ನಿರ್ಮಾಣಕ್ಕೆ ಕೈಹಾಕಿದಂತಿದೆ. ವಾಣಿಜ್ಯ ಮಳಿಗೆಗಳನ್ನು ನಿರ್ಮಿಸುತ್ತಿರುವುದರಿಂದ ಪರಿಸರಕ್ಕೆ ಹಾನಿಯಾಗುತ್ತದೆ. ಈಗಾಗಲೇ ಬೆಟ್ಟಕ್ಕೆ ಬಹಳಷ್ಟು ಧಕ್ಕೆ ಉಂಟಾಗಿದೆ. ಈಗಿರುವುದನ್ನು ಉಳಿಸಿಕೊಳ್ಳಲು ಪ್ರಯತ್ನಿಸಬೇಕು. ಬೆಟ್ಟವು ಧಾರ್ಮಿಕ ಕ್ಷೇತ್ರವಾಗಿಯೇ ಉಳಿಯಬೇಕು' ಎಂದು ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಅಭಿಪ್ರಾಯಪಟ್ಟರು.

ಪ್ರಮೋದಾದೇವಿ ಒಡೆಯರ್

'ವೈಜ್ಞಾನಿಕವಾಗಿ ಅಧ್ಯಯನ ನಡೆಸಿ ಕೆಲಸ ಮಾಡಬೇಕು. ಆದರೆ, ಅಂಥ ಯಾವುದೇ ಅಧ್ಯಯನ ನಡೆಸಿಲ್ಲ. ಭಕ್ತರಿಗೆ ಅಗತ್ಯವಿರುವ ಸೌಲಭ್ಯ ಕಲ್ಪಿಸಲಿ. ಆದರೆ, ನಗರ ಪ್ರದೇಶದ ರೀತಿ ಮಳಿಗೆಗಳನ್ನು ನಿರ್ಮಿಸಿ ವಾಣಿಜ್ಯ ಚಟುವಟಿಕೆಗಳಿಗೆ ಅವಕಾಶ ನೀಡಬಾರದು. ದೇಗುಲದ ಸಿಬ್ಬಂದಿ ಹಾಗೂ ಮೂಲ ನಿವಾಸಿಗಳು ಮಾತ್ರ ಬೆಟ್ಟದಲ್ಲಿ ವಾಸಿಸಬೇಕು. ಪರಿಸರಕ್ಕೆ ಧಕ್ಕೆಯಾಗುವಂಥ ಕಾರ್ಯಗಳನ್ನು ಈಗಿರುವ ಕಾನೂನಿನಡಿಯಲ್ಲಿ ನಿರ್ಬಂಧಿಸಬೇಕು' ಎಂದರು.

'ಚಾಮುಂಡಿಬೆಟ್ಟದಲ್ಲಿ ಇರುವ ರಾಜೇಂದ್ರ ವಿಲಾಸ ಅರಮನೆ ನವೀಕರಣವನ್ನು ಕೈಗೆತ್ತಿಕೊಳ್ಳಲಾಗಿದ್ದು, ಹೋಟೆಲ್ ಆಗಿ ಮುಂದುವರಿಸಲಾಗುವುದು. ವರ್ಷಾಂತ್ಯದೊಳಗೆ ಪ್ರವಾಸಿಗರ ಬಳಕೆಗೆ ಮುಕ್ತಗೊಳಿಸಲಾಗುವುದು' ಎಂದು ಪ್ರಮೋದಾದೇವಿ ಹೇಳಿದರು.

15 ನದಿಗಳ ನೀರು ಸಂಗ್ರಹ ಉದ್ದೇಶ

16ರಿಂದ 'ಜನತಾ ಜಲಧಾರೆ' ಆರಂಭ

• ಆರ್. ಜಿತೇಂದ್ರ

ರಾಮನಗರ: ಜಾತ್ಯತೀತ ಜನತಾದಳದ 'ಜನತಾ ಜಲಧಾರೆ' ಕಾರ್ಯಕ್ರಮಕ್ಕೆ ಇದೇ 16ರಂದು ಚಾಲನೆ ದೊರೆಯಲಿದ್ದು, ನೀರಾವರಿ ವಿಷಯ ಮುಂದಿಟ್ಟುಕೊಂಡು ಚುನಾವಣಾ ರಣಕಹಳೆ ಊದಲು ಜೆಡಿಎಸ್ ಸಿದ್ಧತೆ ನಡೆಸಿದೆ. ರಾಜ್ಯದಾದ್ಯಂತ ಏಕಕಾಲದಲ್ಲಿ ಈ ಯಾತ್ರೆ ನಡೆಯಲಿರುವುದು ವಿಶೇಷ.

ಕಾಂಗ್ರೆಸ್ ಮೇಕೆದಾಟಿನಿಂದ ಬೆಂಗಳೂರುವರೆಗೆ ಪಾದಯಾತ್ರೆ ಕೈಗೊಳ್ಳುವ ಸಂದರ್ಭದಲ್ಲೇ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್. ಡಿ. ಕುಮಾರಸ್ವಾಮಿ ಈ ಯಾತ್ರೆಯನ್ನು ಘೋಷಣೆ ಮಾಡಿದ್ದರು. ಆದರೆ, ಕೋವಿಡ್ ಕಾರಣಕ್ಕೆ ಕಾರ್ಯಕ್ರಮ ಮುಂದೂಡಲ್ಪಟ್ಟಿತ್ತು. ಇದೇ ತಿಂಗಳ ಮಧ್ಯಭಾಗದಲ್ಲಿ ಇದಕ್ಕೆ ಹಸಿರು ನಿಶಾನೆ ತೋರಲಿದ್ದಾರೆ.

ಪ್ರತಿ ಜಿಲ್ಲೆಗೂ ನೀರಿನ ಸಮಾನ ಹಂಚಿಕೆ ಆಗಬೇಕು. ದಶಕಗಳಿಂದ ನನೆಗುದಿಗೆ ಬಿದ್ದಿರುವ ನೀರಾವರಿ ಯೋಜನೆಗಳಿಗೆ ಮರು ಚಾಲನೆ ದೊರೆಯಬೇಕಿದೆ

ಎಚ್‌.ಡಿ. ಕುಮಾರಸ್ವಾಮಿ
ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

'ಜಲ ಶ್ಯಾಮಲದಿಂದ ಸಸ್ಯ ಶ್ಯಾಮಲ' ಎಂಬ ಧ್ಯೇಯದೊಂದಿಗೆ ನಡೆಯಲಿರುವ ಯಾತ್ರೆಗೆಂದೇ 15 ವಾಹನಗಳನ್ನು ವಿಶೇಷವಾಗಿ ಸಜ್ಜುಗೊಳಿಸಲಾಗುತ್ತಿದೆ.

ಏನಿದರ ಉದ್ದೇಶ: ರಾಜ್ಯದಲ್ಲಿ ನದಿ ನೀರಿನ ಸದ್ಬಳಕೆ, ಜಲಾಶಯಗಳ ಅಭಿವೃದ್ಧಿ, ನೀರಾವರಿ ಯೋಜನೆಗಳಿಗೆ ಚುರುಕು ಮುಟ್ಟಿಸುವುದು, ಪ್ರತಿ ಜಿಲ್ಲೆಯಲ್ಲೂ ನೀರಿನ ಸಮಾನತೆ ಸೇರಿದಂತೆ ವಿವಿಧ ಆಶಯದೊಂದಿಗೆ ಜೆಡಿಎಸ್ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ರಥಯಾತ್ರೆ ಮೂಲಕ ರಾಜ್ಯದ ಕಾವೇರಿ, ಕಬಿನಿ, ಮೇಕೆದಾಟು, ಹೇಮಾವತಿ, ನೇತ್ರಾವತಿ, ಕುಮಾರಧಾರ, ತುಂಗಭದ್ರಾ, ಶರಾವತಿ, ಅಘನಾಶಿನಿ, ಕೃಷ್ಣ, ಘಟಪ್ರಭಾ, ಮಲಪ್ರಭಾ, ಭೀಮಾ, ಅರ್ಕಾವತಿ, ಉತ್ತರ ಪಿನಾಕಿನಿ, ಚಿತ್ರಾವತಿ ಸೇರಿದಂತೆ 15 ನದಿಗಳ ನೀರು ಸಂಗ್ರಹಕ್ಕೆ ಉದ್ದೇಶಿಸಲಾಗಿದೆ. ಜೊತೆಗೆ ಆಯಾ ಜಿಲ್ಲೆಗಳ ಉಪ ನದಿಗಳಿಂದಲೂ ನೀರು ಸಂಗ್ರಹ ಮಾಡಲಾಗುತ್ತದೆ. ಒಟ್ಟಾರೆ 51 ಸ್ಥಳಗಳಿಂದ ನೀರು ಸಂಗ್ರಹಿಸಲಾಗುತ್ತದೆ.

ಆರಗ ವಿರುದ್ಧ ಕಾಂಗ್ರೆಸ್ ದೂರು

ಬೆಂಗಳೂರು: 'ಉರ್ದು ಮಾತನಾಡಲು ನಿರಾಕರಿಸದ್ದಕ್ಕೇ ಚಂದ್ರಶೇಖರ್ ಎಂಬ ಯುವಕನನ್ನು ಕೊಲೆ ಮಾಡಲಾಗಿದೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹಾಗೂ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಅವರು ಬಹಿರಂಗ ಹೇಳಿಕೆ ನೀಡಿದ್ದಾರೆ. ಆ ಮೂಲಕ ಕೋಮು ಸೌಹಾರ್ದ ಕದಡಲು ಪ್ರಯತ್ನಿಸಿದ್ದಾರೆ. ಅವರನ್ನು ಕೂಡಲೇ ಬಂಧಿಸಬೇಕು' ಎಂದು ಬೆಂಗಳೂರು ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿಯು ಮಲ್ಲೇಶ್ವರ ಪೊಲೀಸ್ ಠಾಣೆಗೆ ದೂರು ನೀಡಿದೆ.

'ಗೃಹ ಸಚಿವರು, ಯುವಕನು ದಲಿತ ಸಮುದಾಯಕ್ಕೆ ಸೇರಿದವನು ಎಂದೂ ತಿಳಿಸಿದ್ದಾರೆ. ನಿರ್ದಿಷ್ಟ ಸಮುದಾಯದ ಹೆಸರನ್ನು ಅನವಶ್ಯಕವಾಗಿ ಅವರು ಎಳೆದು ತಂದಿದ್ದಾರೆ. ಸಿ.ಟಿ.ರವಿ ಸಹ ಬೇಜವಾಬ್ದಾರಿಯಿಂದ ನಡೆದುಕೊಂಡಿದ್ದಾರೆ' ಎಂದೂ ದೂರಿನಲ್ಲಿ ತಿಳಿಸಿದ್ದಾರೆ.

ಇದೇ 14ರಂದು 'ಭೀಮ ನಮನ'

ಬೆಂಗಳೂರು: ನಿರ್ಮಾಣ್ ಶೆಲ್ಟರ್ಸ್ ಹಾಗೂ ವಿಎಲ್‌ಎನ್–ನಿರ್ಮಾಣ್–ಪುರಂದರ ಪ್ರತಿಷ್ಠಾನದ ಸಹಯೋಗದಲ್ಲಿ ಪಂಡಿತ್ ಭೀಮಸೇನ ಜೋಷಿಯವರ ಜನ್ಮಶತಾಬ್ದಿ ಪ್ರಯುಕ್ತ ಇದೇ 14ರಂದು 'ಭೀಮ ನಮನ–2022' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಪುರಂದರದಾಸರ ಆರಾಧನ ಮಹೋತ್ಸವದ ಪ್ರಯುಕ್ತ ಇದೇ 15ರಿಂದ 17ರವರೆಗೆ 'ದಾಸವಾಣಿ', 'ಸಂತವಾಣಿ', 'ದಾಸಗಾನ ಲಹರಿ' ಹಾಗೂ ಹಿಂದೂಸ್ತಾನಿ ಗಾಯನ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಪಂಡಿತ್ ಡಾ.ನಾಗರಾಜರಾವ್ ಹವಾಲ್ದಾರ್ ಮತ್ತು ಓಂಕಾರ್‌ನಾಥ್ ಹವಾಲ್ದಾರ್ ತಂಡದವರು, ವಿದ್ವಾನ್ ಕನಕಗಿರಿ ಹುಸೇನ್‌ಸಾಬ್ ಹಾಗೂ ಸಂಗಡಿಗರು, ವಿದ್ವಾನ್ ವಿದ್ಯಾಭೂಷಣ ಹಾಗೂ ಮೇಧಾಹಿರಣ್ಮಯಿ ವಿದ್ಯಾಭೂಷಣ ಮತ್ತು ತಂಡದವರು ಸಂಗೀತ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

17 ರಂದು ನಡೆಯುವ ಸಮಾರಂಭದಲ್ಲಿ ಸ್ವರಸಾಧನರತ್ನ ಪಂಡಿತ್ ವಿನಾಯಕ ತೊರವಿ ಅವರಿಗೆ '2022ರ ನಿರ್ಮಾಣ್–ಪುರಂದರ ಸಂಗೀತರತ್ನ' ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಬನ್ನೇರುಘಟ್ಟದ ನಿಸರ್ಗ ಬಡಾವಣೆಯಲ್ಲಿರುವ ಪುರಂದರ ಮಂಟಪದಲ್ಲಿ ಸಂಗೀತ ಕಾರ್ಯಕ್ರಮಗಳು ನಿಗದಿಯಾಗಿವೆ.

'ಪ್ರಶಸ್ತಿಯು ಪುರಂದರ ದಾಸರ ಚಿತ್ರವಿರುವ ಸ್ವರ್ಣಹಾರ, ಅಭಿನಂದನಾ ಪತ್ರ ಮತ್ತು ₹1 ಲಕ್ಷ ನಗದು ಒಳಗೊಂಡಿರಲಿದೆ' ಎಂದು ನಿರ್ಮಾಣ್ ಸಮೂಹ ಸಂಸ್ಥೆಗಳ ಸಂಸ್ಥಾಪಕ ವಿ.ಲಕ್ಷ್ಮಿನಾರಾಯಣ್ ತಿಳಿಸಿದ್ದಾರೆ.

ರಷ್ಯಾದಿಂದ ಆಮದು ಮುಂದುವರಿಕೆ: ಎಸ್. ಜೈಶಂಕರ್

ಪ್ರಜಾವಾಣಿ ವಾರ್ತೆ

ನವದೆಹಲಿ: 'ರಾಷ್ಟ್ರೀಯ ಹಿತಾಸಕ್ತಿ' ಕಾರಣಗಳಿಂದಾಗಿ ಭಾರತವು ರಷ್ಯಾದಿಂದ ಇಂಧನ ಹಾಗೂ ಮಿಲಿಟರಿ ಯಂತ್ರಾಂಶಗಳ ಆಮದನ್ನು ಮುಂದುವರಿಸಲಿದೆ ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಲೋಕಸಭೆಯಲ್ಲಿ ಬುಧವಾರ ಹೇಳಿದರು.

ಉಕ್ರೇನ್ ಮೇಲಿನ ಯುದ್ಧ ಕಾರಣಗಳಿಂದಾಗಿ ರಷ್ಯಾ ಮೇಲೆ ಅಮೆರಿಕ ಹಾಗೂ ಇತರ ಪಾಶ್ಚಿಮಾತ್ಯ ರಾಷ್ಟ್ರಗಳು ನಿರ್ಬಂಧಗಳನ್ನು ಹೇರಿವೆ. ಆದಾಗ್ಯೂ, ರಷ್ಯಾದಿಂದ ಆಮದು ಮುಂದುವರಿಯಲಿದೆ ಎಂದು ಅವರು ಸದನಕ್ಕೆ ತಿಳಿಸಿದರು.

'ಇಂಧನ ದರಗಳಲ್ಲಿ ಈಗಾಗಲೇ ಹೆಚ್ಚಳವಾಗಿದೆ. ಸಾಮಾನ್ಯ ಜನರ ಮೇಲೆ ಹೆಚ್ಚುವರಿ ಹೊರೆ ಬೀಳದಂತೆ ನೋಡಿಕೊಳ್ಳಬೇಕಿದೆ. ಅದೇ ರೀತಿ ರಸಗೊಬ್ಬರಗಳ ಬೆಲೆಗಳ ಹೆಚ್ಚಳ ಕೂಡ ಜನರ ಜೀವನದ ಮೇಲೆ ಪರಿಣಾಮ ಬೀರುತ್ತದೆ' ಎಂದು ಅವರು ಹೇಳಿದರು.

ಜೆಇಇ–ಮೇನ್ ಪರೀಕ್ಷೆ ಮುಂದೂಡಿಕೆ

ನವದೆಹಲಿ (ಪಿಟಿಐ): ಜೆಇಇ–ಮೇನ್‌ನ ಮೊದಲ ಅವಧಿಯ ಪರೀಕ್ಷೆಯನ್ನು ಜೂನ್‌ಗೆ ಹಾಗೂ ಎರಡನೇ ಅವಧಿಯ ಪರೀಕ್ಷೆಯನ್ನು ಜುಲೈಗೆ ಮುಂದೂಡಲಾಗಿದೆ ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಬುಧವಾರ ತಿಳಿಸಿದೆ.

ಮೊದಲ ಅವಧಿಯ ಪರೀಕ್ಷೆ ಜೂನ್ 20 ರಿಂದ 29ರ ವರೆಗೆ ಹಾಗೂ ಎರಡನೇ ಅವಧಿ ಪರೀಕ್ಷೆ ಜುಲೈ 21–30ರವರೆಗೆ ನಡೆಯಲಿದೆ.

'ಪರೀಕ್ಷೆಗಳ ದಿನಾಂಕ ಬದಲಿಸುವಂತೆ ಬಹಳಷ್ಟು ಜನ ಅಭ್ಯರ್ಥಿಗಳು ಮನವಿ ಸಲ್ಲಿಸಿದ್ದರು. ಹೀಗಾಗಿ ಈ ನಿರ್ಧಾರ ಕೈಗೊಳ್ಳಲಾಗಿದೆ' ಎಂದು ಎನ್‌ಟಿಎ ತಿಳಿಸಿದೆ.

ಈ ಮುಂಚೆ, ಮೊದಲ ಅವಧಿಯ ಪರೀಕ್ಷೆ ಏಪ್ರಿಲ್ 21ರಿಂದ 29 ಹಾಗೂ ಮೇ 1ರಂದು ನಿಗದಿಯಾಗಿತ್ತು. ಎರಡನೇ ಅವಧಿ ಪರೀಕ್ಷೆ ಮೇ 24ರಿಂದ 29ರ ವರೆಗೆ ನಿಗದಿಯಾಗಿತ್ತು.

ಜುಲೈ 17ಕ್ಕೆ 'ನೀಟ್'

ನವದೆಹಲಿ (ಪಿಟಿಐ): ರಾಷ್ಟ್ರೀಯ ಪ್ರವೇಶ ಹಾಗೂ ಅರ್ಹತಾ ಪರೀಕ್ಷೆ (ನೀಟ್) ಜುಲೈ 17ರಂದು ನಡೆಯಲಿದ್ದು, ನೋಂದಣಿ ಪ್ರಕ್ರಿಯೆಗೆ ಬುಧವಾರ ಚಾಲನೆ ನೀಡಲಾಗಿದೆ.

ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಮೇ 6 ಕೊನೆಯ ದಿನವಾಗಿದೆ ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ತಿಳಿಸಿದೆ.

1,591 ವಿದ್ಯಾರ್ಥಿಗಳ ಶಾಲಾ ದಾಖಲಾತಿಯಲ್ಲಿ 'ಬೇಡ ಜಂಗಮ' ನಮೂದು

ತನಿಖೆಗೆ ಶಿಕ್ಷಣಾಧಿಕಾರಿ ನೇತೃತ್ವದ ತಂಡ ರಚನೆ

• ವಿನಾಯಕ ಭಟ್

ದಾವಣಗೆರೆ: ಜಿಲ್ಲೆಯ ದಾವಣಗೆರೆ ಉತ್ತರ ಮತ್ತು ದಕ್ಷಿಣ ವಲಯ, ಹರಿಹರ ಹಾಗೂ ಹೊನ್ನಾಳಿ ವಲಯಗಳಲ್ಲಿ 2015ರಿಂದ ಏಳು ವರ್ಷಗಳ ಅವಧಿಯಲ್ಲಿ ಒಟ್ಟು 1,591 ವಿದ್ಯಾರ್ಥಿಗಳ ಶಾಲಾ ದಾಖಲಾತಿಯಲ್ಲಿ 'ಬೇಡ ಜಂಗಮ' ಪರಿಶಿಷ್ಟ ಜಾತಿ ಎಂದು ನಮೂದಿಸಿರುವುದು ಬೆಳಕಿಗೆ ಬಂದಿದೆ. ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಜಿ.ಆರ್. ತಿಪ್ಪೇಶಪ್ಪ ಅವರು ಈ ಬಗ್ಗೆ ತನಿಖೆ ನಡೆಸಿ ವರದಿ ನೀಡಲು ಶಿಕ್ಷಣಾಧಿಕಾರಿ ನೇತೃತ್ವದ ತಂಡ ರಚಿಸಿದ್ದಾರೆ.

ಶಾಲೆಗೆ ಸೇರಿಸುವಾಗ ಪೋಷಕರು ಜಾತಿ ಕಾಲಂನಲ್ಲಿ 'ಬೇಡ ಜಂಗಮ' ಎಂದು ಬರೆಸಿರುವ ಬಗ್ಗೆ ಮಾಹಿತಿ ಹಕ್ಕು ಕಾಯ್ದೆಯಡಿ ದಾಖಲೆಗಳನ್ನು ಪಡೆದುಕೊಂಡಿದ್ದ ಪರಿಶಿಷ್ಟ ಜಾತಿಗಳ ರಕ್ಷಣಾ ವೇದಿಕೆ ಜಿಲ್ಲಾ ಸಂಚಾಲಕ ಚನ್ನಮುದ್ದು ಶೇಖರ ನಾಯ್ಕ ಅವರು ಶಾಲೆಗಳ ಮುಖ್ಯ ಶಿಕ್ಷಕರ ಮೇಲೆ ಶಿಸ್ತು ಕ್ರಮ ಕೈಗೊಳ್ಳುವಂತೆ ಮನವಿ ಸಲ್ಲಿಸಿದ್ದರು. ಹೀಗಾಗಿ ಈ ಬಗ್ಗೆ ತನಿಖೆ ನಡೆಸಲು ಶಿಕ್ಷಣಾಧಿಕಾರಿ ಸಿ.ನಾಗರಾಜ ನೇತೃತ್ವದಲ್ಲಿ ಮೂರು ತಂಡಗಳನ್ನು ರಚಿಸಲಾಗಿದೆ. ವಿಷಯ ಪರಿವೀಕ್ಷಕರನ್ನು ಒಳಗೊಂಡ ತಂಡವು ಸಂಬಂಧಪಟ್ಟ ಶಾಲೆಗೆ ತೆರಳಿ ದಾಖಲಾತಿಗಳನ್ನು ಪರಿಶೀಲಿಸಿ ನೈಜ ವರದಿಯನ್ನು ಸಲ್ಲಿಸಬೇಕು. ತಂಡದ ವರದಿ ಆಧರಿಸಿ ಶಿಕ್ಷಣಾಧಿಕಾರಿಯು ಸ್ಪಷ್ಟ ಅಭಿಪ್ರಾಯದೊಂದಿಗೆ ಅಂತಿಮ ವರದಿಯನ್ನು ಸಲ್ಲಿಸಬೇಕು ಎಂದು ಡಿಡಿಪಿಐ ಆದೇಶಿಸಿದ್ದಾರೆ.

'ಶಾಲಾ ದಾಖಲಾತಿಯಲ್ಲಿ ಬೇಡ ಜಂಗಮ ಪರಿಶಿಷ್ಟ ಜಾತಿ ಎಂದು ನಮೂದಿಸಿರುವ ಬಗ್ಗೆ ಕ್ರಮ ಕೈಗೊಳ್ಳುವಂತೆ ದೂರು ಬಂದಿದ್ದರಿಂದ ತನಿಖೆ ನಡೆಸಲಾಗುತ್ತಿದೆ. ಏಳು ದಿನದ ಒಳಗೆ ವರದಿ ನೀಡುವಂತೆ ತನಿಖಾ ತಂಡಕ್ಕೆ ಸೂಚಿಸಿದ್ದೇನೆ. ಜಿಲ್ಲೆಯಲ್ಲಿ ಎಷ್ಟು ವಿದ್ಯಾರ್ಥಿಗಳು ಬೇಡ ಜಂಗಮ ಹೆಸರು ನಮೂದಿಸಿದ್ದಾರೆ ಎಂಬ ನಿಖರವಾದ ಮಾಹಿತಿಯನ್ನು ಕಲೆ ಹಾಕುವಂತೆ ಜಿಲ್ಲೆಯ ಎಲ್ಲ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೂ ನಿರ್ದೇಶನ ನೀಡಲಾಗಿದೆ' ಎಂದು ಡಿಡಿಪಿಐ ಜಿ.ಆರ್.ತಿಪ್ಪೇಶಪ್ಪ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ಶಾಲೆಗೆ ಮಕ್ಕಳನ್ನು ದಾಖಲಿಸುವಾಗ ಪೋಷಕರು ಜಾತಿ ಪ್ರಮಾಣಪತ್ರ ಸಲ್ಲಿಸುತ್ತಾರೆ. ಇಲ್ಲವೇ ಸ್ವಯಂ ಘೋಷಣಾ ಪ್ರಮಾಣಪತ್ರವನ್ನು ನೀಡುತ್ತಾರೆ. ಮಕ್ಕಳ ಪ್ರವೇಶ ನಿರಾಕರಿಸುವಂತಿಲ್ಲ ಎಂಬ ಕಾರಣಕ್ಕೆ ಅರ್ಜಿಯಲ್ಲಿ ನಮೂದಿಸಿದ ಜಾತಿಯನ್ನೇ ಶಿಕ್ಷಕರು ದಾಖಲಾತಿಯಲ್ಲಿ ನಮೂದಿಸಿಕೊಂಡು ಪ್ರವೇಶ ನೀಡುತ್ತಾರೆ' ಎಂದು ಅವರು ಅಭಿಪ್ರಾಯಪಟ್ಟರು.

ಬೇಡ ಜಂಗಮ ಹೆಸರು ನಮೂದಿಸಿದವರ ವಿವರ

ವಲಯ	ವಿದ್ಯಾರ್ಥಿಗಳು
ದಾವಣಗೆರೆ ಉತ್ತರ	711
ದಾವಣಗೆರೆ ದಕ್ಷಿಣ	635
ಹರಿಹರ	205
ಹೊನ್ನಾಳಿ	40
ಒಟ್ಟು	1,591

* ಶಿಕ್ಷಣ ಇಲಾಖೆ ನೀಡಿದ ಮಾಹಿತಿ

'ಸರ್ಕಾರಿ ಸೌಲಭ್ಯಕ್ಕಾಗಿ ಬೇಡ ಜಂಗಮ'



ಚನ್ನಮುದ್ದು ಶೇಖರ ನಾಯ್ಕ

'ಸರ್ಕಾರಿ ಸೌಲಭ್ಯಗಳನ್ನು ಪಡೆದುಕೊಳ್ಳಬೇಕು ಎಂಬ ಉದ್ದೇಶದಿಂದ ಲಿಂಗಾಯತ ಜಂಗಮ ಸಮುದಾಯದವರು 'ಬೇಡ ಜಂಗಮ' ಹೆಸರಿನಲ್ಲಿ ಪರಿಶಿಷ್ಟ ಜಾತಿ ಪ್ರಮಾಣಪತ್ರವನ್ನು ಪಡೆದುಕೊಳ್ಳುವ ಮೂಲಕ ಶೋಷಿತ ಸಮುದಾಯಕ್ಕೆ ಅನ್ಯಾಯ ಮಾಡಲಾಗುತ್ತಿದೆ. ಕ್ರಮೇಣ ಎಸ್‌ಸಿ ಮೀಸಲು ಕ್ಷೇತ್ರಗಳನ್ನೂ ಕಬಳಿಸಲು ಬಲಿಷ್ಠ ಸಮುದಾಯವು ಹುನ್ನಾರ ನಡೆಸುತ್ತಿದೆ' ಎಂದು ಪರಿಶಿಷ್ಟ ಜಾತಿಗಳ ರಕ್ಷಣಾ ವೇದಿಕೆ ಜಿಲ್ಲಾ ಸಂಚಾಲಕ ಚನ್ನಮುದ್ದು ಶೇಖರ ನಾಯ್ಕ ಆರೋಪಿಸಿದರು.

'ಶಾಸಕ ಎಂ.ಪಿ. ರೇಣುಕಾಚಾರ್ಯ ಅವರ ಪ್ರಭಾವ ಬಳಸಿಕೊಂಡು ಅವರ ಅಣ್ಣ ಎಂ.ಪಿ. ದಾರಕೇಶ್ವರಯ್ಯ ಅವರು ಬೇಡ ಜಂಗಮ ಜಾತಿ ಪ್ರಮಾಣಪತ್ರ ಪಡೆದುಕೊಂಡಿದ್ದಾರೆ. ಜಿಲ್ಲೆಯಲ್ಲಿ ಲಿಂಗಾಯತ ಜಂಗಮ ಸಮುದಾಯದವರು ಸದ್ದಿಲ್ಲದೇ ಶಾಲಾ ದಾಖಲಾತಿಯಲ್ಲಿ ಮಕ್ಕಳ ಹೆಸರನ್ನು ಬೇಡ ಜಂಗಮ ಎಂದು ನಮೂದಿಸುತ್ತಿದ್ದಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಹೀಂ ಉಚ್ಚಿಲ್ ನೇಮಕ ರದ್ದು

ಪ್ರಜಾವಾಣಿ ವಾರ್ತೆ

ಮಂಗಳೂರು: ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಸ್ಥಾನಕ್ಕೆ ರಹೀಂ ಉಚ್ಚಿಲ್ ಅವರನ್ನು ನೇಮಿಸಿ ಹೊರಡಿಸಿದ್ದ ಆದೇಶವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರ ರದ್ದುಗೊಳಿಸಿದೆ. ರಾಜ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಈ ಆದೇಶ ಹೊರಡಿಸಿದೆ.

ಸರ್ಕಾರದ ದಿಢೀರ್ ಆದೇಶದ ಬಗ್ಗೆ ರಹೀಂ ಉಚ್ಚಿಲ ಅಚ್ಚರಿ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಅವರು, 'ಆದೇಶದ ಪ್ರತಿ ನೋಡಿದ್ದೇನೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನನ್ನನ್ನು ಪದಮುಕ್ತಗೊಳಿಸಿದೆ. ಏಕೆ ಎನ್ನುವುದು ನನಗೂ ಗೊತ್ತಿಲ್ಲ. ಆ ಆದೇಶ ಪತ್ರದಲ್ಲೂ ಕಾರಣ ತಿಳಿಸಿಲ್ಲ. ನಾನೂ ಕಾರಣದ ಹುಡುಕಾಟದಲ್ಲಿ ಇದ್ದೇನೆ' ಎಂದಿದ್ದಾರೆ.

ರಹೀಂ ಉಚ್ಚಿಲ್

ವಿಧಾನಸೌಧಕ್ಕೆ ಬೆಂಕಿ ಹಚ್ಚಿ: ಪ್ರಿಯಾಂಕ್

ಕಲಬುರಗಿ: 'ವಿವಾದಗಳ ಬಗ್ಗೆ ಪ್ರಶ್ನಿಸಿದರೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನ್ಯಾಯಾಲಯಕ್ಕೆ ಹೋಗಲು ಹೇಳುತ್ತಾರೆ. ಒಂದು ಸರ್ಕಾರ ಶಾಸನಬದ್ಧವಾಗಿ ನಡೆದುಕೊಳ್ಳದಿದ್ದಾಗ ಜನರು ನ್ಯಾಯಾ ಲಯದ ಮೊರೆ ಹೋಗುತ್ತಾರೆ. ಪ್ರತಿಯೊಂದಕ್ಕೂ ನ್ಯಾಯಾಲಯಕ್ಕೆ ಹೋಗುವುದಾದರೆ ವಿಧಾನಸೌಧ ಯಾಕಿರಬೇಕು? ಅದಕ್ಕೆ ಬೆಂಕಿ ಹಚ್ಚಿರಿ' ಎಂದು ಶಾಸಕ, ಕೆಪಿಸಿಸಿ ವಕ್ತಾರ ಪ್ರಿಯಾಂಕ್ ಖರ್ಗೆ ಹೇಳಿದರು.

ಆರಗ ರಾಜೀನಾಮೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜೆಜೆ ನಗರದಲ್ಲಿ ಚಂದ್ರು ಎಂಬಾತನ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಬೇಜವಾಬ್ದಾರಿ ಹೇಳಿಕೆ ನೀಡಿ, ಘಟನೆಗೆ ಕೋಮು ಬಣ್ಣ ಬಳಿದಿರುವ ಗೃಹ ಸಚಿವ ಆರಗ ಜ್ಞಾನೇಂದ್ರ ಕೂಡಲೇ ರಾಜೀನಾಮೆ ನೀಡಬೇಕು' ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಆಗ್ರಹಿಸಿದ್ದಾರೆ.

'ಘಟನೆ ಬಗ್ಗೆ ಹೇಳಿಕೆ ನೀಡಿರುವ ಗೃಹ ಸಚಿವರು, ಚಂದ್ರು ಎಂಬ ದಲಿತ ಹುಡುಗನನ್ನು ಗುಂಪೊಂದು ಅಡ್ಡಗಟ್ಟಿ ಉರ್ದು ಮಾತನಾಡಲು ಒತ್ತಾಯಿಸಿದೆ. ಆತನಿಗೆ ಉರ್ದು ಬರುತ್ತಿರಲಿಲ್ಲವೆಂದು ಚುಚ್ಚಿ ಚುಚ್ಚಿ ಕೊಲೆ ಮಾಡಲಾಗಿದೆ ಎಂದು ಸ್ವಯಂ ಘೋಷಿತ ತೀರ್ಪು ನೀಡಿದ್ದಾರೆ. ಜವಾಬ್ದಾರಿ ಸ್ಥಾನದಲ್ಲಿರುವ ಆರಗ ಜ್ಞಾನೇಂದ್ರ ಅವರು ಜ್ಞಾನವೇ ಇಲ್ಲದೆ ಈ ಹೇಳಿಕೆ ನೀಡಿದ್ದಾರೆ' ಎಂದು ಹೇಳಿದ್ದಾರೆ.

'ಅಮಾಯಕ ಯುವಕರ ಹೆಣದ ಮೇಲೆ ರಾಜಕೀಯ ಮಾಡಿ ಅಧಿಕಾರ ನಡೆಸುತ್ತಿರುವವರಿಂದ ಇನ್ನೇನು ನಿರೀಕ್ಷಿಸಲು ಸಾಧ್ಯ. ಕೊಂದವರ್‍ಯಾರು ಎನ್ನುವುದರ ಮೇಲೆ ಕೊಲೆಯ ಕ್ರೌರ್ಯ ನಿರ್ಣಯಿಸುತ್ತಿದ್ದೀರಿ. ಜಾತಿ ಆಧಾರದಲ್ಲಿ ವೈಭವೀಕರಿಸುತ್ತಿದ್ದೀರಿ. ಕೊಲೆಯಾದ ಯುವಕ ದಲಿತ ಎಂದಿರುವ ನಿಮ್ಮ ದಲಿತ ಪ್ರೇಮವನ್ನು ಧರ್ಮಸ್ಥಳದ ಕನ್ಯಾಡಿಯಲ್ಲಿ ಅದೇ ಸಮುದಾಯದ ದಿನೇಶನನ್ನು ಬಜರಂಗದಳದ ಕಿಟ್ಟಿ ಎಂಬಾತ ಕೊಲೆ ಮಾಡಿದ್ದಾಗ ನಿಮ್ಮ ಕಣ್ಣಿಗೆ ಕಾಣಲೇ ಇಲ್ಲ. ಬಹುಶಃ ನಿಮ್ಮ ಮಾಹಿತಿ ಮೂಲದ ಕೊರತೆ ಇರಬೇಕು. ನಿಮಗೆ ಕಣ್ಣಿನ ದೋಷದ ಸಮಸ್ಯೆ ಇಲ್ಲ. ಕಣ್ಣೇ ಸಮಸ್ಯೆ. ಗೃಹ ಸಚಿವ ಸ್ಥಾನಕ್ಕೆ ನೀವೊಂದು ಅಪಚಾರ' ಎಂದೂ ಗೃಹ ಸಚಿವರ ವಿರುದ್ಧ ಹರಿಪ್ರಸಾದ್ ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಆರಗ ಅಸಮರ್ಥ ಗೃಹ ಸಚಿವ'

ಬೆಂಗಳೂರು: 'ಆರಗ ಜ್ಞಾನೇಂದ್ರ ಅವರೇ, ನೀವೊಬ್ಬ ಅಪ್ರಬುದ್ಧ ರಾಜಕಾರಣಿ. ಅಸಮರ್ಥ ಗೃಹ ಸಚಿವ' ಎಂದು ರಾಜ್ಯ ಕಾಂಗ್ರೆಸ್ ಟೀಕಿಸಿದೆ.

ಜೆಜೆ ನಗರದಲ್ಲಿ ಚಂದ್ರು ಎಂಬಾತನ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಚಿವರು ನೀಡಿದ ಹೇಳಿಕೆಗೆ ವ್ಯಂಗ್ಯವಾಗಿ ಟ್ವೀಟ್ ಮಾಡಿರುವ ಕಾಂಗ್ರೆಸ್, 'ಗೃಹ ಸಚಿವರ ಮಾಹಿತಿಯ 'ಸೋರ್ಸ್' (ಮೂಲ), ಪೊಲೀಸ್ ವರದಿ ಆಗಿರಬೇಕೇ ಹೊರತು 'ವಾಟ್ಸ್‌ಆ್ಯಪ್ ಫಾರ್ವರ್ಡ್ ಮೆಸೇಜುಗಳಲ್ಲ' ಎಂದೂ ವ್ಯಂಗ್ಯವಾಡಿದೆ.

'ಬಿಜೆಪಿ ಟೋಪಿ ಹಾಕಿದಾಗ ಒಂದು ಮಾತು, ಟೋಪಿ ತೆಗೆದಾಗ ಮತ್ತೊಂದು ಮಾತು. ಬಿಜೆಪಿ ಟೋಪಿಯ ಮಹಿಮೆಯೇ ಅಂಥದ್ದು. 'ಸುಳ್ಳು' ತಕ್ಷಣ ಜಾಗೃತವಾಗಿಬಿಡುತ್ತದೆ!' ಎಂದೂ ಕಾಲೆಳೆದಿದೆ.

'ಗೃಹ ಸಚಿವರ ಬಾಲಿಶ ಹೇಳಿಕೆ'

ಪ್ರಜಾವಾಣಿ ವಾರ್ತೆ

ಮೈಸೂರು: 'ಬೆಂಗಳೂರಿನಲ್ಲಿ ನಡೆದ ಚಂದ್ರು ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಗೃಹ ಸಚಿವ ಆರಗ ಜ್ಞಾನೇಂದ್ರ ಸಣ್ಣತನದ ಹೇಳಿಕೆ ನೀಡಿದ್ದಾರೆ. ಅವರು ಕಾಮೆಡಿಯನ್ ರೋಲ್ ಮಾಡ್ತಿದ್ದಾರಾ ಅಥವಾ ವಿಲನ್ ರೋಲ್ ಮಾಡ್ತಿದ್ದಾರಾ?' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಕಿಡಿಕಾರಿದರು.

ಬುಧವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಉರ್ದು ಭಾಷೆ ಮಾತನಾಡಲಿಲ್ಲ ಎಂಬ ಕಾರಣಕ್ಕೆ ಚೂರಿಯಲ್ಲಿ ಚುಚ್ಚಿ ಕೊಲೆ ಮಾಡಲಾಗಿದೆ ಎಂದು ಪ್ರಚೋದನಕಾರಿ ಹೇಳಿಕೆ ಕೊಟ್ಟು, ನಂತರ ಸ್ಪಷ್ಟೀಕರಣ ನೀಡಿದ್ದಾರೆ. ಗೃಹ ಸಚಿವರಾದವರು ಹೀಗೆ ಹೇಳಿಕೆ ಕೊಟ್ಟರೆ ಹೇಗೆ? ಜವಾಬ್ದಾರಿ ಮರೆತು, ಸಮಾಜದ ಸ್ವಾಸ್ಥ್ಯ ಹಾಳುಮಾಡುತ್ತಿದ್ದಾರೆ' ಎಂದು ಟೀಕಿಸಿದರು.

'ಈಗ ಮಾವು ಮಾರಾಟಕ್ಕೆ ಗಲಾಟೆ ಶುರುವಾಗಿದೆ. ಮುಂದೆ ಹುಣಸೆ, ಸಪೋಟಕ್ಕೂ ಶುರುವಾಗಬಹುದು. ರೈತರು ಮಾವನ್ನು ಮುಸ್ಲಿಮರು, ಹಿಂದೂ ವ್ಯಾಪಾರಿಗಳಿಗೆ ಮಾರಾಟ ಮಾಡುತ್ತಾರೆ. ವಿಶ್ವ ಹಿಂದೂ ಪರಿಷತ್‌ನವರು ಬಂದು ವ್ಯಾಪಾರ ಮಾಡುತ್ತಾರಾ? ನೀವು ಬೇಕಾದರೆ ನಾಮ ಹಾಕಿಕೊಂಡು ಓಡಾಡಿ, ನಮ್ಮ ರೈತರಿಗೆ ನಾಮ ಹಾಕಲು ಬರಬೇಡಿ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಆ ಊಟ ಮಾಡಿದರೆ ಪಿಶಾಚಿ ಕಾಡುತ್ತವೆ!'

ಮೈಸೂರಿನ ಕಲಾಮಂದಿರದಲ್ಲಿ ಬುಧವಾರ ಆಯೋಜಿಸಿದ್ದ 'ಸರ್ವ ಜನಾಂಗದ ಶಾಂತಿಯ ತೋಟ'; ಒಂದು ಭಾವೈಕ್ಯತೆಯ ಚರ್ಚೆ ಕಾರ್ಯಕ್ರಮದಲ್ಲಿ ಮಾತನಾಡಿದ ಕುಮಾರಸ್ವಾಮಿ, 'ಇತ್ತೀಚೆಗೆ ವಿಧಾನಸಭೆ ಅಧಿವೇಶನದ ವೇಳೆ, ಸರ್ಕಾರದ ಔತಣಕೂಟಕ್ಕೆ ಆಹ್ವಾನಿಸಿದ್ದರು. ಆಗ ಕೆಲವು ಬಿಜೆಪಿ ಶಾಸಕರು, 'ಅಣ್ಣಾ ನೀನು ಹೋಗಬೇಡ. ಆ ಊಟ ಮಾಡಿದರೆ ಕೋವಿಡ್‌ನಿಂದ ಸತ್ತಿರುವವರು ಪಿಶಾಚಿಗಳಾಗಿ ಬಂದು ರಾತ್ರಿಯೆಲ್ಲಾ ಕಾಡುತ್ತಾರೆ ಎಂದಿದ್ದರು. ಕೋವಿಡ್‌ನಿಂದ ಸರ್ಕಾರ ಹಣ ಕೊಳ್ಳೆ ಹೊಡೆದಿರುವ ಬಗ್ಗೆ, ಅದೇ ಪಕ್ಷದ ಶಾಸಕರ ಪ್ರತಿಕ್ರಿಯೆ ಇದು' ಎಂದರು.

ನನಗೆ 2023ರ ಚುನಾವಣೆಯಲ್ಲಿ ಗೆದ್ದು ಅಧಿಕಾರಕ್ಕೆ ಬರಬೇಕೆಂಬ ಗುರಿ ಇಲ್ಲ. ರಾಜ್ಯದಲ್ಲಿ ಶಾಂತಿ, ನೆಮ್ಮದಿ ನೆಲೆಸಬೇಕೆಂಬುದೇ ಬಯಕೆ

ಎಚ್‌.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಸಮಗ್ರ ತನಿಖೆಗೆ ಸಿ.ಟಿ. ರವಿ ಒತ್ತಾಯ

ಬೆಂಗಳೂರು: ಜೆ.ಜೆ.ನಗರದಲ್ಲಿ ಕೊಲೆಗೀಡಾದ ಚಂದ್ರು ಮನೆಗೆ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ನೇತೃತ್ವದ ನಿಯೋಗ ಭೇಟಿ ನೀಡಿ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿ ₹5 ಲಕ್ಷ ಪರಿಹಾರ ನೀಡಿತು.

ಈ ಸಂದರ್ಭದಲ್ಲಿ ಮಾತನಾಡಿದ ಸಿ.ಟಿ.ರವಿ, 'ಚಂದ್ರು ಹತ್ಯೆ ವಿಚಾರದಲ್ಲಿ ಸಮಗ್ರ ತನಿಖೆ ಆಗಬೇಕು. ಹತ್ಯೆಗೀಡಾದ ಚಂದ್ರು ಅವರ ಸಹೋದರ ನವೀನ್ ನಮ್ಮ ಪಕ್ಷದ ಬೂತ್ ಸಮಿತಿ ಕಾರ್ಯದರ್ಶಿ. ಏಕಾಏಕಿ ಹತ್ಯೆ ನಡೆದಿದೆ. ಯಾರೂ ನೆರವಿಗೆ ಬರಲಿಲ್ಲ. ಇಲ್ಲಿ ಪೂರ್ವದ್ವೇಷ ಇರಲಿಲ್ಲ. ಬೈಕ್ ತಾಗಿದ್ದನ್ನೇ ನೆಪ ಮಾಡಿ, ಕನ್ನಡ ಮತ್ತು ತಮಿಳು ಮಾತ್ರ ಬರುವುದಾಗಿ ಹೇಳಿದ ಚಂದ್ರುವನ್ನು ಕೊಲೆ ಮಾಡಿದ್ದಾರೆ ಎಂದು ಅವರ ಮನೆಯವರೇ ಹೇಳಿದ್ದಾರೆ' ಎಂದು ವಿವರಿಸಿದರು.

'ಪೊಲೀಸ್ ಇಲಾಖೆಯವರು ಬಹಳಷ್ಟು ಸಾರಿ ವಾಸ್ತವಿಕ ಸಂಗತಿಗಳ ಕಡೆ ಹೋಗುವುದಕ್ಕಿಂತ ಈ ವಿಚಾರವನ್ನು ಇಲ್ಲಿಗೆ ತಣ್ಣಗೆ ಮಾಡಬೇಕು ಎಂದು ಯೋಚಿಸುತ್ತಾರೆ. ಅದು ತಪ್ಪೇನೂ ಅಲ್ಲ. ಇಂತಹ ಘಟನೆ ಮರುಕಳಿಸಬಾರದು. ಕನ್ನಡನಾಡಿನಲ್ಲಿ ಕನ್ನಡ ಮಾತನಾಡಲಿಲ್ಲ ಎಂದರೆ ಯೋಚಿಸಬೇಕಾದ ವಿಷಯ. ಸಣ್ಣ ಕಾರಣಕ್ಕೆ ಕೊಲೆ ಮಾಡಿದ್ದು ಖಂಡನೀಯ' ಎಂದು ರವಿ ಹೇಳಿದರು.

ಅಂತರ ಧರ್ಮೀಯ ವಿವಾಹ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿಯ ಉಪನಗರ ಪೊಲೀಸ್ ಠಾಣೆ ಎದುರು ಯುವತಿ ಕುಟುಂಬದವರು, ಸ್ಥಳೀಯ ಎಸ್‌ಎಸ್‌ಕೆ ಸಮುದಾಯದವರು ಹಾಗೂ ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ಬುಧವಾರ ಪ್ರತಿಭಟನೆ ನಡೆಸಿದರು

ಹುಬ್ಬಳ್ಳಿ: ನಗರದ ಹಿಂದೂ ಯುವತಿ ಮತ್ತು ಮುಸ್ಲಿಂ ಯುವಕ ಪ್ರೀತಿಸಿ ವಿವಾಹವಾಗಿರುವುದನ್ನು ವಿರೋಧಿಸಿ ಯುವತಿ ಕುಟುಂಬದವರು, ಸ್ಥಳೀಯ ಎಸ್‌ಎಸ್‌ಕೆ (ಸೋಮವಂಶಿ ಸಹಸ್ರಾರ್ಜುನ ಕ್ಷತ್ರಿಯ) ಸಮುದಾಯದವರು ಹಾಗೂ ಹಿಂದೂಪರ ಸಂಘಟನೆಗಳು ಇಲ್ಲಿನ ಉಪನಗರ ಪೊಲೀಸ್ ಠಾಣೆಗೆ ಬುಧವಾರ ಮುತ್ತಿಗೆ ಹಾಕಿ ಪ್ರತಿಭಟಿಸಿದರು.

ಕೇಶ್ವಾಪುರದ ರೈಲ್ವೆ ಕಾಲೊನಿಯ ಇಬ್ರಾಹಿಂ ಸೈಯದ್ ಮತ್ತು ಉಣಕಲ್‌ನ ಸ್ನೇಹಾ ಧಮಾಮಘರ ಗದುಗಿನ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ಫೆ. 11ರಂದು ಮದುವೆಯಾಗಿದ್ದಾರೆ. ವಿಷಯ ಗೊತ್ತಾಗುತ್ತಿದ್ದಂತೆ ಯುವತಿ ಕುಟುಂಬದವರು, ವಿಶ್ವ ಹಿಂದೂ ಪರಿಷತ್, ಹಿಂದೂ ಪರಿಷತ್, ಎಸ್‌ಎಸ್‌ಕೆ ಸಮಾಜ ಚಿಂತನ–ಮಂಥನ ಸಮಿತಿ ಕಾರ್ಯಕರ್ತರು ರಾತ್ರಿ 8ರವರೆಗೆ ಪ್ರತಿಭಟಿಸಿದರು.

'ಪ್ರೀತಿ ಹೆಸರಿನಲ್ಲಿ ಲವ್ ಜಿಹಾದ್ ನಡೆದಿದೆ. ಯುವತಿಯನ್ನು ಕುಟುಂಬಕ್ಕೆ ಒಪ್ಪಿಸಿ' ಎಂದು ಯುವತಿ ತಾಯಿ ಯಲ್ಲಮ್ಮಾ ಧಮಾಮಘರ ಆಗ್ರಹಿಸಿದರು.

ಡಿಸಿಪಿ ಸಾಹಿಲ್ ಬಾಗ್ಲಾ, 'ದಂಪತಿಯನ್ನು ಕರೆಸಿ ವಿಚಾರಿಸಲಾಗುವುದು. ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು' ಎಂದು ಭರವಸೆ ನೀಡಿದರು. ಯುವತಿಯನ್ನು ಗುರುವಾರ ಮಧ್ಯಾಹ್ನ 12ರೊಳಗೆ ಕುಟುಂಬಕ್ಕೆ ಒಪ್ಪಿಸಬೇಕು ಎಂಬ ಷರತ್ತಿನೊಂದಿಗೆ ಮುಖಂಡರು ಪ್ರತಿಭಟನೆ ಹಿಂಪಡೆದರು.

'ಗದುಗಿನ ಉಪ ನೋಂದಣಾಧಿಕಾರಿಯನ್ನು ಕೂಡಲೇ ಅಮಾನತುಗೊಳಿಸಬೇಕು. ಸ್ಥಳೀಯ ಶಾಸಕ ಪ್ರಸಾದ ಅಬ್ಬಯ್ಯ ಕೂಡ ಮುಸ್ಲಿಂ ಯುವಕ ಇಬ್ರಾಹಿಂ ಪರ ಒತ್ತಡ ತರುತ್ತಿದ್ದಾರೆ' ಎಂದು ಆರೋಪಿಸಿದ ಅವರು ಅಬ್ಬಯ್ಯ ಮನೆ ಎದುರು ಧರಣಿ ನಡೆಸಲಾಗುವುದು ಎಂದು ಶ್ರೀರಾಮ ಸೇನೆ ಅಧ್ಯಕ್ಷ ಪ್ರಮೋದ್ ಮುತಾಲಿಕ್ ಎಚ್ಚರಿಸಿದರು.

'ಮಸೀದಿ ಮೇಲಿನ ಧ್ವನಿವರ್ಧಕ ತೆರವಿಗೆ ಆದೇಶ ಹೊರಡಿಸಿಲ್ಲ'

ಹೊಸಪೇಟೆ (ವಿಜಯನಗರ): 'ಮಸೀದಿಗಳ ಮೇಲಿನ ಧ್ವನಿವರ್ಧಕಗಳ ಶಬ್ದ ಕಡಿಮೆಗೊಳಿಸುವ ಅಥವಾ ಅವುಗಳನ್ನು ತೆರವುಗೊಳಿಸುವ ವಿಚಾರದಲ್ಲಿ ಇಲಾಖೆಯಿಂದ ಯಾವುದೇ ಹೊಸ ಆದೇಶ ಹೊರಡಿಸಿಲ್ಲ. ಇದೆಲ್ಲ ತಪ್ಪು ಗ್ರಹಿಕೆ' ಎಂದು ಮುಜರಾಯಿ, ಹಜ್ ಮತ್ತು ವಕ್ಫ್, ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವೆ ಶಶಿಕಲಾ ಜೊಲ್ಲೆ ತಿಳಿಸಿದರು.

ಬುಧವಾರ ಇಲ್ಲಿ ನಡೆದ ಬಿಜೆಪಿ ಕೋರ್ ಕಮಿಟಿ ಸಭೆಯಲ್ಲಿ ಭಾಗವಹಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ' ಸದ್ದಿನ ಪ್ರಮಾಣ ಎಷ್ಟು ಇರಬೇಕು ಎನ್ನುವುದಕ್ಕೆ ಸಂಬಂಧಿಸಿ ಈಗಾಗಲೇ ಸುಪ್ರೀಂಕೋರ್ಟ್ ಆದೇಶ ಹೊರಡಿಸಿದೆ. ಈಗ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ನೋಟಿಸ್ ನೀಡಲಾಗಿದೆ. ಆದರೆ, ನಮ್ಮ ಇಲಾಖೆಯಿಂದ ಯಾವುದೇ ಆದೇಶ ಮಾಡಿಲ್ಲ' ಎಂದು ಸ್ಪಷ್ಟಪಡಿಸಿದರು.

'ಆಜಾನ್ ಶಬ್ದ ನಿಯಂತ್ರಿಸುವ ಸಂಬಂಧ ಪೊಲೀಸ್ ಇಲಾಖೆಯಿಂದ ನೋಟಿಸ್ ಕೊಟ್ಟಿರುವ ವಿಚಾರ ನನಗೆ ಗೊತ್ತಿಲ್ಲ. ರಾಜ್ಯದಲ್ಲಿ ಎಷ್ಟು ಮಸೀದಿ, ಮದರಸಾಗಳಿವೆ ಎಂದು ಮಾಹಿತಿ ಕಲೆ ಹಾಕುತ್ತಿಲ್ಲ. ಮಸೀದಿ, ಮಂದಿರ ಸೇರಿದಂತೆ ಎಲ್ಲ ಧಾರ್ಮಿಕ ಸಂಸ್ಥೆಗಳ ಅಂಕಿ ಸಂಖ್ಯೆ ಇಲಾಖೆಯ ಬಳಿ ಇದೆ. ಹೊಸ ಸಮೀಕ್ಷೆಗೆ ಆದೇಶ ಹೊರಡಿಸಿಲ್ಲ' ಎಂದರು.

1001 ಸಂಸ್ಥೆಗಳಿಗೆ ನೋಟಿಸ್

ಮಂಗಳೂರು: ಧ್ವನಿವರ್ಧಕಗಳ ಬಳಕೆಗೆ ಇರುವ ನಿಯಮಗಳನ್ನು ಪಾಲಿಸುವಂತೆ ಸೂಚಿಸಿ ನಗರದ 1,001 ಸಂಸ್ಥೆಗಳಿಗೆ ನೋಟಿಸ್ ನೀಡಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ತಿಳಿಸಿದ್ದಾರೆ.

357 ದೇವಸ್ಥಾನ, 168 ಮಸೀದಿ, 95 ಚರ್ಚ್, 106 ಶಿಕ್ಷಣ ಸಂಸ್ಥೆಗಳು, 60 ಕೈಗಾರಿಕಾ ಸ್ಥಳಗಳು, 98 ಮನರಂಜನಾ ಸ್ಥಳ ಸೇರಿದಂತೆ 1,001 ಸ್ಥಳಗಳಲ್ಲಿ ಧ್ವನಿವರ್ಧಕ ಬಳಕೆ ಆಗುತ್ತಿರುವುದನ್ನು ಗುರುತಿಸಲಾಗಿದೆ ಎಂದು . ಹೇಳಿದ್ದಾರೆ.

ಸಾಮರಸ್ಯದಿಂದ ದೇಶ ಕಟ್ಟಲು ಸಾಧ್ಯ: ಕಂಚಿ ಸ್ವಾಮೀಜಿ

ಹೊಸಪೇಟೆ (ವಿಜಯನಗರ): 'ಕರ್ನಾಟಕ ಮೊದಲಿನಿಂದಲೂ ಆದರ್ಶ ಸಿದ್ಧಾಂತಗಳಿಗೆ ಹೆಸರಾಗಿದೆ. ಸದಾ ಕಾಲ ಹಾಗೆಯೇ ಮುಂದುವರಿಯಬೇಕು. ದೇಶದ ಜನರೆಲ್ಲರೂ ಸಾಮರಸ್ಯದಿಂದ ಬದುಕಬೇಕು' ಎಂದು ಕಂಚಿಯ ಶಂಕರ ವಿಜಯೇಂದ್ರ ಸರಸ್ವತಿ ಸ್ವಾಮೀಜಿ ಹೇಳಿದರು.

ನಗರದ ನೆಹರೂ ಕಾಲೊನಿಯಲ್ಲಿ ಬುಧವಾರ ಕಂಚಿ ಕಾಮಾಕ್ಷಿದೇವಿ ದೇವರ ಪ್ರಾಣ ಪ್ರತಿಷ್ಠಾಪನೆ ನೆರವೇರಿಸಿದನಂತರಮಾತನಾಡಿದಅವರು, 'ನಮ್ಮ ಹಿರಿಯರು ಇದನ್ನೇ ಹೇಳಿದ್ದಾರೆ. ಯಾವ ಧರ್ಮದಲ್ಲಿಯೂ ಅಹಂಕಾರ, ಅಧಿಕಾರಕ್ಕೆ ಸ್ಥಾನವಿಲ್ಲ' ಎಂದರು.

ಹಾಲಿನ ದರ ಹೆಚ್ಚಳ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಂದಿನಿ ಹಾಲಿನ ಮಾರಾಟ ದರ ಹೆಚ್ಚಳಕ್ಕೆ ಎಲ್ಲ 14 ಒಕ್ಕೂಟಗಳಿಂದ ಒತ್ತಡ ಹೆಚ್ಚಾಗುತ್ತಿದ್ದು, ಸರ್ಕಾರ ಶೀಘ್ರದಲ್ಲೇ ದರ ಹೆಚ್ಚಳದ ಬಗ್ಗೆ ತೀರ್ಮಾನ ಕೈಗೊಳ್ಳುವ ಸಾಧ್ಯತೆ ಇದೆ.

'ಡೀಸೆಲ್ ದರ, ವಿದ್ಯುತ್ ದರ, ಕಾರ್ಗೋ ಬಾಕ್ಸ್ ಸೇರಿ ಕಚ್ಚಾ ವಸ್ತುಗಳ ದರ ಹೆಚ್ಚಳ ಆಗಿರುವುದರಿಂದ ದರ ಹೆಚ್ಚಳ ಅನಿವಾರ್ಯವಾಗಿದೆ ಎಂಬುದನ್ನು ಒಕ್ಕೂಟಗಳ ಪರವಾಗಿ ಕೆಎಂಎಫ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ. ಅವರಿಂದಲೂ ಸಕಾರಾತ್ಮಕ ಪ್ರತಿಕ್ರಿಯೆ ದೊರೆತಿದ್ದು, ಶೀಘ್ರವೇ ನಿರ್ಧಾರ ಕೈಗೊಳ್ಳಲಿದ್ದಾರೆ' ಎಂದು ಕೆಎಂಎಫ್ ಮೂಲಗಳು ತಿಳಿಸಿವೆ.

ಲೀಟರ್‌ಗೆ ₹3ರಿಂದ ₹5 ರಷ್ಟು ಹೆಚ್ಚಳ ಮಾಡಬೇಕು ಎಂಬ ಕೋರಿಕೆಯನ್ನು ಎಲ್ಲ ಒಕ್ಕೂಟಗಳು ಕೆಎಂಎಫ್‌ಗೆ ಸಲ್ಲಿಸಿವೆ.

ಹಲಾಲ್ ಕಟ್ ತಿನ್ನಬೇಡಿ ಎನ್ನಲು ಸಿ.ಟಿ. ರವಿ ಮಂತ್ರಿಯಲ್ಲ: ನಾಗೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಲಾಲ್ ಕಟ್ ತಿನ್ನಬೇಡಿ ಎಂದು ರಾಜ್ಯ ಸರ್ಕಾರ ಎಲ್ಲೂ ಹೇಳಿಲ್ಲ. ಎಲ್ಲಿ ಹೇಳಿದೆ' ಎಂದು ಪ್ರಶ್ನಿಸಿದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್, 'ಖರೀದಿಸುವ ಸಂದರ್ಭದಲ್ಲಿ ಧಮ್ಕಿ ಹಾಕಿದರೆ ಅದು ತಪ್ಪು' ಎಂದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಖರೀದಿಸುವುದು ಅವರವರ ಇಚ್ಛೆ. ಅದನ್ನು ಯಾಕೆ ನೀವು (ಮಾಧ್ಯಮಗಳು) ಜಾತಿಗೆ ತಿರುಗಿಸುತ್ತೀರಿ. ಖರೀದಿಸುವ ಸ್ವಾತಂತ್ರ್ಯ ಪ್ರತಿಯೊಬ್ಬರ ಹಕ್ಕು' ಎಂದರು.

'ಸಿ.ಟಿ.ರವಿಯವರೇ ಹೇಳಿದ್ದಾರಲ್ಲ' ಎಂದು ಮಾಧ್ಯಮ ಪ್ರತಿನಿಧಿಗಳ ಹೇಳಿದಾಗ, 'ಸಿ.ಟಿ.ರವಿ ಮಂತ್ರಿಗಳಲ್ಲ. ಅವರು ಮಾಜಿಗಳಾದರೂ ಇನ್ನೂ ಅವರನ್ನು ನೀವು ಮಂತ್ರಿಗಳಾಗಿ ಇಟ್ಟುಕೊಂಡಿದ್ದೀರಾ' ಎಂದರು.

'ರವಿಯವರು ಹೇಗೆ ಈ ದೇಶದ ಪ್ರಜೆಯೋ, ಅವರಿಗೂ ಒಂದು ಜವಾಬ್ದಾರಿ ಇದೆ. ಆದರೆ, ಹಲಾಲ್ ಕಟ್ ತಿನ್ನಬೇಡಿ ಎಂದು ರಾಜ್ಯದ ಸರ್ಕಾರ ಹೇಳಿರುವುದಕ್ಕೆ ಏನಾದರೂ ಸಾಕ್ಷ್ಯ ಇದೆಯೇ?' ಎಂದರು.

'ವ್ಯಾಪಾರದಲ್ಲಿ ಅನೇಕ ವ್ಯಾಪಾರಿ ಬುದ್ದಿಗಳು ಕೆಲಸ ಮಾಡುತ್ತವೆ. ಅನೇಕ ಕಂಪನಿಗಳು ತಮ್ಮ ಉತ್ಪನ್ನ ತೆಗೆದುಕೊಳ್ಳುವಂತೆ ಹೇಳಿಕೊಂಡು ಹೋಗುತ್ತವೆ. ಅದನ್ನು ತಡೆಯಲು ಆಗಲ್ಲ. ಅದೇ ರೀತಿ ಒಂದಷ್ಟು ಜನ ಇಂಥ ಉತ್ಪನ್ನಗಳನ್ನೇ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ಅವರ ಇಚ್ಛೆ ಅವರು ಹೇಳಿಕೊಂಡಿದ್ದಾರೆ. ಅದನ್ನೂ ತಡೆಯಲು ಆಗಲ್ಲ' ಎಂದರು.

'ಮುಸ್ಲಿಮರು ಈ ಬಾರಿ ಮಸೀದಿಗಳ ಮುಂದೆ ಬೇವು–ಬೆಲ್ಲ ಹಂಚಿದ್ದಾರೆ. ಇದನ್ನು ನನ್ನ ಈ ವಯಸ್ಸಿನವರೆಗೂ ನೋಡಿಲ್ಲ. ಹಾಗಿದ್ದರೆ, ಸಾಮರಸ್ಯ ಬರುತ್ತಿದೆಯೋ, ಸಾಮರಸ್ಯ ಹೋಗುತ್ತಿದೆಯೋ' ಎಂದೂ ಪ್ರಶ್ನಿಸಿದ ನಾಗೇಶ್, 'ಬೇವು– ಬೆಲ್ಲ ಹಂಚುವ ಮೂಲಕ ಸಾಮರಸ್ಯವಿದೆ, ಸಮಾನತೆ ಬರುತ್ತಿದೆ ಎಂದು ಅವರಿಗೂ (ಮುಸ್ಲಿಮರಿಗೂ) ಅನಿಸುತ್ತಿದೆ' ಎಂದರು.

'ಸರ್ಕಾರದ ನಿರ್ಧಾರವಲ್ಲ'

ಪ್ರಜಾವಾಣಿ ವಾರ್ತೆ

ಹಾಸನ: 'ಮುಸ್ಲಿಮರಿಗೆ ಮಾವಿನ ಹಣ್ಣು ಮಾರಾಟ ಮಾಡಬಾರದೆಂಬ ಅಭಿಯಾನ ಸರ್ಕಾರದ ನಿರ್ಧಾರವಲ್ಲ' ಎಂದು ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಸ್ಪಷ್ಟಪಡಿಸಿದರು.

'ಒಂದೊಂದು ಪಕ್ಷದವರು ಒಂದೊಂದು ರೀತಿ ಹೇಳುತ್ತಿದ್ದಾರೆ. ಯಾವ ಗ್ರಾಹಕರಿಗೆ ಯಾರ ಬಳಿ ಇಷ್ಟ ಇದೆಯೋ ಅಲ್ಲಿಗೆ ಹೋಗಿ ಮಾವಿನಹಣ್ಣು ಖರೀದಿಸುತ್ತಾರೆ. ಅದಕ್ಕೆ ಯಾವುದೇ ನಿರ್ಬಂಧ ಇಲ್ಲ. ನಾವು ಹೇಳಿದರೂ, ಇನ್ನೊಂದು ಅಂಗಡಿಗೆ ಹೋಗುವುದಿಲ್ಲ. ಯಾವುದೇ ಕಾರಣಕ್ಕೂ ಇದಕ್ಕೆ ಸರ್ಕಾರದ ಕುಮ್ಮಕ್ಕು ಇಲ್ಲ. ಈ ವಿಚಾರವನ್ನು ಇಲ್ಲಿಗೆ ಬಿಡಬೇಕು' ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಎಲ್ಲಾ ಸಮುದಾಯವದರು ಮಾವಿನಹಣ್ಣು ಬೆಳೆಯುತ್ತಾರೆ. ಮಾರುವವರೂ ಎಲ್ಲಾ ಸಮುದಾಯದವರೂ ಇದ್ದಾರೆ. ಒಳ್ಳೆಯ ಬೆಲೆ ಕೊಡುವವರಿಗೆ ರೈತರು ಮಾವಿನ ಹಣ್ಣು ಕೊಡುತ್ತಾರೆ ಎಂದರು.

ಚಿಂತಲಾ ಯಾದವರಾವ್ ನಿಧನ

ಗಂಗಾವತಿ (ಕೊಪ್ಪಳ ಜಿಲ್ಲೆ): ದೇವರಾಜ ಅರಸು ಅವರ ಸಂಪುಟದಲ್ಲಿ ಮೀನುಗಾರಿಕೆ ಸಚಿವರಾಗಿದ್ದ ಚಿಂತಲಾ ಯಾದವರಾವ್ (84) ಅವರು ಬೆಂಗಳೂರಿನ ಸಾಗರ್ ಆಸ್ಪತ್ರೆಯಲ್ಲಿ ಹೃದಯಾಘಾತದಿಂದ ನಿಧನರಾದರು. ಅವರಿಗೆ ಪತ್ನಿ ಸುಗುಣಾ, ಪುತ್ರಿ ಮತ್ತು ನಾಲ್ವರು ಪುತ್ರರು ಇದ್ದಾರೆ.

ಬೆಂಗಳೂರಿನ ಬನಶಂಕರಿ ಸಮೀಪದ ರುದ್ರಭೂಮಿಯಲ್ಲಿ ಗುರುವಾರ ಸಂಜೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

1978ರಲ್ಲಿ ಕಾಂಗ್ರೆಸ್‌ನಿಂದ ಗಂಗಾವತಿ ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿ ಶಾಸಕರಾಗಿದ್ದ ಯಾದವರಾವ್, ಕೆಲ ತಿಂಗಳು ಮೀನುಗಾರಿಕಾ ಸಚಿವರಾಗಿ ಕಾರ್ಯನಿರ್ವಹಿಸಿದರು.

ಗಂಗಾವತಿ ಪುರಸಭೆ ಅಧ್ಯಕ್ಷರಾಗಿದ್ದ ವೇಳೆಯಲ್ಲಿ ನಗರದ ಪ್ರಮುಖ ಲ್ಯಾಂಡ್ ಮಾರ್ಕ್ ಎಂದು ಪರಿಗಣಿಸಲ್ಪಡುವ ನೆಹರು ಉದ್ಯಾನಕ್ಕೆ ಯಾದವರಾವ್ ಶ್ರೀಕಾರ ಹಾಕಿದ್ದರು. ಗುರುವಾರ ಸಂಜೆ ಬೆಂಗಳೂರು ಬಶಂಕರಿಯಲ್ಲಿನ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ

#10, 3ನೇ ಮಹಡಿ, ಖಾದಿಭವನ, ಜಸ್ಮಾದೇವಿಭವನ ರಸ್ತೆ, ವಸಂತನಗರ, ಬೆಂಗಳೂರು–52
ದೂರವಾಣಿ ಸಂಖ್ಯೆ: 080–29901193, ಇ–ಮೇಲ್: mdkmvstdc@gmail.com
WEB: http://www.karnataka.gov.in/kmvstdcl/Pages/home.aspx

ಸಂಖ್ಯೆ: ಕಮವಾಪಪಂಅನಿನಿ/ಅಲೆಮಾರಿ ವಿಭಾಗ/ಪ.ಪ್ರ/ಸಿ.ಆರ್–01/2022–23/39 ದಿನಾಂಕ: 05.04.2022

ಪ್ರಕಟಣೆ

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಡಿ 2022–23ನೇ ಸಾಲಿಗೆ ಪರಿಶಿಷ್ಟ ಪಂಗಡದ ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳ ಎಲ್ಲಾ ಸಮುದಾಯಗಳಿಗೆ ಸೇರಿದ ಅರ್ಹ ಅಭ್ಯರ್ಥಿಗಳಿಗೆ ಉಚಿತವಾಗಿ ಲಘು(ಕಾರು/ಜೀಪ್) ಹಾಗೂ ಭಾರಿವಾಹನ(ಬಸ್ಸು) ಚಾಲನ ತರತಿ ಜೊತೆಗೆ ವಾಹನ ಚಾಲನಾ ಪರವಾನಗಿ ನೀಡುವ ಕಾರ್ಯಕ್ರಮವನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದು ಆಸಕ್ತ ಫಲಾಪೇಕ್ಷಿಗಳಿಂದ ಉಚಿತ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ತರಬೇತಿ ಪಡೆಯಲು ಅರ್ಹತೆ ಮತ್ತು ಇತರೆ ಅವಶ್ಯ ಮಾಹಿತಿ:

ಲಘು ವಾಹನ ಚಾಲನಾ ತರಬೇತಿ (ಕಾರ್/ಜೀಪ್): • ಕನಿಷ್ಠ 18 ವರ್ಷ ವಯೋಮಿತಿ ತುಂಬಿರಬೇಕು. • ಜನ್ಮ ದಿನಾಂಕದ ಬಗ್ಗೆ ಜನನ ಪ್ರಮಾಣಪತ್ರ ಅಥವಾ ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಅಥವಾ ಶಾಲಾ ವರ್ಗಾವಣಾ ಪ್ರಮಾಣ ಪತ್ರ (ಟಿ.ಸಿ.) ಅಥವಾ ನೋಟರಿಯಿಂದ ಪ್ರಮಾಣ ಪತ್ರ. • ಆಧಾರ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ. • ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ–5.

ಭಾರಿ ವಾಹನ ಚಾಲನಾ ತರಬೇತಿ (ಬಸ್ಸು): • ಕನಿಷ್ಠ 20 ವರ್ಷಗಳ ವಯೋಮಿತಿ ಪೂರೈಸಿರಬೇಕು. • ಲಘು ವಾಹನ ಚಾಲನಾ ಅನುಜ್ಞಾಪತ್ರ ಪಡೆದು ಒಂದು ವರ್ಷ ಪೂರೈಸಿರಬೇಕು. • ಜನ್ಮ ದಿನಾಂಕದ ಬಗ್ಗೆ ಜನನ ಪ್ರಮಾಣಪತ್ರ ಅಥವಾ ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಅಥವಾ ಶಾಲಾ ವರ್ಗಾವಣಾ ಪ್ರಮಾಣ ಪತ್ರ (ಟಿ.ಸಿ.) ಅಥವಾ ನೋಟರಿಯಿಂದ ಪ್ರಮಾಣ ಪತ್ರ. • ಆಧಾರ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ. • ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ–5.

• **ತರಬೇತಿ ನೀಡುವ ಸ್ಥಳ: ಬೆಂ.ಮ.ಸಾ.ಸಂ. ತರಬೇತಿ ಕೇಂದ್ರ, ವಡ್ಡರಹಳ್ಳಿ, ದಾಸನಪುರ ಹೋಬಳಿ, ಬೆಂಗಳೂರು ಉತ್ತರ–562130.**

• **ಅರ್ಹ ಅಭ್ಯರ್ಥಿಗಳಿಗೆ ಉಚಿತವಾಗಿ ಲಘು/ಭಾರಿ ವಾಹನ ಚಾಲನಾ ತರಬೇತಿ (30 ದಿನಗಳು) ಮತ್ತು ತರಬೇತಿಯ ಅವಧಿಯಲ್ಲಿ ವಸತಿ ಮತ್ತು ಊಟೋಪಚಾರದ ವ್ಯವಸ್ಥೆಯನ್ನು ನೀಡಲಾಗುತ್ತದೆ.**

• ಆಸಕ್ತ ಅಭ್ಯರ್ಥಿಗಳು ಈ ಕೆಳಕಂಡ ಜಿಲ್ಲಾ ಕಛೇರಿಗಳಿಂದ ಹಾಗೂ ವಿವರ ಮತ್ತು ಮಾಹಿತಿಯನ್ನು ನಿಗಮದ ವೆಬ್‌ಸೈಟ್ www.karnataka.gov.in/kmvstdcl. ನಿಂದ ಪಡೆಯಬಹುದು. * ಆಫ್‌ಲೈನ್ ಅರ್ಜಿ ದಿನಾಂಕ: 07.04.2022 ರಿಂದ ಕೊನೆಯ ದಿನಾಂಕ: 20.04.2022ರ ವರೆಗೆ * ಆನ್‌ಲೈನ್ ಅರ್ಜಿ ದಿನಾಂಕ: 07.04.2022 ರಿಂದ ಕೊನೆಯ ದಿನಾಂಕ: 20.04.2022ರ ವರೆಗೆ.

ಸಂಪರ್ಕಿಸಬಹುದಾದ ನಿಗಮದ ಜಿಲ್ಲಾ ಕಛೇರಿಗಳ ದೂರವಾಣಿ ಸಂಖ್ಯೆಗಳು:

1) ಬೆಂಗಳೂರು ನಗರ: 080–40936621 2) ಬೆಂಗಳೂರು ಗ್ರಾಮಾಂತರ: 080–40936621 3) ಬಾಗಲಕೋಟೆ: 08354–235016 4) ಬೀದರ್: 8482233147 5) ವಿಜಯಪುರ: 08352–276743 6) ಬಳ್ಳಾರಿ: 08392–245551 7) ಬೆಳಗಾವಿ: 0831–2451252 8) ಚಾಮರಾಜನಗರ: 08226–223856 9) ಚಿಕ್ಕಮಗಳೂರು: 08262–220717 10) ಚಿತ್ರದುರ್ಗ: 08194–221055 11) ಚಿಕ್ಕಬಳ್ಳಾಪುರ: 08156–277161 12) ದಾವಣಗೆರೆ: 08192–233309 13) ಧಾರವಾಡ: 0836–2460855 14) ಗದಗ: 08372–239557 15) ಕಲಬುರ್ಗಿ: 08472–221331 16) ಹಾಸನ: 08172–235336 17) ಹಾವೇರಿ: 08375–234408 18) ಕಾರವಾರ: 08382–226903 19) ಕೋಲಾರ: 08152–222561 20) ಕೊಪ್ಪಳ: 08539–221176 21) ಮಂಡ್ಯ: 08232–221157 22) ಮಂಗಳೂರು: 0824–2420114 23) ಮಡಿಕೇರಿ: 08272–229983 24) ಮೈಸೂರು: 0821–2430022 25) ರಾಯಚೂರು: 08532–220486 26) ರಾಮನಗರ: 080–29782111 27) ಶಿವಮೊಗ್ಗ: 08182–276776 28) ತುಮಕೂರು: 0816–2280165 29) ಉಡುಪಿ: 0820–2574884 30) ಯಾದಗಿರಿ: 08473–253271.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: **7760991348, 7892529634, 8549060653,6366267114, 7760979980 7760991086, 080–22537481** ಅನ್ನು ಸಂಪರ್ಕಿಸಬಹುದಾಗಿರುತ್ತದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಬೆಂಗಳೂರು

DIPR/CP/62/Yakshi/2022-23

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಆಕುಕ ಇಂಜಿನಿಯರಿಂಗ್ ವಿಭಾಗ, ಎನ್.ಪಿ.ಸಿ. ಆಸ್ಪತ್ರೆ ಆವರಣ, ನಜರ್‌ಬಾದ್, ಮೈಸೂರು–10, ದೂರವಾಣಿ ಸಂಖ್ಯೆ: 0821–2449772, ಫ್ಯಾಕ್ಸ್ ನಂ. : 0821–2449772
ಇ–ಮೇಲ್: Khsdrp.divmys@gmail.com

ಸಂಖ್ಯೆ: ಆಕುಕ/ಇಂ.ವಿ/ಕಾ.ಅ/ಮೈ/ಸಇ–2, 3 &4/ಟೆಂಡರ್–01/2022–23 ದಿನಾಂಕ: 04.04.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ವಿಭಾಗ, ಮೈಸೂರು ಇವರು ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲಾದ ಸಿವಿಲ್ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಗಳ ವಿವರಗಳು ಈ ಕೆಳಕಂಡಂತಿವೆ : ಕಾಲಾವಧಿ 2 ತಿಂಗಳು (ಮಳೆಗಾಲ ಸೇರಿದಂತೆ) ಗುತ್ತಿಗೆದಾರರ ಅರ್ಹತೆ : ಮೂರನೇ ದರ್ಜೆ & ಮೇಲ್ಪಟ್ಟು.

ಕ್ರ ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ.ಲಕ್ಷಗಳಲ್ಲಿ)	ವರ್ಗ
	ಜಿಲ್ಲಾ ಆಸ್ಪತ್ರೆಗಳಿಗೆ 13KL ಸಾಮರ್ಥ್ಯದ LMO Tank ಅಳವಡಿಸಲು ಇದಕ್ಕೆ ಸಂಬಂಧಿಸಿದ ಸಿವಿಲ್ ಮತ್ತು ವಿದ್ಯುತ್ ಕಾಮಗಾರಿಗಳನ್ನು ಕೈಗೊಳ್ಳುವುವದು.			
1	(1) ಮೈಸೂರು ಜಿಲ್ಲಾ ಆಸ್ಪತ್ರೆ, (2) ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆ (ಪ್ಯಾಕೇಜ್–1)	69.80	1.40	ಸಾಮಾನ್ಯ
2	(1) ಮಂಗಳೂರು ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ (2) ಉಡುಪಿ ಜಿಲ್ಲಾ ಆಸ್ಪತ್ರೆ (ಪ್ಯಾಕೇಜ್–2)	69.80	1.40	ಸಾಮಾನ್ಯ
	ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ 6 KL ಸಾಮರ್ಥ್ಯದ LMO Tank ಅಳವಡಿಸಲು ಇದಕ್ಕೆ ಸಂಬಂಧಿಸಿದ ಸಿವಿಲ್ ಮತ್ತು ವಿದ್ಯುತ್ ಕಾಮಗಾರಿಗಳನ್ನು ಕೈಗೊಳ್ಳುವುವದು.			
	ಮೈಸೂರು ಜಿಲ್ಲೆ			
1	(1) ನಂಜನಗೂಡು, (2) ಟಿ.ನರಸೀಪುರ, (3) ಹೆಚ್.ಡಿ. ಕೋಟೆ (ಪ್ಯಾಕೇಜ್–3)	90.72	1.81	ಸಾಮಾನ್ಯ
2	(1) ಹುಣಸೂರು (2) ಪಿರಿಯಾಪಟ್ಟಣ (ಪ್ಯಾಕೇಜ್–4)	60.48	1.21	ಸಾಮಾನ್ಯ
3	ಕೆ.ಆರ್.ನಗರ	30.24	0.30	ಎಸ್.ಸಿ
	ಚಾಮರಾಜನಗರ ಜಿಲ್ಲೆ			
4	ಕೊಳ್ಳೇಗಾಲ	30.24	0.60	ಸಾಮಾನ್ಯ
5	ಯಳಂದೂರು	30.24	0.30	ಎಸ್.ಸಿ
6	ಗುಂಡ್ಲುಪೇಟೆ	30.24	0.30	ಎಸ್.ಸಿ
	ಮಂಡ್ಯ ಜಿಲ್ಲೆ			
7	(1) ಕೆ.ಆರ್.ಪೇಟೆ, (2) ಮಳವಳ್ಳಿ, (3) ಪಾಂಡವಪುರ, (4) ಶ್ರೀರಂಗಪಟ್ಟಣ (ಪ್ಯಾಕೇಜ್–5)	122.00	1.83	ಸಾಮಾನ್ಯ
8	ನಾಗಮಂಗಲ	30.50	0.31	ಎಸ್.ಸಿ
9	ಮದ್ದೂರು	30.50	0.31	ಎಸ್.ಟಿ
	ಕೊಡಗು ಜಿಲ್ಲೆ			
10	ವಿರಾಜಪೇಟೆ	30.50	0.61	ಸಾಮಾನ್ಯ
11	ಸೋಮವಾರಪೇಟೆ	30.50	0.31	ಎಸ್.ಸಿ
	ಹಾಸನ ಜಿಲ್ಲೆ			
12	(1) ಸಕಲೇಶಪುರ, (2) ಆಲೂರು, (3) ಬೇಲೂರು, (4) ಅರಕಲಗೂಡು (ಪ್ಯಾಕೇಜ್–6)	125.00	1.88	ಸಾಮಾನ್ಯ
13	(1) ಅರಸೀಕೆರೆ, (2) ಹೊಳೆನರಸೀಪುರ, (3) ಚನ್ನರಾಯಪಟ್ಟಣ (ಪ್ಯಾಕೇಜ್–7)	88.50	1.77	ಸಾಮಾನ್ಯ
	ಚಿಕ್ಕಮಗಳೂರು ಜಿಲ್ಲೆ			
14	(1) ಮೂಡಿಗೆರೆ, (2) ಕೊಪ್ಪ (ಪ್ಯಾಕೇಜ್–8)	62.00	1.24	ಸಾಮಾನ್ಯ
15	ಎನ್.ಆರ್.ಪುರ,	31.00	0.31	ಎಸ್.ಸಿ.
16	ಕಡೂರು	29.50	0.30	ಎಸ್.ಸಿ.
17	ಶೃಂಗೇರಿ	31.00	0.31	ಎಸ್.ಟಿ
18	ತರೀಕೆರೆ	29.50	0.30	ಎಸ್.ಟಿ
	ದಕ್ಷಿಣ ಕನ್ನಡ ಜಿಲ್ಲೆ			
19	(1) ಬಂಟ್ವಾಳ, (2) ಬೆಳ್ತಂಗಡಿ (3) ಪುತ್ತೂರು, (4) ಸುಳ್ಯ (ಪ್ಯಾಕೇಜ್–9)	112.50	1.69	ಸಾಮಾನ್ಯ
	ಉಡುಪಿ ಜಿಲ್ಲೆ			
20	(1) ಕಾರ್ಕಳ, (2) ಕುಂದಾಪುರ (ಪ್ಯಾಕೇಜ್–10)	58.25	1.17	ಸಾಮಾನ್ಯ

ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ ಮತ್ತು ಇತರೆ ವಿವರಗಳು : (1) ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಸಲ್ಲಿಸುವ ಕೊನೆಯ **ದಿನಾಂಕ: 19.04.2022 ಸಂಜೆ 16.00 ಘಂಟೆಯವರೆಗೆ** (2) ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಬಿಡ್ ಅನ್ನು ತೆರೆಯುವ **ದಿನಾಂಕ: 20.04.2022 ಸಂಜೆ 16.01 ಘಂಟೆಗೆ.**
ಸೂಚನೆ : ಅಲ್ಪಾವಧಿ ಟೆಂಡರ್ ಪ್ರಕಟಣೆಯಲ್ಲಿ ವ್ಯತ್ಯಾಸವಿದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಅದನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (www.eproc.karnataka.gov.in.)ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಆಕುಕ ಇಂಜಿನಿಯರಿಂಗ್ ವಿಭಾಗ, ಮೈಸೂರು.

ವಾಸಾಸಂಇ/ಮೈಸೂರು/ಶಿರಡಿ ಸಾಯಿ/11/2022–23

ಆಕಾರ್ ಪಟೇಲ್ ವಿದೇಶ ಪ್ರಯಾಣಕ್ಕೆ ತಡೆ

ಒಂದನೇ ಪುಟದಿಂದ...

'ಮೋದಿ ಸರ್ಕಾರ ಅಮ್ನೆಸ್ಟಿ ಇಂಡಿಯಾ ವಿರುದ್ಧ ಪ್ರಕರಣ ದಾಖಲಿಸಿರುವುದರಿಂದ ಪ್ರಯಾಣಕ್ಕೆ ನಿರ್ಬಂಧ ವಿಧಿಸಲಾಗಿದೆ ಎಂದು ಸಿಬಿಐ ಅಧಿಕಾರಿಗಳು ತಿಳಿಸಿದ್ದಾರೆ. ಅಮೆರಿಕಕ್ಕೆ ತೆರಳಲೆಂದೇ ಗುಜರಾತ್ ಕೋರ್ಟ್ ಮೂಲಕ ಪಾಸ್‌ಪೋರ್ಟ್ ವಾಪಸ್ ಪಡೆಯಲಾಗಿತ್ತು. ಆದರೆ, ನ್ಯಾಯಾಲಯದಿಂದ ಅನುಮತಿ ಪಡೆದಿದ್ದರೂ ಅಮೆರಿಕಕ್ಕೆ ತೆರಳಲು ಸಾಧ್ಯವಾಗಿಲ್ಲ' ಎಂದು ಟ್ವೀಟ್‌ನಲ್ಲಿ ತಿಳಿಸಿದ್ದಾರೆ.

ಮಿಷಿಗನ್ ವಿಶ್ವವಿದ್ಯಾಲಯ, ಬರ್ಕ್ಲಿ ವಿಶ್ವವಿದ್ಯಾಲಯ ಮತ್ತು ನ್ಯೂಯಾರ್ಕ್ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸ ನೀಡಲು ಅವರು ಅಮೆರಿಕಕ್ಕೆ ತೆರಳುವ ಉದ್ದೇಶ ಹೊಂದಿದ್ದರು.

2019ರಲ್ಲಿ ಬೆಂಗಳೂರು ಮತ್ತು ನವದೆಹಲಿಯಲ್ಲಿನ 'ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಇಂಡಿಯಾ' ಕಚೇರಿಗಳ ಮೇಲೆ ಸಿಬಿಐ ದಾಳಿ ನಡೆಸಿತ್ತು. ಸಂಸ್ಥೆಯ

ಆಕಾರ್ ಪಟೇಲ್

ಚಟುವಟಿಕೆಗಳ ಕುರಿತ ದಾಖಲೆಗಳನ್ನು ವಶಪಡಿಸಿಕೊಂಡಿತ್ತು. 2018ರಲ್ಲಿಯೂ ವಿದೇಶಿ ವಿನಿಮಯದ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ಈ ಸಂಸ್ಥೆಯ ಮೇಲೆ ದಾಳಿ ನಡೆಸಿತ್ತು. ಸೂರತ್‌ನಲ್ಲಿ ಬಿಜೆಪಿ ಶಾಸಕರೊಬ್ಬರು ಆಕಾರ್ ಪಟೇಲ್ ವಿರುದ್ಧ ಮೊಕದ್ದಮೆ ದಾಖಲಿಸಿದ್ದರಿಂದ ಪಾಸ್‌ಪೋರ್ಟ್ ಅನ್ನು ವಶಪಡಿಸಿಕೊಳ್ಳಲಾಗಿತ್ತು.

ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಯಡಿ (ಎಫ್‌ಸಿಆರ್‌ಎ) ತಮ್ಮ ವಿರುದ್ಧ ಲುಕ್ ಔಟ್ ನೋಟಿಸ್ ಹೊರಡಿಸಿರುವ ವಿರುದ್ಧ ಆಕಾರ್ ಪಟೇಲ್ ಅವರು ದೆಹಲಿ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಈ ಬಗ್ಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಸಿಬಿಐಗೆ ನ್ಯಾಯಾಲಯ ಸೂಚಿಸಿದೆ.

ಭಾರತ ವಿರುದ್ಧ ಅಲ್‌ಕೈದಾ ಹೇಳಿಕೆ ಹಿಜಾಬ್ ಪ್ರಸ್ತಾವ

ಒಂದನೇ ಪುಟದಿಂದ...

'ಭಾರತದಲ್ಲಿನ ಅಸಂಸ್ಕೃತ ಹಿಂದೂ ಪ್ರಜಾಪ್ರಭುತ್ವ ಎಂಬ ಮರೀಚಿಕೆಯಿಂದ ಮೋಸ ಹೋಗುವುದನ್ನು ನಾವು ನಿಲ್ಲಿಸಬೇಕಿದೆ' ಎಂದು ಝುವಾಹಿರಿಯ ಹೇಳಿಕೆ ಇರುವ ವಿಡಿಯೊವನ್ನು ಸಂಘಟನೆಯು ಆನ್‌ಲೈನ್‌ನಲ್ಲಿ ಹಂಚಿಕೊಂಡಿದೆ.

ಅರೇಬಿಕ್ ಭಾಷೆಯಲ್ಲಿರುವ ಈ ವಿಡಿಯೊ 8.43 ನಿಮಿಷಗಳ ಅವಧಿಯದ್ದಾಗಿದೆ. ಜಿಹಾದಿ ಸಂಘಟನೆಗಳು ಆನ್‌ಲೈನ್ ಮೂಲಕ ನಡೆಸುವ ಚಟುವಟಿಕೆಗಳನ್ನು ಪತ್ತೆ ಹಚ್ಚುವ ಅಮೆರಿಕ ಮೂಲದ ಎಸ್‌ಐಟಿಇ ಇಂಟೆಲಿಜೆನ್ಸ್ ಗ್ರೂಪ್ ಈ ವಿಡಿಯೊವನ್ನು ಪರಿಶೀಲಿಸಿದ್ದು, ಇಂಗ್ಲಿಷ್ ಅಡಿಬರಹಗಳನ್ನು ಸಹ ಒದಗಿಸಿದೆ.

ಕಳೆದ ಆರು ವರ್ಷಗಳ ಅವಧಿಯಲ್ಲಿ ಆತ ಬಿಡುಗಡೆ ಮಾಡಿರುವ ಎರಡನೇ ವಿಡಿಯೊ ಇದಾಗಿದೆ. ಈ ವಿಡಿಯೊದಲ್ಲಿ ಆತ ಸಂಪೂರ್ಣವಾಗಿ ಹಿಜಾಬ್ ವಿವಾದ ಕುರಿತಾಗಿಯೇ ಮಾತನಾಡಿದ್ದಾನೆ.

ಭಾರತದಲ್ಲಿರುವ ಮುಸ್ಲಿಮರನ್ನು ಉದ್ದೇಶಿಸಿ, 'ಜಗತ್ತಿನಲ್ಲಿ ಮಾನವ ಹಕ್ಕುಗಳು ಅಥವಾ ಸಂವಿಧಾನ ಇಲ್ಲವೇ ಕಾನೂನನ್ನು ಗೌರವಿಸಬೇಕು ಎಂಬುದು ಇಲ್ಲವೇ ಇಲ್ಲ ಎಂಬುದನ್ನು ಭಾರತದ ಮುಸ್ಲಿಮರು ಅರ್ಥಮಾಡಿಕೊಳ್ಳಬೇಕು' ಎಂದು ಹೇಳಿದ್ದಾನೆ.

'ಪಾಶ್ಚಿಮಾತ್ಯ ರಾಷ್ಟ್ರಗಳು ಮಾಡಿರುವಂತಹ ವಂಚನೆಯನ್ನೇ ಭಾರತದಲ್ಲಿ ನಮಗೆ ಮಾಡಲಾಗುತ್ತಿದೆ. ಫ್ರಾನ್ಸ್, ಹಾಲೆಂಡ್ ಹಾಗೂ ಸ್ವಿಟ್ಜರ್ಲೆಂಡ್ ದೇಶಗಳು ಸಾರ್ವಜನಿಕವಾಗಿ ನಗ್ನತೆ ಪ್ರದರ್ಶನಕ್ಕೆ ಅವಕಾಶ ನೀಡಿದ್ದರೆ, ಹಿಜಾಬ್ ನಿಷೇಧಿಸಿವೆ. ಈ ನಡೆ ಆ ದೇಶಗಳ ನಿಜವಾದ ಮುಖವನ್ನು ಬಹಿರಂಗಪಡಿಸಿದೆ' ಎಂದು ಟೀಕಿಸಿದ್ದಾನೆ.

'ಎಲ್ಲರೂ ಇಸ್ಲಾಂನ ಶತ್ರುಗಳೇ. ಹಿಜಾಬ್‌ನ ಅವಹೇಳನ ಹಾಗೂ ಇಸ್ಲಾಮಿಕ್ ಶರಿಯಾ ಮೇಲೆ ಆಕ್ರಮಣವೇ ಅವರ ಉದ್ದೇಶ. ಇದು ಇಸ್ಲಾಂ ಹಾಗೂ ಅದರ ಸಿದ್ಧಾಂತಗಳು, ಕಾನೂನುಗಳು, ಸಂಪ್ರದಯಗಳು ಹಾಗೂ ಶಿಷ್ಟಾಚಾರಗಳ ಮೇಲಿನ ಯುದ್ಧ' ಎಂದೂ ಝುವಾಹಿರಿ ವಿಡಿಯೊದಲ್ಲಿ ಹೇಳಿದ್ದಾನೆ.

'ಬೆಂಗಳೂರು–ಕಲ್ಯಾಣ ಕರ್ನಾಟಕಕ್ಕೆ ಪ್ರತ್ಯೇಕ ಪ್ರಣಾಳಿಕೆ'

ಹಾಸನ: 'ಮುಂದಿನ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಬೆಂಗಳೂರು ನಗರ, ಮಲೆನಾಡು, ಕರಾವಳಿ, ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕ ಹಾಗೂ ಬಯಲು ಸೀಮೆ ಭಾಗಕ್ಕೆ ಪ್ರತ್ಯೇಕ ಪ್ರಣಾಳಿಕೆ ಬಿಡುಗಡೆ ಮಾಡಲಾಗುವುದು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದರು.

'ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ ಪ್ರಣಾಳಿಕೆಯಲ್ಲಿ ಕೊಟ್ಟ ಮಾತನ್ನು ಶೇ 90ರಷ್ಟು ಉಳಿಸಿಕೊಂಡಿದ್ದೇವೆ. ಪ್ರತ್ಯೇಕ ಪ್ರಣಾಳಿಕೆ ಬಿಡುಗಡೆ ಮಾಡಿ ಜನರನ್ನು ಆಕರ್ಷಿಸಿ, ಉದ್ಯೋಗ ಸೃಷ್ಟಿಗೆ ಕಾರ್ಯಕ್ರಮ ರೂಪಿಸುತ್ತೇವೆ' ಎಂದು ತಿಳಿಸಿದರು.

'ದೇವಸ್ಥಾನದ ಒಳಗೆ ಗಲಾಟೆಯಾಗಬಾರದು ಎಂದು ಕಾಂಗ್ರೆಸ್ ಸರ್ಕಾರ ರೂಪಿಸಿದ್ದ ಕಾಯ್ದೆಯನ್ನೇ ಮುಂದಿಟ್ಟು ಜಾತ್ರೆ, ಸಂತೆಗಳಲ್ಲಿ ಮುಸ್ಲಿಮರಿಗೆ ವ್ಯಾಪಾರ ನಿರ್ಬಂಧಿಸಿ ಅವರ ಹೊಟ್ಟೆ ಮೇಲೆ ಹೊಡೆಯಲು ಬಿಜೆಪಿ ಸರ್ಕಾರ ಮುಂದಾಗಿದೆ' ಎಂದು ದೂರಿದರು.

'ಮಾವು ಮಾರುಕಟ್ಟೆಯಲ್ಲಿ ಹಿಂದೂಗಳಿಗೆ ಅವಕಾಶ ನೀಡಬೇಕೆಂಬ ಅಭಿಯಾನ ಮಾಡುತ್ತಿದ್ದಾರೆ. ಬಿಜೆಪಿಯ ಅಜೆಂಡಾವೇ ರೈತರನ್ನು ಸಾಯಿಸೋದು. ಹಲಾಲ್, ಜಟ್ಕಾ ಕಟ್ ಎಂದು ಹೋರಾಟದಿಂದ ನಷ್ಟ ಆಗಿದ್ದು ರೈತರಿಗೆ. ಇದು ರೈತರು ಬದುಕಿದ್ದಾಗ ಕತ್ತು ಹಿಸುಕಿ ಸಾಯಿಸೋ ಪ್ರಯತ್ನ. ಅದರಿಂದ ಅಧಿಕಾರಕ್ಕೆ ಬರುತ್ತೇವೆ ಎಂದು ಬಿಜೆಪಿಯವರು ದಿನಕ್ಕೊಂದು ವಿಷಯ ಹಿಡಿದು ಹೊರಟಿದ್ದಾರೆ' ಎಂದು ವ್ಯಂಗ್ಯವಾಡಿದರು.

ದೊರೆಯದ ಅನುಮತಿ; ಆಕಾಂಕ್ಷಿಗಳಲ್ಲಿ ನಿರಾಸೆ

ಸಂಪುಟ: ಬಿಜೆಪಿ ವರಿಷ್ಠರ ನಿರಾಸಕ್ತಿ?

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯ ಸಚಿವ ಸಂಪುಟದ ವಿಸ್ತರಣೆ ಅಥವಾ ಪುನರ್ ರಚನೆ ಕುರಿತು ಒಪ್ಪಿಗೆ ಪಡೆಯುವ ನಿಟ್ಟಿನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬುಧವಾರ ರಾತ್ರಿ ಬಿಜೆಪಿ ವರಿಷ್ಠರೊಂದಿಗೆ ಚರ್ಚೆ ನಡೆಸಿದರಾದರೂ ಈ ಸಂಬಂಧ ಒಪ್ಪಿಗೆ ದೊರೆಯಲಿಲ್ಲ.

ಕೆಲವು ತಿಂಗಳುಗಳಿಂದ ನನೆಗುದಿಗೆ ಬಿದ್ದಿರುವ ಸಂಪುಟ ವಿಸ್ತರಣೆ ಅಥವಾ ಪುನರ್ ರಚನೆ ಪ್ರಸ್ತಾವಕ್ಕೆ ತೆರೆ ಬೀಳುವ ಸಾಧ್ಯತೆ ಸದ್ಯಕ್ಕೆ ಗೋಚರಿಸುತ್ತಿಲ್ಲ ಎಂದು ಪಕ್ಷದ ಉನ್ನತ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಪಕ್ಷದ ಕೇಂದ್ರ ಕಚೇರಿಯಲ್ಲಿ ರಾತ್ರಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರನ್ನು ಬೊಮ್ಮಾಯಿ ಭೇಟಿ ಮಾಡಿದರಾದರೂ, ಕೇವಲ 5 ನಿಮಿಷಗಳಲ್ಲಿ ಚರ್ಚೆ ಮುಕ್ತಾಯವಾಯಿತು. ಸಂಪುಟದ ಕುರಿತು ಇತರ ಮುಖಂಡರೊಂದಿಗೆ ಚರ್ಚೆ ನಡೆಸದ ಹೊರತು ಅನುಮತಿ ನೀಡಲು ಸಾಧ್ಯವಿಲ್ಲ ಎಂದು ನಡ್ಡಾ ತಿಳಿಸಿದ್ದಾಗಿ ಮೂಲಗಳು ಹೇಳಿವೆ.

ಏಪ್ರಿಲ್ 3ನೇ ವಾರ ಹೊಸಪೇಟೆಯಲ್ಲಿ ನಡೆಯಲಿರುವ ಪಕ್ಷದ ರಾಜ್ಯ ಕಾರ್ಯಕಾರಿಣಿ ಸಭೆಯ ನಂತರವೇ ಸಂಪುಟ ಕುರಿತು ತೀರ್ಮಾನ ಕೈಗೊಳ್ಳುವ ಸಾಧ್ಯತೆ ಇದೆ ಎನ್ನಲಾಗಿದೆ.

ಇದಾದ ನಂತರ ರಾತ್ರಿ 8.30ಕ್ಕೆ ಕೇಂದ್ರದ ಸಂಸದೀಯ ವ್ಯವಹಾರಗಳ ಖಾತೆ ಸಚಿವ ಪ್ರಲ್ಹಾದ ಜೋಶಿ ಅವರನ್ನು ಭೇಟಿ ಮಾಡಿದ ಬೊಮ್ಮಾಯಿ, ಅವರ ಮೂಲಕವೇ ಕೇಂದ್ರದ ಗೃಹ ಸಚಿವ ಅಮಿತ್ ಶಾ ಭೇಟಿಗೆ ನಡೆಸಿದ ಯತ್ನ ಫಲ ನೀಡಲಿಲ್ಲ.

ಆಕಾಂಕ್ಷಿಗಳ ಒತ್ತಡ: ಕಳೆದ ಎರಡು ದಿನಗಳಿಂದ ರಾಷ್ಟ್ರ ರಾಜಧಾನಿಯಲ್ಲಿನ ಖಾಸಗಿ ಹೋಟೆಲ್‌ಗಳಲ್ಲಿ ಬೀಡುಬಿಟ್ಟಿರುವ ಸಚಿವ ಸ್ಥಾನದ ಆಕಾಂಕ್ಷಿಗಳ ದಂಡು, ತಮ್ಮನ್ನು ಸಂಪುಟಕ್ಕೆ ಸೇರ್ಪಡೆ ಮಾಡಿಕೊಳ್ಳಬೇಕು ಎಂದು ವರಿಷ್ಠರ ಮೇಲೆ ಒತ್ತಡ ಹೇರುತ್ತಿದೆ.

ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ, ಶಾಸಕರಾದ ರಮೇಶ ಜಾರಕಿಹೊಳಿ, ಶ್ರೀಮಂತ ಪಾಟೀಲ, ಆರ್.ಶಂಕರ್, ಅರವಿಂದ ಬೆಲ್ಲದ್, ಬಸನಗೌಡ ಪಾಟೀಲ ಯತ್ನಾಳ, ಎಂ.ಪಿ. ರೇಣುಕಾಚಾರ್ಯ, ಶಿವನಗೌಡ ನಾಯಕ್, ರಾಜು ಗೌಡ ಮತ್ತಿತರರು ದೆಹಲಿಗೆ ದೌಡಾಯಿಸಿದ್ದು, ಪಕ್ಷದ ಮುಖಂಡರನ್ನು ಭೇಟಿ ಮಾಡಿ ಸಚಿವ ಸ್ಥಾನಕ್ಕೆ ಬೇಡಿಕೆ ಸಲ್ಲಿಸಿದ್ದಾರೆ.

ರಾಜ್ಯ ವಿಧಾನಸಭೆ ಚುನಾವಣೆಗೆ ಇನ್ನು ಒಂದು ವರ್ಷ ಮಾತ್ರ ಬಾಕಿ ಇದ್ದು, ಕೂಡಲೇ ಸಂಪುಟವನ್ನು ವಿಸ್ತರಿಸಬೇಕು, ಇಲ್ಲವೇ ಪುನರ್ ರಚಿಸುವ ಮೂಲಕ ಅವಕಾಶ ನೀಡಬೇಕು ಎಂದು ಅವರು ಒತ್ತಾಯಿಸುತ್ತಿದ್ದಾರೆ.

ರಥೋತ್ಸವ ಯಾದಗಿರಿ ಜಿಲ್ಲೆಯ ಶಹಾಪುರ ನಗರದ ಚರಬಸವೇಶ್ವರ ಗದ್ದುಗೆ ಜಾತ್ರೆಯ ಶತಮಾನೋತ್ಸವ ಅಂಗವಾಗಿ ಬುಧವಾರ ಭವ್ಯ ರಥೋತ್ಸವ ಜರುಗಿತು– ಪ್ರಜಾವಾಣಿ ಚಿತ್ರ

ಸಂಸತ್: ಅಪರಾಧ ಪ್ರಕ್ರಿಯಾ ಮಸೂದೆ ಅಂಗೀಕಾರ

ನವದೆಹಲಿ (ಪಿಟಿಐ): 'ಅಪರಾಧ ಪ್ರಕ್ರಿಯಾ (ಗುರುತಿಸುವಿಕೆ) ಮಸೂದೆ –2022'ಅನ್ನು ಸಂಸತ್‌ನಲ್ಲಿ ಬುಧವಾರ ಅಂಗೀಕರಿಸಲಾಯಿತು.

ರಾಜ್ಯಸಭೆಯಲ್ಲಿ ಮಾತನಾಡಿದ ಗೃಹ ಸಚಿವ ಅಮಿತ್ ಶಾ, ಪೊಲೀಸ್ ವಶದಲ್ಲಿರುವ ರಾಜಕೀಯ ವ್ಯಕ್ತಿಗಳ ಜೈವಿಕ ಮಾದರಿಗಳನ್ನು ಸಂಗ್ರಹಿಸುವುದಿಲ್ಲ, ಬ್ರೇನ್ ಮ್ಯಾಪಿಂಗ್ ಹಾಗೂ ಪಾಲಿಗ್ರಾಫ್ ಪರೀಕ್ಷೆಗಳನ್ನು ಪ್ರಸ್ತಾವಿತ ಈ ಕಾಯ್ದೆಯ ವ್ಯಾಪ್ತಿಯಿಂದ ಹೊರಗಿಡಲಾಗುವುದು ಎಂದು ಭರವಸೆ ನೀಡಿದರು.

ನಂತರ, ಧ್ವನಿಮತದ ಮೂಲಕ ಮಸೂದೆಯನ್ನು ಅಂಗೀಕರಿಸಲಾಯಿತು. ಲೋಕಸಭೆಯಲ್ಲಿ ಮಸೂದೆಯನ್ನು ಸೋಮವಾರ ಅಂಗೀಕರಿಸಲಾಗಿದೆ.

ಸುದ್ದಿ 2 ನಿಮಿಷ

ಹೊರಟ್ಟಿ ಮಾತಿನಲ್ಲಿ ಹುರುಳಿಲ್ಲ; ನಾನೇ ಅಭ್ಯರ್ಥಿ

ಹುಬ್ಬಳ್ಳಿ: 'ವಿಧಾನ ಪರಿಷತ್‌ನ ಪಶ್ಚಿಮ ಶಿಕ್ಷಕರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ತಾನೇ ಎಂದು ಹೇಳಿರುವ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರ ಮಾತಿನಲ್ಲಿ ಹುರುಳಿಲ್ಲ. ನಾನೇ ಪಕ್ಷದ ಅಭ್ಯರ್ಥಿಯಾಗಿದ್ದು, ಪಕ್ಷದ ಮುಖಂಡರು ಇದಕ್ಕೆ ಹಸಿರು ನಿಶಾನೆ ತೋರಿಸಿದ್ದಾರೆ. ಅಧಿಕೃತ ಘೋಷಣೆಯಷ್ಟೇ ಬಾಕಿ ಇದೆ' ಎಂದು ಟಿಕೆಟ್ ಆಕಾಂಕ್ಷಿ ಮೋಹನ ಲಿಂಬಿಕಾಯಿ ಹೇಳಿದರು.

'ಮೂರು ತಿಂಗಳ ಹಿಂದೆ ನಡೆದ ಧಾರವಾಡ, ಹಾವೇರಿ, ಗದಗ ಹಾಗೂ ಉತ್ತರ ಕನ್ನಡ ಜಿಲ್ಲೆಯ ಕಾರ್ಯಕಾರಿಣಿಯಲ್ಲಿ ನನ್ನದೂ ಸೇರಿದಂತೆ, ಸಂದೀಪ ಬೂದಿಹಾಳ ಮತ್ತು ಸುಧೀರ ದೇಶಪಾಂಡೆ ಅವರ ಹೆಸರು ಪ್ರಸ್ತಾಪವಾಗಿತ್ತು. ಶಾಸಕ ಜಗದೀಶ ಶೆಟ್ಟರ್, ಪಕ್ಷದ ಮುಖಂಡ ಅರುಣ್‌ಕುಮಾರ್ ಸಹ ಅಲ್ಲಿದ್ದರು. ಅಂತಿಮವಾಗಿ ನನ್ನ ಹೆಸರು ಶಿಫಾರಸು ಮಾಡಲಾಯಿತು. ಆದರೆ ಈಗ ಹೊರಟ್ಟಿ ಅವರು ನಾನೇ ಬಿಜೆಪಿ ಅಭ್ಯರ್ಥಿ ಎನ್ನುತ್ತ ಮತದಾರರಲ್ಲಿ ಗೊಂದಲ ಸೃಷ್ಟಿಸುತ್ತಿದ್ದಾರೆ' ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ಅಸಮಾಧಾನ ವ್ಯಕ್ತಪಡಿಸಿದರು.

'ಹೊರಟ್ಟಿ ಅವರನ್ನು ಪಕ್ಷಕ್ಕೆ ಯಾರೂ ಆಹ್ವಾನಿಸಿಲ್ಲ. ಬಿಜೆಪಿ ಅಭ್ಯರ್ಥಿಯಾಗುವುದಾಗಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರೊಂದಿಗೆ ಮಾತನಾಡಿರುವುದಾಗಿ ಅವರು ಸುಳ್ಳು ಹೇಳುತ್ತಿದ್ದಾರೆ. ದೀರ್ಘಕಾಲ ಜೆಡಿಎಸ್‌ನಲ್ಲಿದ್ದರೂ ಈ ಭಾಗದಲ್ಲಿ ಅವರು ತಮ್ಮ ಪಕ್ಷ ಸಂಘಟಿಸಲಿಲ್ಲ. ಹಾಗಾಗಿ, ಜೆಡಿಎಸ್‌ನಿಂದ ಸ್ಪರ್ಧಿಸಿದರೆ ಸೋಲು ಖಚಿತ ಎಂಬ ಭಯದಿಂದ ಈ ರೀತಿ ಗೊಂದಲದ ಹೇಳಿಕೆ ನೀಡಿದ್ದಾರೆ' ಎಂದರು.

6 ತಿಂಗಳು ಮೊದಲೇ ಅಭ್ಯರ್ಥಿ ಘೋಷಣೆಗೆ ಚಿಂತನೆ

ಬಾಗಲಕೋಟೆ: '2023ರ ಚುನಾವಣೆಗೆ ಆರು ತಿಂಗಳು ಮೊದಲೇ ಕಾಂಗ್ರೆಸ್ ಅಭ್ಯರ್ಥಿಗಳ ಘೋಷಣೆ ಮಾಡುವ ಬಗ್ಗೆ ನಾವು ಚಿಂತನೆ ನಡೆಸಿದ್ದೇವೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಬಾದಾಮಿ ತಾಲ್ಲೂಕಿನ ಆಲೂರ ಎಸ್.ಕೆ. ಗ್ರಾಮದಲ್ಲಿ ಬುಧವಾರ ಸುದ್ದಿಗಾರರ ಪ್ರಶ್ನೆಗೆ ಮೇಲಿನಂತೆ ಪ್ರತಿಕ್ರಿಯಿಸಿದ ಅವರು, ರಾಜ್ಯದಲ್ಲಿ ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ. ನಾವು ಜನರಿಗೆ ಕೊಟ್ಟ ಭರವಸೆಯನ್ನು ಈಡೇರಿಸಲಿದ್ದೇವೆ ಎಂದರು.

ಈ ಬಾರಿಯೂ ಬಾದಾಮಿ ಕ್ಷೇತ್ರದಿಂದಲೇ ಸ್ಪರ್ಧೆ ಮಾಡುವಂತೆ ಗ್ರಾಮಸ್ಥರು ಸಿದ್ದರಾಮಯ್ಯ ಅವರಿಗೆ ಇದೇ ವೇಳೆ ಮನವಿ ಮಾಡಿದರು.

ನಾವು ನೆಮ್ಮದಿಯಿಂದ ಇದ್ದೇವೆ: ಮುಸ್ಕಾನ್ ತಂದೆ ಪ್ರತಿಕ್ರಿಯೆ

'ಬೇರೆ ದೇಶದವರ ಹೊಗಳಿಕೆ ಬೇಕಾಗಿಲ್ಲ'

ಪ್ರಜಾವಾಣಿ ವಾರ್ತೆ

ಮಂಡ್ಯ: 'ಬೇರೆ ದೇಶದವರ ಹೊಗಳಿಕೆ ನಮಗೆ ಬೇಕಾಗಿಲ್ಲ, ಅವರ ದೇಶವನ್ನು ಅವರು ನೋಡಿಕೊಳ್ಳಲಿ. ನಮ್ಮ ದೇಶದಲ್ಲಿ ನಾವು ನೆಮ್ಮದಿಯಿಂದ ಇದ್ದೇವೆ, ಅಣ್ಣ–ತಮ್ಮಂದಿರ ರೀತಿಯಲ್ಲಿ ಪ್ರೀತಿ ಹಂಚಿ ಜೀವನ ಮಾಡುತ್ತಿದ್ದೇವೆ' ಎಂದು ಬೀಬಿ ಮುಸ್ಕಾನ್ ಖಾನ್ ಅವರ ತಂದೆ ಮೊಹಮ್ಮದ್ ಹುಸೇನ್ ಖಾನ್ ಹೇಳಿದರು.

ನಗರದ ಪಿಇಎಸ್ ಕಾಲೇಜು ಆವರಣದಲ್ಲಿ 'ಅಲ್ಲಾ ಹು ಅಕ್ಬರ್' ಘೋಷಣೆ ಕೂಗಿದ ಬೀಬಿ ಮುಸ್ಕಾನ್ ಖಾನ್ ಅವರನ್ನು ಅಲ್‌ಕೈದಾ ಉಗ್ರ ಸಂಘಟನೆ ಮುಖ್ಯಸ್ಥ ಅಲ್ ಝುವಾಹಿರಿ ಹೊಗಳಿರುವುದು ವಿವಾದಕ್ಕೆ ಕಾರಣವಾಗಿದ್ದು, ಈ ಕುರಿತು ಅವರು ಬುಧವಾರ 'ಪ್ರಜಾವಾಣಿ'ಗೆ ಪ್ರತಿಕ್ರಿಯೆ ನೀಡಿದರು.

'ವ್ಯಕ್ತಿಯು ಅರಬ್ಬೀ ಭಾಷೆಯಲ್ಲಿ ಮಗಳನ್ನು ಹೊಗಳಿದ್ದಾನೆಂಬುದು ಮಾಧ್ಯಮಗಳಿಂದ ಗೊತ್ತಾಗಿದೆ. ಆತನ ಹಿನ್ನೆಲೆ ಗೊತ್ತಿಲ್ಲದಿರುವುದರಿಂದ ಹೆಚ್ಚಿಗೆ ಮಾತನಾಡುವುದಿಲ್ಲ. ಹಿಜಾಬ್ ಹಿಂದೆ ಉಗ್ರ ಸಂಘಟನೆಗಳ ಕೈವಾಡ ಇರುವ ಬಗ್ಗೆಯೂ ಗೊತ್ತಿಲ್ಲ. ಬೇರೆ ದೇಶದವರ ಹೇಳಿಕೆಗಳಿಗೆ ತಲೆ ಕೊಡಲು ಆಗುತ್ತಾ?' ಎಂದರು.

'ಹಿಜಾಬ್ ಧರಿಸಲು ಅವಕಾಶ ನೀಡುವ ಪದವಿ ಕಾಲೇಜಿಗೇ ಮಗಳನ್ನು ಸೇರಿಸುವೆ. ರಂಜಾನ್ ಮಾಸದಲ್ಲಿ ಕುಟುಂಬ ಸದಸ್ಯರೊಂದಿಗೆ ಉಮ್ರಾ ಆಚರಣೆಗಾಗಿ ಮೆಕ್ಕಾಗೆ ತೆರಳಲಿದ್ದೇವೆ. ಮಕ್ಕಳಿಗೂ ಪಾಸ್‌ಪೋರ್ಟ್ ಬಂದಿದೆ' ಎಂದರು.

'ಹಿಜಾಬ್: ಕಾಣದ ಕೈಗಳಿಗೆ ಸಾಕ್ಷಿ'

ಬೆಂಗಳೂರು: 'ಹಿಜಾಬ್ ವಿವಾದದ ಹಿಂದೆ ಕಾಣದ ಕೈಗಳು ಇರುವುದಕ್ಕೆ ಅಲ್‌ಕೈದಾ ಉಗ್ರ ಸಂಘಟನೆಯ ಮುಖ್ಯಸ್ಥನ ಹೇಳಿಕೆಯೇ ಸಾಕ್ಷಿ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಬುಧವಾರ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಅಲ್‌ಕೈದಾ ಮುಖ್ಯಸ್ಥ ಅಯ್ಮನ್ ಅಲ್ ಜವಾಹಿರಿ ಮಂಡ್ಯದ ವಿದ್ಯಾರ್ಥಿನಿ ಮುಸ್ಕಾನ್ ಖಾನ್‌ರನ್ನು ಬೆಂಬಲಿಸಿ ಹೇಳಿಕೆ ನೀಡಿರುವುದು, ಈ ವಿವಾದದಲ್ಲಿ ಕಾಣದ ಕೈಗಳು ಇರುವುದನ್ನು ಸಾಬೀತು ಮಾಡಿದೆ' ಎಂದರು.

'ಹಿಜಾಬ್ ವಿದ್ಯಾರ್ಥಿನಿಯರ ವಿರುದ್ಧ ತನಿಖೆಯಾಗಲಿ'

ಉಡುಪಿ: 'ಹಿಜಾಬ್ ಪರ ಹೋರಾಟ ನಡೆಸಿದ್ದ ಆರು ಮುಸ್ಲಿಂ ವಿದ್ಯಾರ್ಥಿನಿಯರು ಭಯೋತ್ಪಾದಕ ಸಂಘಟನೆಯ ಸದಸ್ಯರು ಎಂಬುದು, ಅಲ್‌ಕೈದಾ ಸಂಘಟನೆಯ ಮುಖ್ಯಸ್ಥ ಅಲ್ ಜವಾಹಿರಿಯು ಹಿಜಾಬ್ ಪರವಾಗಿ ನೀಡಿರುವ ಹೇಳಿಕೆಯಿಂದ ಸಾಬೀತಾಗಿದೆ' ಎಂದು ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಯಶ್‌ಪಾಲ್ ಸುವರ್ಣ ಆರೋಪಿಸಿದ್ದಾರೆ.

ಬುಧವಾರ ನಿವಾಸದಲ್ಲಿ ಮಾತನಾಡಿದ ಅವರು, ಹಿಜಾಬ್ ವಿವಾದದ ಹಿಂದೆ ದೇಶದ್ರೋಹಿ ಸಂಘಟನೆಯ ಕೈವಾಡ ಇರುವ ಬಗ್ಗೆ ಶಂಕೆ ಇತ್ತು. ಇದೀಗ ಭಯೋತ್ಪಾದಕನ ಹೇಳಿಕೆಯಿಂದ ಅದು ದೃಢವಾಗಿದೆ. ಹಿಜಾಬ್ ಗೊಂದಲ ಹುಟ್ಟುಹಾಕಿದ ಉಡುಪಿಯ ಆರು ವಿದ್ಯಾರ್ಥಿನಿಯರು ಹಾಗೂ ಅವರ ಪೋಷಕರ ವಿರುದ್ಧ ಎನ್‌ಐಎ ತನಿಖೆಯಾಗಬೇಕು ಎಂದು ಒತ್ತಾಯಿಸಿದರು.

ಮಂಡ್ಯದಲ್ಲಿ ಅಲ್ಲಾಹು ಅಕ್ಬರ್ ಘೋಷಣೆ ಕೂಗಿದ ವಿದ್ಯಾರ್ಥಿನಿ ಮುಸ್ಕಾನ್‌ಗೆ ಬಹುಮಾನ ಕೊಟ್ಟವರ ವಿರುದ್ಧವೂ ಎನ್‌ಐಎ ತನಿಖೆ ನಡೆಯಬೇಕು. ಭಯೋತ್ಪಾದನಾ ಸಂಘಟನೆಗಳ ಜತೆಗಿನ ನಂಟು ಬಹಿರಂಗವಾಗಬೇಕು ಎಂದರು.

ದಿಟ್ಟ ಸಿಎಂ, ಗೃಹಸಚಿವರು ಬೇಕು: ರಾಜ್ಯಕ್ಕೆ ದಿಟ್ಟ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯವಿರುವ ಮುಖ್ಯಮಂತ್ರಿ ಹಾಗೂ ಗೃಹ ಸಚಿವರ ಅವಶ್ಯಕತೆ ಇದೆ. ಅಭಿವೃದ್ಧಿ ಜತೆಗೆ ಹಿಂದುತ್ವವನ್ನು ರಕ್ಷಿಸುವ ಹಾಗೂ ಮೀನಮೇಷ ಎಣಿಸದೆ, ಮುಹೂರ್ತ– ಗಳಿಗೆ ನೋಡದೆ ನಿರ್ಧಾರ ತೆಗೆದುಕೊಳ್ಳುವ ನಾಯಕರು ಬೇಕು ಎಂದು ಯಶ್‌ಪಾಲ್ ಸುವರ್ಣ ಅಭಿಪ್ರಾಯಪಟ್ಟರು.

ಹಿಜಾಬ್ ಹೋರಾಟಕ್ಕೆ ಸಹಕಾರ ನೀಡುತ್ತಿರುವ ಎಸ್‌ಡಿಪಿಐ, ಪಿಎಫ್‌ಐ, ಸಿಎಫ್‌ಐ ಸಂಘಟನೆಗಳನ್ನು ಬೇರುಸಹಿತ ಕಿತ್ತೊಗೆಯಬೇಕು. ಇಲ್ಲವಾದರೆ, ದೇಶ ಮುಂದೆ ಸಮಸ್ಯೆ ಎದುರಿಸಬೇಕಾಗುತ್ತದೆ ಎಂದರು.

ಬಹು ಮಾಧ್ಯಮ ಪ್ರಜಾವಾಣಿ www.prajavani.net LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ವಿಶ್ವ ಆರೋಗ್ಯ ದಿನಾಚರಣೆ
ಬನ್ನಿ, ಆರೋಗ್ಯದ ಬಗ್ಗೆ ಮಾಹಿತಿ ತಿಳಿಯಿರಿ
ವೈದ್ಯರೊಂದಿಗೆ ಮಾತುಕತೆ
ಆರೋಗ್ಯ ಸಂಬಂಧಿತ ಸಂಶಯಗಳಿಗೆ ಉತ್ತರಿಸಲಿದ್ದಾರೆ ಬೆಂಗಳೂರು ಫೋರ್ಟಿಸ್ ಆಸ್ಪತ್ರೆಯ ತಜ್ಞ ವೈದ್ಯ ಡಾ.ಆದಿತ್ಯ ಎಸ್. ಚೌತಿ
ಮಾತುಕತೆ ಸಂಜೆ 4 ಗಂಟೆಗೆ

ಮಿಸಳ್ ಹಾಪ್ಚಾ
ದೇವರ ಕಾರು ಈ ತೇರು
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8
ಪ್ರಜಾವಾಣಿ ಕನ್ನಡ ಧ್ವನಿ

ಸಚಿವ ಜ್ಞಾನೇಂದ್ರ ಯಡವಟ್ಟು

ಒಂದನೇ ಪುಟದಿಂದ...

ಅದರ ಪ್ರಕಾರ ಎರಡು ವಾಹನಗಳ ನಡುವೆ ಡಿಕ್ಕಿ ಆಗಿದೆ. ಇದರಿಂದ ವಾಗ್ವಾದ ನಡೆದು, ಚಂದ್ರುವಿನ ತೊಡೆಗೆ ಚೂರಿಯಿಂದ ಇರಿಯಲಾಗಿದೆ. ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗಲೇ ತೀರಿಕೊಂಡಿದ್ದಾನೆ. ನಾನು ಮೊದಲು ಮಾತನಾಡುವ ಸಂದರ್ಭದಲ್ಲಿ ಭಾಷೆಯ ಬಗ್ಗೆ ಮಾತುಗಳನ್ನು ಆಡಿದ್ದೆ. ಆ ರೀತಿ ಏನೂ ಇಲ್ಲ. ಬೆಳಿಗ್ಗೆ ಆ ಕ್ಷಣದಲ್ಲಿ ಸಿಕ್ಕಿದ ಮೂಲಗಳ ಮಾಹಿತಿಯಿಂದ ಹೇಳಿದೆ. ಅದು ತಪ್ಪಾಗಿದೆ. ಈಗ ಪೂರ್ಣ ಮಾಹಿತಿ ತರಿಸಿಕೊಂಡು ಹೇಳಿದ್ದೇನೆ'.

ಬಲ್ಲ ಮೂಲಗಳಿಂದ ಮಾಹಿತಿ ಬಂದಿತ್ತು, ಎಂದಿದ್ದಾರೆ. ಹಾಗಾದರೆ, ಆ ಬಲ್ಲ ಮೂಲ ಯಾವುದು ಗೃಹ ಸಚಿವರೇ? ಕೇಶವ ಕೃಪವೋ? ನಾಗಪುರವೋ
ಬಿ.ಕೆ.ಹರಿಪ್ರಸಾದ್, ವಿಧಾನಪರಿಷತ್ತಿನ ವಿರೋಧ ಪಕ್ಷದ ನಾಯಕ

ಇಂಥ ಸಂದರ್ಭದಲ್ಲಿ ಗೃಹ ಸಚಿವರು ನೀಡುವ ಹೇಳಿಕೆಯೇ ಅಂತಿಮ. ಹೀಗಾಗಿ, ಡಿಜಿಪಿ ಬರೆದು ಕೊಟ್ಟಿದ್ದನ್ನು ಅವರು ಹೇಳಬೇಕು. ಆದರೆ, ಇದು ಅಪ್ರಬುದ್ಧ ಹೇಳಿಕೆ
ಭಾಸ್ಕರ್ ರಾವ್, ನಿವೃತ್ತ ಎಡಿಜಿಪಿ, ಎಎಪಿ ಮುಖಂಡ

'ಮೇಕೆದಾಟು ಯೋಜನೆ ತಡೆಗೆ ಬದ್ಧ'

ಚೆನ್ನೈ: ಮೇಕೆದಾಟುವಿನಲ್ಲಿ ಕಾವೇರಿ ನದಿಗೆ ಅಣೆಕಟ್ಟು ನಿರ್ಮಾಣ ಮಾಡಲು ಕರ್ನಾಟಕ ಮುಂದಾದರೆ ಅದು ಕಾವೇರಿ ನದಿ ನೀರು ನ್ಯಾಯ ಮಂಡಳಿ ಮತ್ತು ಸುಪ್ರೀಂ ಕೋರ್ಟ್ ನೀಡಿರುವ ಆದೇಶದ ಉಲ್ಲಂಘನೆ ಆಗಲಿದೆ ಎಂದು ತಮಿಳುನಾಡು ಬುಧವಾರ ಹೇಳಿದೆ.

ಕರ್ನಾಟಕವು ಈ ಯೋಜನೆಯನ್ನು ಕಾರ್ಯರೂಪಕ್ಕೆ ತರದಂತೆ ತಡೆಯಲು ಅಗತ್ಯ ಕ್ರಮಗಳನ್ನು ತಮಿಳುನಾಡು ಸರ್ಕಾರವು ತೆಗೆದುಕೊಳ್ಳುತ್ತಿದೆ ಎಂದು ಅದು ಪುನರುಚ್ಚರಿಸಿದೆ.

ಈ ಕುರಿತು ಸದನದಲ್ಲಿ ಮಾತನಾಡಿದ ರಾಜ್ಯ ಜಲ ಸಂಪನ್ಮೂಲ ಸಚಿವ ದೊರೆ ಮುರುಗನ್, ಅಂತರರಾಜ್ಯ ನದಿ ನೀರು ವಿವಾದದಲ್ಲಿ ತಮಿಳುನಾಡಿನ ಹಕ್ಕುಗಳಿಗಾಗಿ ಡಿಎಂಕೆ ಸರ್ಕಾರ ಹೋರಾಡಲಿದೆ. ಅಣೆಕಟ್ಟು ನಿರ್ಮಾಣ ತಡೆಯಲು ಸರ್ಕಾರ ಬದ್ಧವಾಗಿದೆ ಎಂದು ರಾಜ್ಯದ ಜನರಿಗೆ ಆಶ್ವಾಸನೆ ನೀಡಿದ್ದಾರೆ.

'ಕಾಶ್ಮೀರಿ ವಲಸಿಗರಿಗೆ ಆಸ್ತಿ ವಾಪಸ್'

ನವದೆಹಲಿ (ಪಿಟಿಐ) ಕಾಶ್ಮೀರದಿಂದ ವಲಸೆ ಹೋದವರಿಗೆ ಅವರ ಅಸ್ತಿಗಳನ್ನು ಹಿಂದಿರುಗಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತಿದ್ದು, ಈಗಾಗಲೇ 610 ಮಂದಿಗೆ ಆಸ್ತಿಯನ್ನು ವಾಪಸ್ ನೀಡಲಾಗಿದೆ ಎಂದು ಕೇಂದ್ರ ಗೃಹ ವ್ಯವಹಾರಗಳ ರಾಜ್ಯ ಸಚಿವ ನಿತ್ಯಾನಂದ ರಾಯ್ ಬುಧವಾರ ರಾಜ್ಯಸಭೆಯಲ್ಲಿ ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಉತ್ತರಿಸಿದಸಚಿವರು,ವಲಸಿಗರಆಸ್ತಿಗಳಪಾಲಕರಾಗಿ ಜಿಲ್ಲಾಧಿಕಾರಿಗಳನ್ನು ನೇಮಿಸಲಾಗಿದ್ದು, ವಲಸಿಗರ ದೂರುಗಳನ್ನು ಪರಿಹರಿಸಲುಸರ್ಕಾರಪೋರ್ಟಲ್‌ಅನ್ನೂಪ್ರಾರಂಭಿಸಿದೆ ಎಂದು ಮಾಹಿತಿ ನೀಡಿದರು.

'ಸರ್ಕಾರ ವಲಸಿಗ ಕಾಶ್ಮೀರಿಗಳಿಗೆ ಆಸ್ತಿಯನ್ನು ಹಿಂದಿರುಗಿಸಲು ಸಮರ್ಥವಾಗಿದೆ. ಈ ನಿಟ್ಟಿನಲ್ಲಿ ನಿರಂತರ ಪ್ರಯತ್ನಗಳೂ ನಡೆಯುತ್ತಿವೆ' ಎಂದರು.

ವಲಸಿಗರ ದೂರು ನೈಜವಾಗಿದ್ದರೆ, ಅವರ ಆಸ್ತಿ ಹಿಂತಿರುಗಿಸಲಾಗುತ್ತದೆ. ಇಲ್ಲಿಯವರೆಗೆ, 610 ಅರ್ಜಿದಾರರ ಆಸ್ತಿಯನ್ನು ಹಿಂದಿರುಗಿಸಲಾಗಿದೆ ಎಂದರು.

ಸಮಗ್ರ ದೃಷ್ಟಿಕೋನ ಅಗತ್ಯ: 'ಸುಪ್ರೀಂ'

ನವದೆಹಲಿ: ಯಾವುದೇ ಯೋಜನೆ ಅಥವಾ ಕಾನೂನನ್ನು ಜಾರಿಗೊಳಿಸುವ ಮುನ್ನ ಹಣಕಾಸು ಸ್ಥಿತಿ ಸೇರಿದಂತೆ ಒಟ್ಟಾರೆ ಪರಿಣಾಮದ ಬಗ್ಗೆ ಸಮಗ್ರವಾಗಿ ಅವಲೋಕಿಸಬೇಕು. ಇಲ್ಲದೇ ಹೋದರೆ ಅವುಗಳು ನಿರೀಕ್ಷಿತ ಫಲ ನೀಡದೇ, ಕೇವಲ ಬಾಯಿ ಮಾತಿಗೆ ಎಂಬಂತಾಗುತ್ತವೆ ಎಂದು ಕೇಂದ್ರ ಸರ್ಕಾರಕ್ಕೆ ಸುಪ್ರೀಂಕೋರ್ಟ್ ಬುಧವಾರ ಹೇಳಿತು.

ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ರಕ್ಷಣೆ ಕಾಯ್ದೆಗೆ ಸಂಬಂಧಿಸಿದ ಅರ್ಜಿಯ ವಿಚಾರಣೆ ವೇಳೆ ನ್ಯಾಯಮೂರ್ತಿ ಯು.ಯು.ಲಲಿತ್ ನೇತೃತ್ವದ ಮೂವರು ಸದಸ್ಯರಿದ್ದ ನ್ಯಾಯಪೀಠ ಈ ಮಾತುಗಳನ್ನು ಹೇಳಿತು.

ಶಿಕ್ಷಣ ಹಕ್ಕು ಕಾಯ್ದೆಯನ್ನು ನ್ಯಾಯಪೀಠ ಪ್ರಸ್ತಾಪಿಸಿತು. ಯಾವುದೇ ಯೋಜನೆಯನ್ನು ಜಾರಿಗೊಳಿಸಿದಾಗ ಹಣಕಾಸಿನ ಮೇಲೆ ಆಗುವ ಪರಿಣಾಮದ ಬಗ್ಗೆ ಗಮನ ಹರಿಸಬೇಕು. ಇದಕ್ಕೆ ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ ಅತ್ಯುತ್ತಮ ಉದಾಹರಣೆ ಎಂದಿತು.

ಚರ್ಚೆಗೆ ಅವಕಾಶ ನಿರಾಕರಿಸಿದ ಸಭಾಪತಿ ಎಂ.ವೆಂಕಯ್ಯ ನಾಯ್ಡು

ಅಲ್ಪಸಂಖ್ಯಾತರ ವಿರುದ್ಧ ದ್ವೇಷ ಭಾಷಣ ರಾಜ್ಯಸಭೆಯಲ್ಲಿ ಕಾಂಗ್ರೆಸ್ ಪ್ರಸ್ತಾಪ

ನವದೆಹಲಿ (ಪಿಟಿಐ): ದೇಶದಲ್ಲಿ ಅಲ್ಪಸಂಖ್ಯಾತರ ವಿರುದ್ಧ ದ್ವೇಷಪೂರಿತ ಭಾಷಣಗಳನ್ನು ಮಾಡುವುದು ಹೆಚ್ಚುತ್ತಿದೆ ಎಂದು ರಾಜ್ಯಸಭೆಯಲ್ಲಿ ಕಾಂಗ್ರೆಸ್ ಸದಸ್ಯರು ಬುಧವಾರ ಹೇಳಿದರು.

ಎಂ.ವೆಂಕಯ್ಯ ನಾಯ್ಡು

ಶಸ್ತ್ರಾಸ್ತ್ರಗಳನ್ನು ಕೈಗೆತ್ತಿಕೊಳ್ಳುವಂತೆ ವಿವಾದಾತ್ಮಕ ಸಂತ ಯತಿ ನರಸಿಂಗಾನಂದ ಅವರು ಹಿಂದೂಗಳಿಗೆ ಕರೆ ನೀಡುತ್ತಿರುವುದು ಕಳವಳಕಾರಿ ಎಂದೂ ಕಾಂಗ್ರೆಸ್ ಸದಸ್ಯರು ಹೇಳಿದರು.

ಆದರೆ, ನಿಯಮ 267ರಡಿ ಈ ವಿಷಯವನ್ನು ಪ್ರಸ್ತಾಪಿಸಲು ಸಭಾಪತಿ ಎಂ.ವೆಂಕಯ್ಯ ನಾಯ್ಡು ಅವರು ವಿರೋಧ ಪಕ್ಷಗಳ ಸದಸ್ಯರಿಗೆ ಅವಕಾಶ ನಿರಾಕರಿಸಿದರು. ನಿರ್ದಿಷ್ಟ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರ ಹತ್ಯೆಗೆ ಯತಿ ನರಸಿಂಗಾನಂದ ಕರೆ ನೀಡಿದ್ದಾರೆ ಎನ್ನಲಾದ ಭಾಷಣದ ಬಗ್ಗೆ ವಿರೋಧ ಪಕ್ಷಗಳು ಪ್ರಸ್ತಾಪಿಸಿದ್ದು, ಆ ಅಂಶಗಳನ್ನು ಕಡತದಿಂದ ತೆಗೆದು ಹಾಕುವಂತೆಯೂ ಅವರು ಆದೇಶಿಸಿದರು.

'ನಿಗದಿತ ಕಲಾಪದ ಬದಲಾಗಿ, ನಿಯಮ 267ರಡಿ ಈ ವಿಷಯ ಕುರಿತು ಪ್ರಸ್ತಾಪಿಸಲು ಅವಕಾಶ ನೀಡಬೇಕು' ಎಂದು ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಅಲ್ಪಸಂಖ್ಯಾತರ ವಿರುದ್ಧದ ದ್ವೇಷ ಭಾಷಣ, ಕೆಲ ಆನ್‌ಲೈನ್ ಮಾಧ್ಯಮಗಳ ಪತ್ರಕರ್ತರಿಗೆ ಕಿರುಕುಳ ನೀಡಲಾಗುತ್ತಿದೆ ಎಂಬ ಆರೋಪಗಳ ಬಗ್ಗೆ ಸದನದಲ್ಲಿ ಪ್ರಸ್ತಾಪಿಸಲು ಅವಕಾಶ ನೀಡುವಂತೆಯೂ ಅವರು ನೋಟಿಸ್ ನೀಡಿದ್ದರು.

ಈ ಮನವಿಯನ್ನು ತಿರಸ್ಕರಿಸಿದ ಸಭಾಪತಿ ವೆಂಕಯ್ಯ ನಾಯ್ಡು ಅವರು, 'ಯಾವುದೇ ಸಮುದಾಯದ ಹೆಸರು ಸಹ ಕಡತಕ್ಕೆ ಹೋಗುವುದಿಲ್ಲ. ವ್ಯಕ್ತಿಯೊಬ್ಬ ಅರ್ಥಹೀನ ಪದ ಬಳಸಿ ಮಾತನಾಡಿದ್ದರೆ, ಅದನ್ನು ಇಲ್ಲಿ ಹೇಳಬಾರದು. ಅದನ್ನೇ ಸದನದಲ್ಲಿ ಮತ್ತೆ ಪ್ರಸ್ತಾಪಿಸಿ ಚರ್ಚಿಸುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಹೀಗಾಗಿ ಇದಕ್ಕೆ ಅವಕಾಶ ನೀಡಿಲ್ಲ' ಎಂದರು.

ಖರ್ಗೆ ಅವರಲ್ಲದೇ, ಟಿಎಂಸಿಯ ಸುಷ್ಮಿತಾ ದೇವ್, ಲಿಜಿನ್ಹೊ ಫೆಲಿರೊ ಹಾಗೂ ಮೊಹ್ಮದ್ ನದಿಮುಲ್ ಹಕ್ ಅವರು ಸಹ ಈ ಕುರಿತು ಮಾತನಾಡಲು ಅವಕಾಶ ಕೋರಿ ನೋಟಿಸ್ ನೀಡಿದ್ದರು.

ರಾವುತ್ ವಿರುದ್ಧ ಇ.ಡಿ ಕ್ರಮ: ಮೋದಿ ಭೇಟಿ ಆದ ಶರದ್ ಪವಾರ್

ನವದೆಹಲಿ (ಪಿಟಿಐ): ಶಿವಸೇನಾ ರಾಜ್ಯಸಭಾ ಸದಸ್ಯ ಸಂಜಯ್ ರಾವುತ್ ಅವರಿಗೆ ಸೇರಿದ ಆಸ್ತಿಗಳ ಮೇಲೆ ಜಾರಿ ನಿರ್ದೇಶನಾಲಯ (ಇ.ಡಿ) ದಾಳಿ ಮಾಡಿದ ಬೆನ್ನಲ್ಲೇ ನ್ಯಾಷನಲ್ ಕಾಂಗ್ರೆಸ್ ಪಕ್ಷ (ಎನ್‌ಸಿಪಿ) ಮುಖ್ಯಸ್ಥ ಶರದ್ ಪವಾರ್ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಬುಧವಾರ ಇಲ್ಲಿ ಭೇಟಿ ಮಾಡಿದರು.

ಹಿರಿಯ ಸಂಸದರು ಮತ್ತು ಪತ್ರಕರ್ತರೂ ಆಗಿರುವ ರಾವುತ್ ಅವರ ವಿಚಾರದಲ್ಲಿ ಅನ್ಯಾಯ ಎಸಗಲಾಗಿದೆ ಎಂದು ಪವಾರ್ ಅವರು ಮೋದಿಗೆ ಹೇಳಿದ್ದಾರೆ ಎನ್ನಲಾಗಿದೆ. 'ಯಾವ ಆಧಾರದ ಮೇಲೆ ಸಂಜಯ್ ರಾವುತ್ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ? ಇದು ಅನ್ಯಾಯ. ಈ ಕ್ರಮ ಜರುಗಿಸಲು ಕಾರಣವೇನು? ಅವರು ಕೆಲವು ಹೇಳಿಕೆಗಳನ್ನು ನೀಡುತ್ತಿದ್ದಾರೆ ಮತ್ತು ಟೀಕೆಗಳನ್ನು ಮಾಡುತ್ತಿದ್ದಾರೆ ಎಂಬ ಕಾರಣಕ್ಕೆ ಅವರ ಮೇಲೆ ಕ್ರಮ ಕೈಗೊಳ್ಳಲು ಆಗುವುದಿಲ್ಲ' ಎಂದು ಪವಾರ್ ಅವರು ಸುದ್ದಿಗಾರರ ಎದುರು ಹೇಳಿದರು.

'ಹಿರಿಯ ಸಂಸದ ಮತ್ತು ಪತ್ರಕರ್ತನಿಗೆ ಮಾಡಿರುವ ಅನ್ಯಾಯವನ್ನು ಪ್ರಧಾನಿ ಅವರ ಗಮನಕ್ಕೆ ತರುವುದು ನಮ್ಮ ಕರ್ತವ್ಯ' ಎಂದು ಪವಾರ್ ಹೇಳಿದರು.

ಖಾಸಗಿ ವೈದ್ಯ ಕಾಲೇಜುಗಳ ಶುಲ್ಕ ನಿಯಂತ್ರಣಕ್ಕೆ ಮನವಿ

ನವದೆಹಲಿ (ಪಿಟಿಐ): ದೇಶದಲ್ಲಿನ ಖಾಸಗಿ ವೈದ್ಯಕೀಯ ಕಾಲೇಜುಗಳ ಶುಲ್ಕವನ್ನು ನಿಯಂತ್ರಿಸಬೇಕು ಎಂಬ ಮನವಿ ರಾಜ್ಯಸಭೆಯಲ್ಲಿ ಬುಧವಾರ ಕೇಳಿಬಂತು.

ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಕಾಂಗ್ರೆಸ್‌ನ ಜೈರಾಮ್ ರಮೇಶ್ ಅವರು, ದೇಶದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಹೆಚ್ಚಿಸಬೇಕು ಎಂದು ಮನವಿ ಮಾಡಿದರು.

ದೇಶದಲ್ಲಿರುವ ಒಟ್ಟು ವೈದ್ಯ ಕಾಲೇಜುಗಳ ಪೈಕಿ ಸರ್ಕಾರಿ ಕಾಲೇಜುಗಳ ಸಂಖ್ಯೆ ಶೇ 53ರಷ್ಟು ಮಾತ್ರ. ಉಳಿದವು ಖಾಸಗಿ ಕಾಲೇಜುಗಳಾಗಿದ್ದು, ಕಳೆದ ಕೆಲ ವರ್ಷಗಳಲ್ಲಿ ಅವುಗಳ ಸಂಖ್ಯೆ ಹೆಚ್ಚಿದೆ ಎಂದು ಅವರು ಹೇಳಿದರು.

ಆಂಧ್ರ: 24 ಸಚಿವರು ಇಂದು ರಾಜೀನಾಮೆ

ಅಮರಾವತಿ(ಪಿಟಿಐ): ಆಂಧ್ರಪ್ರದೇಶದ ಮುಖ್ಯಮಂತ್ರಿ ವೈ.ಎಸ್. ಜಗನ್ ಮೋಹನ್ ರೆಡ್ಡಿ ನೇತೃತ್ವ ಸರ್ಕಾರದ ಎಲ್ಲಾ 24 ಮಂದಿ ಸಚಿವರು ಗುರುವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲಿದ್ದಾರೆ.

ಮುಖ್ಯಮಂತ್ರಿ ತಮ್ಮ ಸಂಪುಟ ಪುನರ್‌ರಚಿಸಲು ಅವಕಾಶ ಕಲ್ಪಿಸಲು ಎಲ್ಲಾ ಸಚಿವರು ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುತ್ತಿದ್ದು, ಏಪ್ರಿಲ್ 11ರಂದು ಹೊಸ ಸಚಿವರು ಸಿಎಂ ಜಗನ್ ಅವರ ಸಂಪುಟ ಸೇರಲಿದ್ದಾರೆ. ಇದರಲ್ಲಿ ಕನಿಷ್ಠ ನಾಲ್ವರು ಹೊಸ ಮುಖಗಳಿಗೆ ಅವಕಾಶ ಕಲ್ಪಿಸಲಾಗುತ್ತದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಹೊಸ ಸಂಪುಟ ರಚನೆಯಲ್ಲಿ ಜಾತಿ ಲೆಕ್ಕಾಚಾರ ಪ್ರಮುಖ ಪಾತ್ರ ವಹಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

2019ರ ಮೇ 30ರಂದು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿದ್ದ ಜಗನ್ ಮೋಹನ್ ರೆಡ್ಡಿ ಅವರು ಎರಡೂವರೆ ವರ್ಷಗಳ ಬಳಿಕ ತಮ್ಮ ಸಂಪುಟವನ್ನು ಪುನರ್ ರಚಿಸುತ್ತೇನೆ ಹಾಗೂ ಹೊಸ ತಂಡ ರಚಿಸಿಕೊಳ್ಳುತ್ತೇನೆ ಎಂದು ಘೋಷಿಸಿದ್ದರು. ಈ ಪ್ರಕಾರ 2021ರ ಡಿಸೆಂಬರ್ 8ರಂದು ಜಗನ್ ಅವರು ಸಂಪುಟ ಪುನರ್ ರಚಿಸಬೇಕಿತ್ತು. ಆದರೆ ಕೊರೊನಾ ಸೇರಿ ಇನ್ನಿತರ ಕಾರಣಗಳಿಂದ ಅದು ಸಾಧ್ಯವಾಗಿರಲಿಲ್ಲ ಎನ್ನಲಾಗಿದೆ.

ಮೇ 6ರಂದು ದೀಕ್ಷೆ, ಮೇ 15ರಂದು ಪಟ್ಟಾಭಿಷೇಕ

ಗಾಣಿಗ ಸಂಸ್ಥಾನಕ್ಕೆ ಬಿ.ಜೆ.ಪುಟ್ಟಸ್ವಾಮಿ ಪೀಠಾಧಿಪತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಯೋಜನಾ ಮಂಡಳಿಯ ಉಪಾಧ್ಯಕ್ಷರಾಗಿರುವ ಬಿಜೆಪಿ ಮುಖಂಡ ಬಿ.ಜೆ. ಪುಟ್ಟಸ್ವಾಮಿ ಅವರು ತೈಲೇಶ್ವರ ಗಾಣಿಗರ ಮಹಾಸಂಸ್ಥಾನ ಮಠದ ಮೊದಲ ಪೀಠಾಧಿಪತಿಯಾಗಿ ಆಯ್ಕೆಯಾಗಿದ್ದು, ಮೇ 15ರಂದು ಪಟ್ಟಾಭಿಷೇಕ ನೆರವೇರಲಿದೆ.

ಮಾಜಿ ಸಚಿವರೂ ಆಗಿರುವ ಪುಟ್ಟಸ್ವಾಮಿ, ಮಠಾಧಿಪತಿಯಾಗುವ ನಿರ್ಧಾರ ಕೈಗೊಂಡಿದ್ದಾರೆ. ಮೇ 6ರಂದು ದೀಕ್ಷೆ ಪಡೆಯಲಿದ್ದು, 15ಕ್ಕೆ ಪಟ್ಟಾಭಿಷೇಕ ಸಮಾರಂಭ ನಿಗದಿಯಾಗಿದೆ. ಮಾದನಾಯಕನಹಳ್ಳಿಯಲ್ಲಿರುವ ಮಠವನ್ನು ಸ್ವರ್ಣಾನಂದ ಪುರಿ ಸ್ವಾಮೀಜಿ ಎಂಬ ಹೆಸರಿನೊಂದಿಗೆ ಅವರು ಮುನ್ನಡೆಸಲಿದ್ದಾರೆ.

ಬಿ.ಜೆ. ಪುಟ್ಟಸ್ವಾಮಿ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿಗಳಾದ ಎಸ್.ಎಂ.ಕೃಷ್ಣ, ಬಿ.ಎಸ್. ಯಡಿಯೂರಪ್ಪ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸೇರಿದಂತೆ ಹಲವರಿಗೆ ಪುಟ್ಟಸ್ವಾಮಿ ಖುದ್ದಾಗಿ ಸಮಾರಂಭಕ್ಕೆ ಆಹ್ವಾನ ನೀಡಿದ್ದಾರೆ.

'ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ನನ್ನ ಪ್ರಯತ್ನದಿಂದ 8 ಎಕರೆ ಜಮೀನು ಹಾಗೂ ₹ 5 ಕೋಟಿ ಅನುದಾನವನ್ನು ಗಾಣಿಗ ಸಮುದಾಯದ ಮಠಕ್ಕೆ ಮಂಜೂರು ಮಾಡಿದ್ದರು. 2016ರಲ್ಲೇ ಮಠದ ಉದ್ಘಾಟನೆಯಾಗಿದೆ. ಪೀಠಾಧಿಪತಿಯನ್ನಾಗಿ ಮಾಡಲು ಮೂವರು ಯುವಕರನ್ನು ತರಬೇತಿಗೆ ಕಳುಹಿಸಲಾಗಿತ್ತು. ಆದರೆ, ಆ ಪ್ರಯತ್ನ ಫಲ ನೀಡಿರಲಿಲ್ಲ' ಎಂದು ಪುಟ್ಟಸ್ವಾಮಿ 'ಪ್ರಜಾವಾಣಿ'ಗೆ ತಿಳಿಸಿದರು.

'ರಾಜರಾಜೇಶ್ವರಿ ನಗರದ ಜಯೇಂದ್ರ ಪುರಿ ಸ್ವಾಮೀಜಿ ಬಳಿ ಒಬ್ಬ ಯುವಕನನ್ನು ತರಬೇತಿಗೆ ನಿಯೋಜಿಸಲಾಗಿತ್ತು. ಅಲ್ಲಿ ಇತ್ತೀಚೆಗೆ ನಡೆದ ಯಾಗವೊಂದರಲ್ಲಿ ಭಾಗಿಯಾಗಿದ್ದೆ. ನೀವೇ ಮೊದಲ ಪೀಠಾಧಿಪತಿಯಾಗಬೇಕೆಂದು ದೇವಿಯ ಅನುಗ್ರಹವಾಗಿದೆ ಎಂದು ಸೂಚಿಸಿದರು. ಅವರ ಆದೇಶದಂತೆ ಮೊದಲ ಪೀಠಾಧಿಪತಿಯಾಗಲು ಒಪ್ಪಿಕೊಂಡಿದ್ದೇನೆ' ಎಂದರು.

'ಸಮುದಾಯದ ಮುಖಂಡರ ಜತೆ ಎರಡು ಬಾರಿ ಸಭೆ ನಡೆಸಿದ ಬಳಿಕ ಅಂತಿಮ ನಿರ್ಧಾರ ಕೈಗೊಳ್ಳಲಾಗಿದೆ. ಈ ಕುರಿತು ಕುಟುಂಬದವರಿಗೂ ತಿಳಿಸಲಾಗಿದೆ. ಯೋಜನಾ ಮಂಡಳಿ ಉಪಾಧ್ಯಕ್ಷ ಸ್ಥಾನಕ್ಕೆ ಶೀಘ್ರದಲ್ಲಿ ರಾಜೀನಾಮೆ ನೀಡುವೆ' ಎಂದು ಹೇಳಿದರು.

ರಾಜ್ಯದಲ್ಲಿ ಆಡಳಿತ ಕುಸಿದಿದೆ: ನಿವೃತ್ತ ಪೊಲೀಸ್ ಅಧಿಕಾರಿ ಭಾಸ್ಕರ್ ರಾವ್

‘ಇಲಾಖೆ ಭ್ರಷ್ಟಾಚಾರ ಕಣ್ಣಾರೆ ಕಂಡಿರುವೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪೊಲೀಸ್ ಇಲಾಖೆಯಲ್ಲಿನ ಭ್ರಷ್ಟಾಚಾರದ ಬಗ್ಗೆ ಈಚೆಗೆ ‘ಪ್ರಜಾವಾಣಿ’ ಪತ್ರಿಕೆಯಲ್ಲಿ ಪ್ರಕಟವಾಯಿತು. ಅಲ್ಲಿನ ಭ್ರಷ್ಟಾಚಾರವನ್ನು ಕಣ್ಣಾರೆ ಕಂಡಿದ್ದೇನೆ’ ಎಂದು ಆಮ್ ಆದ್ಮಿ ಪಕ್ಷದ ಮುಖಂಡರೂ ಆಗಿರುವ ನಿವೃತ್ತ ಪೊಲೀಸ್ ಅಧಿಕಾರಿ ಬಿ.ಭಾಸ್ಕರ್ ರಾವ್ ಹೇಳಿದರು.

ನಗರದಲ್ಲಿ ಬುಧವಾರ ನಡೆದ ಮಾಧ್ಯಮ ಸಂವಾದದಲ್ಲಿ ಅವರು ಮಾತನಾಡಿ, ‘32 ವರ್ಷ ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡಿದ್ದೇನೆ. ಈ ಸಮಯದಲ್ಲಿ ಜನರ ಸಂಕಷ್ಟಗಳನ್ನು ನೋಡಿದ್ದೇನೆ. ಎಲ್ಲ ಸಮಸ್ಯೆಗಳನ್ನು ಪೊಲೀಸ್ ಇಲಾಖೆ ಬಗೆಹರಿಸಲು ಸಾಧ್ಯವಿಲ್ಲ. ಅಲ್ಲಿನ ಆಡಳಿತ ಸೀಮಿತ ಮತ್ತು ಅಸಹಾಯಕ’ ಎಂದರು.

‘ಜನರ ಬಾಯಲ್ಲಿ ಉತ್ತಮರೆಂದು ಕರೆಸಿಕೊಳ್ಳುವ ನಾಯಕರ ಬಗ್ಗೆಯೂ ಚೆನ್ನಾಗಿ ತಿಳಿದಿದೆ. ಪೊಲೀಸ್ ಇಲಾಖೆಯಲ್ಲಿದ್ದಾಗ ಎಲ್ಲ ಪಕ್ಷದವರನ್ನು ಹತ್ತಿರದಿಂದ ನೋಡಿದ್ದೇನೆ. ಅಲ್ಲಿನ ಭ್ರಷ್ಟಾಚಾರಗಳ ಬಗ್ಗೆ ಬೇಸರಗೊಂಡು ಪೊಲೀಸ್ ಇಲಾಖೆಯಿಂದ ಹೊರಬಂದೆ. ಭ್ರಷ್ಟಾಚಾರ ವಿರುದ್ಧ ಹೋರಾಡಲು ಆಮ್ ಆದ್ಮಿ ಪಕ್ಷಕ್ಕೆ (ಎಎಪಿ) ಸೇರಿದ್ದೇನೆ’ ಎಂದರು.

‘ತೆರಿಗೆ ಹಣವನ್ನು ಭ್ರಷ್ಟರು ನುಂಗುತ್ತಿದ್ದಾರೆ. ಐಎಂಎ, ರಾಘವೇಂದ್ರ ಸಹಕಾರಿ ಬ್ಯಾಂಕ್ ನಂತಹ ವಂಚನೆ ಪ್ರಕರಣಗಳಲ್ಲಿ ಹೆಸರಿಗೆ ಮಾತ್ರ ಪ್ರಕರಣ ದಾಖಲಿಸಿ, ಆರೋಪಿಗಳ ಜತೆ ಪೊಲೀಸರು, ರಾಜಕಾರಣಿಗಳು ಶಾಮೀಲಾಗಿದ್ದಾರೆ’ ಎಂದು ಆರೋಪಿಸಿದರು.

‘ರಾಜ್ಯದಲ್ಲಿರುವ ಎಲ್ಲ ದೊಡ್ಡ ಪಕ್ಷಗಳು ಭ್ರಷ್ಟಾಚಾರದಲ್ಲಿ ತೊಡಗಿವೆ. ಯಾವುದೇ ಪಕ್ಷಕ್ಕೆ ಮತ್ತೊಬ್ಬರ ಮೇಲೆ ಆರೋಪ ಮಾಡುವ ನೈತಿಕತೆ ಇಲ್ಲ. ರಾಜ್ಯದಲ್ಲಿ ಆಡಳಿತ ಸಂಪೂರ್ಣವಾಗಿ ಕುಸಿದಿದ್ದು, ಭ್ರಷ್ಟಾಚಾರ ಮಿತಿ ಮೀರಿದೆ. ಇಲ್ಲಿ ಯಾವುದೇ ಸಂಪನ್ಮೂಲದ ಕೊರತೆ ಇಲ್ಲ, ನಾಯಕತ್ವದ ಕೊರತೆ ಸಾಕಷ್ಟಿದೆ.’ ಎಂದು ದೂರಿದರು.

‘ಬಜೆಟ್‌ನಲ್ಲಿ ಕೋಟ್ಯಂತರ ಹಣ ಘೋಷಣೆ ಮಾಡಿದರೂ ಜನಸಾಮಾನ್ಯರಿಗೆ ಪ್ರಯೋಜನ ಆಗುತ್ತಿಲ್ಲ. ಕೇಂದ್ರ ಸರ್ಕಾರದಿಂದ ಹಣ ಬಂದರೂ ಜನರ ಬದುಕು ಬದಲಾಗಿಲ್ಲ. ಸರ್ಕಾರಗಳು ತಮ್ಮ ಟೊಳ್ಳು ಸಾಧನೆಗಳನ್ನು ಪ್ರದರ್ಶಿಸುತ್ತಿವೆ’ ಎಂದು ಟೀಕಿಸಿದರು.

‘ದೆಹಲಿಯಲ್ಲಿ ಅರವಿಂದ ಕೇಜ್ರಿವಾಲ್ ಅವರ ಆಡಳಿತ ವೈಖರಿ ಮೆಚ್ಚಿ ಪಕ್ಷಕ್ಕೆ ಸೇರಿದ್ದೇನೆ. ಇನ್ನೂ ಬಹಳ ಮಂದಿ ಪಕ್ಷ ಸೇರುವವರಿದ್ದಾರೆ. ನನ್ನ ವಿರುದ್ಧ ಕೆಲವರು ಆರೋಪಗಳನ್ನು ಮಾಡಬಹುದು. ಎಲ್ಲವನ್ನೂ ಎದುರಿಸಲು ಸಿದ್ಧ’ ಎಂದರು.

ಆಮ್ ಆದ್ಮಿ ಪಕ್ಷದ ಚಿಹ್ನೆಯಾದ ‘ಪೊರಕೆ’ಯನ್ನು ಭಾಸ್ಕರ್ ರಾವ್ ಪ್ರದರ್ಶಿಸಿದರು –ಪ್ರಜಾವಾಣಿ ಚಿತ್ರ

‘ಅಂದೇ ರಾಜೀನಾಮೆಗೆ ಮುಂದಾಗಿದ್ದೆ’

‘ಬೆಂಗಳೂರು ನಗರ ಪೊಲೀಸ್ ಕಮಿಷನರ್ ಆಗಿದ್ದಾಗ ಕೋವಿಡ್ ಪರಿಸ್ಥಿತಿ ತೀವ್ರಗೊಂಡಿತ್ತು. ಸ್ವಿಗ್ಗಿ, ಜೊಮಾಟೊ ಸಿಬ್ಬಂದಿಗೆ ಪಾಸ್ ವಿತರಿಸುವಲ್ಲಿ ಪೊಲೀಸರಿಂದ ಭ್ರಷ್ಟಾಚಾರ ನಡೆದಿರುವುದಾಗಿ ಅಂದಿನ ಉಪಮುಖ್ಯಮಂತ್ರಿ ಸಿ.ಎನ್.ಅಶ್ವತ್ಥನಾರಾಯಣ ನನ್ನ ಮೇಲೆ ಆರೋಪ ಮಾಡಿದರು. ಇದನ್ನು ಕೇಳಿ ಆಘಾತ, ದುಃಖವಾಯಿತು. ತಕ್ಷಣವೇ ರಾಜೀನಾಮೆ ನೀಡಲು ತೀರ್ಮಾನಿಸಿದ್ದೆ. ಆದರೆ, ಮುಖ್ಯಮಂತ್ರಿಯಾಗಿದ್ದ ಬಿ.ಎಸ್.ಯಡಿಯೂರಪ್ಪ, ಮತ್ತು ಗೃಹ ಸಚಿವರಾಗಿದ್ದ ಬಸವರಾಜ ಬೊಮ್ಮಾಯಿ ಅವಕಾಶ ನೀಡಲಿಲ್ಲ’ ಎಂದು ಭಾಸ್ಕರರಾವ್ ಹೇಳಿದರು.

ಭದ್ರಾ ಮೇಲ್ದಂಡೆ: ಅನುದಾನಕ್ಕೆ ಸಿಎಂ ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಭದ್ರಾ ಮೇಲ್ದಂಡೆ ಯೋಜನೆಗೆ ಅಗತ್ಯವಿರುವ ಹಣಕಾಸಿನ ನೆರವು ನೀಡುವಂತೆ ರಾಜ್ಯ ಸರ್ಕಾರ ಬುಧವಾರ ಕೇಂದ್ರಕ್ಕೆ ಮನವಿ ಸಲ್ಲಿಸಿದೆ.

ಕೇಂದ್ರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಬೆಳಿಗ್ಗೆ ಭೇಟಿ ಮಾಡಿ ರಾಜ್ಯದ ಕೆಲವು ಮಹತ್ವದ ಯೋಜನೆಗಳ ಸಾಕಾರದ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮನವಿ ಮಾಡಿದರು.

ರಾಷ್ಟ್ರೀಯ ಯೋಜನೆ ಎಂದು ಘೋಷಿತವಾಗಿರುವ ಭದ್ರಾ ಮೇಲ್ದಂಡೆ ಯೋಜನೆಗೆ ಅಂದಾಜು ₹ 23,000 ಕೋಟಿ ವೆಚ್ಚ ತಗುಲಲಿದೆ. ಕೇಂದ್ರದ ಪಾಲನ್ನು ಕೂಡಲೇ ಬಿಡುಗಡೆ ಮಾಡಲು ಕೇಂದ್ರ ಸಚಿವರನ್ನು ಕೋರಲಾಗಿದೆ ಎಂದು ಭೇಟಿಯ ನಂತರ ಬೊಮ್ಮಾಯಿ ಅವರು ಸುದ್ದಿಗಾರರಿಗೆ ತಿಳಿಸಿದರು.

ಕೋಲಾರ ಜಿಲ್ಲೆಯಲ್ಲಿ 75 ಕೆರೆ: ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ವರ್ಷಾಚರಣೆ ಅಂಗವಾಗಿ ಪ್ರತಿ ಜಿಲ್ಲೆಯಲ್ಲಿ 75 ಕೆರೆಗಳನ್ನು ನಿರ್ಮಿಸಲು ಪ್ರಧಾನಿ ಕರೆ ನೀಡಿದ್ದಾರೆ. ಅವರ ಆಶಯದಂತೆ ಕೆರೆಗಳನ್ನು ನಿರ್ಮಿಸಲು ಸರ್ಕಾರ ಕಾರ್ಯಪ್ರವೃತ್ತವಾಗಲಿದೆ ಎಂದು ಅವರು ಹೇಳಿದರು.

ಆರಂಭಿಕ ಹಂತದಲ್ಲಿ ಬರಪೀಡಿತ ಕೋಲಾರ ಜಿಲ್ಲೆಯನ್ನು ಆಯ್ಕೆ ಮಾಡಿಕೊಂಡು ನಂತರ ಹಂತಹಂತವಾಗಿ ವಿವಿಧ ಜಿಲ್ಲೆಗಳಲ್ಲಿ ಕೆರೆಗಳ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ವಿವರಿಸಿದರು.

ರಾಯಚೂರಿನಲ್ಲಿ ಸಮ್ಮೇಳನ: ಅಂತರರಾಷ್ಟ್ರೀಯ ಸಿರಿಧಾನ್ಯ ದಿನಾಚರಣೆ ಅಂಗವಾಗಿ ರಾಜ್ಯದ ಸಿರಿಧಾನ್ಯ ಬೆಳೆಗಾರರನ್ನು ಪ್ರೋತ್ಸಾಹಿಸಲು ರಾಯಚೂರಿನಲ್ಲಿ ಸಮ್ಮೇಳನಕ್ಕೆ ನಿರ್ಧರಿಸಲಾಗಿದೆ ಎಂದರು. ಸಚಿವರಾದ ಗೋವಿಂದ ಕಾರಜೋಳ, ವಿ.ಸುನೀಲ್ ಕುಮಾರ್ ಹಾಜರಿದ್ದರು. ಇದಕ್ಕೂ ಮೊದಲು ಬಿಜೆಪಿ ಕೇಂದ್ರ ಕಚೇರಿಯಲ್ಲಿ ಬೆಳಿಗ್ಗೆ ಪಕ್ಷದ ಸಂಸ್ಥಾಪನಾ ದಿನಾಚರಣೆಯಲ್ಲಿ ಪಾಲ್ಗೊಂಡು ನಂತರ ಅವರು ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಿದರು.

ಕುರಿಗಾಹಿಯ ಹತ್ಯೆ; 40 ಕುರಿ ಕಳವು

ಹಾವೇರಿ: ಕುರಿ ಕಳ್ಳತನಕ್ಕೆ ಬಂದವರು ಕುರಿಗಾಹಿಯನ್ನು ಥಳಿಸಿ ಹತ್ಯೆ ಮಾಡಿರುವ ಘಟನೆ ರಾಣೆಬೆನ್ನೂರು ತಾಲ್ಲೂಕು ಗಂಗಾಪುರ ಗ್ರಾಮದಲ್ಲಿ ಮಂಗಳವಾರ ಮಧ್ಯರಾತ್ರಿ ನಡೆದಿದೆ.

ಕುರಿಗಾಹಿ ವೆಂಕಟೇಶ ಮತ್ತೂರು (50) ಮೃತಪಟ್ಟವರು. ಮಂಗಳವಾರ ರಾತ್ರಿ ಕುರಿಗಳನ್ನು ಕದಿಯಲು ಬಂದು ವೆಂಕಟೇಶ್ ಅವರನ್ನು ಕೊಂದು 40 ಕುರಿಗಳನ್ನು ಕದ್ದು ಆರೋಪಿಗಳು ಪರಾರಿಯಾಗಿದ್ದಾರೆ.

ಸಂಪುಟ ಉಪಸಮಿತಿ ರಚನೆ

ಬೆಂಗಳೂರು: ಅಕ್ರಮ ಗಣಿಗಾರಿಕೆಗಳ ಕುರಿತು ಲೋಕಾಯುಕ್ತದಲ್ಲಿ ಅಸ್ತಿತ್ವದಲ್ಲಿರುವ ವಿಶೇಷ ತನಿಖಾ ತಂಡದ ಕಾರ್ಯಾವಧಿ ಮುಂದುವರೆಸುವ ಅಥವಾ ಮುಕ್ತಾಯಗೊಳಿಸುವ ಬಗ್ಗೆ ಪರಾಮರ್ಶೆ ನಡೆಸಲು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಸಂಪುಟ ಉಪಸಮಿತಿ ರಚಿಸಲಾಗಿದೆ.

ಈ ಉಪಸಮಿತಿಯಲ್ಲಿ ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ, ಮೀನುಗಾರಿಕೆ ಸಚಿವ ಎಸ್.ಅಂಗಾರ, ಗೃಹ ಸಚಿವ ಆರಗ ಜ್ಞಾನೇಂದ್ರ ಮತ್ತ ಗಣಿ ಮತ್ತು ಭೂವಿಜ್ಞಾನ ಸಚಿವ ಹಾಲಪ್ಪ ಆಚಾರ್ ಸದಸ್ಯರಾಗಿದ್ದಾರೆ.

‘ಕಲಿಕಾ ಹಿನ್ನಡೆ ಸರಿದೂಗಿಸಲು ‘ಕಲಿಕಾ ಚೇತರಿಕೆ’

ಬೆಂಗಳೂರು: ‘ಕೋವಿಡ್ ಕಾರಣ ಮಕ್ಕಳಲ್ಲಿ ಉಂಟಾಗಿರುವ ಕಲಿಕಾ ಹಿನ್ನಡೆ ಸರಿದೂಗಿಸಲು ಹಮ್ಮಿಕೊಂಡಿರುವ ‘ಕಲಿಕಾ ಚೇತರಿಕೆ’ ಕಾರ್ಯಕ್ರಮದಲ್ಲಿ ಶಿಕ್ಷಕರ ಪಾತ್ರ ಅತ್ಯಂತ ಮಹತ್ವದ್ದು’ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹೇಳಿದರು.

‘ಕಲಿಕಾ ಚೇತರಿಕೆ’ ರಾಜ್ಯಮಟ್ಟದ ಕಾರ್ಯಾಗಾರದಲ್ಲಿ ಪ್ರಾಥಮಿಕ, ಪ್ರೌಢ ಶಿಕ್ಷಕರ ಸಂಘ ಹಾಗೂ ಶಿಕ್ಷಣ ಅಧಿಕಾರಿಗಳ ಸಂಘದ ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ‘ಕೋವಿಡ್‌ನಿಂದಾಗಿ ಮಕ್ಕಳು ಕಳೆದುಕೊಂಡಿರುವುದನ್ನು ಸರಿದೂಗಿಸುವುದು ಅಸಾಧ್ಯವೇನೂ ಅಲ್ಲ’ ಎಂದರು.

ರಾಜ್ಯ ಸರ್ಕಾರ ಯೋಜಿಸಿ ಈ ಕಾರ್ಯಕ್ರಮ ರೂಪಿಸಿದೆ. 2022–23ನೇ ಶೈಕ್ಷಣಿಕ ವರ್ಷವನ್ನು ‘ಕಲಿಕಾ ಚೇತರಿಕೆ’ ವರ್ಷವೆಂದು ಘೋಷಿಸಲಾಗಿದೆ ಕಲಿಕಾ ಹಿನ್ನಡೆ ಸರಿದೂಗಿಸುವ ಇಲಾಖೆಯ ಪ್ರಯತ್ನದಲ್ಲಿ ಶಿಕ್ಷಕರು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು’ ಎಂದರು.

‘ಈ ಬಾರಿ ಶೈಕ್ಷಣಿಕ ವರ್ಷ ಎಂದಿಗಿಂತ ಎರಡು ವಾರ ಮುಂಚಿತವಾಗಿ ಆರಂಭವಾಗುತ್ತಿದೆ. ಕಲಿಕಾ ಹಿನ್ನಡೆ ಸರಿದೂಗಿಸಿಕೊಳ್ಳುವ ಸಾಮರ್ಥ್ಯ ಮಕ್ಕಳಿಗೆ ಇರುತ್ತದೆ. ಪ್ರತಿಯೊಂದು ಮಗುವಿನ ಕಲಿಕಾ ಮಟ್ಟ ಭಿನ್ನವಾಗಿರುತ್ತದೆ. ವಾಸದ ಸ್ಥಳ, ಶಾಲೆ ಸೇರಿ ಹಲವು ವಿಚಾರಗಳು ಕಲಿಕೆ ಮೇಲೆ ಪರಿಣಾಮ ಬೀರುತ್ತವೆ. ಆದ್ದರಿಂದ ಎಲ್ಲ ಮಕ್ಕಳ ಕಲಿಕೆಗೆ ಪ್ರಯತ್ನಿಸಬೇಕು’ ಎಂದರು.

ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್. ಸೆಲ್ವಕುಮಾರ್, ಸಮಗ್ರ ಶಿಕ್ಷಣ ಕರ್ನಾಟಕ ರಾಜ್ಯ ಯೋಜನಾ ನಿರ್ದೇಶಕಿ ದೀಪಾ ಚೋಳನ್, ಡಿಎಸ್‌ಇಆರ್‌ಟಿ ನಿರ್ದೇಶಕಿ ಸುಮಂಗಲಾ ಇದ್ದರು.

PUBLIC NOTICE

This is to inform public in general that Kotak Mahindra Bank Ltd has organized an auction in below mention respect of vehicles.

1) CB_TATA_HITACHI _SHINRAI_BX80_BACKHOE _LOADER YOM – 2018 SL No – THEWABD0EJ0000164
2) CB_TATAMOTORS YOM – 2013 SI No – KA42A1553
3) CB_ALECOMET1214. YOM – 2018 Reg No – Ka07A9458 Min Reserve Price –7,92,000/-
4) CB_Tata LPT 407 Fully Built YOM – 2017 Reg No – KA02AG4816

UNDER HYPOTHECATION WITH M/S KOTAK MAHINDRA BANK IS UNDER SALE IN ITS “AS IS WHERE IS CONDITION”

INTERESTED PARTIES CAN GIVE THEIR QUOTATIONS (ONLINE/ OFF LINE) WITHIN 15 DAYS FROM THIS PAPER PUBLICATION i.e. from 07.04.2022

(Please note that closing Auction date would not be a Weekly off / Holiday)

BRANCH ADDRESS:
KOTAK MAHINDRA BANK LTD., 22, MG ROAD, BANGALORE KARNATAKA – 560001
OR
Contact: Pradeep. S
Kotak Mahindra Bank Ltd.
Contact / 080 - 61564249

ಕರ್ನಾಟಕ ಸರ್ಕಾರ Government of Karnataka
ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬಳ್ಳಾರಿ
VIJAYANAGAR INSTITUTE OF MEDICAL SCIENCES, BALLARI
Reg No. 205/1995-96 Recognized by Medical Council of India, New Delhi
Vide No: MCI-57(3)/79--Mcd/1912 ltd: 16-04-1979
Director: 8147796529, Principal: 8147796527, CAO: 8147796526 PA: 8147796539
email: directorvimsballary@gmail.com website: www.vimsballar.org.in

ಸಂ. ವಿಮ್ಸ್/ಸಿ(2)/188/2021–22 ದಿನಾಂಕ: 04–04–2022

ತಿದ್ದುಪಡಿ ಆದೇಶ

ದಿನಾಂಕ: 28–03–2022 ರಂದು ಪ್ರಕಟಿಸಿರುವ ವಿಜಯನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿನ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಅರವಳಿಕೆಶಾಸ್ತ್ರ ವಿಭಾಗದ ಪ್ರಾಧ್ಯಾಪಕರು ಸಹ ಪ್ರಾಧ್ಯಾಪಕರು ಮತ್ತು ಸಹಾಯಕ ಪ್ರಾಧ್ಯಾಪಕರು ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗಿದ್ದು. ಸದರಿ ಪತ್ರಿಕಾ ಪ್ರಕಟಣೆಯಲ್ಲಿ ಪ್ರಕಟಿಸಿರುವ ರೋಸ್ಟರ್ ಮಾಹಿತಿಯನ್ನು ತಿದ್ದುಪಡಿ ಮಾಡಲಾಗಿರುತ್ತದೆ ಆದ್ದರಿಂದ ಈ ಕೆಳಗಿನಂತೆ ಓದಿಕೊಳ್ಳತಕ್ಕದ್ದು, ಇನ್ನೂಳಿದ ಎಲ್ಲಾ ಮಾಹಿತಿಯು ಯಥಾರೀತಿಯಲ್ಲಿ ಮುಂದುವರಿಸಲಾಗಿದೆ. ಹೆಚ್ಚಿನ ಮಾಹಿತಿಯನ್ನು web: https://vims.karnataka.gov.in ನಲ್ಲಿ ಪಡೆಯತಕ್ಕದ್ದು.

Sl. No.	Designation	No of Posts	Department	Local Cadre (HK)	No. of Posts in the RPC (NHK)
1	Professor	01	Anaesthesiology	SC-1	-
2	Associate professor	02		SC-1. GM-1	-
3	Associate professor	04		SC-1, GM-1 ST-1	SC-1

ಸಹಿ/– ನಿರ್ದೇಶಕರು, ವಿಮ್ಸ್, ಬಳ್ಳಾರಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೊಪ್ಪಳ. ದೂರವಾಣಿ: 08539–220054

ಸಂ: ಕಾನಿಇಂ/ಸನೀಮತ್ತು ಅ.ಅ.ವಿ/ಕೊಪ್ಪಳ/ತಾಶಾ/2022–23/896 ದಿ:04–04–2022

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ರಾಯಚೂರು ಜಿಲ್ಲೆಯ 11 ಹಾಗೂ ಕೊಪ್ಪಳ ಜಿಲ್ಲೆಯ 2 ಕಾಮಗಾರಿಗಳಿಗಾಗಿ ವಿಶೇಷ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಏಕ **ಲಕೋಟೆ** ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ **ರೂ. 11.72** ಮತ್ತು ಗರಿಷ್ಠ ಮೊತ್ತ **ರೂ. 44.60** ಲಕ್ಷಗಳಿರುತ್ತದೆ. ಟೆಂಡರಗಳನ್ನು ದಿನಾಂಕ: **05–04–2022 ರಿಂದ ದಿನಾಂಕ: 13–04–2022 ಸಂಜೆ. 5.30 ಗಂಟೆಯವರೆಗೆ** ಸಲ್ಲಿಸಬಹುದು. ತಾಂತ್ರಿಕ ಮತ್ತು ಆರ್ಥಿಕ ಬಿಡ್ಡನ್ನು ದಿನಾಂಕ **16–04–2022 ರಂದು ಬೆಳ್ಳಿಗ್ಗೆ 11.00 ಗಂಟೆಗೆ** ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಳನ್ನು “ಇ–ಪ್ರಕ್ಯೂರ್‌ಮೆಂಟ್” ವೆಬ್‌ಸೈಟ್ http://eproc.karnataka.gov.in/e-portal/index.seam ನಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಕೊಪ್ಪಳ.
ವಾ.ಸಾ.ಇ./ಕೊಪ್ಪಳ/14/2021–22/ದೇಶಪಾಂಡೆ ಪಬ್ಲಿಸಿಟಿ

ಸುವರ್ಣಕರ್ನಾಟಕ
ಕರ್ನಾಟಕ ಸರಕಾರ
ಜಿಲ್ಲಾಆಸ್ಪತ್ರೆ, ಧಾರವಾಡ.
ಸತ್ಯಮೇವ ಜಯತೇ ಆರೋಗ್ಯವೇ ಭಾಗ್ಯ
ದೂರವಾಣಿ ಸಂಖ್ಯೆ:0836–2741277,0836–2748374 E-Mail:dsdharwad@gmail.com
ಸಂಖ್ಯೆ: ಜಿಆಧಾ/ಪೂರೈಕೆ/ವಿವ/56/2021–22 ದಿ: 05–04–2022

ಮರು ಟೆಂಡರ್ ಪ್ರಕಟಣೆ

ವಿಷಯ : ಧಾರವಾಡ ಜಿಲ್ಲಾ ಆಸ್ಪತ್ರೆಗೆ 2022–23 ನೇ ಸಾಲಿಗಾಗಿ ಪಥ್ಯಾಹಾರ ಪದಾರ್ಥಗಳು/ಮೊದಲನೆ ದರ್ಜೆತಾಜಾ ಬ್ರೆಡ್/ಆಸ್ಪತ್ರೆಯ ಅವಶ್ಯಕ ಸಾಮಗ್ರಿಗಳು/ ಲೇಖನ ಸಾಮಗ್ರಿಗಳನ್ನು ಪೂರೈಸಲು ದ್ವಿ–ಲಕೋಟೆಪದ್ಧತಿಯಲ್ಲಿ ಇ–ಪ್ರೋಕ್ಯುರಮೆಂಟ್ ಮೂಲಕ ಟೆಂಡರ್‌ಆಹ್ವಾನಿಸುವ ಕುರಿತು

ಉಲ್ಲೇಖ : 1. ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: ಲೆಪವಿ/ಪಥ್ಯಾಹಾರ.ಟೆಂ /10/2021–22 ದಿ:10.12.2021.
2. ಈ ಕಚೇರಿಯ ಸಮ ಸಂಖ್ಯೆ ಪ್ರಕಟಣೆ ದಿನಾಂಕ : 01–04–2022

ಧಾರವಾಡ ಜಿಲ್ಲಾ ಆಸ್ಪತ್ರೆಗೆ **2022–23** ನೇ ಸಾಲಿಗಾಗಿ ಪಥ್ಯಾಹಾರ ಪದಾರ್ಥಗಳು/ ಮೊದಲನೆ ದರ್ಜೆತಾಜಾ ಬ್ರೆಡ್/ ಆಸ್ಪತ್ರೆಯ ಅವಶ್ಯಕ ಸಾಮಗ್ರಿಗಳು/ಲೇಖನ ಸಾಮಗ್ರಿಗಳನ್ನು ಪೂರೈಸಲು ಇ–ಪ್ರೋಕ್ಯುರಮೆಂಟ್ ಮೂಲಕ ದ್ವಿ–ಬಿಡ್ **(Technical and Financial)** ಪದ್ಧತಿಯಲ್ಲಿ ಟೆಂಡರ ಆಹ್ವಾನಿಸಲಾಗಿತ್ತು. ಸದರ ಪ್ರಕಟಣೆಯನ್ನು ದಿನಾಂಕ : **01–04–2022** ರಂದು ವಿಜಯವಾಣಿ ಹಾಗೂ **The New Indian Express** ದಿನ ಪತ್ರಿಕೆಯಲ್ಲಿ ನೀಡಲಾಗಿತ್ತು. ಸದರ ಟೆಂಡರನ್ನು ಆಡಳಿತಾತ್ಮಕ ನ್ಯೂನತೆಗಳ ಹಿನ್ನಲೆಯಲ್ಲಿ ರದ್ದು ಪಡಿಸಿ ಮರು ಟೆಂಡರ ಕರೆಯಲಾಗಿದೆ. ಆಸಕ್ತ ಟೆಂಡರದಾರರು ನಿಗಧಿತ ದಿನಾಂಕದೊಳಗಾಗಿ ಇ–ಪೋರ್ಟಲನ ಮುಖಾಂತರ ಟೆಂಡರ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಭರ್ತಿ ಮಾಡಿದ ಟೆಂಡರ ಫಾರ್ಮಗಳನ್ನು ವೆಬ್‌ಸೈಟ್www.eproc.karnataka.gov.in ಈ ಪೋರ್ಟಲನಲ್ಲಿ **(DHFWS/2021-22/IND5626/CALL-2)** ದಿನಾಂಕ :**05–04–2022** ರಿಂದ ದಿ: **05–05–2022** ರವರೆಗೆ ಸಾಯಂಕಾಲ **4:30** ಗಂಟೆಯವರೆಗೆ ಇ–ಪೋರ್ಟಲ್‌ದಲ್ಲಿ ಅಪ್‌ಲೋಡ್ ಮಾಡಬಹುದು. ಸ್ವೀಕರಿಸಿದ ಟೆಂಡರಗಳನ್ನು ದಿನಾಂಕ: **07–05–2022** ರಂದು ಬೆಳಿಗ್ಗೆ **11.00** ಗಂಟೆಗೆ ತಾಂತ್ರಿಕ ಬಿಡ್‌ನ್ನು ತೆರೆಯಲಾಗುವುದು. ಹಾಗೂ ಆರ್ಥಿಕ ಬಿಡನ್ನು ದಿ: **10–05–2022** ರಂದು ಬೆಳಿಗ್ಗೆ **11:00** ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಧಾರವಾಡ ಜಿಲ್ಲಾ ಆಸ್ಪತ್ರೆಯ ಕಾರ್ಯಾಲಯದಿಂದ ಕೆಲಸದ ದಿನಗಳಂದು ಪಡೆಯಬಹುದು.

ಸಹಿ/–ಜಿಲ್ಲಾ ಶಸ್ತ್ರಚಿಕಿತ್ಸಕರು
ಜಿಲ್ಲಾಆಸ್ಪತ್ರೆ ಧಾರವಾಡ
ವಾ.ಸಾ.ಇ/ಧಾ/27/2022–23/ದೇಶಪಾಂಡೆಪಬ್ಲಿಸಿಟಿ

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರರ ಕಛೇರಿ, ಕನೀನಿನಿ, ಐ.ಪಿ.ಸಿ ವಿಭಾಗ ನಂ–1, ಕಲಬುರಗಿ
ಸಂ:ಕಾಅ/ಕನೀನಿನಿ/ಐಪಿಸಿಡಿ–1/ಪಿ.ಬಿ–4/ಎಸ್‌ಸಿಪಿ/ಟಿಎಸ್‌ಪಿ/ಟೆಂಡರ/2021–22/3 ದಿನಾಂಕ:01.04.2022

ಅಲ್ಪಾವಧಿ ಟೆಂಡರ ಪ್ರಕಟಣೆ (ಇ–ಪ್ರೋಕ್ಯೂರ್‌ಮೆಂಟ್ ಮೂಲಕ)

ಕೆಳದಂಡ ಮುಲ್ಲಾಮಾರಿ ಅಮರ್ಜಾ ಮತ್ತು ಗಂಡೋರಿನಾಲಾ ಯೋಜನೆಯ 2021–22 ನೇ ಸಾಲಿನ ಎಸ್.ಸಿ.ಪಿ./ಟಿ.ಎಸ್.ಪಿ ಅಡಿಯಲ್ಲಿನ 09 ಕಾಮಗಾರಿಗಳಿಗೆ ಒಂದು ಲಕೋಟೆ ಮತ್ತು 04 ಕಾಮಗಾರಿಗಳಿಗೆ ದ್ವಿಲಕೋಟೆ ಪದ್ಧತಿಯ ಮೂಲಕ ಅರ್ಹ ಸಾಮಾನ್ಯ, ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಗಳ ಗುತ್ತಿಗೆದಾರರಿಂದ ಶೇಕಡಾ ದರದ ಟೆಂಡರಗಳನ್ನು ಈ ಕೆಳಗಿನಂತೆ ಕರೆಯಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ನ eproc.karnataka.gov.in ನಿಂದ ಟೆಂಡರ್ ದಾಖಲೆಗಳನ್ನು 06.04.2022 ರಿಂದ 13.04.2022. ರ ವರೆಗೆ ಡೌನಲೋಡ್ ಮಾಡಿಕೊಂಡು ದಿನಾಂಕ 13.04.2022 ರ 4.30 ಗಂಟೆಯವರೆಗೆ ಟೆಂಡರ್ ಗಳನ್ನು ಸಲ್ಲಿಸಬಹುದು. ಸ್ವೀಕೃತ ಟೆಂಡರಗಳ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ನ್ನು ದಿನಾಂಕ 16.04.2022 ರಂದು 11.00 ಗಂಟೆಯ ನಂತರ ತೆರೆಯಲಾಗುವುದು. ಆರ್ಥಿಕ ಬಿಡ್‌ಗಳನ್ನು ದಿನಾಂಕ 18.04.2022 ರಂದು ತೆರೆಯಲಾಗುವುದು. ಹೆಚ್ಚಿನ ವಿವರಗಳಿಗೆ ಇ–ಪ್ರೊಕ್ಯೂರಮೆಂಟ್ ಪೋರ್ಟಲ್‌ನಲ್ಲಿ ಅಥವಾ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳನ್ನು ಸಂಪರ್ಕಿಸಬಹುದು.

1) ಕಾಮಗಾರಿಗಳ ಸಂಖ್ಯೆ : **13,** 2) ಟೆಂಡರಿಗಿಟ್ಟ ಅಂದಾಜು ಗರಿಷ್ಠ ಮೊತ್ತ ರೂ. 9680761.80 ಹಾಗೂ ಕನಿಷ್ಠ ಮೊತ್ತ ರೂ. 171543.00, 3) ಇ.ಎಂ.ಡಿ. ಮೊತ್ತ ಗರಿಷ್ಠ ರೂ. 96808.00 ಹಾಗೂ ಕನಿಷ್ಠ ರೂ. 4289.00 ಗಳು. 4) ಕಾಮಗಾರಿಗಳ ಹೆಸರು/ಗುತ್ತಿಗೆದಾರರ ಅರ್ಹತೆ/ ಟೆಂಡರಿನ ನಿಯಮ/ಟೆಂಡರ ಪ್ರೊಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ eproc.karnataka.gov.in ಮೂಲಕ ಮಾಹಿತಿ ಸಂಪರ್ಕಿಸಬಹುದು. ಟೆಂಡರಗಳನ್ನು ಅಂಗೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ ಯಾವುದೇ ಟೆಂಡರಗಳನ್ನು ಅಥವಾ ಎಲ್ಲಾ ಟೆಂಡರಗಳನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರು,
ಕನೀನಿನಿ, ಐ.ಪಿ.ಸಿ ವಿ–1, ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/21/ಎಂ.ಸಿ.&ಎ/2022–23

ನಗರಸಭಾ ಕಾರ್ಯಾಲಯ, ಕೊಪ್ಪಳ.
ಸಂ:ಕೊನಸ/ಸ್ವಚ್ಛ ಭಾರತ್ ಮಿಷನ್/2021–22 ದಿನಾಂಕ:–31–03–2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕೊಪ್ಪಳ ನಗರಸಭೆ ವ್ಯಾಪ್ತಿಯಲ್ಲಿ ಪೌರಾಯುಕ್ತರು ನಗರಸಭೆ ಕೊಪ್ಪಳ ಇವರು ಕರ್ನಾಟಕದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಅಧಿನಿಯಮ–2000ರನ್ವಯ ಮತ್ತು ಕೆ.ಡಬ್ಲ್ಯೂ 4ರ ನಿಯಮಗಳಂತೆ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ http://www.eproc.karnataka.gov.in ನಲ್ಲಿ ಪಿ.ಡಬ್ಲ್ಯೂ.ಡಿ.ಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಫಾರಂ ಬೆಲೆಯನ್ನು ಮತ್ತು ಇ.ಎಂ.ಡಿ. ಮೊತ್ತವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.

ಸ್ವಚ್ಛ ಭಾರತ್ ಮಿಷನ್ ಅನುದಾನ: 1.DMA/2021-22/OW/WORK_INDENT123510. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 291.77. ಇ. ಎಂ. ಡಿ ಮೊತ್ತ (ರೂ.ಗಳಲ್ಲಿ): 437655.00. ಅರ್ಹ ಗುತ್ತಿಗೆದಾರರ ದರ್ಜೆ: 1ನೇ ದರ್ಜೆ ಹಾಗೂ ಮೇಲ್ಪಟ್ಟು ಗುತ್ತಿಗೆದಾರರು.

ಷರತ್ತುಗಳು: 1. ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ:– 16–04–2022 ಸಂಜೆ 4.30 ಗಂಟೆಯವರೆಗೆ. 2.ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾರ್ಗಸೂಚಿಗಳಂತೆ ದಿನಾಂಕ:– 18–04–2022 ಸಂಜೆ 4.30 ಗಂಟೆಗೆ ತೆರೆಯಲಾಗುವುದು. 3.ಕಾಮಗಾರಿ ನಿರ್ವಹಿಸಿದ ಪ್ರಮಾಣ ಪತ್ರವನ್ನು (Workdone Certificate) ಲಗತ್ತಿಸತಕ್ಕದ್ದು. ಕೆ.ಡಬ್ಲ್ಯೂ 4 ಕಾಮಗಾರಿಗಳಿಗೆ ತಕ್ಕಂತೆ ಅದೇ ತರಹದ (Similar Nature of Work) ಕಾಮಗಾರಿಗಳು ನಿರ್ವಹಿಸಿದ ಪ್ರಮಾಣ ಪತ್ರವನ್ನು (Workdone Certificate) ಲಗತ್ತಿಸತಕ್ಕದ್ದು. 4.ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳಿಗಾಗಿ ಕಾರ್ಯಾಲಯದ ಕಛೇರಿ ವೇಳೆಯಲ್ಲಿ ತಾಂತ್ರಿಕ ವಿಭಾಗವನ್ನು ಅಥವಾ www.koppalcity.mrc .gov.in ನಲ್ಲಿ ಪಡೆಯಬಹುದಾಗಿದೆ. 5.ಕಾಮಗಾರಿಗಳನ್ನು ಪೂರ್ಣಗೊಳಿಸಲು ನಿಗದಿಗೊಳಿಸಿರುವ ಕಾಲಾವಧಿ (ಮಳೆಗಾಲ ಸೇರಿ) : 9 ತಿಂಗಳು. 6.ನಗರಸಭೆ ಕಾರ್ಯಾಲಯದ ಟೆಂಡರ್‌ನ್ನು ತಿರಸ್ಕರಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿರುತ್ತದೆ. 7.ಹೆಚ್ಚಿನ ವಿವರಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (http://www.eproc.karnataka.gov.in) ಮೂಲಕ ಪಡೆಯಬಹುದಾಗಿದೆ.

ಸಹಿ/– ಸ.ಕಾ. ಅಭಿಯಂತರರು, ನಗರಸಭೆ ಕೊಪ್ಪಳ. ಸಹಿ/– ಪೌರಾಯುಕ್ತರು, ನಗರಸಭೆ ಕೊಪ್ಪಳ. ಸಹಿ/– ಅಧ್ಯಕ್ಷರು, ನಗರಸಭೆ ಕೊಪ್ಪಳ.
ಡಿಐಪಿಆರ್/ಕೊಪ್ಪಳ/07/ಎಂಸಿಎ/2022–23

ಕರ್ನಾಟಕ ಸರ್ಕಾರ
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ
ಕೆ.ಆರ್.ವೃತ್ತ, ಬೆಂಗಳೂರು–560001, ದೂ: 91–080–22212408, ಫ್ಯಾಕ್ಸ್: 91–080–22277528
ಸಂಖ್ಯೆ: JDUPOR/Bandh Peon/01/2022-23 ದಿನಾಂಕ : 05.04.2022

ಇ–ಟೆಂಡರ್ ಪ್ರಕಟಣೆ

ಭೂದಾಖಲೆಗಳ ಜಂಟಿ ನಿರ್ದೇಶಕರು, ಯು.ಪಿ.ಓ.ಆರ್ ಯೋಜನೆ, ಬೆಂಗಳೂರು, ಕಂದಾಯ ಇಲಾಖೆ, ಕರ್ನಾಟಕ ಸರ್ಕಾರ ಕಛೇರಿಗೆ ಹೊರಗುತ್ತಿಗೆ ಆಧಾರದ ಮೇಲೆ 100 ಬಾಂದು ಜವಾನರು ಹಾಗೂ 20 ಸಾಫ್ಟ್‌ವೇರ್ ಇಂಜಿನೀಯರ್‌ಗಳ ಸೇವೆ ಒದಗಿಸುವ ಸಂಬಂಧ ಅರ್ಹ ಪ್ರತಿಷ್ಠಿತ ಸಂಸ್ಥೆಗಳಿಂದ ಟೆಂಡರನ್ನು ಆಹ್ವಾನಿಸಲಾಗಿದೆ. ಇಲಾಖೆಯು ಈ ಸೇವೆಯನ್ನು ಒದಗಿಸಲು ಆಸಕ್ತಿ ಹೊಂದಿರುವಂತಹ ಸಂಸ್ಥೆಗಳಿಂದ ಆರ್.ಎಫ್.ಪಿ ಯಲ್ಲಿ ಒಳಗೊಂಡಿರುವ ನಿಯಮಗಳು ಮತ್ತು ಷರತ್ತುಗಳ ಅನ್ವಯ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದು, **ದಿನಾಂಕ: 05.04.2022** ರಿಂದ **http://www.eproc.karnataka.gov.in** ರಲ್ಲಿ **ಲಭ್ಯವಿರುತ್ತದೆ,** ಸಂಸ್ಥೆಗಳು ಇ–ಆಡಳಿತ ಕೇಂದ್ರದಲ್ಲಿ ನೊಂದಾಯಿಸಿಕೊಂಡು ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ. ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 19.04.2022 ರಂದು ಸಂಜೆ 04.00 ಗಂಟೆ** ಆಗಿರುತ್ತದೆ.

ಸಹಿ/–
ಪ್ರಭಾರ ಭೂದಾಖಲೆಗಳ ಜಂಟಿ ನಿರ್ದೇಶಕರು,
ಯು.ಪಿ.ಓ.ಆರ್ ಯೋಜನೆ, ಬೆಂಗಳೂರು.
ವಾಸಾಸಂಇ/ವಾಪ್ರ/63/ಶಿರಡಿ ಸಾಯಿ/2022–23

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
(www.kpwd.gov.in)
ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, 2ನೇ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು. 560001.
ದೂರವಾಣಿ ಸಂಖ್ಯೆ: 080–22133370 ಫ್ಯಾಕ್ಸ್ ಸಂಖ್ಯೆ: 080–22133365
Email ID: eepwdbngdn@yahoo.com E-Portal : https://eproc.karnataka.gov.in

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 01/2022–23
ದಿನಾಂಕ: 04.04.2022

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ ನಂ.1 ದಕ್ಷಿಣ ಉಪವಿಭಾಗಕ್ಕೆ ಸಂಬಂಧಿಸಿದಂತೆ 02 ಸಂಖ್ಯೆಯ (ರೂ. 495.00 ಲಕ್ಷಗಳ) ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಯ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ. ಕಾಮಗಾರಿಗಳ ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಶುಲ್ಕವನ್ನು ಇ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.

1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೌಡ್ ಮಾಡಿಕೊಳ್ಳಲು ನಿಗಧಿಪಡಿಸಿರುವ ದಿನಾಂಕ: 04.04.2022 ರಿಂದ.
2) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿ: 04.05.2022 ಸಂಜೆ 4.00 ಗಂಟೆಯವರೆಗೆ.
3) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ತೆರೆಯುವ ದಿನಾಂಕ 05.05.2022 ಸಂಜೆ 4.30 ಗಂಟೆಗೆ ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ. ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/–
ಕಾರ್ಯಪಾಲಕ ಅಭಿಯಂತರರು
ಲೋ.ಇ, ಬೆಂಗಳೂರು ವಿಭಾಗ, ಬೆಂಗಳೂರು.
DIPR/CP/059/Zenkar/2022-23

ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

THE KARNATAKA STATE CRICKET ASSOCIATION
M. Chinnaswamy Stadium, Cubbon Road, Bangalore - 560 001.

Tender Notification

The Karnataka State Cricket Association, M.Chinnaswamy Stadium, Cubbon Road, Bangalore, invites sealed tenders from GST Compliant contractors for the work of proposed construction of balance works (Civil, MEP & Allied works), for KSCA Cricket Academy at Alur

The details of issue/submission of tender document are as follows :-

1. Name of work :- Proposed Construction of balance works (Civil, MEP & Allied works) for KSCA Cricket Academy at Alur
2. Estimated Cost :- Rs.1.70 Crores
3. Earnest Money Deposit :- Rs.1,70,000/- should be enclosed in the Technical bid cover
4. Cost of tender form :- Rs.15,000/- plus GST (Non Refundable)
5. Date of issue of tender form :- 8/4/2022 to 28/4/2022
6. Pre-bid meeting :- 30/4/2022
7. Last date of submission of filled tender form two covers bid system :- 5/5/2022 before 4.30 p.m (Technical & Commercial Separately)
8. Opening of the tender :- The same day @ 5.30 p.m. If any delay will be Intimated to the vendors.
9. Completion of work by :- 3 (Three) months from the date of work order.

Tender documents may be obtained from the Office of the KSCA civil engineering department, by submitting a requisition in the company's letter head between 11.00 a.m to 5.00 p.m on any working day. For any clarification please contact Mr.H.A.Venkateshprasad, AGM Civil Engineering Dept, Mobile No. 9945604515/8150900022.

Hon. Secretary, KSCA

ನಗರಸಭೆ ಕಾರ್ಯಾಲಯ, ಸಿಂಧನೂರು–584128
ರಾಯಚೂರು (ಜಿಲ್ಲಾ) ಕರ್ನಾಟಕ (ರಾಜ್ಯ)
ದೂ: 08535–221480, 222233
ಇ–ಮೇಲ್: itstaff_ulb_sindhanur@yahoo.co.in
ವೆಬ್‌ಸೈಟ್: www.sindanurcity.mrc.gov.in
ಸಂ: ನಕಾಸಿಂ:ತಾಂತ್ರಿಕ:ಇ–ಟೆಂಡರ್:01:2021–22 ದಿ: 01.04.2022

ಟೆಂಡರ್ ಪ್ರಕಟಣೆ (ಎರಡನೇ ಕರೆ) (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಎಸ್.ಎಫ್.ಸಿ. ವಿಶೇಷ ಅನುದಾನದಲ್ಲಿ ಸಿಂಧನೂರು ನಗರಸಭೆಯ 75 ಎಂ.ಜಿ. ಸಾಮರ್ಥ್ಯ ಕೆರೆಯ ಉತ್ತರ ದಿಕ್ಕಿನ ಬಂಡ ದುರಸ್ತಿ ಕೈಗೊಳ್ಳುವ ಸಿವಿಲ್ ಕಾಮಗಾರಿಗೆ (ಇಂಡೆಂಟ್ ನಂ: **DMA/2021-22/OW/WORK_INDENT128696 Call-2**) ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ 1ನೇ ದರ್ಜೆ ಅರ್ಹ ಗುತ್ತಿಗೆದಾರರಿಂದ ಕೆ.ಡಬ್ಲ್ಯೂ–3 ಷರತ್ತಿಗೊಳಪಟ್ಟು ದ್ವಿ ಲಕೋಟೆಯಲ್ಲಿ ದರಗಳನ್ನು ಆಹ್ವಾನಿಸಲಾಗಿದ್ದು ಇಚ್ಛೆಯುಳ್ಳ ಅರ್ಹ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಿ ತಮ್ಮ ದರಗಳನ್ನು **http://eproc.karnataka.gov.in** ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಂಡು ದಿನಾಂಕ: **11.04.2022 @ 4.30 ಗಂಟೆಯೊಳಗಾಗಿ ಸಲ್ಲಿಸಬಹುದಾಗಿದೆ.** ಸದರಿ ಭರ್ತಿ ಮಾಡಿ ಸಲ್ಲಿಸಲಾದ ತಾಂತ್ರಿಕ ಬಿಡ್‌ನ್ನು ದಿನಾಂಕ: **12.04.2022 @ 4.45ರ** ನಂತರ ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ: **13.04.2022 ರಂದು** ತೆರೆಯಲಾಗುವುದು ಹೆಚ್ಚಿನ ವಿವರಗಳಿಗೆ ನಗರಸಭೆಯ ವೆಬ್‌ಸೈಟ್ **www.sindanurcity.gov.in** ಮುಖಾಂತರ ಪಡೆದು ಸಲ್ಲಿಸಬಹುದು.

ಸಹಿ/– ಪೌರಾಯುಕ್ತರು, ನಗರಸಭೆ ಸಿಂಧನೂರು
ವಾ.ಸಾ.ಸಂ.ಇ/ರಾಯಚೂರು/15/ಎಂ.ಸಿ.&ಎ/2022–23

KRISHNA BHAGYA JALA NIGAM LIMITED
(A Government of Karnataka Undertaking)
Office of the Executive Engineer, KBJNL, Dam Division, Almatti-586201. Tq:B.Bagewadi Dt: Vijayapur.
Phone:08426-281027 E-mail:dam_division@rediffmail.com
No: KBJNL/DDA/DB/LSD-SHOPS/2021-22/15 Dated:04.04.2022

SHORT TERM TENDER NOTIFICATION
(Through E-Procurement Portal Only)

On behalf of the Managing Director, KBJNL, Bangalore the Executive Engineer, KBJNL, Dam Division, Almatti the undersigned invites tender from the interested persons who wants to get the commercial shelters at Landscape of Almatti Dam Site, on rental basis for a period of three years **(30 Nos. of shops).** The bidder can have access to e-tender document and submit from **04.04.2022 to 28.04.2022 up to 5.00pm. Cover-I (Technical Bid) will be opened on 30.04.2022 at 11.00am and Cover-II (Financial Bid) will be opened on 05.05.2022 at 11.00am** at the Office of the Executive Engineer, KBJNL, Dam Division, Almatti. For clarifications Office of the undersigned may be contacted during office hours **(Phone No. 08426-281027).** Further information about electronic tendering can be had from http://eproc.karnataka.gov.in/eportal/index.seam.

Sd/- Executive Engineer,
KBJNL, Dam Division, Almatti
ವಾಸಾಸಂಇ/ವಿಜಯಪುರ/12/ಎಂಸಿಎ/2022–23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರುರವರ ಕಛೇರಿ,
ಯಲಹಂಕ ವಿಭಾಗ, ಬೆಂಗಳೂರು– 560 064
ಸಂ: ಬಿಬಿಎಂಪಿ/ಕಾಪಾಅ/ಯವಿ/ಇ–ಪಿಎಂಟಿ/01/2022–23 ದಿನಾಂಕ:06.04.2022

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಯಲಹಂಕ ವಿಭಾಗ ಇವರು ಅರ್ಹ ಗುತ್ತಿಗೆದಾರಿಂದ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ	ಕಾಮಗಾರಿಯ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ. ಲಕ್ಷಗಳಲ್ಲಿ)
1.	ಯಲಹಂಕ ಉಪ ವಿಭಾಗದ ವಾರ್ಡ್ ಸಂಖ್ಯೆ 01, ಕೆಂಪೇಗೌಡ ವಾರ್ಡ್‌ನಲ್ಲಿರುವ ಯಲಹಂಕ ಕಲ್ಯಾಣಿಯಲ್ಲಿ ಹೆಚ್ಚುವರಿ ಅಭಿವೃದ್ಧಿ ಕಾಮಗಾರಿಗಳು.	60.00	1.20
2.	ಯಲಹಂಕ ಉಪನಗರ ಉಪ ವಿಭಾಗದ ವಾರ್ಡ್ ಸಂಖ್ಯೆ 03, ಅಟ್ಟೂರು ವಾರ್ಡ್‌ನಲ್ಲಿರುವ ಸಂತ ಸೇವಲಾಲ್ ಉದ್ಯಾನವನದ ಸುಧಾರಣೆ ಮತ್ತು ಅಭಿವೃದ್ಧಿ ಕಾಮಗಾರಿಗಳು.	100.00	1.50
3.	ಯಲಹಂಕ ಉಪನಗರ ಉಪ ವಿಭಾಗದ ವಾರ್ಡ್ ಸಂಖ್ಯೆ 03, ಅಟ್ಟೂರು ವಾರ್ಡ್‌ನಲ್ಲಿರುವ ಸಂಗೊಳ್ಳಿ ರಾಯಣ್ಣ ಉದ್ಯಾನವನದ ಸುಧಾರಣೆ ಮತ್ತು ಅಭಿವೃದ್ಧಿ ಕಾಮಗಾರಿಗಳು.	100.00	1.50
4.	ಯಲಹಂಕ ಉಪನಗರ ಉಪ ವಿಭಾಗದ ವಾರ್ಡ್ ಸಂಖ್ಯೆ 03ರ ಮುನೇಶ್ವರ ಬಡಾವಣೆಯಲ್ಲಿ ಬಾಕಿ ಉಳಿದ ರಸ್ತೆ ಡಾಂಬರೀಕರಣ ಕಾಮಗಾರಿಗಳು.	70.00	1.40
5.	ಯಲಹಂಕ ಉಪನಗರ ಉಪ ವಿಭಾಗದ ವಾರ್ಡ್ ಸಂಖ್ಯೆ 03, ಅಟ್ಟೂರು ವಾರ್ಡ್‌ನ ಚಿಕ್ಕದಿಣ್ಣೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಡಾಂಬರೀಕರಣ ಮತು ಸುಧಾರಣಾ ಕಾಮಗಾರಿಗಳು.	200.00	3.00
6.	ಯಲಹಂಕ ಉಪನಗರ ಉಪ ವಿಭಾಗದ ವಾರ್ಡ್ ಸಂಖ್ಯೆ 04ರ 16ನೇ ಎ ಅಡ್ಡರಸ್ತೆಯಲ್ಲಿ ಚರಂಡಿಗೋಡೆಯನ್ನು ನಿರ್ಮಿಸುವ ಕಾಮಗಾರಿ.	100.00	1.50
7.	ಯಲಹಂಕ ಉಪನಗರ ಉಪ ವಿಭಾಗದ ವಾರ್ಡ್ ಸಂಖ್ಯೆ 04ರ ಮಾತ್ರ ಬಡಾವಣೆಯಲಿ ಬಾಕಿ ಉಳಿದ ರಸ್ತೆ ಡಾಂಬರೀಕರಣ ಕಾಮಗಾರಿಗಳು.	70.00	1.40
8.	ಯಲಹಂಕ ನ್ಯೂ ಟೌನ್ ಉಪ ವಿಭಾಗದ ವಾರ್ಡ್ ಸಂಖ್ಯೆ 04 ರಲ್ಲಿರುವ ರಾಜ್ ಉದ್ಯಾನವನದ ಸುಧಾರಣೆ ಮತ್ತು ಅಭಿವೃದ್ಧಿ ಕಾಮಗಾರಿಗಳು.	100.00	1.50

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಿಂದ ದಿನಾಂಕ: ಡೌನ್‌ಲೊಡ್ ಮಾಡಿಕೊಳ್ಳಬಹುದು. 2) ಪೂರ್ವಭಾವಿ ಸಭೆ ದಿನಾಂಕ : **13.04.2022ರ ಸಂಜೆ 4.00 ಗಂಟೆಗೆ.** 3) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **22.04.2022ರ ಸಂಜೆ 4.00 ಗಂಟೆಯವರೆಗೆ** 4) ಬಿಡ್‌ಗಳನ್ನು ತೆರೆಯುವ ದಿನಾಂಕ: **25.04.2022ರ ಸಂಜೆ 4.00 ಗಂಟೆಯ ನಂತರ.** ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: **www.eproc.karnataka.gov.in** ನಲ್ಲಿ ಲಾಗಿನ್ ಮಾಡಿ ಪಡೆಯಬಹುದು ಅಥವಾ ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಯಲಹಂಕ ವಿಭಾಗ.

ಕೋವಿಡ್–19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ–6, ಘನ ತ್ಯಾಜ್ಯ ನಿರ್ವಹಣೆ, ಅನೆಕ್ಸ್ –3 ಕಟ್ಟಡ, 4ನೇ ಮಹಡಿ, ನರಸಿಂಹರಾಜ ಚೌಕ, ಬೆಂಗಳೂರು–560 002.
ಸಂಖ್ಯೆ: ಬೃಬೆಂಮಪಾ/ಕಾಪಾಅ–6/ಘತ್ಯಾನಿ/ಟೆಂಡರ್/01/2022–23 ದಿನಾಂಕ: 06.04.2022

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ದ್ವಿಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು–6, ಘನ ತ್ಯಾಜ್ಯ ನಿರ್ವಹಣೆ, ಬೃ.ಬೆಂ.ಮ.ಪಾಲಿಕೆ ಇವರು ಈ ಕೆಳಕಂಡ ಕಾಮಗಾರಿಗಳಿಗೆ **ನಿರ್ಮಾಣ ಉಸ್ತುವಾರಿ, ಯೋಜನೆ ನಿರ್ವಹಣೆ ಮತ್ತು ಗುಣಮಟ್ಟ ನಿಯಂತ್ರಣಕ್ಕೆ ಸಲಹಾಸೇವೆಗಳನ್ನು** ನೀಡುವುದಕ್ಕಾಗಿ **ಅರ್ಹ ಸಮಾಲೋಚಕರನ್ನು ನೇಮಿಸಿಕೊಳ್ಳಲು** (ತಾಂತ್ರಿಕ & ಆರ್ಥಿಕ) ಪ್ರಸ್ತಾವನೆಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ನಿಯೋಜನೆಯ ಹೆಸರು	ಕಾಮಗಾರಿ ಯೋಜನೆಯ ವೆಚ್ಚ (₹. ಲಕ್ಷಗಳಲ್ಲಿ)	ಇಎಂಡಿ (₹. ಗಳಲ್ಲಿ)
1	ರಾಜರಾಜೇಶ್ವರಿನಗರ ಕ್ಷೇತ್ರದಡಿ ಬರುವ ವಾರ್ಡ್ ಸಂಖ್ಯೆ–160ರಲ್ಲಿ ಘನ ತ್ಯಾಜ್ಯ ಲೀಚೆಟ್, ಒಳ ಚರಂಡಿ ತ್ಯಾಜ್ಯ ನೀರಿನ ಮಾರ್ಗ ಬದಲಾವಣೆ ಮತ್ತು ಹೊಸಕೆರೆಹಳ್ಳಿ ಕೆರೆ ಮತ್ತು ಕೆಂಚೇನಹಳ್ಳಿ ಕೆರೆ ಸಮಗ್ರ ಅಭಿವೃದ್ಧಿ ಮಾಡುವ ಕಾಮಗಾರಿಗಾಗಿ ನಿರ್ಮಾಣ ಉಸ್ತುವಾರಿ, ಯೋಜನೆ ನಿರ್ವಹಣೆ ಮತ್ತು ಗುಣಮಟ್ಟ ನಿಯಂತ್ರಣಕ್ಕೆ ಸಲಹಾಸೇವೆಗಳನ್ನು ನೀಡುವುದು.	1120.00	1,00,000/-
2	ಮಲ್ಲತ್ತಹಳ್ಳಿ ಕೆರೆಗೆ ಹರಿದು ಬರುವ ಒಳ ಚರಂಡಿ ನೀರನ್ನು ತಡೆಯಲು ಬೃಹತ್ ನೀರು ಕಾಲುವೆ ಚರಂಡಿ ನಿರ್ಮಾಣ ಮಾಡುವ ಮೂಲಕ ಮಾರ್ಗ ಬದಲಾವಣೆ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳಿಗೆ ನಿರ್ಮಾಣ ಉಸ್ತುವಾರಿ, ಯೋಜನೆ ನಿರ್ವಹಣೆ ಮತ್ತು ಗುಣಮಟ್ಟ ನಿಯಂತ್ರಣಕ್ಕೆ ಸಲಹಾಸೇವೆಗಳನ್ನು ನೀಡುವುದು.	2240.00	2,00,000/-
3	ರಾಜರಾಜೇಶ್ವರಿನಗರ ಕ್ಷೇತ್ರದಡಿ ಬರುವ ವಾರ್ಡ್ ಸಂಖ್ಯೆ–129ರಲ್ಲಿ ಘನ ತ್ಯಾಜ್ಯ ಲೀಚೆಟ್, ಒಳ ಚರಂಡಿ ತ್ಯಾಜ್ಯ ನೀರಿನ ಮಾರ್ಗ ಬದಲಾವಣೆ ಮತ್ತು ಶ್ರೀಗಂಧ ಕಾವಲ್ ಕೆರೆಗೆ ಸಮಗ್ರ ಅಭಿವೃದ್ಧಿ ಮಾಡುವ ಕಾಮಗಾರಿಗಾಗಿ ನಿರ್ಮಾಣ ಉಸ್ತುವಾರಿ, ಯೋಜನೆ ನಿರ್ವಹಣೆ ಮತ್ತು ಗುಣಮಟ್ಟ ನಿಯಂತ್ರಣಕ್ಕೆ ಸಲಹಾಸೇವೆಗಳನ್ನು ನೀಡುವುದು.	2240.00	2,00,000/-

ಟೆಂಡರ್ ವೇಳಾಪಟ್ಟಿ: (1) ಆರ್‌ಎಫ್‌ಪಿ ದಾಖಲೆಗಳ ಲಭ್ಯತೆ **06.04.2022ರ** ಸಂಜೆ **4:00** ಗಂಟೆಯಿಂದ. (2) ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ: **12.04.2022ರ** ಸಂಜೆ **4:00** ಗಂಟೆಯವರೆಗೆ. (3) ಬಿಡ್ ಪೂರ್ವಭಾವಿ ಸಭೆಯನ್ನು ನಿಯೋಜಿತ ಮುಖ್ಯ ಅಭಿಯಂತರರ ಕಚೇರಿ, (ಘ.ತ್ಯಾ.ನಿ) ಇಲ್ಲಿ ದಿನಾಂಕ **13.04.2022ರ** ಸಂಜೆ **4:00** ಗಂಟೆಗೆ ನಡೆಸಲಾಗುವುದು. (4) ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **19.04.2022ರ** ಸಂಜೆ **4:30** ಗಂಟೆ. (5) ತಾಂತ್ರಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **21.04.2022ರ** ಸಂಜೆ **4:00** ಗಂಟೆ. (6) ಆರ್ಥಿಕ ಪ್ರಸ್ತಾವನೆಗಳನ್ನು ತಾಂತ್ರಿಕ ಪ್ರಸ್ತಾವನೆಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅನುಮೋದನೆ ದೊರೆತ ನಂತರ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು–6,
ಘನ ತ್ಯಾಜ್ಯ ನಿರ್ವಹಣೆ

ಕೋವಿಡ್–19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಮರಿಯುಪೊಲ್, ಹಾರ್ಕಿವ್, ಮೈಕೊಲೈವ್‌ನಲ್ಲಿ ಸೇನಾ ಕಾರ್ಯಾಚರಣೆ ತೀವ್ರಗೊಳಿಸಿದ ರಷ್ಯಾ

ವೈಮಾನಿಕ ದಾಳಿ: ಉಕ್ರೇನ್ ಸೇನಾ ನೆಲೆ ಛಿದ್ರ

ಉಕ್ರೇನ್‌ನ ಬೊರೊಡಿಯಾಂಕಾದಲ್ಲಿ ರಷ್ಯಾ ಪಡೆ ನಡೆಸಿದ ಕ್ಷಿಪಣಿ ದಾಳಿಗೆ ಧ್ವಂಸಗೊಂಡಿರುವ ಅಪಾರ್ಟ್‌ಮೆಂಟ್ ಕಟ್ಟಡದಲ್ಲಿ ಅಳಿದುಳಿದ ವಸ್ತುಗಳಿಗಾಗಿ ಮಂಗಳವಾರ ನಿವಾಸಿಯೊಬ್ಬರು ಹುಡುಕಾಡಿದರು –ಎಪಿ/ಪಿಟಿಐ

ಕೀವ್, ಮಾಸ್ಕೊ (ಎಎಫ್‌ಪಿ): ಉಕ್ರೇನಿನ ಪೂರ್ವ ಮತ್ತು ಆಗ್ನೇಯ ಭಾಗದಲ್ಲಿ ರಷ್ಯಾ ಪಡೆಗಳು ಬುಧವಾರ ದಾಳಿಯನ್ನು ಮತ್ತಷ್ಟು ತೀವ್ರಗೊಳಿಸಿವೆ. ಐದು ಇಂಧನ ಸಂಗ್ರಹಾಗಾರ ಮತ್ತು ಸೇನಾ ನೆಲೆಗಳು ದಾಳಿಯಿಂದಾಗಿ ಧ್ವಂಸಗೊಂಡಿವೆ.

ಮರಿಯುಪೊಲ್‌ನಲ್ಲಿ ಉಭಯ ಸೇನಾ ಪಡೆಗಳ ನಡುವೆ ಭಾರಿ ಹೋರಾಟ ಮುಂದುವರಿದಿದೆ. ರಷ್ಯಾ ವಾಯುದಾಳಿಯನ್ನು ತೀವ್ರಗೊಳಿಸಿದ್ದು, ಉಕ್ರೇನ್ ಯೋಧರನ್ನು ಶರಣಾಗುವಂತೆ ಒತ್ತಡ ಹೆಚ್ಚಿಸುತ್ತಿದೆ ಎಂದು ಬ್ರಿಟನ್ ರಕ್ಷಣಾ ಸಚಿವಾಲಯದ ಗುಪ್ತಚರ ವಿಭಾಗ ಹೇಳಿದೆ.

ಉಕ್ರೇನ್ ಸೇನಾ ಸೌಲಭ್ಯಗಳನ್ನೇ ಗುರಿಯಾಗಿಸಿ ವಿಶೇಷ ಕಾರ್ಯಾಚರಣೆ ನಡೆಸುತ್ತಿರುವ ರಷ್ಯಾದ ಪಡೆಗಳು, ಬುಧವಾರ ಹಾರ್ಕಿವ್, ಮೈಕೊಲೈವ್‌ನ ನಿಕೊಲೈವ್ ಹಾಗೂ ನೊವೊಮೊಸ್ಕೊವ್‌ಸ್ಕ್‌ನಲ್ಲಿರುವ ಒಟ್ಟು ಐದು ಇಂಧನ ಸಂಗ್ರಹಾಗಾರಗಳನ್ನು ವಾಯು ಮತ್ತು ನೆಲಆಧರಿತ ಹೆಚ್ಚು ನಿಖರ ಕ್ಷಿಪಣಿಗಳಿಂದ ಧ್ವಂಸಗೊಳಿಸಿವೆ. ಇಲ್ಲಿಂದಲೇ ಹಾರ್ಕಿವ್, ನಿಕೊಲೈವ್ ಹಾಗೂ ಡಾನ್ ಪ್ರದೇಶದಲ್ಲಿ ಉಕ್ರೇನ್ ಸೇನೆಗೆ ಈ ಇಂಧನ ಮತ್ತು ಶಸ್ತ್ರಾಸ್ತ್ರ ರವಾನೆಯಾಗುತ್ತಿತ್ತು ಎಂದು ರಷ್ಯಾದ ರಕ್ಷಣಾ ಸಚಿವಾಲಯ ಹೇಳಿದೆ.

ವಿಮಾನ ಹೊಡೆದುರುಳಿಸುವ ಒಎಸ್‌ಎ–ಒಕೆಎಂ ಕ್ಷಿಪಣಿ ವ್ಯವಸ್ಥೆ ಮತ್ತು ಐದು ಶಸ್ತ್ರಾಸ್ತ್ರ ಉಗ್ರಾಣ ಹಾಗೂ 11 ಪ್ರಬಲ ನೆಲೆಗಳು ಸೇರಿ ಉಕ್ರೇನ್‌ನ 24 ಸೇನಾ ಸ್ವತ್ತುಗಳನ್ನು ವಾಯುಪಡೆಗಳು ನಾಶಪಡಿಸಿವೆ. ಬೆರಿಡಿಯಾನ್‌ಸ್ಕ್, ಗೊರ್ನಿಯಾಕ್, ಉವಾನ್‌ಸ್ಕೊ ಮತ್ತು ಚೆರ್ನೊಬಯಿವ್ಕಾದಲ್ಲಿ ಉಕ್ರೇನಿನ ನಾಲ್ಕು ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ.

ಲುಹಾನ್‌ಸ್ಕ್ ಗಣರಾಜ್ಯದ ನೊವೊಟೊಶ್ಕೊವ್‌ಸ್ಕೊಯಿ ಬಳಿ ಉಕ್ರೇನಿನ 50 ಯೋಧರಿದ್ದ ಬೆಟಾಲಿಯನ್, ಒಂಬತ್ತು ಶಸ್ತ್ರಸಜ್ಜಿತ ವಾಹನಗಳು, ಜಮುಲೊವ್ಕಾದ ಹೊರವಲಯದಲ್ಲಿ ಒಂದು ಇಂಧನ ಸಂಗ್ರಹಾಗಾರ, ಒಂದು ಶಸ್ತ್ರಸಜ್ಜಿತ ವಾಹನಗಳ ದುರಸ್ತಿ ಘಟಕವನ್ನು ವಾಯು ಆಧರಿತ ಹೆಚ್ಚು ನಿಖರ ಕ್ಷಿಪಣಿಗಳಿಂದ ರಷ್ಯಾದ ಸೇನೆಯು ನಾಶಪಡಿಸಿದೆ.

ರಷ್ಯಾದ ವಾಯುಪಡೆಗಳು ಬುಧವಾರ ನಡೆಸಿದ ದಾಳಿಯಲ್ಲಿ ಐದು ಮಾನವರಹಿತ ಡ್ರೋನ್, ಎಂಟು ಕಮಾಂಡ್ ಪೋಸ್ಟ್‌ಗಳು, ಮೂರು ಶಸ್ತ್ರಾಸ್ತ್ರ ಉಗ್ರಾಣಗಳು, ಸೇನಾ ಉಪಕರಣಗಳಿದ್ದ 21 ಪ್ರಬಲನೆಲೆಗಳು ಸೇರಿ ಉಕ್ರೇನ್‌ನ 33 ಮಿಲಿಟರಿ ಸ್ವತ್ತುಗಳನ್ನು ನಾಶಪಡಿಸಿವೆ ಎಂದು ರಷ್ಯಾ ರಕ್ಷಣಾ ಸಚಿವಾಲಯದ ವಕ್ತಾರ, ಮೇಜರ್ ಜನರಲ್ ಐಗೋರ್ ಕೊನಶೆಂಕವ್ ಸುದ್ದಿಗಾರರಿಗೆ ತಿಳಿಸಿದರು.

ಕಪ್ಪು ಸಮುದ್ರದ ಕರಾವಳಿಯಿಂದ ರಷ್ಯಾ ನೌಕಾ ಪಡೆ ಬಾಸ್ಟನ್ ಕ್ಷಿಪಣಿ ವ್ಯವಸ್ಥೆಯಿಂದ ಹೆಚ್ಚು ನಿಖರವಾದ ಎರಡು ಓನಿಕ್ಸ್ ಕ್ಷಿಪಣಿಗಳನ್ನು ಉಡಾಯಿಸಿ, ಉಕ್ರೇನ್ ಸೇನಾ ನೆಲೆಗಳನ್ನು ನಾಶ ಮಾಡಿದೆ.

ನಿಪ್ರೊ ನಗರದಲ್ಲಿನ ಇಂಧನ ಸಂಗ್ರಹಾಗಾರವನ್ನು ರಷ್ಯಾ ಪಡೆಗಳು ರಾತ್ರೋರಾತ್ರಿ ಧ್ವಂಸ ಮಾಡಿವೆ ಎಂದು ಉಕ್ರೇನ್ ಪ್ರಾದೇಶಿಕ ಅಧಿಕಾರಿಗಳು ಹೇಳಿದ್ದಾರೆ.

ಪರಿಹಾರ ಕೇಂದ್ರದ ಮೇಲೂ ದಾಳಿ

ಡೊನೆಟ್‌ಸ್ಕ್ ಪ್ರದೇಶದ ವುಲೆದರ್‌ನಲ್ಲಿನ ಮಾನವೀಯ ಪರಿಹಾರ ಕೇಂದ್ರ ಗುರಿಯಾಗಿಸಿ ರಷ್ಯಾ ಸೇನೆ ನಡೆಸಿದ ಫಿರಂಗಿ ದಾಳಿಯಲ್ಲಿ ಬುಧವಾರ ಇಬ್ಬರು ನಾಗರಿಕರು ಮೃತಪಟ್ಟಿದ್ದು, ಐವರು ಗಾಯಗೊಂಡಿದ್ದಾರೆ. ಹಲವು ಕಟ್ಟಡಗಳು ಧ್ವಂಸಗೊಂಡಿವೆ ಎಂದು ಪ್ರಾದೇಶಿಕ ಗವರ್ನರ್ ಪಾವ್‌ಲೊ ಕಿರಿಲಿಯನ್ಕ ತಿಳಿಸಿದ್ದಾರೆ.

ಮಂಗಳವಾರ ತಡರಾತ್ರಿ ಹಾರ್ಕಿವ್ ನಗರವೊಂದರಲ್ಲೇ ರಷ್ಯಾ ಪಡೆಗಳಿಂದ 27 ಬಾರಿ ಶೆಲ್ ದಾಳಿ ನಡೆಯಿತು. ವಸತಿ ಸ್ಥಳಗಳ ಮೇಲೂ ದಾಳಿ ಆಗಿದೆ ಎಂದು ಹಾರ್ಕಿವ್ ಗವರ್ನರ್ ಒಲೆಹ್ ಸಿನೆಹುಬೊವ್ ತಿಳಿಸಿದರು.

ಪೂರ್ವ ಉಕ್ರೇನಿನ ಸೆವೆರೊಡೊನೆಟ್‌ಸ್ಕ್ ಕೈಗಾರಿಕಾ ಪ್ರದೇಶದ ಮೇಲೆ ನಿರಂತರ ಶೆಲ್‌ಗಳು ಮತ್ತು ಕ್ಷಿಪಣಿಗಳ ದಾಳಿ ನಡೆಯುತ್ತಿರುವುದನ್ನು ಬುಧವಾರ ಪ್ರತ್ಯಕ್ಷವಾಗಿ ಕಂಡಿದ್ದಾಗಿ 'ಎಎಫ್‌ಪಿ' ಪತ್ರಕರ್ತರೊಬ್ಬರು ತಿಳಿಸಿದ್ದಾರೆ.

ಪುಟಿನ್ ಪುತ್ರಿಯರಿಗೆ ಹಣಕಾಸು ನಿರ್ಬಂಧ

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರ ಆಡಳಿತವು ರಷ್ಯಾ ವಿರುದ್ಧ ಮತ್ತಷ್ಟು ಕಠಿಣ ನಿರ್ಬಂಧ ಹೇರಲು ನಿರ್ಧರಿಸಿ, ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರ ಪುತ್ರಿಯರಾದ ಮರಿಯಾ ವೊರೊಂಟ್‌ಸೊವಾ ಮತ್ತು ಕತಿರೀನಾ ಟಿಕೊನೊವಾ ಅವರನ್ನು ಗುರಿಯಾಗಿಸಿ ಹಣಕಾಸು ನಿರ್ಬಂಧ ವಿಧಿಸಲು ತೀರ್ಮಾನಿಸಿದೆ.

ಮರಿಯಾ ಅವರು ಅನುವಂಶಿಕ ವಿಜ್ಞಾನದಲ್ಲಿ (ಜೆನೆಟಿಕ್) ಸಂಶೋಧಕಿಯಾಗಿದ್ದಾರೆ. ಕತಿರೀನಾ ಮಾಸ್ಕೊ ಸ್ಟೇಟ್ ಯುನಿವರ್ಸಿಟಿಯಲ್ಲಿ ಮೆಥಾಮೆಟಿಕಲ್ ರಿಸರ್ಚ್ ಆಫ್ ಕಾಂಪ್ಲೆಕ್ಸ್ ಸಿಸ್ಟಮ್ ಇನ್‌ಸ್ಟಿಟ್ಯೂಟ್‌ನ ಉಪನಿರ್ದೇಶಕಿಯಾಗಿದ್ದರು. ಪುಟಿನ್ ಅವರ ಇಬ್ಬರು ಪುತ್ರಿಯರಿಗೆ ಜಾಗತಿಕ ಬ್ಯಾಂಕುಗಳಲ್ಲಿ ಹಣಕಾಸು ನಿರ್ವಹಣೆ ಮಾಡದಂತೆ ನಿರ್ಬಂಧ ವಿಧಿಸಲು ಹಣಕಾಸು ಅಧಿಕಾರಿಗಳಿಗೆ ಅಮೆರಿಕ ಸೂಚಿಸಿದೆ ಎಂದು ಹೆಸರು ಬಯಸದ ಅಧಿಕಾರಿಯ ಹೇಳಿಕೆ ಉಲ್ಲೇಖಿಸಿ 'ವಾಷಿಂಗ್ಟನ್ ಪೋಸ್ಟ್' ವರದಿ ಮಾಡಿದೆ.

42ನೇ ದಿನದ ಬೆಳವಣಿಗೆಗಳು

- 'ಯುದ್ಧಾಪರಾಧಗಳು ಹಣಕಾಸಿನ ನಷ್ಟದಷ್ಟು ಭಯಾನಕವಲ್ಲ' ಎಂದು ಭಾವಿಸಿರುವ ಐರೋಪ್ಯ ರಾಷ್ಟ್ರಗಳ ನಾಯಕರ ನಡೆ ಖಂಡನೀಯ. ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ಕಾಯಂ ಸದಸ್ಯ ಸ್ಥಾನದಿಂದ ರಷ್ಯಾವನ್ನು ಕಿತ್ತೊಗೆಯಬೇಕು, ಯುದ್ಧಾಪರಾಧಕ್ಕಾಗಿ ರಷ್ಯಾ ಶಿಕ್ಷಿಸಲು ಆಗದಿದ್ದರೆ ವಿಶ್ವಸಂಸ್ಥೆಯ ಬಾಗಿಲು ಮುಚ್ಚಿ– ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಆಕ್ರೋಶ
- ಉಕ್ರೇನ್ ಮೇಲಿನ ಆಕ್ರಮಣಕ್ಕೆ ರಷ್ಯಾವನ್ನು ಖಂಡಿಸಲು ಚೀನಾ ನಿರಾಕರಿಸಿದೆ. ಬುಕಾದಲ್ಲಿನ ನಾಗರಿಕರ ಹತ್ಯೆಗಳು 'ತುಂಬಾ ಕಳವಳಕಾರಿ'. ಇದರ ತನಿಖೆಯಾಗಲಿ– ಚೀನಾ ವಿದೇಶಾಂಗ ಸಚಿವಾಲಯದ ವಕ್ತಾರ ಜಹೋ ಲಿಜಿಯನ್
- ಕೀವ್‌ನಿಂದ ಪುಟಿನ್ ಅವರು ಸೇನೆಯನ್ನು ಹಿಂತೆಗೆದುಕೊಂಡಿದ್ದು 'ಸದ್ಭಾವನೆಯ ಸೂಚಕ'. ಮಾತುಕತೆಯ ಹಾದಿ ಸುಗಮಗೊಳಿಸಲು ಈ ತೀರ್ಮಾನ ತೆಗೆದುಕೊಳ್ಳಲಾಗಿತ್ತು– ಪುಟಿನ್ ವಕ್ತಾರ ಡಿಮಿಟ್ರ ಪೆಸ್ಕೊವ್
- ಸಾವಿರಾರು ನಾಗರಿಕರು ಸಿಲುಕಿರುವ ಭಗ್ನಗೊಂಡ ನಗರ ಮರಿಯುಪೊಲ್ ತಲುಪಲು ಐದು ದಿನಗಳಿಂದ ನಮ್ಮ ತಂಡ ಹರಸಾಹಸಪಡುತ್ತಿದೆ. ನಗರ ಪ್ರವೇಶಿಸುವುದು ಅಸಾಧ್ಯವಾಗಿದೆ– ರೆಡ್‌ಕ್ರಾಸ್ ಸಂಸ್ಥೆ
- ಅಮೆರಿಕವು ರಷ್ಯಾದಲ್ಲಿ ಹೊಸ ಹೂಡಿಕೆಗಳ ಮೇಲೆ ನಿಷೇಧ ಹೇರಿದೆ. ಗ್ರೀಕ್ ಮತ್ತು ನಾರ್ವೆ ರಷ್ಯಾ ರಾಜತಾಂತ್ರಿಕರನ್ನು ಉಚ್ಚಾಟಿಸಿದ್ದು, ರಷ್ಯಾದ ಜತೆಗಿನ ರಾಜತಾಂತ್ರಿಕ ಸಂಬಂಧಗಳನ್ನು ಕಡಿದುಕೊಂಡಿವೆ
- ರಷ್ಯಾದ ದಾಳಿಯಿಂದ ಹಾನಿಗೀಡಾಗಿದ್ದ ಚೆರ್ನೋಬಿಲ್ ಮಾಣು ವಿದ್ಯುತ್ ಸ್ಥಾವರವನ್ನು ಉಕ್ರೇನ್ ಸೇನೆ ಮರಳಿ ವಶಕ್ಕೆ ಪಡೆದಿದೆ
- ನಾಗರಿಕರ ಸ್ಥಳಾಂತರಕ್ಕೆ 11 ಮಾನವೀಯ ಕಾರಿಡಾರ್‌ಗಳನ್ನು ತೆರೆಯಲು ರಷ್ಯಾ– ಉಕ್ರೇನ್ ಸಹಮತ– ಉಕ್ರೇನ್ ಉಪ ಪ್ರಧಾನಿ ಇರಿನಾ ವೆರೆಶ್‌ಚುಕ್
- ಉಕ್ರೇನ್ ಆಕ್ರಮಣದಲ್ಲಿ ರಷ್ಯಾ ಅಧ್ಯಕ್ಷ ಪುಟಿನ್ ಅವರನ್ನು ಸೋಲಿಸದೇ ಬಿಡುವುದಿಲ್ಲ – ಬ್ರಿಟನ್ ವಿದೇಶಾಂಗ ಕಾರ್ಯದರ್ಶಿ ಲಿಸ್ ಟ್ರಸ್
- ರಷ್ಯಾದ ಅತಿದೊಡ್ಡ ಬ್ಯಾಂಕ್ ಸ್ಬೆರ್‌ಬ್ಯಾಂಕ್‌ನ ಸಂಪೂರ್ಣ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಜತೆಗೆ ರಷ್ಯಾದಲ್ಲಿ ಹೊಸ ಹೂಡಿಕೆ ಮಾಡದಿರಲು ಬ್ರಿಟನ್ ನಿರ್ಧರಿಸಿದೆ
- ಅಮೆರಿಕ ಮತ್ತು ಮಿತ್ರರಾಷ್ಟ್ರಗಳು ಹೊಸದಾಗಿ ಹೇರಿರುವ ನಿರ್ಬಂಧಗಳು, ರಷ್ಯಾ ತಕ್ಕ ಬೆಲೆ ತೆರುವಂತೆ ಮಾಡಲಿವೆ– ಜೋ ಬೈಡನ್
- ಉಕ್ರೇನ್ ಅಷ್ಟೇ ಅಲ್ಲ, ಜಗತ್ತಿನಾದ್ಯಂತ ಮಿಲಿಟರಿ ಜೈವಿಕ ಅಸ್ತ್ರಗಳ ಪ್ರಯೋಗಗಳ ಚಟುವಟಿಕೆ ಅಮೆರಿಕದ ಸಹಭಾಗಿತ್ವದಲ್ಲಿ ನಡೆಯುತ್ತಿದೆ. ಇದರಿಂದ ವಿಶ್ವಶಾಂತಿ ಮತ್ತು ಭದ್ರತೆಗೆ ಧಕ್ಕೆ. ಉಕ್ರೇನ್‌ನಲ್ಲಿ ಇದಕ್ಕೆ ಸೂಕ್ತ ಸಾಕ್ಷ್ಯಗಳನ್ನು ಕಲೆ ಹಾಕಿದ್ದೇವೆ– ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಸಭೆಯಲ್ಲಿ ರಷ್ಯಾದ ಕಾಯಂ ಪ್ರತಿನಿಧಿ ಡಿಮಿಟ್ರ ಪೊಲಿಯನ್‌ಸ್ಕಿ

ರಷ್ಯಾ ರಾಯಭಾರ ಕಚೇರಿ ಗೇಟಿಗೆ ಸ್ಫೋಟಕಗಳಿದ್ದ ಕಾರು ಡಿಕ್ಕಿ

ಬುಕಾರೆಸ್ಟ್ (ಎಪಿ): ಬೆಂಕಿ ಸುಲಭವಾಗಿ ವ್ಯಾಪಿಸುವ ವಸ್ತುಗಳು ಹಾಗೂ ಸ್ಫೋಟಕಗಳಿದ್ದ ಕಾರೊಂದು ರೊಮೇನಿಯಾ ರಾಜಧಾನಿ ಬುಕಾರೆಸ್ಟ್‌ನಲ್ಲಿ ರಷ್ಯಾದ ರಾಜತಾಂತ್ರಿಕ ಕಚೇರಿ ಗೇಟಿಗೆ ಡಿಕ್ಕಿ ಹೊಡೆದಿದೆ. ಬೆಂಕಿ ಹೊತ್ತಿಕೊಂಡು ಕಾರು ಚಾಲಕ ಮೃತಪಟ್ಟಿದ್ದಾನೆ.

ಬುಧವಾರ ಬೆಳಿಗ್ಗೆ 6 ಗಂಟೆ ವೇಳೆ ಘಟನೆ ಸಂಭವಿಸಿದೆ. ಸ್ಥಳಕ್ಕೆ ದೌಡಾಯಿಸಿದ ಅಗ್ನಿಶಾಮಕ ಸೇವೆ, ಭದ್ರತಾ ಸಿಬ್ಬಂದಿ ಬೆಂಕಿಯನ್ನು ನಂದಿಸಿದರು. ಕಾರಿನಲ್ಲಿ ಹಲವು ಸರಕುಗಳು ಪತ್ತೆಯಾಗಿವೆ. ತನಿಖೆ ನಡೆಯುತ್ತಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಮತ್ತೊಂದೆಡೆ ಈ ಬಗ್ಗೆ ಹೇಳಿಕೆ ಬಿಡುಗಡೆ ಮಾಡಿದ ರಷ್ಯಾದ ರಾಯಭಾರ ಕಚೇರಿಯು, 'ಅವಘಡದಲ್ಲಿ ಸಿಬ್ಬಂದಿಗೆ ಗಾಯವಾಗಿಲ್ಲ. ಬುಕಾದಲ್ಲಿ ರಷ್ಯಾ ಯೋಧರು ನರಮೇಧ ನಡೆಸಿದ್ದಾರೆ ಎಂದು ಪ್ರಚೋದನೆಗೊಂಡು ಕೃತ್ಯ ಎಸಗಿರುವ ಶಂಕೆ ಇದೆ' ಎಂದಿದ್ದಾರೆ.

'ಸಾಕ್ಷ್ಯ ನಾಶಕ್ಕೆ ಸಂಚಾರಿ ಚಿತಾಗಾರ'

ಮರಿಯುಪೊಲ್ (ಉಕ್ರೇನ್): ಯುದ್ಧಾಪರಾಧಗಳನ್ನು ಮುಚ್ಚಿಹಾಕಲು ರಷ್ಯಾ ಪಡೆಗಳು 'ಸಂಚಾರಿ ಚಿತಾಗಾರ'ಗಳನ್ನು ಬಳಸುತ್ತಿವೆ ಎಂದು ಮರಿಯುಪೊಲ್ ಸಿಟಿ ಕೌನ್ಸಿಲ್ ಉಕ್ರೇನಿನ ಸ್ಥಳೀಯ ಅಧಿಕಾರಿಗಳು ಬುಧವಾರ ಆರೋಪಿಸಿದ್ದಾರೆ.

ಬಂದರು ನಗರ ಆಕ್ರಮಿಸಿಕೊಂಡಾಗ ತನ್ನ ಸಶಸ್ತ್ರ ಪಡೆಗಳು ಎಸಗಿರುವ ಯುದ್ಧಾಪರಾಧಗಳನ್ನು ಮುಚ್ಚಿಹಾಕಲು ರಷ್ಯಾ ಪ್ರಯತ್ನಿಸುತ್ತಿದೆ.

ಆಕ್ರಮಣದ ವೇಳೆ ಹತ್ಯೆಯಾದ ಉಕ್ರೇನ್ ನಾಗರಿಕರ ಗುರುತು ಸಿಗದಂತೆ ಸುಟ್ಟು ಹಾಕಲು 'ಸಂಚಾರಿ ಚಿತಾಗಾರ'ಗಳನ್ನು ರಷ್ಯಾ ಸೇನೆ ನಿಯೋಜಿಸಿದೆ. ಅಲ್ಲದೇ, ಯುದ್ಧಾಪರಾಧಗಳ ಸಾಕ್ಷಿದಾರರು ಮತ್ತು ಉಕ್ರೇನ್ ರಾಷ್ಟ್ರೀಯವಾದಿಗಳನ್ನು ಪತ್ತೆಹಚ್ಚಲು ಶೋಧನಾ ಶಿಬಿರಗಳನ್ನು (ಫಿಲ್ಟರೇಶನ್ ಕ್ಯಾಂಪ್) ಸಜ್ಜುಗೊಳಿಸಿಕೊಂಡಿದೆ ಎಂದು ಸಿಟಿ ಕೌನ್ಸಿಲ್ ಟೆಲಿಗ್ರಾಮ್‌ನಲ್ಲಿ ಹೇಳಿರುವುದಾಗಿ 'ವಾಸಿಂಗ್ಟನ್ ಪೋಸ್ಟ್' ವರದಿ ಮಾಡಿದೆ.

'ಉಕ್ರೇನಿನ ಆಗ್ನೇಯ ಮತ್ತು ಪೂರ್ವ ಭಾಗದಿಂದ ದಾಳಿ ನಡೆಸಲು ಸೇನೆಯನ್ನು ಮರು ಸಂಯೋಜಿಸಲು ಕೆಲವು ನಗರಗಳಿಂದ ಪಡೆಗಳನ್ನು ರಷ್ಯಾ ಹಿಂಪಡೆಯುವಾಗ ಕೀವ್ ನಗರದ ಹೊರವಲಯದ ಬುಕಾ ಸೇರಿ ಹಲವು ಉಪನಗರಗಳಲ್ಲಿ ನರಮೇಧ ನಡೆದಿದೆ. ಸಾಮೂಹಿಕ ಸಮಾಧಿಗಳನ್ನು ಉಕ್ರೇನ್ ಅಧಿಕಾರಿಗಳು ಮತ್ತು ಸ್ವತಂತ್ರ ಪತ್ರಕರ್ತರು ಪತ್ತೆಹಚ್ಚಿದ್ದರು. ಬುಕಾ ನರಮೇಧಕ್ಕೆ ಜಾಗತಿಕಮಟ್ಟದಲ್ಲಿ ಆಕ್ರೋಶ ವ್ಯಕ್ತವಾಯಿತು. ಯುದ್ಧಾಪರಾಧಗಳಿಗಾಗಿ ಪುಟಿನ್ ಅವರನ್ನು ಶಿಕ್ಷಿಸಬೇಕೆಂದು ವಿಶ್ವಮಟ್ಟದಲ್ಲಿ ಒತ್ತಡ ಹೆಚ್ಚುತ್ತಿದೆ. ಹೀಗಾಗಿ ಯುದ್ಧಾಪರಾಧಗಳ ಸಾಕ್ಷ್ಯ ನಾಶಕ್ಕೆ ರಷ್ಯಾ ಪಡೆಗಳು ಈ ಹಾದಿ ಹಿಡಿದಿವೆ' ಎಂದು ಸಿಟಿ ಕೌನ್ಸಿಲ್ ದೂರಿದೆ.

'ನಾಜಿ ಕಾನ್ಸಂಟ್ರೇಶನ್ ಕ್ಯಾಂಪ್‌ಗಳ ನಂತರ ಜಗತ್ತು ಮರಿಯುಪೊಲ್‌ನಲ್ಲಿ ನಡೆದಿರುವಂತಹ ದುರಂತ ನೋಡಿರಲಿಲ್ಲ. ದುರದೃಷ್ಟವಶಾತ್, ಇಂತಹ ವಿಲಕ್ಷಣ ಕೃತ್ಯ ಹೆಚ್ಚುತ್ತಿರುವುದನ್ನು ಈ ಜಗತ್ತು ನೋಡುತ್ತಿದೆ. ಇದು ಚೆಚೆನ್ಯಾ ಅಥವಾ ಅಲೆಪ್ಪೊದಂತೆ ಸುಧೀರ್ಘವಾಗಿ ನಡೆಯದು' ಎಂದು ಮೇಯರ್ ವಾಡಿಂ ಬೊಯ್‌ಶೆಂಕ್ ಹೇಳಿರುವುದಾಗಿ ಉಲ್ಲೇಖಿಸಿದೆ.

ಉಕ್ರೇನ್‌ನ ನಾಗರಿಕರ ಹತ್ಯೆಗೆ ಖಂಡನೆ: ಸ್ವತಂತ್ರ ತನಿಖೆಗೆ ಭಾರತ ಕರೆ

ನವದೆಹಲಿ (ಪಿಟಿಐ): ಉಕ್ರೇನ್‌ನ ಬುಕಾ ನಗರದಲ್ಲಿನ ನಾಗರಿಕರ ಹತ್ಯೆಗಳನ್ನು ಬುಧವಾರ ಖಂಡಿಸಿರುವ ಭಾರತ, ಸ್ವತಂತ್ರ ತನಿಖೆಗೆ ಕರೆ ನೀಡಿದೆ.

ಉಕ್ರೇನ್‌ನ ಪರಿಸ್ಥಿತಿ ಕುರಿತು ಲೋಕಸಭೆಯಲ್ಲಿ ಬುಧವಾರ ನಡೆದ ಚರ್ಚೆ ವೇಳೆ ಪ್ರತಿಕ್ರಿಯಿಸಿದ ವಿದೇಶಾಂಗ ಸಚಿವ ಎಸ್. ಜೈಶಂಕರ್, 'ಬುಕಾ ನಗರದಲ್ಲಿ ನಡೆದ ನಾಗರಿಕ ಹತ್ಯೆಗಳನ್ನು ಭಾರತ ಬಲವಾಗಿ ಖಂಡಿಸುತ್ತದೆ ಮತ್ತು ಈ ಕುರಿತು ಸ್ವತಂತ್ರ ತನಿಖೆ ನಡೆಯಬೇಕು ಎಂದು ಬಯಸುತ್ತದೆ' ಎಂದು ಹೇಳಿದರು.

'ಭಾರತವು ಶಾಂತಿ ಸ್ಥಾಪನೆಯ ಪರ ಇದ್ದು, ಕೂಡಲೇ ಹಿಂಸಾಚಾರವನ್ನು ಅಂತ್ಯಗೊಳಿಸಿ' ಎಂದು ಒತ್ತಾಯಿಸಿದರು.

ಭಾರತವು ಉಕ್ರೇನ್ ಮತ್ತು ರಷ್ಯಾ ನಡುವಿನ ಮಾತುಕತೆಗಳನ್ನು ಪ್ರೋತ್ಸಾಹಿಸುತ್ತದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಭಾರತದ ನೆರವಿನ ಅಗತ್ಯವಿದ್ದರೆ, ಅದನ್ನು ಸಂತೋಷದಿಂದ ಕೊಡಲು ಸಿದ್ಧವಿರುವುದಾಗಿ ಅವರು ತಿಳಿಸಿದರು. ಮಾತುಕತೆಯ ಮೂಲಕ ಸಂಘರ್ಷವನ್ನು ಕೊನೆಗೊಳಿಸುವುದು ಸೂಕ್ತವಾಗಿದೆ ಎಂದರು.

ಉಕ್ರೇನ್‌ನಿಂದ ತನ್ನ ನಾಗರಿಕರನ್ನು ಸ್ಥಳಾಂತರಿಸಿದ ಮೊದಲ ದೇಶ ಭಾರತವಾಗಿದ್ದು, ಈ ಮೂಲಕ ಭಾರತ ಇತರರಿಗೆ ಸ್ಫೂರ್ತಿಯಾಗಿದೆ'ಎಂದರು. ಉಕ್ರೇನ್ ಪರಿಸ್ಥಿತಿ ಕುರಿತು ಭಾರತದ ಕ್ರಮಗಳಿಗೆ ರಾಜಕೀಯ ಬಣ್ಣ ಬಳಿಯುವುದು ದುರದೃಷ್ಟಕರ ಎಂದು ಜೈಶಂಕರ್ ಇದೇ ವೇಳೆ ಬೇಸರ ವ್ಯಕ್ತಪಡಿಸಿದರು.

ರಂಜಾನ್: ವಿಶೇಷ ಸೌಲಭ್ಯ ರದ್ದು

ನವದೆಹಲಿ (ಪಿಟಿಐ): ರಂಜಾನ್ ಮಾಸದ ಪ್ರಯುಕ್ತ ಉಪವಾಸ ಆಚರಿಸುತ್ತಿರುವ ತನ್ನ ಮುಸ್ಲಿಂ ನೌಕರರಿಗೆ ಬೇಗ ಮನೆಗೆ ತೆರಳಲು ಅವಕಾಶ ಕಲ್ಪಿಸಿದ್ದ ಆದೇಶವನ್ನು ದೆಹಲಿ ನಗರಸಭೆ (ಎನ್‌ಡಿಎಂಸಿ) ಹಿಂಪಡೆದಿದೆ.

ಉಪವಾಸ ಆಚರಣೆಯಲ್ಲಿರುವ ನೌಕರರಿಗೆ ಕಚೇರಿಯಿಂದ ಬೇಗ ಮನೆಗೆ ತೆರಳಲು ಅವಕಾಶ ಕಲ್ಪಿಸುವ ಆದೇಶವನ್ನು ಎನ್‌ಡಿಎಂಸಿ ಮಂಗಳವಾರ ಹೊರಡಿಸಿತ್ತು. ಆದರೆ ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದ ಎನ್‌ಡಿಎಂಸಿ ಉಪಾಧ್ಯಕ್ಷ ಸತೀಶ್ ಉಪಾಧ್ಯಾಯ್ ಅವರು ಇಂಥ ಕ್ರಮವು ಜಾತ್ಯತೀತವಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದರು.

ಶ್ರೀಲಂಕಾ: ರಾಷ್ಟ್ರೀಯ ತುರ್ತು ಪರಿಸ್ಥಿತಿ ತೆರವು • ಹಿಂಸಾಚಾರ ಕೊನೆಗೊಳಿಸಲು ಜನರಲ್ಲಿ ಮನವಿ

ಗೊಟಬಯ ರಾಜೀನಾಮೆ ಇಲ್ಲ: ಸರ್ಕಾರ ಸ್ಪಷ್ಟನೆ

ಕೊಲಂಬೊ (ಪಿಟಿಐ/ ರಾಯಿಟರ್ಸ್): ದ್ವೀಪರಾಷ್ಟ್ರದಲ್ಲಿ ಹೇರಲಾಗಿದ್ದ ರಾಷ್ಟ್ರೀಯ ತುರ್ತು ಪರಿಸ್ಥಿತಿಯನ್ನು ಶ್ರೀಲಂಕಾ ಅಧ್ಯಕ್ಷ ಗೊಟಬಯ ರಾಜಪಕ್ಸ ಅವರು ಮಂಗಳವಾರ ತಡರಾತ್ರಿ ಹಿಂತೆಗೆದುಕೊಂಡಿದ್ದಾರೆ. ಇಂತಹ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ರಾಜಪಕ್ಸ ಅವರು ಯಾವ ಕಾರಣಕ್ಕೂ ರಾಜೀನಾಮೆ ನೀಡುವುದಿಲ್ಲ ಎಂದು ಸರ್ಕಾರ ಬುಧವಾರ ಹೇಳಿದೆ.

ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿರುವ ಶ್ರೀಲಂಕಾದಲ್ಲಿ ಸರ್ಕಾರದ ವಿರುದ್ಧ ಪ್ರತಿಭಟನೆಗಳು ಹೆಚ್ಚಿದ್ದರಿಂದ ಏಪ್ರಿಲ್ 1ರಂದು ತುರ್ತು ಪರಿಸ್ಥಿತಿ ಘೋಷಿಸಲಾಗಿತ್ತು. ಆಯೋಜನೆಯಾಗಿದ್ದ ಸರಣಿ ಪ್ರತಿಭಟನೆಗಳನ್ನು ನಿಗ್ರಹಿಸಲು ದೇಶದಾದ್ಯಂತ ಕರ್ಫ್ಯೂ ಹೇರಲಾಗಿತ್ತು. ಸರ್ಕಾರದ ಈ ನಿರ್ಧಾರಕ್ಕೆ ವ್ಯಾಪಕ ಪ್ರತಿರೋಧ ವ್ಯಕ್ತವಾಗಿತ್ತು. ಗೊಟಬಯ ಅವರು ರಾಜೀನಾಮೆ ನೀಡಬೇಕು ಎಂಬ ಕೂಗು ಪ್ರಬಲವಾಗಿತ್ತು.

ರಾಜೀನಾಮೆ ಬೇಡಿಕೆಯನ್ನು ತಳ್ಳಿಹಾಕಿರುವ ಸರ್ಕಾರ, ಗೊಟಬಯ ಅವರು ಪರಿಸ್ಥಿತಿಯನ್ನು ಎದುರಿಸಲಿದ್ದಾರೆ ಎಂದು ತಿಳಿಸಿದೆ. ಸರ್ಕಾರವು ಈ ಕಠಿಣ ಪರಿಸ್ಥಿತಿಯನ್ನು ಎದುರಿಸಲು ಸಮರ್ಥವಾಗಿದ್ದು, ಚುನಾವಣೆ ಮೂಲಕ ಆಯ್ಕೆಯಾಗಿರುವ ಗೊಟಬಯ ಅವರು ರಾಜೀನಾಮೆ ನೀಡುವ ಪ್ರಶ್ನೆಯೇ ಇಲ್ಲ ಎಂದು ಸಚಿವ ಜಾನ್ಸನ್ ಫರ್ನಾಂಡೊ ಸ್ಪಷ್ಟಪಡಿಸಿದ್ದಾರೆ.

ದೇಶದಲ್ಲಿ ಉಂಟಾಗಿರುವ ಹಿಂಸಾಚಾರಕ್ಕೆ ಜನತಾ ವಿಮುಕ್ತಿ ಪೆರಮುನ ವಾಸ್ (ಜೆವಿಪಿ) ಪಕ್ಷವೇ ಕಾರಣ ಎಂದು ಆರೋಪಿಸಿರುವ ಫರ್ನಾಂಡೊ, ಹಿಂಸಾಚಾರ ಕೊನೆಗೊಳಿಸುವಂತೆ ಜನರಿಗೆ ಮನವಿ ಮಾಡಿದ್ದಾರೆ.

ಮುಖ್ಯಾಂಶಗಳು

- ಇಂಧನದ ತೀವ್ರ ಕೊರತೆ ಎದುರಿಸುತ್ತಿರುವ ಲಂಕಾಗೆ ಭಾರತದ ನೆರವು
- 36 ಸಾವಿರ ಟನ್ ಪೆಟ್ರೋಲ್, 40 ಸಾವಿರ ಟನ್ ಡೀಸೆಲ್ ರವಾನೆ
- ಕೊಲಂಬೊದಲ್ಲಿರುವ ಭಾರತೀಯ ರಾಯಭಾರ ಕಚೇರಿ ಮಾಹಿತಿ

ಸರ್ಕಾರಕ್ಕೆ ಈಗ ಮುಂದೆ ಹೋಗುವುದು ಅಸಾಧ್ಯ. ಎಲ್ಲರನ್ನೂ ಒಳಗೊಂಡ ಸರ್ಕಾರವು ಆರು ತಿಂಗಳು ಆಡಳಿತ ನಡೆಸಿದ ಬಳಿಕ ಚುನಾವಣೆಗೆ ಹೋಗುವುದು ಸರಿಯಾದ ಆಯ್ಕೆಯಾಗುತ್ತದೆ

ನಾನಯಕ್ಕರ, ಡಿಎಲ್‌ಎಫ್ ನಾಯಕ

ಶ್ರೀಲಂಕಾದ ಸರ್ಕಾರಿ ವೈದ್ಯರು ಕೊಲಂಬೊದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು–ಎಎಫ್‌ಪಿ ಚಿತ್ರ

ಎಂತಹ ಕಠಿಣ ನಿರ್ಧಾರಗಳನ್ನು ಬೇಕಾದರೂ ತೆಗೆದುಗೊಳ್ಳಲು ಭದ್ರತಾ ಪಡೆಗಳಿಗೆ ಅವಕಾಶ ನೀಡುವ ತುರ್ತು ಪರಿಸ್ಥಿತಿ ಹೇರಿಕೆ ನಿರ್ಧಾರವನ್ನು ಸರ್ಕಾರ ಸಮರ್ಥಿಸಿಕೊಂಡಿದೆ. ಅಧ್ಯಕ್ಷರ ಕಚೇರಿ ಹಾಗೂ ಇತರ ಸಾರ್ವಜನಿಕ ಸ್ಥಳಗಳ ಮೇಲಿನ ದಾಳಿಯನ್ನು ತಡೆಗಟ್ಟುವ ಉದ್ದೇಶದಿಂದ ಈ ಕ್ರಮ ಅನಿವಾರ್ಯವಾಗಿತ್ತು ಎಂದು ಸರ್ಕಾರ ತಿಳಿಸಿದೆ.

ಅಡುಗೆ ಅನಿಲ, ಪೆಟ್ರೋಲ್, ವಿದ್ಯುತ್, ಹಾಲಿನಪುಡಿ ಮೊದಲಾದ ಜೀವನಾವಶ್ಯಕ ವಸ್ತುಗಳ ತೀವ್ರ ಕೊರತೆಯನ್ನು ಖಂಡಿಸಿ ಜನರು ಬೀದಿಗಿಳಿದು ಪ್ರತಿಭಟನೆ ನಡೆಸಿದ್ದರು. ಈ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿದ್ದರಿಂದ ಗೊಟಬಯ ಅವರು ತುರ್ತು ಪರಿಸ್ಥಿತಿ ಘೋಷಿಸಿದ್ದರು.

ರಾಯಭಾರ ಕಚೇರಿ ಬಂದ್: ಹಣಕಾಸಿನ ತೀವ್ರ ಮುಗ್ಗಟ್ಟು ಎದುರಿಸುತ್ತಿರುವ ಶ್ರೀಲಂಕಾ, ನಾರ್ವೆ ಹಾಗೂ ಇರಾಕ್‌ನಲ್ಲಿರುವ ತನ್ನ ರಾಯಭಾರ ಕಚೇರಿಗಳನ್ನು ತಾತ್ಕಾಲಿಕವಾಗಿ ಮುಚ್ಚುವ ನಿರ್ಧಾರ ತೆಗೆದುಕೊಂಡಿದೆ. ಹಾಗೆಯೇ ಸಿಡ್ನಿಯಲ್ಲಿರುವ ಕಾನ್ಸುಲ್ ಜನರಲ್ ಕಚೇರಿಯನ್ನೂ ಕೆಲಕಾಲ ಬಂದ್ ಮಾಡಲು ನಿರ್ಧರಿಸಿದೆ.

ಬಿಕ್ಕಟ್ಟು ಇನ್ನಷ್ಟು ಉಲ್ಬಣ: ಸ್ಪೀಕರ್ ಎಚ್ಚರಿಕೆ

2.2 ಕೋಟಿ ಜನಸಂಖ್ಯೆಯ ದ್ವೀಪರಾಷ್ಟ್ರದಲ್ಲಿ ಅಗತ್ಯವಸ್ತುಗಳ ತೀವ್ರ ಕೊರತೆಯಿಂದ ಆರ್ಥಿಕ ಬಿಕ್ಕಟ್ಟು ಎದುರಾಗಿದ್ದು, ಇದು ದೇಶದಾದ್ಯಂತ ಹಸಿವು, ಹಾಹಾಕಾರಕ್ಕೆ ಕಾರಣವಾಗಬಹುದು ಎಂದು ಸ್ಪೀಕರ್ ಮಹಿಂದಾ ಯಾಪ ಅಬೆವರ್ದನ ಅವರು ಎಚ್ಚರಿಸಿದ್ದಾರೆ. ಮುಂದಿನ ದಿನಗಳಲ್ಲಿ ಪರಿಸ್ಥಿತಿ ಇನ್ನಷ್ಟು ಗಂಭೀರವಾಗಬಹುದು ಎಂದು ಅವರು ಸಂಸತ್ ಕಲಾಪದಲ್ಲಿ ಹೇಳಿದ್ದಾರೆ.

'ಇದೊಂದು ಕೆಟ್ಟ ಪರಿಸ್ಥಿತಿ. ಇದು ಆರಂಭ ಮಾತ್ರ. ಆಹಾರ, ಅಡುಗೆ ಅನಿಲ ಹಾಗೂ ವಿದ್ಯುತ್ ಕೊರತೆ ಬಿಕ್ಕಟ್ಟು ಇನ್ನಷ್ಟು ಉಲ್ಬಣಿಸಲಿದೆ. ಆಹಾರದ ತೀವ್ರ ಕೊರತೆ ಹಾಗೂ ಹಸಿವು ಹೆಚ್ಚಳವಾಗಲಿದೆ' ಎಂದು ಅವರು ಹೇಳಿದ್ದಾರೆ.

1948ರಲ್ಲಿ ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆದ ಬಳಿಕ ದೇಶವು ಇದೇ ಮೊದಲ ಬಾರಿಗೆ ಅತಿಕೆಟ್ಟ ಆರ್ಥಿಕ ಪರಿಸ್ಥಿತಿ ಎದುರಿಸುತ್ತಿದೆ. ಜನರ ಸಹನೆಯ ಕಟ್ಟೆ ಒಡೆದಿದ್ದು, ಅಧ್ಯಕ್ಷ ಗೊಟಬಯ ಸೇರಿದಂತೆ ಸರ್ಕಾರಿ ಅಧಿಕಾರಿಗಳ ಮನೆಗಳ ಮೇಲೆ ದಾಳಿ ನಡೆಸುತ್ತಿದ್ದಾರೆ.

ವೈದ್ಯರ ಪ್ರತಿಭಟನೆ

ಶ್ರೀಲಂಕಾದ ಬಹುತೇಕ ಆಸ್ಪತ್ರೆಗಳು ಔಷಧಗಳ ಕೊರತೆ ಎದುರಿಸುತ್ತಿವೆ. ದೇಶದ ಇಡೀ ಆರೋಗ್ಯ ವ್ಯವಸ್ಥೆಯು ಕುಸಿದುಬಿದ್ದಿದೆ ಎಂದು ಆರೋಪಿಸಿರುವ ವೈದ್ಯರು, ಕೊಲಂಬೊದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು. ಸರ್ಕಾರಿ ವೈದ್ಯಕೀಯ ಅಧಿಕಾರಿಗಳ ಸಂಘದ 16 ಸಾವಿರಕ್ಕೂ ಹೆಚ್ಚು ವೈದ್ಯರು ಶ್ರೀಲಂಕಾದ ರಾಷ್ಟ್ರೀಯ ಆಸ್ಪತ್ರೆಯ ಎದುರು ಪ್ರತಿಭಟನೆ ನಡೆಸಿದರು.

ಔಷಧಿಗಳಷ್ಟೇ ಅಲ್ಲದೆ, ವಿವಿಧ ಪರೀಕ್ಷೆಗೆ ಬಳಸುವ ರಾಸಾಯನಿಕಗಳ ಕೊರತೆಯೂ ಇದೆ ಎಂದು ಅಪೇಕ್ಷಾ ಕ್ಯಾನ್ಸರ್ ಆಸ್ಪತ್ರೆಯ ಸಿಬ್ಬಂದಿ ಮಲಕಾ ಸಮರರತ್ನೆ ಹೇಳಿದ್ದಾರೆ.


ನೆದರ್‌ಲೆಂಡ್‌ಗೆ ಭೇಟಿ ನೀಡಿರುವ ರಾಷ್ಟ್ರಪತಿ ರಾಮನಾಥ ಕೋವಿಂದ್ ದಂಪತಿಯನ್ನು ಅಲ್ಲಿನ ರಾಜ ವಿಲಿಯಂ ಅಲೆಕ್ಸಾಂಡರ್, ರಾಣಿ ಮ್ಯಾಕ್ಸಿಮಾ ಬರಮಾಡಿಕೊಂಡರು. –ಪಿಟಿಐ ಚಿತ್ರ

ಭಾರತ–ನೆದರ್‌ಲೆಂಡ್ ಸಹಜ ಪಾಲುದಾರರು: ಕೋವಿಂದ್

ಅಮ್‌ಸ್ಟರ್ ಡ್ಯಾಂ (ಪಿಟಿಐ): 'ಪ್ರಜಾಪ್ರಭುತ್ವ, ಆರ್ಥಿಕತೆಯ ದೃಷ್ಟಿಯಿಂದ ಪ್ರವರ್ಧಮಾನದಲ್ಲಿರುವ ಭಾರತ–ನೆದರ್‌ಲೆಂಡ್ ಜಾಗತಿಕ ಸವಾಲು ಎದುರಿಸುವಲ್ಲಿ 'ಸಹಜ ಪಾಲುದಾರರು' ಎಂದು ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಹೇಳಿದ್ದಾರೆ.

'ಶಾಂತಿ, ಭದ್ರತೆ ಮತ್ತು ಅಭ್ಯುದಯದ ದೃಷ್ಟಿಯಿಂದ ಉಭಯ ದೇಶಗಳು ಏಕರೂಪದ ಬದ್ಧತೆ ಹೊಂದಿವೆ' ಎಂದೂ ಹೇಳಿದರು. ನೆದರ್‌ಲೆಂಡ್ ಭೇಟಿ ಅವಧಿಯಲ್ಲಿ ರಾಷ್ಟ್ರಪತಿ ಅವರು ನೆದರ್‌ಲೆಂಡ್‌ನ ಉನ್ನತ ನಾಯಕರ ಜೊತೆಗೆ ಚರ್ಚಿಸುವರು.

1988ರಲ್ಲಿ ಆಗ ರಾಷ್ಟ್ರಪತಿಯಾಗಿದ್ದ ಆರ್.ವೆಂಕಟರಾಮನ್ ಅವರು ನೆದರ್‌ಲೆಂಡ್‌ಗೆ ಭೇಟಿ ನೀಡಿದ್ದರು. ಈಗ, 34 ವರ್ಷದ ನಂತರ ಭೇಟಿ ನೀಡುತ್ತಿರುವ ಭಾರತದ ಎರಡನೇ ರಾಷ್ಟ್ರಪತಿ ಕೋವಿಂದ್ ಆಗಿದ್ದಾರೆ.

ರಾಜ ವಿಲಿಯಂ ಅಲೆಕ್ಸಾಂಡರ್ ಏರ್ಪಡಿಸಿದ್ದ ಭೋಜನಕೂಟದಲ್ಲಿ ಭಾಗಿಯಾಗಿದ್ದ ರಾಷ್ಟ್ರಪತಿ, 'ಉಭಯ ದೇಶಗಳು ಸ್ವಾತಂತ್ರ್ಯ ಪಡೆದ 75ನೇ ವರ್ಷಾಚರಣೆಯಲ್ಲಿವೆ. ಹೀಗಾಗಿ, ಉಭಯ ದೇಶಗಳ ದ್ವಿಪಕ್ಷೀಯ ಚರ್ಚೆ ಒಂದು ಮೈಲುಗಲ್ಲು' ಎಂದು ಬಣ್ಣಿಸಿದರು.

ಇಂಡೊ–ಪ್ಯಾಸಿಫಿಕ್ ವಲಯ ಮತ್ತು ಯುರೋಪ್ ಒಕ್ಕೂಟದಲ್ಲಿ ನೆದರ್‌ಲೆಂಡ್‌ನ ಪಾತ್ರ ನಿರ್ಣಾಯಕವಾದುದು. ಭಾರತ ಮತ್ತು ಯುರೋಪ್ ಒಕ್ಕೂಟದ ಬಾಂಧವ್ಯ ವೃದ್ಧಿಯಲ್ಲಿ ನೆದರ್‌ಲೆಂಡ್ ಪ್ರಮುಖ ಪಾತ್ರ ವಹಿಸಬಹುದು ಎಂದು ಹೇಳಿದರು.

ಶಾಂಘೈ: 20,472 ಹೊಸ ಪ್ರಕರಣ

ಶಾಂಘೈ (ರಾಯಿಟರ್ಸ್): ಚೀನಾದ ಅತಿದೊಡ್ಡ ನಗರ ಶಾಂಘೈನಲ್ಲಿ ಕೋವಿಡ್ ಪ್ರಕರಣಗಳು ಇನ್ನಷ್ಟು ಏರಿವೆ, ಬುಧವಾರ 20,472 ಹೊಸ ಪ್ರಕರಣ ದೃಢಪಟ್ಟಿವೆ. ಸತತ ಐದನೇ ದಿನ ದಾಖಲೆ ಪ್ರಮಾಣದಲ್ಲಿ ಪ್ರಕರಣಳು ಹೇರಿವೆ.

ಒಟ್ಟು ಪ್ರಕರಣಗಳ ಸಂಖ್ಯೆ 94,000ಕ್ಕೆ ಏರಿದೆ. ಪ್ರಕರಣಗಳ ಏರಿಕೆ ಹಿಂದೆಯೇ ಆರೋಗ್ಯ ಇಲಾಖೆ ಅಧಿಕಾರಿಗಳು, ಸಮುದಾಯ ಕೇಂದ್ರವನ್ನು 40,000 ಜನರಿಗೆ ಚಿಕಿತ್ಸೆ ನೀಡುವಂತೆ ತಾತ್ಕಾಲಿಕ ಆಸ್ಪತ್ರೆಯಾಗಿ ಪರಿವರ್ತಿಸಿದ್ದಾರೆ.

ಚೀನಾದ ವುಹಾನ್‌ನಲ್ಲಿ ಫೆ. 12, 2020ರಂದು ದಾಖಲಾಗಿದ್ದ 13,436 ಇದುವರೆಗೆ ನಗರವೊಂದರಲ್ಲಿ ದಾಖಲಾದ ಗರಿಷ್ಠ ಪ್ರಕರಣಗಳಾಗಿದ್ದವು. ಪ್ರಕರಣಗಳ ತೀವ್ರ ಏರಿಕೆಯ ಹಿಂದೆಯೇ ಲಾಕ್‌ಡೌನ್ ನಿರ್ಬಂಧಗಳನ್ನು ಸರ್ಕಾರ ಬಿಗಿಗೊಳಿಸಿದೆ.

ದೃಢಪಡುತ್ತಿರುವ ಹೊಸ ಪ್ರಕರಣಗಳಲ್ಲಿ ಹೆಚ್ಚಿನವು ಲಕ್ಷಣರಹಿತವಾಗಿವೆ. ಕೋವಿಡ್‌ನಿಂದ ಹೊಸದಾಗಿ ಸಾವು ಸಂಭವಿಸಿಲ್ಲ. ಕಳೆದ ಎರಡು ವರ್ಗಗಳಲ್ಲಿ ಸೋಂಕಿನಿಂದ ಇಬ್ಬರು ಮಾತ್ರವೇ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

'ಎರಡನೇ ವಾರದಲ್ಲಿ ಲಾಕ್‌ಡೌನ್ ಮುಂದುವರಿದಿದೆ. ಸಾಮೂಹಿಕ ಆ್ಯಂಟಿಜೆನ್ ಪರೀಕ್ಷೆ ಮುಂದುವರಿದಿದೆ. ಪರಿಸ್ಥಿತಿ ನಿಯಂತ್ರಣ ತಪ್ಪುತ್ತಿದೆ ಎಂಬ ಹಿನ್ನೆಲೆಯಲ್ಲಿ ಪರೀಕ್ಷೆಗಳ ಸಂಖ್ಯೆ ಹೆಚ್ಚಿಸಲಾಗಿದೆ' ಎಂದು ಹಾಂಗ್ ಕಾಂಗ್‌ನ ಸ್ಥಳೀಯ ಮಾಧ್ಯಮ ವರದಿ ಮಾಡಿದೆ. ಶಾಂಘೈನ ಚಿಕಿತ್ಸೆ ಕೇಂದ್ರಗಳಲ್ಲಿ ಸೋಂಕು ದೃಢಪಟ್ಟವರ ಹಾಜರಾತಿ ಹೆಚ್ಚುತ್ತಿದೆ. ಈ ಮಧ್ಯೆ, ಸೋಂಕಿತ ಮಕ್ಕಳು ಪೋಷಕರಿಂದ ಪ್ರತ್ಯೇಕವಾಗಿ ಇರಬೇಕು ಎಂಬ ನಿಯಮವನ್ನು ಚೀನಾ ಸರ್ಕಾರ ಕೈಬಿಟ್ಟಿದೆ. ಸುಮಾರು 2.6 ಕೋಟಿ ಜನರಿರುವ ಶಾಂಘೈ ನಗರದಲ್ಲಿ ಬಿಗಿ ನಿರ್ಬಂಧದಿಂದಾಗಿ ಜನರ ಜೀವನ ಶೈಲಿಯು ಏರುಪೇರಾಗಿದೆ. ಆರ್ಥಿಕ ಚಟುವಟಿಕೆ ಕೇಂದ್ರ ಶಾಂಘೈ, ಸೋಂಕು ಪರಿಸ್ಥಿತಿ ಎದುರಿಸಲು ಸಜ್ಜಾಗಿರಲಿಲ್ಲ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನಿರ್ಬಂಧ ಕ್ರಮಗಳು ಆರ್ಥಿಕತೆ ಮೇಲೆ ಪರಿಣಾಮ ಬೀರಲಿವೆ. ಮುಖ್ಯವಾಗಿ ಸಣ್ಣ ಉದ್ದಿಮೆಗಳ ಮೇಲೆ ನಕಾರಾತ್ಮಕ ಪರಿಣಾಮ ಬೀರಲಿದೆ. ಚೀನಾದಲ್ಲಿ ಸುಮಾರು 20 ಕೋಟಿಗೂ ಅಧಿಕ ಜನರು ಲಾಕ್‌ಡೌನ್‌ನಲ್ಲಿ ಇದ್ದಾರೆ ಎಂದು ನೊಮುರಾ ಅಂದಾಜು ಮಾಡಿದೆ.

ದೇಶದಲ್ಲಿ 1,086 ಹೊಸ ಪ್ರಕರಣ, 71 ಸಾವು



ನವದೆಹಲಿ(ಪಿಟಿಐ): ದೇಶದಲ್ಲಿ ಕಳೆದೆರಡು ದಿನಗಳಲ್ಲಿ ಮೂರಂಕಿಗೆ ಇಳಿದಿದ್ದ ಕೋವಿಡ್ ಪ್ರಕರಣಗಳು ಬುಧವಾರ ಮತ್ತೆ ಏರಿಕೆಯಾಗಿದ್ದು, ಹೊಸದಾಗಿ 1,086 ಮಂದಿಗೆ ಸೋಂಕು ದೃಢಪಟ್ಟಿದೆ.

ಇದೇ ಅವಧಿಯಲ್ಲಿ 71 ಮಂದಿ ಸೋಂಕಿತರು ಮೃತಪಟ್ಟಿದ್ದು, ಒಟ್ಟು ಮೃತರ ಸಂಖ್ಯೆ 5,21,487ಕ್ಕೆ ಏರಿಕೆಯಾಗಿದೆ. ಈವರೆಗೆ 4,30,30,925 ಮಂದಿಗೆ ಸೋಂಕು ತಗುಲಿದ್ದು, 4,24,97,567 ಜನರು ಗುಣಮುಖರಾಗಿದ್ದಾರೆ. ಸದ್ಯ ದೇಶದಲ್ಲಿ 11,871 ಸಕ್ರಿಯ ಪ್ರಕರಣಗಳಿವೆ ಎಂದು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಇಸ್ರೇಲ್: ಬಹುಮತ ಕಳೆದುಕೊಂಡ ಪ್ರಧಾನಿ

ಜೆರುಸಲೇಂ, ಇಸ್ರೇಲ್ (ಎ.ಪಿ): ಧಾರ್ಮಿಕ ವಿಷಯಕ್ಕೆ ಸಂಬಂಧಿಸಿದಂತೆ ಸಂಸದ, ಆಡಳಿತ ಪಕ್ಷದ ವಿಪ್ ಇದಿತ್ ಸಿಲ್ಮನ್ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. ಹಿಂದೆಯೇ, ನಫ್ತಾಲಿ ಬೆನೆಟ್ ನೇತೃತ್ವದ ಇಸ್ರೇಲ್ ಸರ್ಕಾರ ಅಲ್ಪಮತಕ್ಕೆ ಕುಸಿದಿದೆ.

ವರ್ಷದ ಹಿಂದಷ್ಟೇ ಅಸ್ತಿತ್ವಕ್ಕೆ ಬಂದಿದ್ದ, ಪ್ರಧಾನಿ ನಫ್ತಾಲಿ ಬೆನೆಟ್ ನೇತೃತ್ವದ ಮೈತ್ರಿ ಸರ್ಕಾರಕ್ಕೆ 120 ಸದಸ್ಯ ಬಲದ ಸಂಸತ್ತಿನಲ್ಲಿ ಅಧಿಕಾರದಲ್ಲಿ ಉಳಿಯುವುದು ಕಷ್ಟ ಎಂಬ ಸ್ಥಿತಿ ತಲೆದೋರಿದೆ. ಬೆನೆಟ್ ನೇತೃತ್ವದ ಮೈತ್ರಿಕೂಟದ ಸರ್ಕಾರದಲ್ಲಿ ಎಂಟು ಪಕ್ಷಗಳಿವೆ. ಈಗ ಮೈತ್ರಿಕೂಟದ ಬಲ 60ಕ್ಕೆ ಇಳಿದಿದೆ.

ದೇಶದಲ್ಲಿ ಧಾರ್ಮಿಕ ದೃಷ್ಟಿಯಿಂದ ನಿಷೇಧಿಸಲಾಗಿರುವ ಕೆಲ ತಿನಿಸನ್ನು ಸಾರ್ವಜನಿಕ ಆಸ್ಪತ್ರೆಗೆ ತರಲು ಜನರಿಗೆ ಮುಕ್ತ ಅವಕಾಶ ನೀಡಿದ್ದನ್ನು ಅವರು ವಿರೋಧಿಸಿದ್ದರು.

ಧಾರ್ಮಿಕ ಪ್ರಾಬಲ್ಯದ ಇಸ್ರೇಲ್‌ನಲ್ಲಿ ಆಸ್ಪತ್ರೆಗಳಿಗೆ ಕೆಲವೊಂದು ಆಹಾರ ತರುವುದು ನಿಷಿದ್ಧ. ಆದರೆ, ದೇಶದ ಸುಪ್ರೀಂ ಕೋರ್ಟ್ 2021ರಲ್ಲಿ ಜನರಿಗೆ ಈ ಸಂಬಂಧ ನಿರ್ಬಂಧ ಹೇರಲಾಗದು ಎಂದು ಆದೇಶಿಸಿತ್ತು.

ಚೀನಾ ವಿಮಾನದ ಬ್ಲ್ಯಾಕ್‌ಬಾಕ್ಸ್ ಅಮೆರಿಕಕ್ಕೆ

ಬೀಜಿಂಗ್ (ಎ.ಪಿ): ಚೀನಾದಲ್ಲಿ ಕಳೆದ ತಿಂಗಳು ವಿಮಾನ ಪತನಗೊಂಡು 132 ಜನರು ಮೃತಪಟ್ಟಿದ್ದ ಪ್ರಕರಣದಲ್ಲಿ, ಪತ್ತೆಯಾಗಿದ್ದ ಎರಡೂ 'ಬ್ಲ್ಯಾಕ್‌ಬಾಕ್ಸ್'ಗಳನ್ನು ಹೆಚ್ಚಿನ ವಿಶ್ಲೇಷಣೆಗಾಗಿ ಅಮೆರಿಕಕ್ಕೆ ಕಳುಹಿಸಲಾಗಿದೆ.

ಅಮೆರಿಕದ ರಾಷ್ಟ್ರೀಯ ಸಂಚಾರ ಸುರಕ್ಷತಾ ಮಂಡಳಿಯು ಈ ಕುರಿತು ಹೇಳಿಕೆ ನೀಡಿದ್ದು, ಕಪ್ಪುಪೆಟ್ಟಿಗೆಯಿಂದ ಮಾಹಿತಿಗಳನ್ನು ಸಂಗ್ರಹಿಸಲು ಮಂಡಳಿ ಚೀನಾದ ಅಧಿಕಾರಿಗಳಿಗೆ ಅಗತ್ಯ ಸಹಕಾರ ನೀಡುತ್ತಿದೆ ಎಂದು ತಿಳಿಸಿದೆ.

ಈ ಬ್ಲ್ಯಾಕ್‌ಬಾಕ್ಸ್‌ನಲ್ಲಿ ಅಡಕವಾಗಿರುವ ಮಾಹಿತಿಗಳಿಂದ, ಮಾರ್ಚ್ 21ರಂದು ನಡೆದಿದ್ದ ಬೋಯಿಂಗ್ 737–800 ವಿಮಾನದ ಅಪಘಾತಕ್ಕೆ ನಿಖರ ಕಾರಣಗಳು ತಿಳಿಯಲಿವೆ.

ಎನ್‌ಎಸ್‌ಸಿ ಸಭೆ ವರದಿ ಹಾಜರಿಗೆ ಸೂಚನೆ

ಇಸ್ಲಾಮಾಬಾದ್ (ಪಿಟಿಐ): ಪಾಕ್ ಸಂಸತ್ತಿನ ವಿಸರ್ಜನೆ ಹಾಗೂ ಪ್ರಧಾನಿ ಇಮ್ರಾನ್ ಖಾನ್ ವಿರುದ್ಧದ ಅವಿಶ್ವಾಸ ನಿರ್ಣಯದ ಚರ್ಚೆಗೆ ಅವಕಾಶ ನಿರಾಕರಿಸಿದ್ದ ಡೆಪ್ಯುಟಿ ಸ್ಪೀಕರ್ ರೂಲಿಂಗ್ ಪ್ರಶ್ನಿಸಿದ್ದ ಅರ್ಜಿ ವಿಚಾರಣೆ ನಡೆಸುತ್ತಿರುವ ಸುಪ್ರೀಂ ಕೋರ್ಟ್‌ನ ನ್ಯಾಯಪೀಠವು, 'ರಾಷ್ಟ್ರೀಯ ಭದ್ರತಾ ಮಂಡಳಿ (ಎನ್‌ಎಸ್‌ಸಿ) ಸಭೆಯ ವರದಿ ಹಾಜರುಪಡಿಸಬೇಕು' ಎಂದು ಸೂಚಿಸಿದೆ.

ಪ್ರಧಾನಿ ಇಮ್ರಾನ್ ಖಾನ್ ನೇತೃತ್ವದ ಪಾಕಿಸ್ತಾನದ ತೆಹ್ರೀಕ್–ಇ–ಇನ್ಸಾಫ್ ಪಕ್ಷವನ್ನು ಪ್ರತಿನಿಧಿಸಿದ್ದ ಬಾಬರ್ ಅವಾನ್ ಮತ್ತು ಅಧ್ಯಕ್ಷ ಆರೀಫ್ ಅಲ್ವಿ ಅವರನ್ನು ಪ್ರತಿನಿಧಿಸಿದ್ದ ಅಲಿ ಜಾಫರ್ ಅವರು ಬುಧವಾರ ತಮ್ಮ ವಾದವನ್ನು ಮಂಡಿಸಿದರು. ಬಳಿಕ ವಿಚಾರಣೆಯನ್ನು ಗುರುವಾರಕ್ಕೆ ಕೋರ್ಟ್ ಮುಂದೂಡಿತು.

ಡೆಪ್ಯೂಟಿ ಸ್ಪೀಕರ್ ರೂಲಿಂಗ್‌ನ ಸಿಂಧುತ್ವ, ಸಂವಿಧಾನದ 95ನೇ ವಿಧಿ ಉಲ್ಲಂಘನೆ ಆಗಿದೆಯೇ ಎಂಬ ಬಗ್ಗೆ ನ್ಯಾಯಪೀಠ ಪ್ರಶ್ನಿಸಿತು ಎಂದು 'ಡಾನ್' ವರದಿ ಮಾಡಿದೆ. ಇದೇ ಸಂದರ್ಭದಲ್ಲಿ ರಾಷ್ಟ್ರೀಯ ಭದ್ರತಾ ಮಂಡಳಿ ಸಭೆಯ ವರದಿ ಮಂಡಿಸಲು ಸೂಚಿಸಿತು.

ಪ್ರಧಾನಿ ಇಮ್ರಾನ್ ಖಾನ್ ಮತ್ತು ಅಧ್ಯಕ್ಷ ಆರಿಫ್ ಅಲ್ವಿ ಅವರ ಎಲ್ಲ ತೀರ್ಮಾನಗಳು ಸುಪ್ರೀಂ ಕೋರ್ಟ್ ನೀಡಲಿರುವ ಅಂತಿಮ ಆದೇಶದ ಪರಿಧಿಗೆ ಒಳಪಟ್ಟಿರುತ್ತವೆ ಎಂದು ಮುಖ್ಯ ನ್ಯಾಯಮೂರ್ತಿ ಈಗಾಗಲೇ ಸ್ಪಷ್ಟಪಡಿಸಿದ್ದಾರೆ. ವಿಚಾರಣೆ ನಡೆಸುತ್ತಿರುವ ನ್ಯಾಯಪೀಠವು, ಈ ಪ್ರಕರಣದ ತೀರ್ಪು ಯಾವಾಗ ನೀಡಲಾಗುವುದು ಎಂಬುದನ್ನು ತಿಳಿಸಿಲ್ಲ.

ಮುಖ್ಯ ನ್ಯಾಯಮೂರ್ತಿ ಉಮರ್ ಅಟಾ ಬಂದಿಯಾಲ್ ನೇತೃತ್ವದ ಐವರು ನ್ಯಾಯಮೂರ್ತಿಗಳ ಪೀಠವು ವಿಚಾರಣೆ ನಡೆಸುತ್ತಿದೆ. ಡೆಪ್ಯೂಟಿ ಸ್ಪೀಕರ್ ಅವರು ನೀಡಿದ್ದ ರೂಲಿಂಗ್ 'ಅಸಾಂವಿಧಾನಿಕವಾದುದು' ಎಂದು ವಿರೋಧಪಕ್ಷಗಳು ಆರೋಪಿಸಿವೆ. 'ಏಪ್ರಿಲ್ 3ರಂದು ಸಂಸತ್ತಿನಲ್ಲಿ ಆದ ಬೆಳವಣಿಗೆಗಳನ್ನು ಮೊದಲಿಗೆ ನಾವು ಪೂರ್ಣವಾಗಿ ಪರಿಗಣನೆಗೆ ತೆಗೆದುಕೊಳ್ಳಬೇಕಾಗಿದೆ' ಎಂಬ ಮುಖ್ಯ ನ್ಯಾಯಮೂರ್ತಿಯವರ ಹೇಳಿಕೆಯನ್ನು ಉಲ್ಲೇಖಿಸಿ 'ಜಿಯೊ ನ್ಯೂಸ್' ವರದಿ ಮಾಡಿದೆ.

ಚುನಾವಣೆಗೆ ದಿನಾಂಕ ಗೊತ್ತುಪಡಿಸಿ ಆಯೋಗಕ್ಕೆ ಪಾಕ್ ಅಧ್ಯಕ್ಷರ ಸೂಚನೆ

ಇಸ್ಲಾಮಾಬಾದ್ (ಎಎಫ್‌ಪಿ): ರಾಜಕೀಯ ಬಿಕ್ಕಟ್ಟು ಮುಂದುವರಿದಿರುವಂತೆಯೇ, 'ಪಾಕಿಸ್ತಾನದ ನೂತನ ಸರ್ಕಾರದ ಆಯ್ಕೆಗೆ ಚುನಾವಣೆಗೆ ದಿನಾಂಕ ನಿಗದಿಪಡಿಸಬೇಕು' ಎಂದು ಅಧ್ಯಕ್ಷ ಆರಿಫ್ ಅಲ್ವಿ ದೇಶದ ಚುನಾವಣಾ ಆಯೋಗಕ್ಕೆ ಸೂಚಿಸಿದ್ದಾರೆ.

ಚುನಾವಣೆ ಪ್ರಕ್ರಿಯೆ ನಡೆಸಲು ಮಧ್ಯಂತರ ಸರ್ಕಾರ ರಚನೆಗೆ ವಿರೋಧ ಪಕ್ಷಗಳು ಅಸಹಕಾರ ತೋರಿವೆ. ಸಂಸತ್ತಿನ ವಿಸರ್ಜನೆ ಕ್ರಮದ ಸಿಂಧುತ್ವ ಕುರಿತಂತೆ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ನಡೆದಿರುವಂತೆಯೇ ಅಧ್ಯಕ್ಷರಿಂದ ಈ ಸೂಚನೆ ಹೊರಬಿದ್ದಿದೆ. 'ಸಂವಿಧಾನದ ಪ್ರಕಾರ ಚುನಾವಣೆಯನ್ನು ನಡೆಸಲು ದಿನಾಂಕವನ್ನು ಗೊತ್ತುಪಡಿಸಬೇಕು ಎಂದು ಅಧ್ಯಕ್ಷರು ಆಯೋಗಕ್ಕೆ ತಿಳಿಸಿದ್ದಾರೆ' ಎಂದು ಅಧ್ಯಕ್ಷರ ಕಚೇರಿಯು ಹೇಳಿಕೆ ನೀಡಿದೆ.

EXAM DH ಪ್ರಜಾವಾಣಿ MASTERMIND™

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ

ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ

www.exammastermind.comಗೆ ಭೇಟಿ ಕೊಡಿ



ಸ್ವಯಂ ತಯಾರಿ ಸಾಕೇ? ವಿಶೇಷ ತರಬೇತಿ ಬೇಕೇ?



ಸಿವಿಲ್ ಸರ್ವೀಸಸ್ ಪರೀಕ್ಷೆಗಳಿಗೆ ಸಿದ್ಧವಾಗಲು ವಿಶೇಷ ತರಬೇತಿ ಅನಿವಾರ್ಯವೇ ಅಥವಾ ಸ್ವಯಂ ತಯಾರಿ ಸಾಕಾಗುತ್ತದೆಯೋ? ಎಂಬ ಪ್ರಶ್ನೆಗಳಿಗೆ ವಿಶ್ಲೇಷಣಾತ್ಮಕ ಉತ್ತರಗಳು ಇಲ್ಲಿವೆ...

ಸಿವಿಲ್ ಸರ್ವೀಸಸ್ ಪರೀಕ್ಷೆ ಪಾಠ–4

ಗುರುರಾಜ್ ಎಸ್. ದಾವಣಗೆರೆ

ಐಎಎಸ್, ಐಪಿಎಸ್ ಪರೀಕ್ಷೆಗೆ ತಯಾರಾಗುವವರೆಲ್ಲ ಕೇಳುವ ಮೊಟ್ಟಮೊದಲ ಪ್ರಶ್ನೆ ಪೂರ್ವಸಿದ್ಧತಾ ಪರೀಕ್ಷೆ (ಪ್ರಿಲಿಮ್ಸ್)ಗಾಗಲಿ, ಮುಖ್ಯಪರೀಕ್ಷೆ(ಮೇನ್ಸ್)ಗಾಗಲಿ ವಿಶೇಷ ತರಬೇತಿ ಅನಿವಾರ್ಯವೇ? ಅಥವಾ ಸ್ವಂತವಾಗಿ ಓದಿಕೊಂಡರೆ ಸಾಕೇ? ಎಂಬುದು.

ಇದಕ್ಕೆ ಉತ್ತರ ಪಡೆಯುವ ಮೊದಲು ಇದನ್ನು ಗಮನಿಸಿ. ಖ್ಯಾತ ಕ್ರಿಕೆಟ್ ಆಟಗಾರ ವಿರಾಟ್ ಕೊಹ್ಲಿ ಆಟದ ತಯಾರಿಗೆ ವೈಯಕ್ತಿಕವಾಗಿ ಕೋಚ್ ಇಟ್ಟುಕೊಂಡಿದ್ದಾರೆ. ಸಚಿನ್ ತೆಂಡೂಲ್ಕರ್, ರಾಹುಲ್ ದ್ರಾವಿಡ್ ನಂತರ ಆಡಿದ ಎಲ್ಲಾ ಕ್ರಿಕೆಟ್ ಫಾರ್ಮ್ಯಾಟ್‌ಗಳಿಂದ ಅತಿ ಹೆಚ್ಚು ರನ್ ಮತ್ತು ಜಯಗಳಿಸಿದ ಭಾರತೀಯ ಆಟಗಾರನೆನಿಸಿದ್ದಾರೆ. ಅವರ ಯಶಸ್ಸಿನಲ್ಲಿ ಕೋಚ್‌ನ ಪಾತ್ರ ಎಷ್ಟು? ಸ್ವತಃ ಕೊಹ್ಲಿ ಕೊಡುಗೆ ಎಷ್ಟು? ಎಂಬುದನ್ನು ವಿಶ್ಲೇಷಿಸಿರುವ ಹಿರಿಯ ಕ್ರಿಕೆಟಿಗರು ಅದನ್ನು ಕ್ರಮವಾಗಿ 30:70 ಎಂದು ಹೇಳಿ ದ್ದಾರೆ. ಇದನ್ನೇ ಎಲ್ಲ ರೀತಿಯ ಪರೀಕ್ಷೆಗಳಿಗೂ ಅನ್ವಯಿಸಬಹುದು. ವಿಸ್ತರಿಸಿ ಹೇಳುವುದಾದರೆ ತರಬೇತಿ ನೀಡುವವನ ಪಾಲಿಗಿಂತ ಸ್ವತಃ ಆಡುವ ಆಟಗಾರನ ಪಾಲೇ ಯಶಸ್ಸಿನಲ್ಲಿ ಹೆಚ್ಚಾಗಿರುತ್ತದೆ. ಇಲ್ಲೊಂದು ವೈರುದ್ಧ್ಯವನ್ನು ಗಮನಿಸಿ. ಸುನಿಲ್ ಗವಾಸ್ಕರ್, ವಿವಿಯನ್ ರಿಚರ್ಡ್ಸ್, ಮೈಕೆಲ್ ಶುಮಾಕರ್‌ಗೆ ಯಾವುದೇ ಪರ್ಸನಲ್ ಕೋಚ್ ಇರಲಿಲ್ಲ. ಆದರೂ ಅವರ ಸಾಧನೆ, ಯಶಸ್ಸನ್ನು ಜನ ಇಂದಿಗೂ ನೆನಪಿಸಿಕೊಳ್ಳುತ್ತಾರೆ.

ವಿಶೇಷ ತರಬೇತಿ ಅನಿವಾರ್ಯವಲ್ಲ

ಐಎಎಸ್, ಐಪಿಎಸ್ ಪರೀಕ್ಷೆಗಳಲ್ಲಿ ಯಶಸ್ಸುಗಳಿಸಲು ವಿಶೇಷ ತರಬೇತಿಯ ಅಗತ್ಯವಿಲ್ಲ. ಹಾಗೆಂದು ಇದು ಎಲ್ಲರಿಗೂ ಅನ್ವಯವಾಗುವುದೂ ಇಲ್ಲ. ಯಾವುದಾದರೂ ಕೋಚಿಂಗ್ ಇನ್‌ಸ್ಟಿಟ್ಯೂಟ್ ಸೇರಿಕೊಂಡು ಸಾಧಿಸುತ್ತೇನೆ ಎನ್ನುವವರು ಅದನ್ನು ಅನಿವಾರ್ಯ ಎಂದುಕೊಳ್ಳಬಾರದು. ತರಬೇತಿ ಕೇಂದ್ರಗಳಿಂದ ನೆರವು ಸಿಗುವುದು ಕೇವಲ ಕಾಲು ಭಾಗವಾದರೆ ಉಳಿದ ಮುಕ್ಕಾಲು ಭಾಗ ನೀವು ಶ್ರಮ ಹಾಕಲೇಬೇಕು. ನಿಮ್ಮ ಕಠಿಣ ಶ್ರಮ, ಸ್ವಯಂ ಓದು, ಸ್ಥಿರತೆ (Consistency) ಮತ್ತು ನೀವು ಎಷ್ಟು ಬದ್ಧತೆಯಿಂದ ಅಧ್ಯಯನ ನಡೆಸುತ್ತೀರಿ ಎಂಬುದು ಹೆಚ್ಚು ಮುಖ್ಯವಾಗುತ್ತದೆ. ಹಿಂದಿನ ಯುಪಿಎಸ್‌ಸಿ ಪರೀಕ್ಷೆಗಳಲ್ಲಿ ಉನ್ನತ ರ‍್ಯಾಂಕ್ ತೆಗೆದವರು 'ಕೋಚಿಂಗ್ ಕೇಂದ್ರದ ಪಾತ್ರ ಕೇವಲ ಶೇ 20 ರಷ್ಟು' ಎಂದು ಅಭಿಪ್ರಾಯಪಟ್ಟಿದ್ದಾರೆ.

ಮಹಾನಗರಗಳಲ್ಲಷ್ಟೇ ಇರುವ ಕೋಚಿಂಗ್ ಕೇಂದ್ರಗಳಿಗೆ ದೂರದ ಹಳ್ಳಿ ತಾಲ್ಲೂಕು ಕೇಂದ್ರಗಳ ಅಭ್ಯರ್ಥಿಗಳು ಬರುತ್ತಾರೆ. ವಸತಿ – ಊಟ – ಓಡಾಟಕ್ಕೆಂದು ಸಾಕಷ್ಟು ಹಣ ಖರ್ಚು ಮಾಡುತ್ತಾರೆ. ಇದರ ಬದಲಿಗೆ ಸ್ವಯಂ ಶಕ್ತಿಯನ್ನೇ ನಂಬಿಕೊಂಡು ಕೋಚಿಂಗ್ ಸಂಸ್ಥೆಗೆ ಹಾಕುವ ದುಡ್ಡಿನಲ್ಲಿ ಓದಿಗೆ ಅಗತ್ಯವಾದ ಪುಸ್ತಕ – ಪತ್ರಿಕೆಗಳನ್ನು ಕೊಂಡು ಓದಬಹುದು. ಮೊಬೈಲ್ – ಇಂಟರ್‌ನೆಟ್‌ಗಳ ಮೂಲಕ ಉಚಿತವಾಗಿ ಸಿಗುವ ಅಧ್ಯಯನ ಸಾಮಗ್ರಿಗಳನ್ನು ಡೌನ್‌ಲೋಡ್ ಮಾಡಿಕೊಂಡು, ಇಲ್ಲವೇ ವೆಬ್‌ಸೈಟ್‌ಗಳನ್ನು ನಿರಂತರವಾಗಿ ಸಂಪರ್ಕಿಸಿ ಬೇಕಾದಷ್ಟು ತಯಾರಿ ಮಾಡಿಕೊಳ್ಳಬಹುದು.

ಯಾರಿಗೆ ಕೋಚಿಂಗ್ ಅಗತ್ಯ?

ಎಂಜಿನಿಯರಿಂಗ್ ಓದಿದ ವಿದ್ಯಾರ್ಥಿಗಳಿಗೆ ಕಲಾ ವಿಭಾಗದ ವಿಷಯಗಳಾದ ತತ್ವಶಾಸ್ತ್ರ, ಸಮಾಜಶಾಸ್ತ್ರದ ಬಗ್ಗೆ ಪ್ರಾಥಮಿಕ ತಿಳಿವಳಿಕೆಯೂ ಇರುವುದಿಲ್ಲ. ಅಂಥವರಿಗೆ ತರಬೇತಿ ಕೇಂದ್ರಗಳ ಕೋಚಿಂಗ್ ಬೇಕು. ಇನ್ನು ಇಂಗ್ಲಿಷ್ ಮಾಧ್ಯಮದಲ್ಲೇ ಓದಿದ ಕರ್ನಾಟಕದ ವಿದ್ಯಾರ್ಥಿಗಳು ಮುಖ್ಯ ಪರೀಕ್ಷೆಯಲ್ಲಿ ಕನ್ನಡ ಸಾಹಿತ್ಯವನ್ನು ಆಯ್ದುಕೊಂಡರೆ ಅವರಿಗೂ ಇದೇ ಸಮಸ್ಯೆ ಎದುರಾಗುತ್ತದೆ. ಮುಖ್ಯ ಪರೀಕ್ಷೆ ಎದುರಿಸಲು ಆಯ್ದುಕೊಂಡ ವಿಷಯಗಳನ್ನು ಆಳವಾಗಿ ಅಭ್ಯಸಿಸಲು ಕ್ರಮಬದ್ಧವಾದ ಕೋಚಿಂಗ್ ಬೇಕು. ಇದು ಅಭ್ಯರ್ಥಿಗಳ ಕ್ಷಮತೆ ಹೆಚ್ಚಿಸುತ್ತದೆ.

ಕೋಚಿಂಗ್ ಕೇಂದ್ರ ಸೇರಿದರೂ ಅಲ್ಲಿ ಕೊಡುವ ನೋಟ್ಸ್, ಪಾಠ, ಪವರ್‌ಪಾಯಿಂಟ್ ಪ್ರೆಸೆಂಟೇಶನ್, ಪ್ರಶ್ನೋತ್ತರ ಸೆಷನ್‌ಗಳು ನಿಮ್ಮ ತಿಳಿವಳಿಕೆಯನ್ನೇನೋ ಹೆಚ್ಚಿಸುತ್ತವೆ. ಸಹಪಾಠಿಗಳ ಬಳಿ ನಡೆಸುವ ಚರ್ಚೆಗಳಿಂದ ನಿಮ್ಮ ಅನುಮಾನಗಳು ತಕ್ಕಮಟ್ಟಿಗೆ ಬಗೆಹರಿಯುತ್ತವೆ. ಅಧ್ಯಾಪಕರ ಉಪದೇಶ ಮತ್ತು ಎಚ್ಚರಿಕೆಯ ಮಾತುಗಳು ನಿಮ್ಮ ಕಲಿಯುವ ಕ್ಷಮತೆ ಹೆಚ್ಚಿಸುತ್ತವೆ. ಆದರೆ, ಇದೆಲ್ಲ ಆಗುವುದು ನೀವು ಉತ್ತಮ ಕೋಚಿಂಗ್ ಕೇಂದ್ರವನ್ನು ಸೇರಿದಾಗ ಮಾತ್ರ.

ನೆನಪಿರಲಿ. ಕೋಚಿಂಗ್ ಕೇಂದ್ರಗಳಲ್ಲಿ ನೀಡುವ ನೋಟ್ಸ್‌ಗಳು ಗುಣಮಟ್ಟದ ಪುಸ್ತಕಗಳಿಗೆ ಯಾವತ್ತೂ ಸಮವಲ್ಲ. ನುರಿತ ವಿಷಯ ತಜ್ಞರು, ಸಂಪನ್ಮೂಲ ವ್ಯಕ್ತಿಗಳು ಬರೆದಿರುವ ಪುಸ್ತಕಗಳಲ್ಲಿ ವಸ್ತು–ವಿಷಯಗಳ ಸರಿಯಾದ ವಿಶ್ಲೇಷಣೆಯಿರುತ್ತದೆ. ಸಮರ್ಥ ಉದಾಹರಣೆಗಳಿರುತ್ತವೆ. ಅಂಕಿ – ಅಂಶಗಳು ಸರಿಯಾಗಿರುತ್ತವೆ.

ಹಾಗೆಂದು, ನೋಟ್ಸ್‌ಗಳಿಂದ ಉಪಯೋಗವೇ ಇಲ್ಲವೆಂದಲ್ಲ. ಪರೀಕ್ಷೆಗೂ ಮುಂಚೆ ಪೂರ್ಣ ಪಠ್ಯಕ್ಕಿಂತ ಸಂಕ್ಷಿಪ್ತವಾಗಿರುವ ನೋಟ್ಸ್ ಓದಿದರೆ ಕಡಿಮೆ ಸಮಯದಲ್ಲಿ ಪುನರಾವರ್ತನೆ ಮಾಡಬಹುದು. ತರಬೇತಿ ಕೇಂದ್ರದ ನೋಟ್ಸ್‌ಗಳು ವಿಷಯಕ್ಕೆ ಸೀಮಿತವಾಗಿರುವುದರಿಂದ ಬೇಗ ಓದಿ ಮುಗಿಸಬಹುದು. ಉದಾಹರಣೆಗೆ ಸರ್ಕಾರಿ ಯೋಜನೆಯೊಂದರ ಬಗ್ಗೆ ಓದ ಬೇಕೆಂದುಕೊಂಡರೆ ವೆಬ್‌ಸೈಟ್‌ಗಳನ್ನು ಮತ್ತು ಪುಸ್ತಕವನ್ನು ಹುಡುಕಾಡುವ ಬದಲು ಅದಕ್ಕೆಂದೇ ಇರುವ ಪ್ರತ್ಯೇಕ ನೋಟ್ಸ್ ಓದಿದರೆ ಸಾಕಷ್ಟು ಸಮಯ ಉಳಿಯುತ್ತದೆ.

ಸಿವಿಲ್ ಸರ್ವೀಸಸ್ ಪರೀಕ್ಷೆಗಳು ಯಾವುದೋ ಪದವಿ ಪರೀಕ್ಷೆಯಂತಲ್ಲ. ಅದಕ್ಕೆ ಪ್ರಾಧ್ಯಾಪಕರು ನೀಡಿದ ನೋಟ್ಸ್‌ಗಳನ್ನು ಓದಿ ಮುಗಿಸಿದರೆ ಸಾಕು, ಉತ್ತಮ ಅಂಕಗಳಿಸಬಹುದು. ಯುಪಿಎಸ್‌ಸಿ ಪರೀಕ್ಷೆಗಳಲ್ಲಿ ಪ್ರಶ್ನೆಗಳು ಉನ್ನತ ಮಟ್ಟದಲ್ಲಿರುತ್ತವೆ. ಉತ್ತರಿಸಲು ತೀಕ್ಷ್ಣ ವಿಶ್ಲೇಷಣಾ ಸಾಮರ್ಥ್ಯವಿರಬೇಕಾಗುತ್ತದೆ. ಇದು ನೋಟ್ಸ್‌ಗಳಿಂದ ಸಿಗುವುದಿಲ್ಲ. ಕಾನ್ಸೆಪ್ಟ್‌ಗಳ ಬಗ್ಗೆ ನಿಮಗಿರುವ ಸ್ಪಷ್ಟತೆ ಮತ್ತು ಆಳವಾದ ತಿಳಿವಳಿಕೆಗಳು ಮೇನ್ಸ್ ಪರೀಕ್ಷೆಗಳಲ್ಲಿ ನಿಮಗೆ ಸತ್ವಪೂರ್ಣ ಉತ್ತರ ಬರೆಯಲು ನೆರವಾಗುತ್ತವೆ. ಆ ಕ್ಷಮತೆ ಬರುವುದಕ್ಕೆ ನೀವು ಗುಣಮಟ್ಟದ ಪುಸ್ತಕಗಳನ್ನು ಓದಬೇಕು. ಹಿಂದಿನ ವರ್ಷಗಳಲ್ಲಿ ಉನ್ನತ ರ‍್ಯಾಂಕ್ ಗಳಿಸಿದವರು ತಮ್ಮ ಅನುಭವಗಳನ್ನು ಜಾಲತಾಣ/ಬ್ಲಾಗ್‌ಗಳಲ್ಲಿ ಹೇಳಿಕೊಂಡಿರುತ್ತಾರೆ. ಅವರ ಅನುಭವದ ಮಾತುಗಳನ್ನು ಕೇಳಿಸಿಕೊಳ್ಳಬಹುದು. ಯಥಾವತ್ತು ಅವರನ್ನೇ ಅನುಸರಿಸುವ ಅಗತ್ಯವಿಲ್ಲ. ಈ ಪರೀಕ್ಷೆಗಳಲ್ಲಿ ಬೇರೆಲ್ಲ ವಿಷಯಗಳಿಗಿಂತ ನಿಮ್ಮ ತಯಾರಿ, ವೈಯಕ್ತಿಕ ಸಾಮರ್ಥ್ಯ, ಮನೋಬಲವೇ ಬಹಳ ಮುಖ್ಯವಾಗುತ್ತದೆ.

ಕೋಚಿಂಗ್ ಸೇರಲೇಬೇಕು ಎಂದಿದ್ದರೆ, ಈಗಾಗಲೇ ಆ ತರಬೇತಿ ಕೇಂದ್ರಗಳಲ್ಲಿ ತರಬೇತಿ ತೆಗೆದುಕೊಂಡವರನ್ನು ಮಾತನಾಡಿಸಿ ಮುಂದೆ ಹೆಜ್ಜೆ ಇಡಿ. ಅವರ ಪ್ರತಿಕ್ರಿಯೆಗಳನ್ನು ಆಧರಿಸಿ ಕೋಚಿಂಗ್ ಸೆಂಟರ್‌ಗೆ ಸೇರುವ ಕುರಿತು ನಿರ್ಧರಿಸಿ. ತರಬೇತಿ ಕೇಂದ್ರಗಳಲ್ಲಿ ಸರಣಿ ಪರೀಕ್ಷೆ ನಡೆಸುತ್ತಾರೆ. ಅವು ನಿಯಮಿತವಾಗಿ ನಡೆಯುವುದರಿಂದ ಅವುಗಳನ್ನು ತೆಗೆದುಕೊಂಡರೆ ನಿರ್ಣಾಯಕ ಪರೀಕ್ಷೆ ಹೇಗಿರುತ್ತದೆ ಎಂದು ಗೊತ್ತಾಗಿ ಅದನ್ನು ಬರೆಯುವ ವೇಳೆಗೆ ನಿಮ್ಮಲ್ಲಿ ಆತ್ಮವಿಶ್ವಾಸ ಮೂಡಿರುತ್ತದೆ. ಪ್ರಶ್ನೆಗಳಿಗೆ ಉತ್ತರಿಸುವಾಗ ಹೇಗೆ ಸಮಯ ನಿರ್ವಹಿಸಬೇಕೆಂಬುದು ತಿಳಿಯುತ್ತದೆ.

ಸ್ವಂತ ತಯಾರಿಯೇ ಉತ್ತಮ

ಯುಪಿಎಸ್‌ಸಿ ಪರೀಕ್ಷೆಗಳನ್ನು ಮ್ಯಾರಥಾನ್ ಓಟಕ್ಕೆ ಹೋಲಿಸುತ್ತಾರೆ. ರೇಸ್‌ನ ದಿನ ಮೈದಾನಕ್ಕೆ ಬಂದರೆ ಆಗುವುದಿಲ್ಲ. ಪೂರ್ವ ತಯಾರಿ ಬೇಕೇ ಬೇಕು. ಸಿವಿಲ್ ಸರ್ವೀಸಸ್ ಪರೀಕ್ಷೆಗಳಿಗೂ ಸರಿಯಾದ ಪೂರ್ವ ತಯಾರಿ ಬೇಕು. ಅದು ಸ್ವಂತದ್ದಾಗಿದ್ದರೆ ತುಂಬಾ ಒಳ್ಳೆಯದು. ಕೋಚಿಂಗ್‌ಗೆ ಹೋಗದವರು Forum IAS, Civils Daily, Insights, IAS Baba ಮುಂತಾದ ಆನ್‌ಲೈನ್ ವೆಬ್‌ಸೈಟ್‌ಗಳಿಂದ ಹೆಚ್ಚಿನ ನೆರವು ಪಡೆಯಬಹುದು. ಪ್ರಸಕ್ತ ದಿನಗಳಲ್ಲಿ Clear IAS Website, Clear IAS Mobile app, Clear IAS Mock exam plat form, Insights ವೆಬ್‌ಸೈಟ್ ಬಹುಸಂಖ್ಯೆಯ ಅಭ್ಯರ್ಥಿಗಳ ಫೇವರೀಟ್ ಆಗಿದೆ.

(ಮುಂದಿನ ವಾರ: ಪಾಠ: 5 - ಸಿವಿಲ್ ಸರ್ವೀಸ್ ಪರೀಕ್ಷೆಯ ಯಶಸ್ಸಿಗೆ ಯಾವ ಪುಸ್ತಕ /ಸ್ಟಡಿ ಮೆಟೀರಿಯಲ್ ಓದಬೇಕು?)

ಮಾದರಿ ಪ್ರಶ್ನೋತ್ತರಗಳು

ಕೆಪಿಎಸ್‌ಸಿ 'ಗ್ರೂಪ್-ಸಿ'ಯ ವಿವಿಧ ಹುದ್ದೆಗಳು, ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ವಿಶೇಷ ಮೀಸಲು ಸಬ್‌ಇನ್‌ಸ್ಪೆಕ್ಟರ್ (ಕೆಎಸ್‌ಆರ್‌ಪಿ & ಐಆರ್‌ಬಿ) ಹಾಗೂ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯ ಸಬ್ ಇನ್‌ಸ್ಪೆಕ್ಟರ್ ಹುದ್ದೆಗಳ ನೇರ ನೇಮಕಾತಿಗಾಗಿ ಶೀಘ್ರದಲ್ಲೇ ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯಲಿವೆ. ಈ ಮೂರು ಪರೀಕ್ಷೆಗಳಲ್ಲಿರುವ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

ಸಾಮಾನ್ಯ ಜ್ಞಾನ

1) ಯುನೆಸ್ಕೊ ವಿಶ್ವ ಪಾರಂಪರಿಕ ತಾಣಗಳ ತಾತ್ಕಾಲಿಕ ಪಟ್ಟಿಯಲ್ಲಿ ಈ ಕೆಳಗಿನ ಯಾವುದನ್ನೆಲ್ಲಾ ಸೇರಿಸಲಾಗಿದೆ?

1) ಆಂಧ್ರಪ್ರದೇಶದ ಲೇಪಾಕ್ಷಿ ದೇವಾಲಯಗಳು
2) ಮೇಘಾಲಯದ ಜೀವಂತ ಬೇರುಗಳ ತೂಗು ಸೇತುವೆ
3) ಕೊಂಕಣ ಶಿಲಾ ಚಿತ್ರಗಳು(geoglyphs/ petroglyphs)
4) ಕಾಕತೀಯರ ರುದ್ರೇಶ್ವರ ದೇವಾಲಯ

ಉತ್ತರ ಸಂಕೇತಗಳು

ಎ) 1, 2, 3 ಮಾತ್ರ ಸರಿಯಿದೆ
ಬಿ) 2, 3, 4 ಮಾತ್ರ ಸರಿಯಿದೆ
ಸಿ) 1, 3, 4 ಮಾತ್ರ ಸರಿಯಿದೆ
ಡಿ) 1, 2, 4 ಮಾತ್ರ ಸರಿಯಿದೆ

ಉತ್ತರ: ಎ



ಲೇಪಾಕ್ಷಿಯಲ್ಲಿ ವೀರಭದ್ರ ಸ್ವಾಮಿ ದೇವಾಲಯ

2) ಉಕ್ಕಿನ ಘಟಕಗಳಲ್ಲಿ ಉತ್ಪಾದಿಸಲಾಗುವ ಉಕ್ಕಿನ ತ್ಯಾಜ್ಯ ಬಳಸಿ ರಸ್ತೆ ನಿರ್ಮಿಸಲಾಗಿದೆ. ಹಾಗಾದರೆ ಮೊಟ್ಟಮೊದಲು ಯಾವ ರಾಜ್ಯದಲ್ಲಿ ಇಂಥ ರಸ್ತೆ ನಿರ್ಮಾಣವಾಗಿದೆ ?

ಎ) ಆಂಧ್ರಪ್ರದೇಶ ಬಿ) ಗುಜರಾತ್
ಸಿ) ಅಸ್ಸಾಂ ಡಿ) ಕರ್ನಾಟಕ

ಉತ್ತರ: ಬಿ

3) ನೀತಿ ಆಯೋಗ ಸಿದ್ಧಪಡಿಸುವ ರಫ್ತು ಸಿದ್ಧತಾ ಸೂಚ್ಯಂಕ 2021 (EXPORT PREPAREDNESS INDEX 2021) ರಲ್ಲಿ ಗುಜರಾತ್ ಪ್ರಥಮ ಸ್ಥಾನದಲ್ಲಿದೆ. ಹಾಗಾದರೆ, ಕರ್ನಾಟಕ ಎಷ್ಟನೇ ಸ್ಥಾನದಲ್ಲಿದೆ?

ಎ) ದ್ವಿತೀಯ ಬಿ) ತೃತೀಯ
ಸಿ) 4ನೇ ಸ್ಥಾನ ಡಿ) 5ನೇ ಸ್ಥಾನ

ಉತ್ತರ: ಬಿ

4) ಕರ್ನಾಟಕ ಸರ್ಕಾರವು 'ನವೀಕರಿಸಬಹುದಾದ ಇಂಧನ ನೀತಿ – 2022-27' ಪ್ರಕಟಿಸಿದೆ. ಇದಕ್ಕೆ ಸಂಬಂಧಿಸಿದ ಹೇಳಿಕೆಗಳನ್ನು ಗಮನಿಸಿ

1) ನವೀಕರಿಸಬಹುದಾದ ಇಂಧನ ಮೂಲಗಳಿಂದ 1,5392 ಮೆಗಾವ್ಯಾಟ್‌ನಷ್ಟು ವಿದ್ಯುತ್ ಅನ್ನು ಕರ್ನಾಟಕವು ಉತ್ಪಾದಿಸುತ್ತಿದೆ. ಮುಂದಿನ 5 ವರ್ಷಗಳಲ್ಲಿ 10 ಗಿಗಾ ವ್ಯಾಟ್ ವಿದ್ಯುತ್ ಉತ್ಪಾದಿಸುವ ಗುರಿಯನ್ನು ಹೊಂದಲಾಗಿದೆ.
2) ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದನೆಗೆ ಬಂಡವಾಳವನ್ನು ಆಕರ್ಷಿಸುವುದು ಇದರ ಗುರಿಯಾಗಿದೆ
3) ಇತರೇ ರಾಜ್ಯಗಳಿಗೆ ವಿದ್ಯುತ್ ರಫ್ತು ಮಾಡುವುದು ಈ ನೀತಿಯ ಉದ್ದೇಶವಾಗಿದೆ
4) ನವೀಕರಿಸಬಹುದಾದ ಇಂಧನ ಪಾರ್ಕುಗಳನ್ನು ಅಭಿವೃದ್ಧಿಪಡಿಸುವುದು. ಹಸಿರು ಇಂಧನ ಕಾರಿಡಾರ್ ಯೋಜನೆಗಳಲ್ಲಿ ಖಾಸಗಿ ವಲಯದ ಹೂಡಿಕೆಗೆ ಉತ್ತೇಜಿಸುವುದನ್ನು ಈ ನೀತಿ ಹೊಂದಿದೆ.

ಉತ್ತರ ಸಂಕೇತಗಳು

ಎ) 1, ಮತ್ತು 3 ಮಾತ್ರ ಸರಿಯಿದೆ
ಬಿ) 2, ಮತ್ತು 4 ಮಾತ್ರ ಸರಿಯಿದೆ
ಸಿ) 1, 2, 3 ಮಾತ್ರ ಸರಿಯಿದೆ .
ಡಿ) 1 ರಿಂದ 4ರ ತನಕ ಎಲ್ಲವೂ ಸರಿಯಿದೆ

ಉತ್ತರ: ಎ

5) 1997ರಲ್ಲಿ ಬಿಮ್‌ಸ್ಟೆಕ್ ಆರಂಭಿಸಲಾಯಿತು. ಬಂಗಾಳಕೊಲ್ಲಿಯ ಸುತ್ತಮುತ್ತಲಿನ ಬಿಮ್‌ಸ್ಟೆಕ್ ದೇಶಗಳ 5ನೇ ಶೃಂಗಸಭೆ ಶ್ರೀಲಂಕಾದಲ್ಲಿ ನಡೆಯಿತು. ಈ ವರ್ಚುವಲ್ ಸಮಾವೇಶದಲ್ಲಿ ಎಲ್ಲಾ ಸದಸ್ಯ ರಾಷ್ಟ್ರಗಳ ಪ್ರಮುಖರು ಭಾಗವಹಿಸಿದ್ದರು. ಹಾಗಾದರೆ ಬಿಮ್‌ಸ್ಟೆಕ್‌ನ ಈಗಿನ ಅಧ್ಯಕ್ಷರು ಯಾವ ದೇಶದವರು ?

ಎ) ಶ್ರೀಲಂಕಾ
ಬಿ) ಥಾಯ್ಲೆಂಡ್
ಸಿ)ಮ್ಯಾನ್ಮಾರ್
ಡಿ) ಯಾರೂ ಅಲ್ಲ

ಉತ್ತರ: ಎ

6) ಅಮೆರಿಕದ ಮೊದಲ ಮಹಿಳಾ ವಿದೇಶಾಂಗ ಸಚಿವೆ ಎಂಬ ಖ್ಯಾತಿಗೆ ಪಾತ್ರರಾಗಿದ್ದ ಮೆಡೆಲಿನ್ ಆಲ್‌ಬ್ರೈಟ್ ಇವರು ಇತ್ತೀಚೆಗೆ ನಿಧನರಾದರು. ಇವರು ಯಾರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಆ ಹುದ್ದೆಯಲ್ಲಿದ್ದರು?

ಎ) ಬರಾಕ್ ಒಬಾಮಾ ಬಿ) ಬಿಲ್ ಕ್ಲಿಂಟನ್
ಸಿ) ಜಾರ್ಜ್ ಬುಷ್ ಡಿ) ಡೊನಾಲ್ಡ್ ಟ್ರಂಪ್

ಉತ್ತರ: ಬಿ

7) ರಾಷ್ಟ್ರೀಯ ವನ್ಯಜೀವಿ ಸ್ಥಾಯಿ ಸಮಿತಿಯ 67ನೇ ಸಭೆಯು 2022ರ ಅಕ್ಟೋಬರ್ 5 ಅನ್ನು ಈ ಕೆಳಗೆ ಹೆಸರಿಸಿರುವ ಪ್ರಾಣಿಗಳಲ್ಲಿ, ಯಾವ ಪ್ರಾಣಿಯ ದಿನವನ್ನಾಗಿ ಆಚರಿಸಲು ನಿರ್ಣಯಿಸಿತು?

ಎ) ಕಪ್ಪೆ ಬಿ) ಆನೆ
ಸಿ) ಜಿಂಕೆ ಡಿ) ಡಾಲ್ಫಿನ್

ಉತ್ತರ: ಡಿ

(ಮಾಹಿತಿ: Spardha Bharati UPSC ಯೂಟ್ಯೂಬ್ ಚಾನೆಲ್)

ಇನ್ನಷ್ಟು ಪ್ರಶ್ನೋತ್ತರ ಹಾಗೂ 'ನಿಮಗಿದು ಗೊತ್ತೇ'– ಓದಲು prajavani.net ನೋಡಿ

ಆಂಗ್ಲಭಾಷಾ ಶಿಕ್ಷಕರ ನೇಮಕಾತಿ ಪರೀಕ್ಷೆಗೆ ಹೀಗಿರಲಿ ತಯಾರಿ



ಪ್ರಾಥಮಿಕ ಶಾಲಾ ಸಹಶಿಕ್ಷಕರ ನೇಮಕಾತಿ ಸ್ಪರ್ಧಾತ್ಮಕ ಪರೀಕ್ಷೆ

ಬೇದ್ರೆ ಮಂಜುನಾಥ

ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕ(ಆಂಗ್ಲ ಭಾಷೆ) ಹುದ್ದೆಗೆ ಆಯ್ಕೆ ಬಯಸುವ ಅಭ್ಯರ್ಥಿಗಳು, ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಎರಡು ಪತ್ರಿಕೆಗಳಿಗೆ ಉತ್ತರಿಸಬೇಕು. ಪತ್ರಿಕೆ –1ರಲ್ಲಿ ಬಹು ಆಯ್ಕೆಯ ಪ್ರಶ್ನೆಗಳಿರುತ್ತವೆ. ಒಟ್ಟು 150 ಅಂಕಗಳ ಪ್ರಶ್ನೆ ಪತ್ರಿಕೆ ಇದು. ಸಾಮಾನ್ಯ ಕನ್ನಡ ಭಾಷೆ, ಸಾಮಾನ್ಯ ಆಂಗ್ಲ ಭಾಷೆ, ಸಾಮಾನ್ಯ ಜ್ಞಾನ, ಪ್ರಚಲಿತ ವಿದ್ಯಮಾನ, ಶೈಕ್ಷಣಿಕ ಮನೋವಿಜ್ಞಾನ ಮತ್ತು ವಿಕಸನ ಮತ್ತು ಬೋಧನಾ ವಿಧಾನ, ಮೌಲ್ಯಶಿಕ್ಷಣ ಮತ್ತು ಆರೋಗ್ಯ ಶಿಕ್ಷಣ, ಗಣಕ ಯಂತ್ರ ಪ್ರಬುದ್ಧತೆ ವಿಷಯಕ್ಕೆ ಸಂಬಂಧಿಸಿದ ಪ್ರಶ್ನೆಗಳಿರುತ್ತವೆ.

ಆಂಗ್ಲ ಭಾಷೆ ಐಚ್ಛಿಕ ಪತ್ರಿಕೆ - 2 ರಲ್ಲಿ ಇಂಗ್ಲಿಷ್ ಭಾಷೆ ಮತ್ತು ಬೋಧನಾ ವಿಷಯದ ಜ್ಞಾನಕ್ಕೆ ಸಂಬಂಧಿಸಿದ 150 ಅಂಕಗಳ, ಬಹು ಆಯ್ಕೆಯ ಪ್ರಶ್ನೆಗಳಿರುತ್ತವೆ. ಈ ಪ್ರಶ್ನೆ ಪತ್ರಿಕೆಗೆ ಹೇಗೆ ಉತ್ತರಿಸಬೇಕು ಎಂಬ ಮಾಹಿತಿ ಇಲ್ಲಿದೆ; ಒಟ್ಟು ಐದು ಭಾಗಗಳಲ್ಲಿರುವ ಪ್ರಶ್ನೆಗಳಿಗೆ ಉತ್ತರಿಸಬೇಕಿರುತ್ತದೆ.

1 ರೀಡಿಂಗ್ ಕಾಂಪ್ರಹೆನ್ಷನ್(READING COMPREHENSION (UNSEEN PASSAGES)): ಈ ಭಾಗದಲ್ಲಿ ಇಂಗ್ಲಿಷ್ ಭಾಷೆಯಲ್ಲಿರುವ ಪಾಠ, ಪದ್ಯ, ಸಂಭಾಷಣೆ, ಲೇಖನ, ಪ್ರಬಂಧ ಅಥವಾ ವರದಿಯೊಂದನ್ನು ನೀಡಿ, ಅದಕ್ಕೆ ಸಂಬಂಧಿಸಿದಂತೆ ಕೆಲವು ಪ್ರಶ್ನೆಗಳನ್ನು ಕೇಳಲಾಗುತ್ತದೆ. ಇದು ನಾವು ನೋಡಿರದ ಅಥವಾ ಓದಿರದ (Unseen passage) ಪ್ಯಾಸೇಜ್ ಆಗಿದ್ದು , ಪ್ರಶ್ನೆ ಮತ್ತು ಉತ್ತರಗಳು ಪತ್ರಿಕೆಯಲ್ಲಿಯೇ ಲಭ್ಯವಿರುತ್ತವೆ. ಈ ಪ್ಯಾಸೇಜ್‌ನಲ್ಲಿ ಸೂಕ್ತವಾದ ಪದ / ಪದಗುಚ್ಛ / ವಾಕ್ಯವೃಂದ / ವಾಕ್ಯವನ್ನು ಹುಡುಕಿ ಉತ್ತರಿಸುವ ಜವಾಬ್ದಾರಿ ಅಭ್ಯರ್ಥಿಗಳದ್ದು. ತುಂಬಾ ಸರಳವಾದ ಪ್ರಕ್ರಿಯೆ ಇದು. ಪದ / ವಾಕ್ಯಗಳನ್ನು ವೇಗವಾಗಿ ಓದುವ ಸಾಮರ್ಥ್ಯ, ವ್ಯಾಕರಣ ಜ್ಞಾನ, ಪದಸಂಪತ್ತು, ಸಾಮಾನ್ಯ ಜ್ಞಾನ, ತರ್ಕಗಳಲ್ಲಿ ಅಭಿರುಚಿ ಇದ್ದವರು ಈ ಪ್ರಶ್ನೆಗಳನ್ನು ಸುಲಭವಾಗಿ ಬಿಡಿಸುತ್ತಾರೆ. ವಿವರಣಾತ್ಮಕ ಉತ್ತರ ಅಗತ್ಯವಿದ್ದರೆ ನಿಗದಿತ ಪದ ಅಥವಾ ಪದಗುಚ್ಛವನ್ನು ಬಳಸಿಕೊಂಡು ಸ್ವಂತ ವಾಕ್ಯಗಳಲ್ಲಿ ಉತ್ತರಿಸಬೇಕಿರುತ್ತದೆ.

2 ಪದಸಂಪತ್ತು ಮತ್ತು ಭಾಷೆ ಬಳಕೆ(VOCABULARY AND LANGUAGE USE): ಈ ಭಾಗದಲ್ಲಿ ಇಂಗ್ಲಿಷ್ ಪದದ ಕಾಗುಣಿತ(ಸ್ಪೆಲ್ಲಿಂಗ್), ಪದರಚನೆ, ಉಚ್ಚಾರ, ಸಮಾನಾರ್ಥಕ, ವಿರುದ್ಧಾರ್ಥಕ ಪದಗಳು, ಲಿಂಗ, ವಚನಗಳ ಬದಲಾವಣೆ ಕುರಿತ ಪ್ರಶ್ನೆಗಳಿರುತ್ತವೆ. ಹಾಗೆಯೇ ಹಲವು ಪದಗಳಲ್ಲಿ ಹೇಳಿರುವುದಕ್ಕೆ ಬದಲಾಗಿ ಏಕಪದ ನೀಡುವಿಕೆ, ಸಮಾನ ಉಚ್ಚಾರವಿದ್ದರೂ ವಿವಿಧ ರೂಪ ಮತ್ತು ಅರ್ಥ ಕೊಡುವ ಪದಗಳ ಬಳಕೆ, ಗಾದೆ, ನುಡಿಗಟ್ಟು(Vocabulary), ಪಡೆನುಡಿಗಳ ಬಳಕೆ ಅಥವಾ ಅರ್ಥ ಕುರಿತಂತೆ ಪ್ರಶ್ನೆಗಳನ್ನು ಕೇಳಲಾಗುತ್ತದೆ. ನಿತ್ಯವೂ ಪತ್ರಿಕೆ ಓದುವ, ಅಂತರ್ಜಾಲದಲ್ಲಿ ಸಿಗುವ ಪದಸಂಪತ್ತಿನ ಸಮಸ್ಯೆಗಳನ್ನು ಬಿಡಿಸುವ, ಮೊಬೈಲ್ ಡಿಕ್ಷನರಿ ಬಳಸುವ, ಪದಬಂಧ ಬಿಡಿಸುವ ಹವ್ಯಾಸವಿರುವವರು ಈ ಪ್ರಶ್ನೆಗಳಿಗೆ ಸರಿ ಉತ್ತರಗಳನ್ನು ಥಟ್ಟನೇ ನೀಡಬಲ್ಲರು.

3 ವ್ಯಾಕರಣ / ಭಾಷಾ ಬಳಕೆ (GRAMMAR / LANGUAGE USE): ವ್ಯಾಕರಣ ಮತ್ತು ಭಾಷಾ ಬಳಕೆಯನ್ನು ಪರೀಕ್ಷಿಸುವ ಸಲುವಾಗಿ ನೀಡಲಾಗುವ ಪ್ರಶ್ನೆಗಳು ವಾಕ್ಯಾಂಶ ಅಥವಾ ಪಾರ್ಟ್ಸ್ ಆಫ್ ಸ್ಪೀಚ್, ಟೈಮ್, ಟೆನ್ಸ್, ಕರ್ತರಿ ಮತ್ತು ಕರ್ಮಣಿ ಪ್ರಯೋಗ, ಪ್ರತ್ಯಕ್ಷ ಮತ್ತು ಪರೋಕ್ಷ ನಿರೂಪಣೆಯ ವಾಕ್ಯಗಳು, ತರತಮ ವಾಚಕಗಳು, ಪ್ರಶ್ನೆಗಳ ವಿವಿಧ ರೂಪಗಳು, ಲೇಖನ ಚಿಹ್ನೆಗಳು, ವಾಕ್ಯ ಅಥವಾ ಪದಸಂಯೋಜನೆಯಲ್ಲಿನ ತಪ್ಪುಗಳು, ಸರಳ-ಸಂಯುಕ್ತ-ಸಂಕೀರ್ಣ ವಾಕ್ಯಗಳು, ಕ್ರಿಯಾಪದಗುಚ್ಛ, ಅಲಂಕಾರಗಳು, ಸಂವಹನ ಕೌಶಲಗಳು ಮತ್ತು ಭಾಷಾ ಬಳಕೆ ಮುಂತಾದ ವಿಷಯಗಳನ್ನು ಒಳಗೊಂಡಿರುತ್ತವೆ. ವ್ಯಾಕರಣ ಪುಸ್ತಕ ಅಥವಾ ಪಠ್ಯಪುಸ್ತಕಗಳಲ್ಲಿ ನೀಡಲಾಗಿರುವ ವ್ಯಾಕರಣಾಂಶಗಳನ್ನು ಅಭ್ಯಾಸ ಮಾಡುವವರು, ಪ್ರಶ್ನೆಗಳನ್ನು ಸುಲಭವಾಗಿ ಬಿಡಿಸಬಹುದು.

4 ಬರವಣಿಗೆ ಸಾಮರ್ಥ್ಯ (WRITING ABILITY): ವಾಕ್ಯರಚನೆಯಲ್ಲಿ ಆಗಿರುವ ತಪ್ಪುಗಳನ್ನು ಗುರುತಿಸಿ ಸರಿಪಡಿಸುವುದು, ವಿವಿಧ ವಾಕ್ಯಾಂಶಗಳನ್ನು ಬಿಟ್ಟ ಸ್ಥಳಗಳಲ್ಲಿ ತುಂಬಿಸುವುದು, ವಾಕ್ಯಗಳಲ್ಲಿ ಬಳಸುವುದು, ಕೊಟ್ಟಿರುವ ಸುಳಿವುಗಳನ್ನು ಇಲ್ಲವೇ ಚಿತ್ರವನ್ನು ಬಳಸಿಕೊಂಡು ಪ್ಯಾರಾಗ್ರಾಫ್ ಅಥವಾ ಪ್ರಬಂಧ ರಚಿಸುವುದು, ಪತ್ರಲೇಖನ, ಸಂದೇಶ ಅಥವಾ ಘೋಷವಾಕ್ಯ ಇಲ್ಲವೇ ಜಾಹೀರಾತನ್ನು ರೂಪಿಸುವುದು, ಇ-ಮೇಲ್, ದಿನಚರಿ, ಲೇಖನ, ವ್ಯಕ್ತಿಚಿತ್ರ ಹೀಗೆ ಯಾವುದಾದರೂ ಸಂಗತಿಯನ್ನು ಕುರಿತು ವಿವರವಾಗಿ ಬರೆಯುವ ಅಭ್ಯಾಸಕ್ಕೆ ಸಂಬಂಧಿಸಿದ ಪ್ರಶ್ನೆಗಳು ಈ ಭಾಗದಲ್ಲಿರುತ್ತವೆ.

5 ಬೋಧನಾ ವಿಧಾನಗಳು (METHODS AND APPROACHES): ಭಾಷೆಯ ಸಂಕ್ಷಿಪ್ತ ಇತಿಹಾಸ, ಓದು, ಬರಹ ಮತ್ತು ಬೋಧನಾ ವಿಧಾನಗಳಿಗೆ ಸಂಬಂಧಿಸಿದ ಪ್ರಶ್ನೆಗಳ ಜೊತೆಗೆ ಭಾಷಾ ಅಧ್ಯಯನಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಇಲ್ಲಿ ಕೇಳಲಾಗುತ್ತದೆ. ಬಿ.ಇಡಿ. ತರಗತಿಗಳಲ್ಲಿ ಇಂಗ್ಲಿಷ್ ಮೆಥಡ್ ತೆಗೆದುಕೊಂಡವರಾದ್ದರಿಂದ ಭಾಷಾಬೋಧನೆಯ ಮತ್ತು ಭಾಷಾ ಕೌಶಲಗಳ ಕುರಿತ ಪ್ರಶ್ನೆಗಳನ್ನು ಬಿಡಿಸಲು ತರಬೇತಿಯ ಸಂದರ್ಭದಲ್ಲಿ ಓದಿದ ಪಠ್ಯವನ್ನೇ ಮತ್ತೊಮ್ಮೆ ತಿರುವಿಹಾಕಬೇಕು.

ಈ ಪತ್ರಿಕೆಗಳಿಗೆ ಉತ್ತರಿಸಲು 1 ರಿಂದ 10ನೇ ತರಗತಿಯವರೆಗಿನ ಪಠ್ಯ ಪುಸ್ತಕಗಳನ್ನು ಹಾಗೂ ಇಂಗ್ಲಿಷ್ ಭಾಷೆ ಮತ್ತು ವ್ಯಾಕರಣದ ಕೃತಿಗಳನ್ನು ಅಭ್ಯಾಸ ಮಾಡಬೇಕು. ಸರಳವಾಗಿ ಇಂಗ್ಲಿಷ್ ವಾಕ್ಯಗಳನ್ನ ಬರೆಯುವ, ಪ್ಯಾರಾಗ್ರಾಫ್ ಅಥವಾ ಪ್ರಬಂಧ ರಚಿಸುವ ಕೌಶಲವನ್ನು ರೂಢಿಸಿಕೊಳ್ಳಬೇಕು. ಅದಕ್ಕೆಂದೇ ಸರಳ ಕಲಿಕಾ ಕೈಪಿಡಿಗಳು ಲಭ್ಯ. ಕನ್ನಡದ ಮೂಲಕ ಇಂಗ್ಲಿಷ್ ಕಲಿಸುವ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಿಗೆಂದೇ ರಚಿತವಾದ ನವಕರ್ನಾಟಕ ಪ್ರಕಾಶನದ ಪುಸ್ತಕ "Applied English Course for Competitive Examinations" ಈ ಸ್ಪರ್ಧಾರ್ಥಿಗಳಿಗೆ ಸಿದ್ಧಮಾದರಿ ಒದಗಿಸುತ್ತದೆ.

❖

ಪಿಯುಸಿ ಪರೀಕ್ಷೆ ದಿಕ್ಸೂಚಿ

ಮಾದರಿ ಪ್ರಶ್ನೋತ್ತರ

ಹೈಡ್ರೋಕಾರ್ಬನ್

ರಸಾಯನ ಶಾಸ್ತ್ರ

60. ಹೈಡ್ರೋಕಾರ್ಬನ್‌ನ ಒಂದು ಹೈಡ್ರೋಜನ್ ಪರಮಾಣುವನ್ನು ಅಲ್ಕಾಕ್ಸಿ ಅಥವಾ ಆರ್ಲೈಲಾಕ್ಸಿ ಗುಂಪಿನಿಂದ ಪ್ರತಿಸ್ಥಾಪಿಸಿದಾಗ ಉತ್ಪತ್ತಿಯಾಗುವ ಮತ್ತೊಂದು ವರ್ಗದ ಸಂಯುಕ್ತಗಳನ್ನು ಏನೆಂದು ಕರೆಯುವರು?

ಉತ್ತರ:- ಹೈಡ್ರೋಕಾರ್ಬನ್‌ನ ಒಂದು ಹೈಡ್ರೋಜನ್ ಪರಮಾಣುವನ್ನು ಅಲ್ಕಾಕ್ಸಿ ಅಥವಾ ಆರ್ಲೈಲಾಕ್ಸಿ ಗುಂಪಿನಿಂದ ಪ್ರತಿಸ್ಥಾಪಿಸಿದಾಗ ಉತ್ಪತ್ತಿಯಾಗುವ ಮತ್ತೊಂದು ವರ್ಗದ ಸಂಯುಕ್ತಗಳನ್ನು ಈಥರ್ಸ್ ಎನ್ನುವರು. ಉದಾಹರಣೆಗೆ, CH_3OCH_3

61. ಈಥರ್‌ಗಳ ಬಗ್ಗೆ ಬರೆಯಿರಿ

ಉತ್ತರ:- ಈಥರ್‌ಗಳನ್ನು i) ಆಲ್ಕೋಹಾಲ್‌ಗಳ ನಿರ್ಜಲೀಕರಣದಿಂದ ಮತ್ತು ii)ವಿಲಿಯಮ್‌ಸನ್ ಸಂಶ್ಲೇಷಣೆಯಿಂದ ತಯಾರಿಸಬಹುದು. ಈಥರ್‌ಗಳ ಕುದಿಯುವ ಬಿಂದುಗಳು ಆಲ್ಕೇನ್‌ಗಳಂತೆ ಹೋಲುತ್ತವೆ. ಹಾಗೆಯೇ ಅವುಗಳ ಕರುಗುವಿಕೆ ಸಮಾನ ಅಣುತೂಕ ಹೊಂದಿರುವ ಆಲ್ಕೋಹಾಲ್‌ಗಳಿಗೆ ಹೋಲಿಕೆಯಾಗುತ್ತದೆ. ಈಥರ್‌ಗಳಲ್ಲಿನ C-O ಬಂಧವನ್ನು ಹೈಡ್ರೋಜನ್ ಹ್ಯಾಲೈಡ್‌ಗಳ ಮೂಲಕ ಸೀಳಬಹುದು. ಇಲೆಕ್ಟ್ರಾನ್ ಆಕಾಂಕ್ಷಿಯ ಆದೇಶ್ಯ ಅಲ್ಕಾಕ್ಸಿ ಗುಂಪು ಆರೋಮ್ಯಾಟಿಕ್ ಉಂಗುರವನ್ನು ಸಕ್ರಿಯಗೊಳಿಸುತ್ತದೆ ಮತ್ತು ಒಳ ಬರುವ ಗುಂಪನ್ನು ಅರ್ಥೋ ಮತ್ತು ಪ್ಯಾರಾಸ್ಥಾನಗಳಿಗೆ ನಿರ್ದೇಶಿಸುತ್ತದೆ.

ಈಥರ್‌ಗಳ ವರ್ಗೀಕರಣ ಆಮ್ಲಜನಕದ ಪರಮಾಣುಗೆ ಜೋಡಿಸಲಾದ ಗುಂಪುಗಳ ಆಧಾರದ ಮೇಲೆ ಮಾಡಲಾಗುತ್ತದೆ.

62. ಆಲ್ಡಿಹೈಡ್ ಮತ್ತು ಕೀಟೋನ್‌ಗಳ ಉಪಯೋಗವನ್ನು ಬರೆಯಿರಿ

ಉತ್ತರ:- ರಾಸಾಯನಿಕ ಉದ್ಯಮದಲ್ಲಿ ಆಲ್ಡಿಹೈಡ್ ಮತ್ತು ಕೀಟೋನ್‌ಗಳನ್ನು ದ್ರಾವಕಗಳಾಗಿ, ಆರಂಭಿಕ ವಸ್ತುಗಳಾಗಿ ಮತ್ತು ಇತರೆ ಉತ್ಪನ್ನಗಳ ಸಂಶ್ಲೇಷಣೆಯಲ್ಲಿ ಹಾಗೂ ಕಾರಕಗಳಾಗಿ ಬಳಸುವರು. ಪರಿಚಿತ ಫಾರ್ಮಲಿನ್ (ಶೇ 40) ದ್ರಾವಣ ಫಾರ್ಮಾಲ್ಡಿಹೈಡ್ ಆಗಿದ್ದು, ಇದನ್ನು ಜೈವಿಕ ಮಾದರಿಗಳನ್ನು ಸಂರಕ್ಷಿಸಲು, ಬೇಕಲೈಟ್(ಫೀನಾಲ್-ಫಾರ್ಮಾಲ್ಡಿಹೈಡ್ ರಾಳ), ಯೂರಿಯ-ಫಾರ್ಮಾಲ್ಡಿಹೈಡ್ ಅಂಟುಗಳು ಮತ್ತು ಪಾಲಿಮರೀಯ ಉತ್ಪನ್ನಗಳ ತಯಾರಿಕೆಯಲ್ಲಿ ಬಳಸುವರು. ಅಸಿಟಾಲ್ಡಿಹೈಡನ್ನು ಪ್ರಮುಖವಾಗಿ ಅಸಿಟಿಕ್ ಆಮ್ಲ, ಈಥೈಲ್ ಅಸಿಟೇಟ್, ವಿನೈಲ್ ಅಸಿಟೇಟ್, ಪಾಲಿಮರ್ ಮತ್ತು ಔಷಧಿಗಳ ತಯಾರಿಕೆಯಲ್ಲಿ ಪ್ರಾರಂಭಿಕ ವಸ್ತುವಾಗಿ ಬಳಸುವರು. ಬೆಂಜಾಲ್ಡಿಹೈಡನ್ನು ಸುಗಂಧ ದ್ರವ್ಯ ಮತ್ತು ಬಣ್ಣಗಳ ಉದ್ಯಮದಲ್ಲಿ ಬಳಸುವರು. ಅಸಿಟೋನ್ ಹಾಗೂ ಈಥೈಲ್, ಮೀಥೈಲ್ ಕೀಟೋನ್‌ಗಳು ಸಾಮಾನ್ಯ ಕೈಗಾರಿಕಾ ದ್ರಾವಕಗಳಾಗಿವೆ. ಅನೇಕ ಆಲ್ಡಿಹೈಡ್ ಮತ್ತು ಕೀಟೋನ್‌ಗಳು ಉದಾಹರಣೆಗೆ, ಬ್ಯುಟಿರಾಲ್ಡಿಹೈಡ್, ವ್ಯಾನಿಲಿನ್, ಅಸಿಟೋಫೀನೋನ್, ಕರ್ಪೂರ ಮುಂತಾದವುಗಳು ವಾಸನೆ ಮತ್ತು ಸ್ವಾದಕ್ಕೆ ಚಿರಪರಿಚಿತವಾಗಿವೆ.

ನೆನಪಿಡಿ

- ಸಮಾನ ಅಣು ತೂಕವಿರುವ ಇತರೆ ವರ್ಗಗಳ ಸಂಯುಕ್ತಗಳಾದ ಹೈಡ್ರೋಕಾರ್ಬನ್‌ಗಳು. ಈಥರ್‌ಗಳು ಮತ್ತು ಹ್ಯಾಲೋಆರೀನ್‌ಗಳಿಗಿಂತ ಹೆಚ್ಚು ಕುದಿಯುವ ಬಿಂದು ಇರುತ್ತದೆ.
- ಆಲ್ಕೋಹಾಲ್‌ಗಳನ್ನು 1) ಆಲ್ಕೀನ್‌ನ ಜಲೀಕರಣದಿಂದ i) ಆಮ್ಲದ ಉಪಸ್ಥಿತಿಯಲ್ಲಿ ಮತ್ತು ii) ಹೈಡ್ರೋಬೋರೇಷನ್ ಉತ್ಕರ್ಷಣೆಯಿಂದ 2)ಕಾರ್ಬೋನೈಲ್ ಸಂಯುಕ್ತಗಳಿಂದ i) ವೇಗವರ್ಧಕ ಅಪಕರ್ಷಣೆ ಮತ್ತು ii) ಗ್ರೀಗ್‌ನಾರ್ಡ್ ಕಾರಕಗಳಿಂದ ತಯಾರಿಸಬಹುದು.
- ಫೀನಾಲ್‌ಗಳನ್ನು 1. –OH ಗುಂಪಿನ ಪ್ರತಿಸ್ಥಾಪನ ಮೂಲಕ

1) ಹ್ಯಾಲೋಆರೀನ್‌ಗಳಲ್ಲಿ ಹ್ಯಾಲೋಜನ್ ಪರಮಾಣು ಮತ್ತು ii) ಆರೈಲ್ ಸಲ್ಫೋನಿಕ್ ಆಮ್ಲದಲ್ಲಿನ ಸಲ್ಫೋನಿಕ್ ಆಮ್ಲದ ಗುಂಪು ಪ್ರತಿಸ್ಥಾಪನೆ ಮೂಲಕ
2) ಡೈ ಆಜೋನಿಯಮ್ ಲವಣದ ಜಲೀಯ ವಿಭಜನೆ
3) ಕ್ಯೂಮಿನ್ ಔದ್ಯೋಗಿಕ ಉತ್ಪಾದನೆಯಿಂದ ತಯಾರಿಸಬಹುದು.

- ಆಲ್ಕೋಹಾಲ್‌ಗಳು ಹೈಡ್ರೋಜನ್ ಹ್ಯಾಲೈಡ್‌ನ ಜೊತೆ ನ್ಯೂಕ್ಲೀಯಾಕಾಂಕ್ಷಿ ಆದೇಶ್ಯಯ ಮೂಲಕ ಆಲ್ಕೈಲ್ ಹ್ಯಾಲೈಡ್‌ಗಳನ್ನು ಉತ್ಪತ್ತಿ ಮಾಡುತ್ತವೆ. ಆಲ್ಕೋಹಾಲ್‌ಗಳ ನಿರ್ಜಲೀಕರಣವು ಆಲ್ಕೀನ್‌ಗಳನ್ನು ನೀಡುತ್ತವೆ. ಮಂದ ಉತ್ಕರ್ಷಣೆಕಾರಕಗಳೊಂದಿಗೆ ಪ್ರಾಥಮಿಕ ಆಲ್ಕೋಹಾಲ್‌ಗಳು ಉತ್ಕರ್ಷಣೆಗೊಂಡು ಆಲ್ಡಿಹೈಡ್‌ಗಳನ್ನು ನೀಡುತ್ತವೆ ಮತ್ತು ಪ್ರಬಲ ಉತ್ಕರ್ಷಣಕಾರಕಗಳೊಂದಿಗೆ ಕಾರ್ಬಾಕ್ಸಿಲಿಕ್ ಆಮ್ಲಗಳನ್ನು ನೀಡುತ್ತವೆ. ಹಾಗೆಯೇ ದ್ವಿತೀಯಕ ಆಲ್ಕೋಹಾಲ್‌ಗಳು ಕೀಟೋನ್‌ಗಳನ್ನು ನೀಡುತ್ತವೆ. ತೃತೀಯಕ ಆಲ್ಕೋಹಾಲ್‌ಗಳು ಉತ್ಕರ್ಷಣೆಯನ್ನು ನಿರೋಧಿಸುತ್ತವೆ.

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಗಣಿತಶಾಸ್ತ್ರದ ಆಂಗ್ಲಭಾಷೆಯ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸುಭಾಷಿತ

ಮೂಢನಂಬಿಕೆ ಹೊಂದಿದ ವಿದ್ಯಾವಂತನು ಮೂಢನಂಬಿಕೆಯುಳ್ಳ ಅವಿದ್ಯಾವಂತನಿಗಿಂತ ಹೆಚ್ಚು ಅಪಾಯಕಾರಿ.

–ಡಾ. ಎಚ್.ನರಸಿಂಹಯ್ಯ

ಸಿಬಿಐ ಬಗ್ಗೆ ಸಿಜೆಐ ಮಾತು ಬದಲಾದೀತೇ ಅಧಿಕಾರಸ್ಥರ ನಿಲುವು?

ಕೇಂದ್ರೀಯ ತನಿಖಾ ದಳವನ್ನು (ಸಿಬಿಐ) ಸುಪ್ರೀಂ ಕೋರ್ಟ್ 2013ರಲ್ಲಿ 'ಪಂಜರದ ಗಿಣಿ' ಎಂದು ಬಣ್ಣಿಸುವ ಮೂಲಕ ಸಿಬಿಐ ಕಾರ್ಯವೈಖರಿ ಬಗ್ಗೆ ತನ್ನ ತೀವ್ರ ಅತೃಪ್ತಿ ವ್ಯಕ್ತಪಡಿಸಿತ್ತು. ಆಗ ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಇತ್ತು. 2014ರಲ್ಲಿ ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಅಧಿಕಾರಕ್ಕೆ ಬಂತು. ಈಗ, ಸಿಬಿಐ ಕಾರ್ಯವೈಖರಿ ಬಗ್ಗೆ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಅವರು ಅತೃಪ್ತಿ ವ್ಯಕ್ತಪಡಿಸಿದ್ದಾರೆ. ಅವರ ಈಗಿನ ಮಾತುಗಳನ್ನು 2013ರಲ್ಲಿ ಆಡಿದ ಮಾತುಗಳ ಪರಿಷ್ಕೃತ ರೂಪವಾಗಿಯೂ ಗ್ರಹಿಸಬಹುದು. ಪ್ರಜಾತಂತ್ರ ವ್ಯವಸ್ಥೆಯಲ್ಲಿ ತನಿಖಾ ಸಂಸ್ಥೆಗಳ ಪಾತ್ರ ಹಾಗೂ ಹೊಣೆಗಾರಿಕೆ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ನ್ಯಾಯಮೂರ್ತಿ ರಮಣ ಅವರು, ಸಿಬಿಐ ನಿರ್ವಹಿಸಿದ ಪಾತ್ರವು ಹಲವು ಪ್ರಶ್ನೆಗಳನ್ನು ಮೂಡಿಸಿದೆ ಎಂದು ಹೇಳಿದ್ದಾರೆ. ಈ ಸಂಸ್ಥೆಯು ಸಾರ್ವಜನಿಕರ ಕಣ್ಣಲ್ಲಿ ವಿಶ್ವಾಸವನ್ನು ಮತ್ತೆ ಸಂಪಾದಿಸಿಕೊಳ್ಳಬೇಕು, ಸಾಮಾಜಿಕ ಸ್ವೀಕಾರಾರ್ಹತೆಯ ಬಗ್ಗೆಯೂ ಗಮನ ನೀಡಬೇಕು ಎಂದು ಕೂಡ ಹೇಳಿದ್ದಾರೆ. ಈ ದಿಸೆಯಲ್ಲಿ ಮೊದಲ ಹೆಜ್ಜೆಯಾಗಿ, ತನಿಖಾ ಸಂಸ್ಥೆಗಳು ರಾಜಕೀಯ ಅಧಿಕಾರ ಹೊಂದಿರುವವರ ಜೊತೆಗಿನ ನಂಟನ್ನು ಬಿಡಬೇಕು ಎಂದು ಕರೆ ನೀಡಿದ್ದಾರೆ. ಪೊಲೀಸ್ ವ್ಯವಸ್ಥೆ ಮತ್ತು ಇತರ ತನಿಖಾ ಸಂಸ್ಥೆಗಳು ಸೇರಿದಂತೆ ದೇಶದ ಎಲ್ಲ ಸಾರ್ವಜನಿಕ ಸಂಸ್ಥೆಯು ಸರ್ವಾಧಿಕಾರಿ ಧೋರಣೆ ತನ್ನತ್ತ ಸುಳಿಯದಂತೆ ನೋಡಿಕೊಳ್ಳಬೇಕು, ಎಲ್ಲ ಸಂಸ್ಥೆಗಳೂ ಪ್ರಜಾತಂತ್ರದ ಚೌಕಟ್ಟಿನ ಒಳಗೇ ಕೆಲಸ ಮಾಡಬೇಕು ಎಂದು ಕೂಡ ಅವರು ಹೇಳಿದ್ದಾರೆ. ಈ ಚೌಕಟ್ಟು ಮೀರಿ ಕಾರ್ಯ ನಿರ್ವಹಿಸಲು ಮುಂದಾದರೆ ಸಂಸ್ಥೆಗಳಿಗೆ ಧಕ್ಕೆ ಆಗುತ್ತದೆ, ಪ್ರಜಾತಂತ್ರ ದುರ್ಬಲ ಆಗುತ್ತದೆ ಎಂದು ಕೂಡ ಅವರು ಎಚ್ಚರಿಸಿದ್ದಾರೆ. ಸಿಬಿಐ, ಜಾರಿ ನಿರ್ದೇಶನಾಲಯದಂತಹ ತನಿಖಾ ಸಂಸ್ಥೆಗಳನ್ನು ಒಂದೇ ಸ್ವತಂತ್ರ ಸಂಸ್ಥೆಯ ಅಡಿ ತರುವ ಆಲೋಚನೆಯನ್ನೂ ಅವರು ಮುಂದಿರಿಸಿದ್ದಾರೆ.

ತನಿಖಾ ಸಂಸ್ಥೆಗಳನ್ನು ನೋಡಿಕೊಳ್ಳಲು ಸ್ವತಂತ್ರವಾದ ವ್ಯವಸ್ಥೆಯೊಂದನ್ನು ರಚಿಸಬೇಕೆಂಬ ಸಿಜೆಐ ಪ್ರಸ್ತಾವ ಅತ್ಯಂತ ಗಮನಾರ್ಹವಾಗಿದೆ

ಇಡೀ ಪೊಲೀಸ್ ವ್ಯವಸ್ಥೆ ಹಾಗೂ ತನಿಖಾ ಸಂಸ್ಥೆಗಳಿಗೆ ಇರುವ ಸಮಸ್ಯೆಗಳು ಏನು ಎಂಬುದನ್ನು ಸಿಜೆಐ ರಮಣ ಅವರು ಬಹಳ ವಿವರವಾಗಿ ಹೇಳಿದ್ದಾರೆ. ಬಹುಶಃ, 2013ರಲ್ಲಿ ಸುಪ್ರೀಂ ಕೋರ್ಟ್‌ನ ನ್ಯಾಯಪೀಠ ಹೇಳಿದ್ದ ಮಾತುಗಳಿಗಿಂತ ಹೆಚ್ಚು ವಿವರವಾಗಿ ಇವೆ ಅವರ ಮಾತುಗಳು. ಭ್ರಷ್ಟಾಚಾರ, ಅಧಿಕಾರದ ಮಿತಿಯನ್ನು ಮೀರಿ ವರ್ತಿಸುವುದು, ನಿಷ್ಪಕ್ಷಪಾತ ಧೋರಣೆ ಕಡಿಮೆ ಆಗಿರುವುದು, ರಾಜಕೀಯ ಲೋಕದ ಜೊತೆ ನಿಕಟ ಸಂಬಂಧ ಹೊಂದಿರುವುದು ಆ ಸಮಸ್ಯೆಗಳಲ್ಲಿ ಕೆಲವು ಎಂದು ಅವರು ಪಟ್ಟಿ ಮಾಡಿದ್ದಾರೆ. ಇವಿಷ್ಟೇ ಅಲ್ಲದೆ, ಮೂಲಸೌಕರ್ಯದ ಕೊರತೆ, ಅಗತ್ಯ ಮಾನವ ಸಂಪನ್ಮೂಲ ಇಲ್ಲದಿರುವುದು, ಆಧುನಿಕ ಉಪಕರಣಗಳನ್ನು ತನಿಖಾ ಸಂಸ್ಥೆಗಳಿಗೆ ಕೊಡದಿರುವುದು ಕೂಡ ಸಮಸ್ಯೆಗಳ ಪಟ್ಟಿಯಲ್ಲಿ ಜಾಗ ಪಡೆದಿರಬಹುದು. ಆದರೆ, ಮುಖ್ಯ ಸಮಸ್ಯೆ ಇರುವುದು ರಾಜಕೀಯ ನಾಯಕರ ಜೊತೆಗಿನ ನಂಟು ಮತ್ತು ತನಿಖಾ ಸಂಸ್ಥೆಗಳ ಮೇಲೆ ರಾಜಕಾರಣಿಗಳು ಹೊಂದಿರುವ ನಿಯಂತ್ರಣ. ಇದು ಎಲ್ಲರಿಗೂ ಗೊತ್ತಿದೆ. ಅಧಿಕಾರದಲ್ಲಿ ಇರುವವರನ್ನು ಹಾಗೂ ಇಂತಹ ನಿಯಂತ್ರಣದಿಂದ ಲಾಭ ಮಾಡಿಕೊಳ್ಳುವವರನ್ನು ಹೊರತುಪಡಿಸಿದರೆ ಉಳಿದ ಎಲ್ಲರೂ ಇದನ್ನು ಒಪ್ಪಿಕೊಳ್ಳುತ್ತಾರೆ. ದುರದೃಷ್ಟದ ಸಂಗತಿಯೆಂದರೆ, ಇಂತಹ ನಿಯಂತ್ರಣಗಳನ್ನು ಹೊಂದುವ ಮೂಲಕ ತಾವು ದೇಶದ ಪ್ರಜಾತಂತ್ರ ವ್ಯವಸ್ಥೆಗೆ ಮಾಡುವ ಹಾನಿಯನ್ನು ರಾಜಕೀಯ ಪಕ್ಷಗಳಾಗಲೀ ಸರ್ಕಾರಗಳಾಗಲೀ ಅರ್ಥ ಮಾಡಿಕೊಳ್ಳುವುದಿಲ್ಲ. ವ್ಯವಸ್ಥೆಯಲ್ಲಿ ಸರ್ವಾಧಿಕಾರದ ಮನಃಸ್ಥಿತಿ ನುಸುಳದಂತೆ ನೋಡಿಕೊಳ್ಳಬೇಕು ಎಂದು ಸಿಜೆಐ ರಮಣ ಹೇಳಿರುವುದು ಇವೆಲ್ಲವುಗಳನ್ನು ಗಮನಿಸಿಯೇ.

ತನಿಖಾ ಸಂಸ್ಥೆಗಳನ್ನು ನೋಡಿಕೊಳ್ಳಲು ಸ್ವತಂತ್ರವಾದ ವ್ಯವಸ್ಥೆಯೊಂದನ್ನು ರಚಿಸುವ ಸಿಜೆಐ ಪ್ರಸ್ತಾವವನ್ನು ಅಧಿಕಾರದಲ್ಲಿ ಇರುವವರು ಗಂಭೀರವಾಗಿ ಪರಿಗಣಿಸುವರೇ ಎಂಬುದು ಸ್ಪಷ್ಟವಾಗಿಲ್ಲ. ಸಿಬಿಐ ಹಾಗೂ ಪೊಲೀಸ್ ವ್ಯವಸ್ಥೆ ಇಂದಿನ ಸಮಸ್ಯೆಗಳಲ್ಲಿ ಸಿಲುಕಿರುವುದಕ್ಕೆ ಕಾರಣ ಒಳ್ಳೆಯ ಆಲೋಚನೆಗಳ ಕೊರತೆಯಾಗಲೀ ಪ್ರಸ್ತಾವಗಳು ಇಲ್ಲದಿರುವುದಾಗಲೀ ಅಲ್ಲ. ವ್ಯವಸ್ಥೆ ಈಗಿರುವಂತೆಯೇ ಇರಲಿ ಎಂದು ಸರ್ಕಾರವೇ ಬಯಸುತ್ತಿರಬಹುದು. ಸರ್ಕಾರದ ಧೋರಣೆ ಏನಿರಬಹುದು ಎಂಬುದು ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಅವರ ಮಾತಿನಲ್ಲಿ ಧ್ವನಿಸಿದೆ. ಸಿಬಿಐ ಈಗ ಪಂಜರದ ಗಿಣಿ ಅಲ್ಲ; ಅದು ನಿಜವಾಗಿಯೂ ತನ್ನ ಕರ್ತವ್ಯ ನಿಭಾಯಿಸುತ್ತಿದೆ ಎಂದು ರಿಜಿಜು ಹೇಳಿದ್ದಾರೆ. ಪೊಲೀಸರನ್ನು, ತನಿಖಾ ಸಂಸ್ಥೆಗಳನ್ನು ಸರ್ಕಾರಗಳು ಅಸ್ತ್ರದಂತೆ ಬಳಸಿಕೊಂಡಿವೆ. ಈಗ ಸರ್ಕಾರದ ನೇತೃತ್ವ ವಹಿಸಿರುವವರು ಈ ಕೆಲಸವನ್ನು ಇನ್ನಷ್ಟು ವ್ಯಾಪಕವಾಗಿ ಮಾಡಿದ್ದಾರೆ. ಸಿಜೆಐ ಅವರ ಮಾತುಗಳು ಆಡಳಿತದ ಚುಕ್ಕಾಣಿ ಹಿಡಿದಿರುವವರ ಧೋರಣೆಯಲ್ಲಿ ಬದಲಾವಣೆ ತರಬಹುದೇ?

ದಿನದ ಟ್ವೀಟ್

ಗಂಭೀರವಾಗಿ ಪರಿಗಣಿಸಿ

ಖಿನ್ನತೆ ಮತ್ತು ಆತಂಕಕ್ಕೆ ಸಂಬಂಧಿಸಿದ ಅಸ್ವಸ್ಥತೆಗಳಿಗೆ ಭಾರತವು ಶೀಘ್ರದಲ್ಲೇ ವಿಶ್ವದ ಪ್ರಮುಖ ಕೇಂದ್ರವಾಗಲಿದೆ. ದೇಶವು ಈಗಾಗಲೇ ಮಾನಸಿಕ ಅಸ್ವಸ್ಥತೆಗೆ ಸಂಬಂಧಿಸಿದಂತೆ ಜಗತ್ತಿನಲ್ಲೇ ಅತಿ ಹೆಚ್ಚು ಪ್ರಕರಣಗಳನ್ನು ಹೊಂದಿದೆ. ಜನರಿಗೆ ಈ ಬಗ್ಗೆ ಅರಿವೇ ಇಲ್ಲ ಮತ್ತು ಈಗಲೂ ಮಾನಸಿಕ ಅಸ್ವಸ್ಥತೆಯನ್ನು ಕಳಂಕ ಎಂದು ಪರಿಗಣಿಸುವುದು ಮುಂದುವರಿದೇ ಇದೆ.

ಕೈಲಾಶ್ ಸತ್ಯಾರ್ಥಿ, ಮಕ್ಕಳ ಹಕ್ಕುಗಳ ಹೋರಾಟಗಾರ

ಕಿಡಿನುಡಿ

ಆರಗ ಜ್ಞಾನೇಂದ್ರ ಅವರದ್ದು ಅಚಾತುರ್ಯ ಅಲ್ಲ, ಆತುರ ಹಾಗೂ ದಡ್ಡತನವೂ ಅಲ್ಲ. ಹಣವನ್ನು ಬಳಸಿಕೊಳ್ಳುವ ಟೂಲ್ ಕಿಟ್ ಮಾತುಗಳನ್ನಾಡಿದರು ಅಷ್ಟೇ. ಗೃಹ ಸಚಿವರಾದವರು ಪೊಲೀಸರಿಂದ ಮಾಹಿತಿ ಪಡೆಯಬೇಕೇ ಹೊರತು ವಾಟ್ಸ್‌ಆ್ಯಪ್ ಯೂನಿವರ್ಸಿಟಿಯಿಂದಲ್ಲ.

ಪ್ರಿಯಾಂಕ್ ಖರ್ಗೆ, ಕಾಂಗ್ರೆಸ್ ಶಾಸಕ

25 ವರ್ಷಗಳ ಹಿಂದೆ

ಸೋಮವಾರ, 7-4-1997

- **ಬೆಳಗಾವಿ ಜಿಲ್ಲೆ ವಿಭಜನೆ ಸದ್ಯಕ್ಕಿಲ್ಲ: ಪಟೇಲ್ ಭರವಸೆ, ಚಳವಳಿ ಸ್ಥಗಿತ**

ಬೆಳಗಾವಿ, ಏ. 6– ಬರುವ ಮಂಗಳವಾರ ಹೊಸ ಜಿಲ್ಲೆಗಳು ಪ್ರಕಟವಾಗಲಿದ್ದು, ಬೆಳಗಾವಿ ಜಿಲ್ಲೆಯ ವಿಭಜನೆ ಇರುವುದಿಲ್ಲ ಎಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಇಂದು ಭರವಸೆ ನೀಡುವುದರೊಡನೆ ಗೋಕಾಕ ಬಂದ್ ಅನ್ನು ಮಧ್ಯಾಹ್ನ ವಾಪಸು ತೆಗೆದುಕೊಳ್ಳಲಾಯಿತು. ತಹಶೀಲ್ದಾರ್ ಕಚೇರಿ ಎದುರು ಪ್ರಾರಂಭಗೊಂಡ ಅನಿರ್ದಿಷ್ಟ ನಿರಶನವನ್ನು ಶಾಸಕರು ಕೈಬಿಟ್ಟರು.

ಬೆಳಗಾವಿ ಜಿಲ್ಲೆಯನ್ನು ಒಡೆದು ಚಿಕ್ಕೋಡಿ ಅಥವಾ ಗೋಕಾಕ ಪಟ್ಟಣವನ್ನು ಕೇಂದ್ರವಾಗಿಸಿ ಹೊಸ ಜಿಲ್ಲೆ ರಚನೆ ಮಾಡಲಾಗುವುದು ಎಂದು ಮೊನ್ನೆ ರಾಜ್ಯ ಸಂಪುಟ ಸಭೆಯಲ್ಲಿ ತೀರ್ಮಾನವಾದ ಹಿಂದೆಯೇ ಗೋಕಾಕ ಪಟ್ಟಣದಲ್ಲಿ ಪ್ರತಿಭಟನೆಯ ಅಲೆ ಎದ್ದಿದ್ದು, ಗದ್ದಿಗೌಡರ ಸಮಿತಿಯ ಶಿಫಾರಸಿನಂತೆ ಗೋಕಾಕ ಪಟ್ಟಣವನ್ನೇ ಜಿಲ್ಲಾ ಕೇಂದ್ರವಾಗಿಸಬೇಕು ಎಂಬುದು ಪ್ರತಿಭಟನಕಾರರ ಬೇಡಿಕೆಯಾಗಿತ್ತು.

- **ವಿವಿಧ ಅಕಾಡೆಮಿಗಳ 17 ಸದಸ್ಯರ ರಾಜೀನಾಮೆ**

ಬೆಂಗಳೂರು, ಏ. 6– 'ಧರ್ಮಕಾರಣ' ಕಾದಂಬರಿಯನ್ನು ಮುಟ್ಟುಗೋಲು ಹಾಕಿಕೊಂಡಿರುವ ಸರ್ಕಾರದ ಕ್ರಮವನ್ನು ಪ್ರತಿಭಟಿಸಿ ವಿವಿಧ ಅಕಾಡೆಮಿಗಳ 17 ಮಂದಿ ಸದಸ್ಯರು ರಾಜೀನಾಮೆ ನೀಡಿದ್ದಾರೆ.

ಡಾ. ಪಿ.ವಿ.ನಾರಾಯಣ ಅವರ ವಿವಾದಾತ್ಮಕ ಕಾದಂಬರಿ 'ಧರ್ಮಕಾರಣ'ವನ್ನು ಮುಟ್ಟುಗೋಲು ಹಾಕಿಕೊಂಡ ಸರ್ಕಾರದ ನಿರ್ಧಾರವನ್ನು ಪ್ರತಿಭಟಿಸಲು ರವೀಂದ್ರ ಕಲಾಕ್ಷೇತ್ರದ ಸಂಸ ಬಯಲು ರಂಗಮಂದಿರದಲ್ಲಿ 'ಸಂವೇದನೆ' ಇಂದು ಏರ್ಪಡಿಸಿದ್ದ ಸಭೆಯಲ್ಲಿ ಅಕಾಡೆಮಿಗಳ ಸದಸ್ಯರ ರಾಜೀನಾಮೆ ವಿಷಯವನ್ನು ಪ್ರಕಟಿಸಲಾಯಿತು.

50 ವರ್ಷಗಳ ಹಿಂದೆ

ಶುಕ್ರವಾರ, 7-4-1972

- **ಉನ್ನತ ಮಟ್ಟದಲ್ಲಿ ಭ್ರಷ್ಟಾಚಾರ ಇದ್ದರೆ ಲಂಚ ನಿರ್ಮೂಲನದ ಸೊಲ್ಲು ಅಸಂಬದ್ಧ: ಅರಸು**

ಮೈಸೂರು, ಏ. 6– ಪ್ರಜಾತಂತ್ರ ರಾಷ್ಟ್ರದಲ್ಲಿ ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಗಳು, ಮಂತ್ರಿಗಳು ಮತ್ತು ಅಧಿಕಾರಿಗಳು ನೈತಿಕವಾಗಿ ಉನ್ನತ ಮಟ್ಟದಲ್ಲಿದ್ದು, ಇತರರಿಗೆ ಮೇಲ್ಪಂಕ್ತಿಯಾಗಿರುವುದು ಅಗತ್ಯವೆಂದು ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಅವರು ಇಂದು ಇಲ್ಲಿ ತಿಳಿಸಿದರು.

ವಿವಿಧ ರಾಜ್ಯಗಳ ಮುಖ್ಯ ಜಾಗೃತ ಆಯೋಗದ ಅಧಿಕಾರಿಗಳಿಗಾಗಿ ಇಲ್ಲಿ ಏರ್ಪಡಿಸಲಾಗಿರುವ ಶಿಕ್ಷಣ ಕೋರ್ಸ್ ಅನ್ನು ಶ್ರೀ ಅರಸು ಅವರು ಉದ್ಘಾಟಿಸಿದರು.

'ಪ್ರಜಾತಂತ್ರದಲ್ಲಿ ರಾಜಕಾರಣಿಗಳು, ಮಂತ್ರಿಗಳು ಮತ್ತು ಉನ್ನತ ಅಧಿಕಾರಿಗಳು ಭ್ರಷ್ಟಾಚಾರಿಗಳಾಗಿದ್ದರೆ ಭ್ರಷ್ಟಾಚಾರ ನಿರ್ಮೂಲನದ ಮಾತನ್ನು ಮರೆತುಬಿಡಬೇಕು. ದುರಾಸೆ– ಆಮಿಷ ಮತ್ತು ಲಂಚಗುಳಿತನದ ವಿರುದ್ಧ ಕರ್ತವ್ಯನಿಷ್ಠೆ, ಅಪರಿಗ್ರಹ, ನಿಸ್ವಾರ್ಥ ಬುದ್ಧಿಯ ಆತ್ಮಶಕ್ತಿಯನ್ನು ಬೆಳೆಸಿದರೆ ಮಾತ್ರ ಭ್ರಷ್ಟಾಚಾರವನ್ನು ನಿರೋಧಿಸಲು ಸಾಧ್ಯ' ಎಂದು ಶ್ರೀ ಅರಸು ಅವರು ಹೇಳಿದರು.

ಜೀವಜಲದ ಮೂಲಗಳನ್ನು ಸಂರಕ್ಷಿಸಬೇಕಾದ ತುರ್ತುಸ್ಥಿತಿ ಈಗ ಬಂದಿದೆ

ಸಂಭಾವ್ಯ ಬರಕ್ಕೆ ಕೆರೆಯೆಂಬ ಮದ್ದು

ವಿಶ್ಲೇಷಣೆ

ಅಖಿಲೇಶ್ ಚಿಪ್ಪಳಿ

ಆರೋಗ್ಯವೆಂಬ ಭಾಗ್ಯ ಸಿದ್ಧಿಸಬೇಕಾದರೆ ಶುದ್ಧ ನೀರಿನ ಲಭ್ಯತೆ ಇರಬೇಕು. ಬಹಳಷ್ಟು ಕಾಯಿಲೆಗಳು ಅಶುದ್ಧವಾದ ನೀರಿನಿಂದಲೇ ಪ್ರಾಪ್ತವಾಗುತ್ತವೆ ಎಂಬುದನ್ನು ವೈದ್ಯಲೋಕ ಸಾರಿ ಹೇಳಿದೆ. ನಾಳೆಗಳ ಸಂಭಾವ್ಯ ಯುದ್ಧಗಳು ನೀರಿಗಾಗಿಯೇ ನಡೆಯುತ್ತವೆ ಎಂಬ ಭವಿಷ್ಯವನ್ನು ಜಲತಜ್ಞರು ನುಡಿಯುತ್ತಲೇ ಇದ್ದಾರೆ. ಆದರೆ, ನಮ್ಮ ನೀರಿನ ಸ್ಥಿತಿಗತಿ ಏನಾಗಿದೆ?

ನೀರಿಲ್ಲದೆ ನಾಲ್ಕು ದಿನವೂ ಬದುಕಲಾರದ ಮನುಷ್ಯ, ನೀರಿನ ಕುರಿತಾಗಿ ಇಷ್ಟೇಕೆ ಉಪೇಕ್ಷೆ ಹೊಂದಿದ್ದಾನೆ? ಏಕೆ ನಮ್ಮ ಜಲಮೂಲಗಳು, ನದಿಗಳು, ಕೆರೆ-ಕುಂಟೆಗಳು ಮಾಲಿನ್ಯದ ಮಡುಗಳಾಗಿವೆ? ದಕ್ಷಿಣ ಭಾರತದ ಚಿರಾಪುಂಜಿಯೆಂದೇ ಖ್ಯಾತವಾಗಿರುವ ತೀರ್ಥಹಳ್ಳಿಯ ಆಗುಂಬೆ ಪ್ರದೇಶವನ್ನು ಬರಪೀಡಿತವೆಂದು ಘೋಷಣೆ ಮಾಡುವ ಅನಿವಾರ್ಯ ನಮಗೇಕೆ ಬಂತು? ಮಲೆನಾಡಿನ ಹೆಬ್ಬಾಗಿಲು ಎಂದು ಕರೆಸಿಕೊಳ್ಳುವ, ಗುಡ್ಡಬೆಟ್ಟಗಳಿಂದ ಕೂಡಿದ ಶಿವಮೊಗ್ಗ ಜಿಲ್ಲೆಯ ತಾಲ್ಲೂಕುಗಳಲ್ಲೂ ನೀರಿನ ಕೊರತೆಯೇಕೆ? ಏಷ್ಯಾ ಖಂಡದಲ್ಲೇ ಅತ್ಯಂತ ಹೆಚ್ಚು ಕೆರೆಗಳನ್ನು ಹೊಂದಿದ ತಾಲ್ಲೂಕು ಎಂದು ಪ್ರಸಿದ್ಧಿ ಪಡೆದ ಸೊರಬ ತಾಲ್ಲೂಕಿನ ಬಹಳಷ್ಟು ಹಳ್ಳಿಗಳೇಕೆ ಬರದಿಂದ ಬಳಲುತ್ತಿವೆ? ಇಂತಹ ಹಲವಾರು ಪ್ರಶ್ನೆಗಳಿವೆ.

ಪಶ್ಚಿಮಘಟ್ಟಗಳ ತಪ್ಪಲುಗಳೆಂದರೆ, ಹದವಾದ ಮಳೆಗಾಲದಲ್ಲಿ ಬೀಳುವ ಹನಿಗಳನ್ನು ಹಿಡಿದಿಟ್ಟುಕೊಳ್ಳುವ ಸ್ಪಂಜಿನಂತೆ. ಆ ತಪ್ಪಲುಗಳು ತಮ್ಮ ಒಡಲಲ್ಲಿ ಶೇಖರಿಸಿಟ್ಟುಕೊಂಡ ನೀರನ್ನು ಚಳಿ ಮತ್ತು ಬೇಸಿಗೆ ಕಾಲದಲ್ಲಿ ನಿಧಾನಗತಿಯಲ್ಲಿ ಬಿಟ್ಟುಕೊಡುತ್ತವೆ. ಚಿಕ್ಕ ಚಿಕ್ಕ ಹಲವಾರು ತೊರೆಗಳು ಸೇರಿ ಹಳ್ಳವಾಗುತ್ತದೆ. ಹಲವಾರು ಹಳ್ಳಗಳು ಸೇರಿ ನದಿಯಾಗುತ್ತದೆ ಮತ್ತು ಸಮುದ್ರ ಸೇರುತ್ತದೆ. ಸಮುದ್ರದಿಂದ ಆವಿಯಾದ ನೀರು ಮೋಡವಾಗಿ, ಮತ್ತೆ ಹಸುರು ಗಿರಿಶಿಖರಗಳ ಆಕರ್ಷಣೆಗೆ ಸಿಲುಕಿ ಮತ್ತೆ ಬಂದು ನೀರು ಸುರಿಸುತ್ತದೆ. ಆದರೆ, ಈ ಜಲಚಕ್ರವೀಗ ಏರುಪೇರಾಗಿದೆ.

ಮಧ್ಯ ಪಶ್ಚಿಮಘಟ್ಟಗಳಲ್ಲಿ ಸಾವಿರಾರು ಎಕರೆ ನೈಸರ್ಗಿಕ ಅರಣ್ಯ ನಾಶವಾಗಿ, ಅಲ್ಲಿ ಏಕಜಾತಿ ನೆಡುತೋಪು ಬಂದಿದೆ. ಕಳೆದ 40 ವರ್ಷಗಳಲ್ಲಿ ಸಾವಿರಾರು ಟಿಎಂಸಿ ಅಡಿ ನೀರು ಕುಡಿದು ಬೆಳೆದ ಅಕೇಶಿಯಾ ಮರಗಳು ಕಟಾವಾಗಿ ದೇಶದ ಇತರ ಭಾಗಗಳಿಗೆ ಹೋಗಿವೆ. ಕಾಂಡದ ಭಾಗಗಳು ಅಳಿದುಳಿದ ಗುಡ್ಡಗಳಲ್ಲಿ ನೀರಿಂಗುವಿಕೆಗೆ ತಡೆ ಹಾಕಿವೆ. ಕೇರಳ ಪ್ರಭಾವಿತ ಶುಂಠಿ, ಉತ್ತರ ಭಾರತದ ದಾಹ ತಣಿಸುವ ಅನಾನಸ್, ಬೆಲೆಯೇರಿಕೆ ಕಂಡ ಅಡಕೆ ಜೊತೆಗೆ ಅನಿಯಂತ್ರಿತ ಪ್ರವಾಸೋದ್ಯಮದ ಕಾರಣಕ್ಕೆ ರೆಸಾರ್ಟ್, ಹೋಂ ಸ್ಟೇಗಳು ಗುಡ್ಡಗಳ ನೈಸರ್ಗಿಕ ರಚನೆಯನ್ನೇ ಬದಲಿಸಿವೆ. ಮಳೆಗಾಲದಲ್ಲಿ ಅತಿಹೆಚ್ಚಿನ ಮಣ್ಣಿನ ಸವಕಳಿಯಾಗಿ ಊರಿನ ಕೆರೆಗಳನ್ನು ಮುಚ್ಚಿಹಾಕಿದೆ.

ಸಾಗರ ತಾಲ್ಲೂಕಿನ ಲಿಂಗದಹಳ್ಳಿ ಗ್ರಾಮದ ಬಂಗಾರಮ್ಮ ಮತ್ತು ಆನೆಸೊಂಡಿಲು ಕೆರೆಗಳು ಪುನಶ್ಚೇತನಗೊಂಡಿದ್ದರಿಂದ, ಏಪ್ರಿಲ್ ತಿಂಗಳಿನಲ್ಲೂ ತಲೆಹೊಳೆಯಲ್ಲಿ ನೀರು ಹರಿಯುತ್ತಿರುವ ನಿತ್ಯ ದೃಷ್ಟಾಂತವಿದೆ. ನೀರಿನ ಸಮೃದ್ಧಿ ಫಲವಾಗಿ ಆ ಭಾಗದಲ್ಲಿ ಒಟ್ಟೂ ವನ್ಯಜೀವಿಗಳ ಸಂಖ್ಯೆ ಹೆಚ್ಚುತ್ತಿದೆ. ಆಕಾಶವಾಸಿಗಳು ಬಿತ್ತುವ ಬೀಜದಿಂದ ಆ ಭಾಗದಲ್ಲಿ ಖರ್ಚಿಲ್ಲದೇ ಕಾಡು ಬೆಳೆಯುತ್ತದೆ. ಇಲ್ಲೊಂದು ಲೆಕ್ಕಾಚಾರವನ್ನು ಹೇಳಬೇಕು; ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮವು ರಾಜ್ಯದ ಪ್ರತೀ ತಾಲ್ಲೂಕಿನಲ್ಲೂ ಅರಣ್ಯ ನರ್ಸರಿಯನ್ನು ಹೊಂದಿದೆ. ಅಲ್ಲಿ ಪ್ರತಿವರ್ಷ ಗಿಡಗಳನ್ನು ಬೆಳೆಸಲಾಗುತ್ತದೆ. ಮೊದಲಿಗೆ ಬೀಜ ಸಂಗ್ರಹಣೆ, ನಂತರದಲ್ಲಿ ಅದನ್ನು ಮಡಿ ಮಾಡಿ, ಮೊಳಕೆ ಬರಿಸುವುದು, ಚಿಕ್ಕ ಗಿಡವನ್ನು ಮರಳು-ಮಣ್ಣು ಮಿಶ್ರಿತ ಪ್ಲಾಸ್ಟಿಕ್ ಕೊಟ್ಟೆಯಲ್ಲಿ ನಾಟಿ ಮಾಡುವುದು, ವರ್ಷದ ನಂತರದಲ್ಲಿ ಚಿಕ್ಕ ಕೊಟ್ಟೆಯಿಂದ ದೊಡ್ಡ ಕೊಟ್ಟೆಗೆ ವರ್ಗಾಯಿಸುವುದು, ಬೇಸಿಗೆಯಲ್ಲಿ ನರ್ಸರಿಯ ಕೊಳವೆಬಾವಿಯಿಂದ ನೀರು ಹಾಯಿಸುವುದು, ಮೂರು ವರ್ಷಗಳಾದ ಮೇಲೆ ಅದನ್ನು ಆಯ್ದ ಪ್ರದೇಶದಲ್ಲಿ ನೆಡುವುದು, ಬಹುತೇಕ ಗಿಡಗಳು ಮುಂದಿನ ಬೇಸಿಗೆಯಲ್ಲಿ ಸಾಯುವುದು. ನರ್ಸರಿಯಲ್ಲಿ ಗಿಡಗಳನ್ನು ಬೆಳೆಸುವಾಗ ಎಷ್ಟೆಲ್ಲ ಹಾನಿಯಾಗುತ್ತದೆ. ನದಿಯಿಂದ ಮರಳು ತರಬೇಕು, ಯಾವುದೋ ಗುಡ್ಡ ಬಗೆದೇ ಮಣ್ಣು ತರಬೇಕು, ನೀರಿಗಾಗಿ ಕೊಳವೆ ಬಾವಿ ಬೇಕು, ನೀರೆತ್ತಲು ಪಂಪ್‌ಸೆಟ್ ಮತ್ತದಕ್ಕೆ ವಿದ್ಯುತ್ ಹಾಗೂ ಮಣ್ಣಿನಲ್ಲಿ ಕರಗದ ಪ್ಲಾಸ್ಟಿಕ್ ತ್ಯಾಜ್ಯದ ಬೋನಸ್ಸು ಬೇರೆ.

ಅದೇ ಒಂದು ಕಬ್ಬೆಕ್ಕಿಗೋ ಮಂಗಟ್ಟೆಗೋ ಸುರಕ್ಷಿತ ಪ್ರದೇಶ ಲಭಿಸಿದರೆ, ಈ ಯಾವ ಆರ್ಥಿಕ ನಷ್ಟವಿಲ್ಲದೇ ನಿಸರ್ಗದ ಹೆಚ್ಚುವರಿ ಸಂಪತ್ತಿನ ಬಳಕೆಯಿಲ್ಲದೇ ಅಲ್ಲೊಂದು ನೈಸರ್ಗಿಕ ಕಾಡು ಸೃಷ್ಟಿಯಾಗುತ್ತದೆ. ಇದೇ ಅರಣ್ಯಗಳು ಮುಖ್ಯವಾಗಿ ನೀರಿನ ಸೆಲೆಗಳಾಗಿ ಪರಿವರ್ತಿತವಾಗಿ ತಗ್ಗಿನ ಪ್ರದೇಶಗಳಿಗೆ ನೀರಿನ ಆಶ್ರಯವಾಗುತ್ತವೆ. ನಿಸರ್ಗದತ್ತ ಜಲಚಕ್ರದ ಕೊಂಡಿ ಕಳಚಿದರೆ, ಮುಂದೆ ನೀರಿಗಾಗಿ ಹಾಹಾಕಾರ, ದೊಂಬಿ, ಜಗಳ ಇತ್ಯಾದಿ.

ಇಂತಹ ದುರಿತ ಕಾಲದಲ್ಲೂ ಕೆಲವು ಆಶಾಕಿರಣಗಳು ಜಲಭದ್ರತೆಯ ತಂಪು ನೀಡುತ್ತಿವೆ. ಉತ್ತರ ಕನ್ನಡ ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಕೆಲವು ಸಂಘಟನೆಗಳು ಪುರಾತನ ಜಲಮೂಲಗಳಾದ ಕೆರೆ-ಕುಂಟೆಗಳನ್ನು ಪುನಶ್ಚೇತನಗೊಳಿಸುತ್ತಿವೆ. ಊರ ಜನರ ತನು-ಧನ ಹಾಗೂ ಸಾರ್ವಜನಿಕರ ದೇಣಿಗೆಯ ನೆರವಿನಿಂದ ನೀರ ಸಮೃದ್ಧಿ ಸಾಧ್ಯವಾಗುತ್ತಿದೆ. ಉದಾಹರಣೆಯಾಗಿ, ವರದಾ ನದಿ ಹುಟ್ಟುವ ಸ್ಥಳದಿಂದ ಬರೀ 500 ಮೀಟರ್ ದೂರದಲ್ಲಿ ಅಗಸ್ತ್ಯ ತೀರ್ಥವೆಂಬ ಪುರಾತನ ಕೆರೆಯಿದೆ. ಅದು ಸಂಪೂರ್ಣ ಮುಚ್ಚಿಹೋಗಿ ನೀರು ಕಾಣದ ಹಾಗೆ ಆಗಿತ್ತು. ಕೆರೆಯ ತುಂಬಾ ಮುಳ್ಳು ಮುಂಡಿಗೆ ಮಟ್ಟಿ ಬೆಳೆದು ತನ್ನ ಕೊನೆಯುಸಿರನ್ನು ಎಳೆಯುವ ಹಂತದಲ್ಲಿತ್ತು. ಧಾರ್ಮಿಕವಾಗಿಯೂ ಮಹತ್ವ ಹೊಂದಿದ ಅಗಸ್ತ್ಯ ತೀರ್ಥದ ಪುನಶ್ಚೇತನ ಕೆಲಸ ಇದೀಗ ಪ್ರಾರಂಭವಾಗಿದೆ.

ಪೇಟೆ ಪಟ್ಟಣಗಳಲ್ಲಿರುವ ಸಾಯುತ್ತಿರುವ ಕೆರೆಗಳನ್ನು ಬೇಗ ಬೇಗನೆ ಕೊಲ್ಲಲು ರಿಯಲ್ ಎಸ್ಟೇಟ್ ಮಾಫಿಯಾ ಹೊಂಚು ಹಾಕಿ ಕುಳಿತಿರುತ್ತದೆ. ಪಟ್ಟಣದಲ್ಲಿರುವ ಎಲ್ಲಾ ರೀತಿಯ ತ್ಯಾಜ್ಯಗಳನ್ನು ತಂದು ಕೆರೆಯಲ್ಲಿ ಸುರಿಯಲಾಗುತ್ತದೆ. ನಮ್ಮಲ್ಲಿ ಸಾರ್ವಜನಿಕರು ಇಂತಹ ಕೆರೆ ದುರಂತಗಳ ಕುರಿತಾಗಿ ಪ್ರಶ್ನೆ ಮಾಡುವುದಿಲ್ಲ. ಇದು ಮಾಫಿಯಾಗೆ ವರವಾಗಿ ಪರಿಣಮಿಸುತ್ತದೆ. ಹಿಂದೊಂದು ಕಾಲದಲ್ಲಿ ಸಾಗರ ಪಟ್ಟಣದಲ್ಲಿ ಸುಮಾರು 150ಕ್ಕಿಂತ ಹೆಚ್ಚು ಸಾರ್ವಜನಿಕ ತೆರೆದ ಬಾವಿಗಳಿದ್ದವು. ಬೆಳೆಯುತ್ತಿರುವ ಜನಸಂಖ್ಯೆಗೆ ನೀರು ನೀಡುವ ಭರದಲ್ಲಿ ಆಡಳಿತವು ಜನರಿಗೆ ಯಾವಾಗ ನಲ್ಲಿ ನೀರು ಪರಿಚಯಿಸಿತೋ ನೂರಾರು ವರ್ಷಗಳಿಂದ ಸೇವೆ ನೀಡಿದ ತೆರೆದ ಬಾವಿಗಳು ಕಣ್ಮರೆಯಾದವು. ಈಗ ಸಾಗರ ಪಟ್ಟಣದಲ್ಲಿ ಇರುವ ಒಂದೋ ಅಥವಾ ಎರಡು ಬಾವಿಗಳು ಬಳಕೆಯಿಲ್ಲದೇ ಸೊರಗಿವೆ. ಸಾರ್ವಜನಿಕ ಬಾವಿಗಳು ಹಾಗೂ ಕೆರೆಗಳು ಮಹತ್ವ ಕಳೆದುಕೊಳ್ಳುವಲ್ಲಿ ಕೊಳವೆ ಬಾವಿಗಳ ಪಾತ್ರ ಬಹಳ ಹಿರಿದಾಗಿದೆ. ಗ್ರಾಮ ಪಂಚಾಯಿತಿಗಳು ಕೆರೆ ಪುನಶ್ಚೇತನಕ್ಕೆ ಗಮನ ಕೊಡಲಿಲ್ಲ. ಬೇಸಿಗೆಯಲ್ಲಿ ನೀರಿನ ಅಭಾವವಾದಾಗ, ನೀರಿನ ಆದ್ಯತೆಯ ಮೂಲ ಕೊಳವೆ ಬಾವಿಗಳಾದವು. ಕೊಳವೆ ಬಾವಿಗಳು ಬತ್ತಿ ಹೋಗುತ್ತವೆ. ಆಗ ಮತ್ತೊಂದು, ಮಗದೊಂದು ಹೀಗೆ ಜೀವಜಲಕ್ಕಾಗಿ ಭೂಗರ್ಭ ಕೊರೆಯುವ ಸರ್ಕಾರಿ ಚಳವಳಿ ಮತ್ತಷ್ಟು ತೀವ್ರತರನಾಗುತ್ತದೆ.

ಮಧ್ಯ ಪಶ್ಚಿಮಘಟ್ಟದ ಯಾವುದೇ ಹಳ್ಳಿಯಲ್ಲಿ ನೋಡಿದರೂ ಕನಿಷ್ಠ ಎರಡು ಕೆರೆಗಳು ಕಾಣಸಿಗುತ್ತವೆ. ಇಡೀ ಹಳ್ಳಿಯ ತೆರೆದ ಬಾವಿಗಳಲ್ಲಿ ಸದಾ ನೀರಿನ ಒರತೆಯಿರುತ್ತದೆ. ಮೇ ತಿಂಗಳಲ್ಲೂ ನೀರು ತುಂಬಿರುವ ಕೆರೆಗಳಿರುವ ಹಳ್ಳಿಗಳು ಬರದ ಸುಳಿಗೆ ಸಿಲುಕುವುದಿಲ್ಲ. ಬಹಳ ಸರಳವಾದ ಈ ಸೂತ್ರ ಇದೀಗ ಹಿನ್ನೆಲೆಗೆ ಸರಿದಿದೆ. ಇದಕ್ಕೆ ಮದ್ದರೆಯಬೇಕು, ಅದಕ್ಕೊಂದು ಲೆಕ್ಕಾಚಾರವೂ ಇರಬೇಕು. ಒಂದು ಎಕರೆ ಪ್ರದೇಶದಲ್ಲಿ ಒಂದು ಮಿ.ಮೀ. ಮಳೆಯಾದರೆ, 4,450 ಲೀಟರ್ ನೀರು ಸಂಗ್ರಹವಾಗುತ್ತದೆ ಹಾಗೂ ಅಲ್ಲಿ ಸಸ್ಯವೈವಿಧ್ಯವಿದ್ದರೆ, ನೆಲಕ್ಕೆ ಬಿದ್ದ ಮುಕ್ಕಾಲುಪಾಲು ನೆಲದಾಳಕ್ಕಿಳಿಯುತ್ತದೆ ಮತ್ತದು ಅಂತರ್ಜಲವಾಗಿ ಪರಿವರ್ತನೆಯಾಗುತ್ತದೆ. ಹಾಗೆ ವರ್ಷಕ್ಕೆ 2,500 ಮಿ.ಮೀ. ಮಳೆ ಬೀಳುವ ಒಂದು ಎಕರೆ ಪ್ರದೇಶ ನೀರಿಂಗಿಸಿಕೊಳ್ಳುವ ಮೊತ್ತ ಹತ್ತಿರ ಹತ್ತಿರ ಒಂದು ಕೋಟಿ ಲೀಟರ್ ಎಂದರೆ ಆಶ್ಚರ್ಯವಾಗದೇ?

ಹಾಗಾದರೆ ಸರ್ಕಾರ, ಸಮಾಜ ಚಿಂತಕರು, ಧಾರ್ಮಿಕ ಮುಖಂಡರ ಆದ್ಯತೆ ಏನಿರಬೇಕು? ಕತ್ತರಿಯಂತೆ ಕತ್ತರಿಸುವ ವಿಧ್ವಂಸಕ ಗುಣಗಳನ್ನು ದಮನ ಮಾಡಿ, ಹರಿದು ಹಂಚಿದ ಸಮಾಜವೆಂಬ ವಸ್ತ್ರವನ್ನು ಹೊಲಿಯುವ ಸೂಜಿ- ದಾರದ ಮನಃಸ್ಥಿತಿ ತರುವ ಪ್ರಯತ್ನ ಮಾಡಬೇಕು. ನೀರಿನ ಮೂಲವಾದ ಕೆರೆ-ಕುಂಟೆ, ನದಿಮೂಲ ಹಾಗೂ ವನ್ಯಜೀವಿ ಆವಾಸಸ್ಥಾನಗಳ ರಕ್ಷಣೆಗೆ ಆದ್ಯತೆ ನೀಡಬೇಕು. ಆಗಲೇ ನೀರ ನೆಮ್ಮದಿಯ ನಾಳೆ ದಕ್ಕೀತು!

ಚುರುಮುರಿ

ಟಾರ್ಗೆಟ್ ಲೆಕ್ಕಾಚಾರ

• ಆನಂದ

'ನಮ್ಮ ಅಸೆಂಬ್ಲೀಲಿ ಇರೋದು 224 ಸೀಟ್ ಅಷ್ಟೇ ಅಲ್ವಾ?' ಎಂದು ಹೆಂಡತಿ ಕೇಳಿದಳು. 'ಹೌದು ಯಾಕೀಗ?' ಎಂದೆ.

'ನೊ... ನೊ... ಮೊನ್ನೆ ರಾಹುಲ್‌ಜಿ ಮತ್ತು ಅಮಿತ್‌ಜಿ ಇಬ್ಬರೂನು ಬೆಂಗಳೂರಿಗೆ ಹಾರಿ ಬಂದು, ಮುಂದಿನ ವರ್ಷದ ಚುನಾವಣೇಲಿ ತಮ್ಮ ಪಕ್ಷ 150 ಸೀಟ್ ಗೆಲ್ಲಲೇಬೇಕು ಅಂತ ತಾಕೀತು ಮಾಡಿ ಹೋದ್ರು'.

'ಕರೆಕ್ಟ್. ಕ್ಲಾಸ್ ಟೀಚರ್ ಹೋಂ ವರ್ಕ್ ಕೊಟ್ಟಂತೆ'.

'ಏನು ಕರೆಕ್ಟ್? ಇಬ್ಬರೂ ತಲಾ 150 ಗೆದ್ದರೆ ಒಟ್ಟು 300 ಸೀಟ್ ಆಯ್ತಲ್ಲ. ಇರೋದೆ 224 ಸೀಟ್'.

'ಉಳಿದಿದ್ದು ಜೆಡಿಎಸ್‌ಗೆ' ಎಂದೆ. 300 ಮೈನಸ್ 224...

'ಇದ್ಯಾವ ಲೆಕ್ಕಾಚಾರಾರಿ ನಿಮ್ಮದು?'

'ಅಮ್ಮಾ ತಾಯಿ. ಇಬ್ಬರೂ ತಲಾ 150 ಗೆಲ್ಲೋದು ಅಲ್ಲ. 224ರಲ್ಲಿ ನಮ್ಮ ಪಕ್ಷ 150 ಗೆಲ್ಲಲಿ ಅಂತ ರಾಹುಲ್ ಬಯಸಿದರೆ, ಅಮಿತ್ ಶಾ ಸಹ ಅದೇ ಟಾರ್ಗೆಟ್ ತಮ್ಮ ಪಕ್ಷದವರಿಗೆ ನೀಡಿದ್ದಾರೆ ಅಷ್ಟೆ'.

'ಮತ್ತೆ ಉಳಿದಿದ್ದು ಜೆಡಿಎಸ್‌ಗೆ ಅಂದ್ರಿ? ಇದ್ಯಾವ ಮ್ಯಾಥಮಾಟಿಕ್ಸ್ ನಿಮ್ಮದು?'

'ಸಿಂಪಲ್. ಉಳಿಯೋದು 74 ತಾನೆ? ಅದು ಕುಮಾರಣ್ಣನ ಟಾರ್ಗೆಟ್. ಆದರೆ ಅವರಿನ್ನೂ ಅದನ್ನು ಅನೌನ್ಸ್ ಮಾಡಿಲ್ಲ'.

'ಅಷ್ಟ ಸಾಕಾ ಅವರಿಗೆ?'

'ಅವರು ಹೇಗಿದ್ದರೂ ಕಿಂಗ್ ಮೇಕರ್ ತಾನೆ? 74 ಸೀಟ್ ಇಟ್ಕೊಂಡು ಇಬ್ಬರನ್ನೂ ಆಟ ಆಡಿಸಬಹುದು ಅಂತ ಅವರ ಲೆಕ್ಕಾಚಾರ'.

'ಆ 74ರಲ್ಲಿ ಕಾರ್ಯಕರ್ತರಿಗೆ ಸಿಗೋದು 70 ಟಿಕೆಟ್ ಅಷ್ಟೇ ಅಲ್ವೆ?'

'ಇದ್ಯಾವ ಮೀಸಲಾತಿ ನಿಂದು?'

'ಅದೇರಿ ಒಂದು ಕುಮಾರಣ್ಣನಿಗೆ, ಒಂದು ರೇವಣ್ಣರಿಗೆ, ಒಂದು ಅನಿತಾ ಅಕ್ಕನಿಗೆ...'

'ಸರಿ ಫ್ಯಾಮಿಲಿ ಕೋಟಾ ಮುಗಿಯಿತು. ನಾಲ್ಕನೆಯದು?'

'ಇಬ್ರಾಹಿಂ ಸಾಹೇಬ್ರಿಗೆ. ಸೆಕ್ಯುಲರ್ ಕೋಟಾದಲ್ಲಿ'.

'ಮತ್ತೆ ಕಾಂಗ್ರೆಸ್‌ನಲ್ಲಿ ಸಿದ್ದೂಗೆ ಎಷ್ಟು ಟಿಕೆಟ್, ಡಿಕೆಶಿಗೆ ಎಷ್ಟು ಟಿಕೆಟ್?'

'ಇಬ್ಬರೂ 150ಕ್ಕೂ ಹೋರಾಡಬೇಕು ಅಂತ ಹೈಕಮಾಂಡ್ ಆದೇಶಿಸಿದೆ. 150 ಗೆದ್ದಮೇಲೆ ಪಕ್ಷದಲ್ಲೇ ಇನ್ನೊಂದು ಹೋರಾಟ ನಡೆಯುತ್ತೆ ಅದನ್ನು ಹಂಚಿಕೊಳ್ಳೋಕೆ'.

ಸಂಗತ

ಪರಿಸರ ಮತ್ತು ಆರೋಗ್ಯದ ನಂಟು

ಪರಿಸರದ ಬಿಕ್ಕಟ್ಟು ಆರೋಗ್ಯದ ಬಿಕ್ಕಟ್ಟೂ ಹೌದು!

• ಡಾ. ಕೆ.ಎಸ್.ಪವಿತ್ರ

ಈ ಬಾರಿಯ ವಿಶ್ವ ಆರೋಗ್ಯ ದಿನದ (ಏ. 7) ಧ್ಯೇಯ ಬಹುಜನರ ಹುಬ್ಬು ಏರಿಸಿದೆ. 'Our planet, our health'- 'ನಮ್ಮ ಗ್ರಹ, ನಮ್ಮ ಆರೋಗ್ಯ' ಎಂಬ ಧ್ಯೇಯವು ಪರಿಸರ ದಿನಾಚರಣೆಯದ್ದೋ ಆರೋಗ್ಯ ದಿನದ್ದೋ ಎಂಬ ಗೊಂದಲ ಮೂಡಿಸಿದಂತಿದೆ! ಆದರೆ ಕೋವಿಡ್ ಸಾಂಕ್ರಾಮಿಕದ ಕರಾಳ ದಿನಗಳು ತೆರೆದಿಟ್ಟ ಆರೋಗ್ಯ, ಸಮಾಜ- ಪರಿಸರ ಇವೆಲ್ಲದರ ನಡುವಣ ನಂಟಿನ ಹಲವು ಆಯಾಮಗಳನ್ನು ನೋಡಿದರೆ, ಈ ಬಾರಿಯ ಧ್ಯೇಯವು ತುಂಬ ಅರ್ಥಪೂರ್ಣ ಎಂದೆನಿಸುತ್ತದೆ.

ವಿಶ್ವ ಆರೋಗ್ಯ ಸಂಸ್ಥೆ ತನ್ನ ಧ್ಯೇಯ ಘೋಷಣೆಯಲ್ಲಿ ಹೇಳಿರುವ 'ಇದರ ಹಿಂದಿರುವ ಆಶಯ ಸ್ವಚ್ಛ ಗಾಳಿ, ಸುರಕ್ಷಿತ ನೀರು, ಸ್ವಚ್ಛತೆ, ಆರೋಗ್ಯಕರ ಆಹಾರ ಎಲ್ಲರಿಗೂ ಲಭ್ಯವಾಗುವಂತೆ ಮಾಡುವುದು, ವಾಸಿಸುವ ಪರಿಸರವುಳ್ಳ ಪಟ್ಟಣಗಳು, ವಾತಾವರಣದ ವೈಪರೀತ್ಯಗಳನ್ನು ತಡೆಯಬಲ್ಲಂತಹ ಆರ್ಥಿಕತೆಯನ್ನು ಕಟ್ಟಲು ಪ್ರೇರಣೆ ನೀಡುವುದು. ಎಲ್ಲರಿಗೂ ಸಂತೋಷವಾದ ದೀರ್ಘಾಯುಷ್ಯವುಳ್ಳ ಬದುಕನ್ನು ಕಟ್ಟಿಕೊಳ್ಳುವ ಅವಕಾಶ ದೊರೆಯುವುದು' ಎಂಬ ಮಾತುಗಳು ಮೇಲ್ನೋಟಕ್ಕೆ 'ಸಾದಾ' ಎಂಬಂತೆ ಕಂಡರೂ 'ಅಸಾಧ್ಯ' ಎನಿಸಬಹುದು. ಆದರೆ ಅವುಗಳ ಹಿಂದೆ ಜಗತ್ತು ಕೊರೊನಾದಂತಹ ಸಾಂಕ್ರಾಮಿಕಗಳಿಂದ ಕಲಿತ ಪಾಠಗಳೂ ಅಡಗಿವೆ.

ಆಧುನಿಕ ವೈದ್ಯಕೀಯ ಪಿತಾಮಹ ಎಂದು ಹೆಸರಾದ ಹಿಪ್ಪೋಕ್ರಾಟಿಸ್ ಕ್ರಿಸ್ತಪೂರ್ವ 5ನೇ ಶತಮಾನದಲ್ಲಿ ಹೇಳಿರುವ ಮಾತನ್ನು ನಾವಿಲ್ಲಿ ನೆನಪಿಸಿಕೊಳ್ಳಬೇಕು. ವೈದ್ಯರ ಜವಾಬ್ದಾರಿಗಳ ಬಗ್ಗೆ ತನ್ನ ಪುಸ್ತಕ 'ದಿ ಎಪಿಡೆಮಿಕ್ಸ್'ನಲ್ಲಿ ಆತ ಹೀಗೆ ಬರೆಯುತ್ತಾನೆ: 'ವೈದ್ಯನಾದವನು ರೋಗವೊಂದರ ಕಾರಣಗಳನ್ನು ಹೇಳಲು ಸಮರ್ಥನಿರಬೇಕು. ಇದನ್ನು ಅರಿತು, ಭವಿಷ್ಯವನ್ನು ಹೇಳಲು ಆತನಿಗೆ ಸಾಮರ್ಥ್ಯವಿರಬೇಕು. ಇವೆಲ್ಲವನ್ನೂ ಒಟ್ಟಾಗಿಸಿ ಕಾಯಿಲೆಯ ಬಗ್ಗೆ ಎರಡು ಸಂಗತಿಗಳಿಗಾಗಿ ಆತ ಆಗ್ರಹಿಸಬೇಕು. ಅವೆಂದರೆ 'To do good or to do no harm'- ಒಳ್ಳೆಯದನ್ನು ಮಾಡುವುದು ಅಥವಾ ಕೆಟ್ಟದ್ದನ್ನು ಮಾಡದಿರುವುದು'.

ಪರಿಸರದ ಬಿಕ್ಕಟ್ಟು ಆರೋಗ್ಯದ ಬಿಕ್ಕಟ್ಟೂ ಹೌದು! ವಿದ್ಯುತ್- ಉಷ್ಣತೆ- ಸಾರಿಗೆಗಾಗಿ ಇಂಧನ ಉರಿಸುವಿಕೆಯಿಂದ ಉಂಟಾಗುವುದು ವಾಯುಮಾಲಿನ್ಯ. ಜಗತ್ತಿನಾದ್ಯಂತ ಪ್ರತಿವರ್ಷ ವಾಯುಮಾಲಿನ್ಯದಿಂದ 70 ಲಕ್ಷ ಅಕಾಲಿಕ ಮರಣಗಳು ಉಂಟಾಗುತ್ತವೆ ಎಂದರೆ ನಂಬಲು ಸಾಧ್ಯವೇ?!

ಪರಿಸರ ಮಾಲಿನ್ಯ- ವಾತಾವರಣದ ವೈಪರೀತ್ಯಗಳು ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವುದು ಒಂದೆಡೆಯಾದರೆ, ಇನ್ನೊಂದೆಡೆ ಆರೋಗ್ಯ ವ್ಯವಸ್ಥೆಗೇ ಅದು ಮಾರಕವಾಗಬಹುದು. ಉದಾಹರಣೆಯೊಂದನ್ನು ಗಮನಿಸಬಹುದು. ಕೇರಳದಲ್ಲಿ 2018ರಲ್ಲಿ ಬಂದ ಪ್ರವಾಹದ ಕಾರಣ ಆಸ್ಪತ್ರೆಗಳಿಂದ ರೋಗಿಗಳನ್ನು ಖಾಲಿ ಮಾಡಿಸಬೇಕಾಯಿತು, ಶಸ್ತ್ರಚಿಕಿತ್ಸೆಗಳು ನಿಂತುಹೋದವು, ತುರ್ತು ಪರಿಸ್ಥಿತಿಯ ಆರೈಕೆ ಸಾಧ್ಯವಾಗದೇ ಹೋಯಿತು. ವಿದ್ಯುತ್ ಅಡಚಣೆಯಿಂದ ಮಾತ್ರೆ- ಲಸಿಕೆಗಳ ದಾಸ್ತಾನುಗಳು ಉಪಯೋಗಕ್ಕೆ ಬಾರದಂತಾದವು. ಈಗ ನಡೆಯುತ್ತಿರುವ ಯುದ್ಧದ ಪರಿಸ್ಥಿತಿಯಿಂದಲೂ ಮಾನವ ನಿರ್ಮಿತ ಮಾಲಿನ್ಯವು ಪ್ರಕೃತಿಯ ವಿಕೋಪಗಳ ಜೊತೆ ಇವೆಲ್ಲವನ್ನೂ ಮಾಡುತ್ತಿದೆ.

ಪರಿಸರ- ವಾತಾವರಣದ ಬಿಕ್ಕಟ್ಟುಗಳಿಗೆ ಶೀಘ್ರವಾಗಿ ಸ್ಪಂದಿಸಬೇಕಾದ ಹೊಣೆಯನ್ನು ಹೊರುವ ಆರೋಗ್ಯ ಕ್ಷೇತ್ರವೂ ಜಾಗತಿಕವಾಗಿ ಹಸಿರು ಮನೆಯ ಅನಿಲ ಪರಿಣಾಮಗಳಿಗೆ ತಾನೂ ಶೇಕಡ 5ರಷ್ಟು ಕಾರಣವಾಗುತ್ತದೆ. ಆದರೆ ವೈದ್ಯಕೀಯ ಕ್ಷೇತ್ರಕ್ಕೆ ಈ ಬಗೆಗೆ ಅರಿವಿದೆ! ಸಾಮಾನ್ಯ ಜನರಿಗೆ ಗೊತ್ತಿಲ್ಲದ, ಮಾಧ್ಯಮಗಳ ಗಮನ ಸೆಳೆಯುವ ಹಲವು ಕ್ರಾಂತಿಕಾರಕ ಪರಿಸರ ಸಂರಕ್ಷಣಾ ವಿಧಾನಗಳು ವೈದ್ಯಕೀಯ ಕ್ಷೇತ್ರದಲ್ಲಿ ಸದ್ದಿಲ್ಲದೆ ನಡೆಯುತ್ತಿವೆ. ಪರಿಸರ ಸಂರಕ್ಷಣೆ-ಆರೋಗ್ಯದ ನಡುವಿನ ಸಂಬಂಧವನ್ನು ಮನಗಂಡೇ ಚಳವಳಿಯೊಂದು ನಡೆಯುತ್ತಿದೆ. ಶೂನ್ಯ ಮಾಲಿನ್ಯ ಹೊರಸೂಸುವಿಕೆ, ವಾತಾವರಣದಿಂದ ವಿಚಲಿತವಾಗದ ಪರಿಸರ- ಆರೋಗ್ಯದ ಸ್ಥಿತಿ, ಆರೋಗ್ಯ ಸಮಾನತೆ ದಾರಿಯ ನಕ್ಷೆ. ಇವು ಈ ಚಳವಳಿಯ ಹಿಂದಿನ ಪ್ರಬಲ ಶಕ್ತಿಗಳು.

ಛತ್ತೀಸಗಡ ರಾಜ್ಯದಲ್ಲಿ 900ಕ್ಕೂ ಹೆಚ್ಚು ಸಮುದಾಯ ಆರೋಗ್ಯ ಕೇಂದ್ರಗಳನ್ನು ಸೌರಶಕ್ತಿಯಿಂದ ಬಲಪಡಿಸಲಾಗಿದೆ. ಪ್ರಪಂಚದ 18 ದೇಶಗಳ 3,000 ಆಸ್ಪತ್ರೆಗಳು ತಮ್ಮ ಕಟ್ಟಡಗಳು, ಶಸ್ತ್ರಚಿಕಿತ್ಸೆಯ ವ್ಯವಸ್ಥೆ ಎಲ್ಲದರಲ್ಲಿ ಇಂಗಾಲದ ಪ್ರಮಾಣವನ್ನು ಶೂನ್ಯವಾಗಿಸುವತ್ತ ಕಾರ್ಯತತ್ಪರವಾಗಿವೆ. 'ಸ್ವಚ್ಛ ಗಾಳಿ ಮತ್ತು ವಾತಾವರಣದ ಕ್ರಿಯಾಶಕ್ತಿಗಾಗಿ ವೈದ್ಯರು' ಎಂಬ ಚಳವಳಿಯು ಭಾರತದ ಎಲ್ಲೆಡೆ ವಾಯುಮಾಲಿನ್ಯ ತಡೆ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ಹಲವು ಯೋಜನೆಗಳಿಗೆ ಪ್ರೇರಣೆ- ಶಿಫಾರಸು ನೀಡುತ್ತಿದೆ.

ರೋಗಪೀಡಿತವಾದ ಗ್ರಹದ ಮೇಲೆ ಆರೋಗ್ಯವಂತ ಜೀವಿಗಳಿರಲು ಸಾಧ್ಯವಿಲ್ಲ. ಪ್ರಸ್ತುತ ಸಾಮಾಜಿಕ-ಆರ್ಥಿಕ ಕ್ರಮಗಳು, ಮುಂದಿನ ಭವಿಷ್ಯವನ್ನು ಗಮನದಲ್ಲಿಡದೇ ರೂಪುಗೊಳ್ಳುತ್ತಿವೆ. ಹಾಗೆ ನೋಡಿದರೆ ಕೋವಿಡ್- 19, ಪ್ರಕೃತಿ ಮಾತೆಯೊಂದಿಗೆ ನಮ್ಮ ಶಿಥಿಲಗೊಂಡ ಸಂಬಂಧದ ಒಂದು ಜ್ವಲಂತ ಉದಾಹರಣೆ.

ಇಂದಿನ ತುರ್ತು, ಹಿಪ್ಪೋಕ್ರಾಟಿಸ್‌ನ 'ಮೊದಲು, ತೊಂದರೆಯನ್ನು ಮಾಡಬೇಡ' ಎಂಬ ಮಾತನ್ನು ಮತ್ತೆ ಮತ್ತೆ ನಾವೆಲ್ಲರೂ ನೆನಪಿಸಿಕೊಳ್ಳಬೇಕು. ಭೂಮಿತಾಯಿಯನ್ನು ವಿವಿಧ ರೀತಿಗಳಲ್ಲಿ ಕೊಳಕು ಮಾಡುವ, ಹಾಳುಗೆಡಹುವ ನಾವು ಹಾಗಾಗದಂತೆ ತಡೆಯಬೇಕಾದುದು ಆ ತಾಯಿಯನ್ನು ರಕ್ಷಿಸಲಷ್ಟೇ ಅಲ್ಲ, ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಸಹ ಎಂಬುದನ್ನು ಅರಿಯಬೇಕು.

ವಾಚಕರ ವಾಣಿ

ಅಂಗವಿಕಲರ ಹಕ್ಕು: ಪಠ್ಯ ಸೇರಲಿ

ಅಂಗವಿಕಲರ ಮೇಲೆ ದೌರ್ಜನ್ಯ, ದಬ್ಬಾಳಿಕೆ ಎಗ್ಗಿಲ್ಲದೇ ನಡೆಯುವುದಕ್ಕೆ ಮೂಲ ಕಾರಣ, ಜನಸಾಮಾನ್ಯರು ಮತ್ತು ಅಧಿಕಾರಿ ವರ್ಗಕ್ಕೆ ಅಂಗವಿಕಲರ ಹಕ್ಕುಗಳು ಹಾಗೂ ಅವುಗಳ ರಕ್ಷಣೆಯ ಬಗ್ಗೆ ಅರಿವಿಲ್ಲದಿರುವುದೇ ಆಗಿದೆ. ಅಂಗವಿಕಲರ ಹಕ್ಕುಗಳ ಕಾಯ್ದೆ– 2016ರ ಪ್ರಕಾರ, ಅಂಗವಿಕಲರ ಹಕ್ಕುಗಳು ಮತ್ತು ಅವುಗಳ ರಕ್ಷಣೆ ಕುರಿತು ಶಾಲಾ ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ಪಠ್ಯವಾಗಿ ಒಂದು ಅಧ್ಯಾಯವನ್ನು ಅಳವಡಿಸಬೇಕು. ಈ ಕಾಯ್ದೆ ಜಾರಿಗೆ ಬಂದು 5 ವರ್ಷಗಳು ಸರಿದಿದ್ದರೂ ಅಂಗವಿಕಲರ ಸಬಲೀಕರಣ ಆಗದಿರುವುದು ವಿಪರ್ಯಾಸವೇ ಸರಿ.

ಸಂಬಂಧಪಟ್ಟ ಸಚಿವರು ಹಾಗೂ ಶಾಲಾ ಕಾಲೇಜು ಪಠ್ಯಪುಸ್ತಕ ರಚನಾ ಸಮಿತಿಯ ಸದಸ್ಯರು ಈ ಕುರಿತು ಪರಾಮರ್ಶೆ ಮಾಡಿಕೊಂಡು, 2022- 23ರ ಶೈಕ್ಷಣಿಕ ವರ್ಷದಿಂದಲೇ ಈ ವಿಷಯವನ್ನು ಪಠ್ಯಪುಸ್ತಕಗಳಲ್ಲಿ ಅಳವಡಿಸಲು ಕ್ರಮ ಕೈಗೊಳ್ಳಬೇಕು. ಈ ಮೂಲಕ ಅಂಗವಿಕಲ ಸಮುದಾಯವು ಮುಖ್ಯವಾಹಿನಿಗೆ ಬರಲು ಸಹಕರಿಸಬೇಕು.

ಚಂದ್ರಶೇಖರ ಪುಟ್ಟಪ್ಪ, ಬೆಂಗಳೂರು

ಅರ್ಥವಾಗಬೇಕಿದೆ ತಾಯಿಯ ಸಂಕಟ

ಮಗನೇ ತನ್ನ ಸರ್ವಸ್ವ ಎಂದು ಬೆಳೆಸಿದ ತಾಯಿಗೆ ಆತ ಅಡ್ಡದಾರಿ ಹಿಡಿದಾಗ ಏನಾಗಬೇಡ? ಹೈದರಾಬಾದಿನಲ್ಲಿ ತನ್ನ ಮಗ ಗಾಂಜಾ ವ್ಯಸನದಿಂದ ಹಾದಿ ತಪ್ಪುತ್ತಿರುವುದನ್ನು ಸಹಿಸಲಾರದೇ ತಾಯಿಯೊಬ್ಬಳು ಅವನ ಕಣ್ಣಿಗೆ ಖಾರದ ಪುಡಿ ಎರಚಿರುವುದಾಗಿ ವರದಿಯಾಗಿದೆ. ಇದನ್ನು ತಪ್ಪು ಎಂದು ಕೆಲವರು ಹೀಯಾಳಿಸುತ್ತಿರುವುದು ಸರಿಯಲ್ಲ. ಮಕ್ಕಳು ಈ ರೀತಿ ಹಾದಿ ತಪ್ಪುವುದನ್ನು ತಾಯಿಯಾದವಳು ಹೇಗೆ ತಾನೇ ಸಹಿಸಿಯಾಳು? ಯಾವುದೇ ಶಿಕ್ಷಣ ಮಕ್ಕಳನ್ನು ಸರಿದಾರಿಗೆ ತರದೇ ಇದ್ದಾಗ ತಾಯಿಯೇ ಮಗನಿಗೆ ಶಿಕ್ಷೆ ಕೊಟ್ಟಿದ್ದಾಳೆ ಅಷ್ಟೆ.

ವಿದ್ಯೆ ಕಲಿಸದ ತಂದೆ, ಬುದ್ಧಿ ಹೇಳದ ಗುರು, ಬಿದ್ದಿರಲು ಬಂದು ನೋಡದ ತಾಯಿಯು ಶುದ್ಧ ವೈರಿಗಳು ಎಂಬುದು ಸರ್ವಜ್ಞನ ವಚನ. ಈ ಪ್ರಕರಣದಲ್ಲಿ ಹೆತ್ತ ತಾಯಿಯ ಸಂಕಟ ಅರ್ಥ ಮಾಡಿಕೊಳ್ಳಬೇಕಾಗಿದೆ. ತಾಯಿಯೇ ಮೊದಲ ಗುರು, ಮನೆಯೇ ಮೊದಲ ಪಾಠಶಾಲೆ ಎಂಬ ಮಾತು ಇಂತಹ ಸಂದರ್ಭಗಳಲ್ಲಿ ಮತ್ತೆ ಮತ್ತೆ ನೆನಪಾಗುತ್ತದೆ.

ಎಂ.ಪರಮೇಶ್ವರ, ಮದ್ದಿಹಳ್ಳಿ, ಹಿರಿಯೂರು

ಭಾವನಾತ್ಮಕತೆ ಮೀರಿದ ಆರ್ಥಿಕ ಸಂಬಂಧ

ಮುಸಲ್ಮಾನರನ್ನು ವಿರೋಧಿಯನ್ನಾಗಿಸುವ ಪ್ರತೀ ಅಂಶವೂ ಮೂಲದಲ್ಲಿ ರೈತವಿರೋಧಿಯೂ ಆಗಿದೆ. ಒಂದೆಡೆ ಜಾತೀಯತೆ, ಇನ್ನೊಂದೆಡೆ ಧರ್ಮದ ಅಂಧಕಾರ ರೈತಸಮುದಾಯವನ್ನು ಬಡವಾಗಿಸುತ್ತಿರುವುದು ಈ ಕ್ಷಣದ ಸತ್ಯ. ಕುರಿ, ಕೋಳಿ, ದನ, ಚರ್ಮ, ರೇಷ್ಮೆ, ಮಚ್ಚು, ಕೊಡಲಿ ಎಲ್ಲದರಲ್ಲೂ ರೈತ- ಮುಸ್ಲಿಮರ ಪಾಲುದಾರಿಕೆ ಸಮಾನವಾಗಿದೆ. ಪ್ರತಿಯೊಂದು ಕೃಷಿ ಉತ್ಪನ್ನದ ಮೊದಲ ಗ್ರಾಹಕರೇ ಮುಸಲ್ಮಾನರು. ಎತ್ತಿನ ಲಾಳದಿಂದ ಹಿಡಿದು ರೈತನಿಗೆ ಹೊರೆಯಾದ ಮುದಿ ಹಸುವನ್ನು ಕೊಳ್ಳುವವರು ಅವರೇ. ಭಾವನಾತ್ಮಕತೆ ಮೀರಿದ ಆರ್ಥಿಕ ಸಂಬಂಧಗಳಿಗೆ ಇವು ನಿದರ್ಶನ. ಬೆಂಗಳೂರು- ಮೈಸೂರು ರಸ್ತೆಯಲ್ಲಿ ಕಳೆದ ಎರಡು ವರ್ಷಗಳಿಂದ ಹೆಚ್ಚಾಗಿರುವ ಬೀಡಾಡಿ ದನಗಳೇ ಈ ಕೊಡು- ಕೊಳ್ಳು ಸಂಬಂಧದ ಮುರಿತಕ್ಕೆ ಒಂದು ಸಾಕ್ಷಿ.

ಮಚ್ಚು, ಕೊಡಲಿಯೂ ಸೇರಿದಂತೆ ಕೃಷಿ ಸಲಕರಣೆಗಳನ್ನು ರಿಪೇರಿ ಮಾಡುವವರು ಮುಸಲ್ಮಾನರೇ. ಬದಲಾದ ಧರ್ಮರಾಜಕಾರಣದಲ್ಲಿ ಹಳ್ಳಿಗಳ ಅಲ್ಪಸಂಖ್ಯಾತ ಕಸುಬುದಾರರು ಪಟ್ಟಣ ಸೇರುತ್ತಿದ್ದಾರೆ. ಕೂಲಿಕಾರ್ಮಿಕರ ಸಮಸ್ಯೆಯ ಜೊತೆಗೆ, ರೈತನಿಗೆ ಅವಶ್ಯಕವಾಗಿದ್ದ ಅನೇಕ ಕೌಶಲಗಾರರು ದೂರವಾಗುತ್ತಿದ್ದಾರೆ. ಇದರಿಂದಾಗಿ ದೀರ್ಘಾವಧಿಯಲ್ಲಿ ತೊಂದರೆಗೆ ಸಿಲುಕುವುದು ರೈತರೇ. ದೇಶದ ಬೆನ್ನೆಲುಬು ಎನ್ನುವ ರೈತನ ಪಕ್ಕೆಲುಬು ಮತ್ತಷ್ಟು ಸಡಿಲವಾಗುತ್ತದೆ. ನಮ್ಮನ್ನಾಳುವ ದೊರೆಗಳಿಗೆ ರೈತರ ಬಗೆಗೆ ನೈಜ ಕಾಳಜಿ ಇದ್ದರೆ, ಯಾವ ಹೊಸ ಯೋಜನೆ, ಸಬ್ಸಿಡಿಗಳನ್ನೂ ಘೋಷಿಸುವುದು ಬೇಡ. ತಮ್ಮ ತಮ್ಮ ನಾಲಿಗೆಗಳನ್ನು ಹದ್ದುಬಸ್ತಿನಲ್ಲಿ ಇಡುವುದು ಅವರು ರೈತರಿಗೆ ಮಾಡಬಹುದಾದ ದೊಡ್ಡ ಉಪಕಾರ.

ಶಾಂತರಾಜು ಎಸ್. ಮಳವಳ್ಳಿ, ಬೆಂಗಳೂರು

ಶ್ರೀಲಂಕಾದ ದುಃಸ್ಥಿತಿ: ಕಲಿಯೋಣ ಪಾಠ

ಒಂದು ದೇಶಕ್ಕೆ ಆರ್ಥಿಕ ಕ್ರಮಶಿಕ್ಷಣ, ದೂರದೃಷ್ಟಿ ಇಲ್ಲದಿದ್ದರೆ ಅದರ ಪರಿಣಾಮಗಳು ಯಾವ ರೀತಿ ಇರುತ್ತವೆ ಎಂಬುದನ್ನು ತಿಳಿಯಲು ನಮ್ಮ ನೆರೆಯ ಶ್ರೀಲಂಕಾವನ್ನು ನೋಡಬಹುದು. ಸಾಮರ್ಥ್ಯ ಮೀರಿದ ಸಾಲ, ಮುಂದಾಲೋಚನೆ ಇಲ್ಲದ ಯೋಜನೆಗಳು ಶ್ರೀಲಂಕಾವನ್ನು ಆರ್ಥಿಕ ಸಂಕಷ್ಟಕ್ಕೆ ಸಿಲುಕಿಸಿವೆ. ದಿನಬಳಕೆಯ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದ್ದು, ಜನಸಾಮಾನ್ಯರ ಬದುಕು ಶೋಚನೀಯವಾಗಿದೆ. ಶ್ರೀಲಂಕಾದ ಈ ಪರಿಸ್ಥಿತಿಯಿಂದ ಇತರ ದೇಶಗಳು, ರಾಜ್ಯಗಳು ಹಾಗೂ ಜನರು ವೈಯಕ್ತಿಕವಾಗಿ ಯಾವ ರೀತಿಯ ನಿರ್ಣಯ ತೆಗೆದುಕೊಳ್ಳಬೇಕು, ತೆಗೆದುಕೊಳ್ಳಬಾರದು ಎಂಬ ಪಾಠ ಕಲಿಯಬಹುದಾಗಿದೆ.

ಚನ್ನಕೇಶವ ಜಿ.ಕೆ., ತರೀಕೆರೆ

ಪಕ್ಷಾಂತರ: ವಿಚಿತ್ರ ನಡೆ

ಯಾರಾದರೂ ಪಕ್ಷ ಬಿಟ್ಟು ಹೋದಾಗ ಮೂಲ ಪಕ್ಷದವರು ಅವರನ್ನು ತೆಗಳುವುದು, ಪಕ್ಷ ಬಿಟ್ಟು ಹೋದವರು ತಾವು ಇದ್ದ ಪಕ್ಷವನ್ನು ಟೀಕಿಸುವುದು ಸಾಮಾನ್ಯವಾದ ವಿಷಯ. ಆದರೆ ಜಾತ್ಯತೀತ ಜನತಾದಳದಲ್ಲಿ ಹಾಗಲ್ಲ. ಹೋಗುವವರು 'ಎಚ್.ಡಿ.ಕುಮಾರಸ್ವಾಮಿ ಅವರೊಂದಿಗೆ ಮಾತನಾಡಿದ್ದೇನೆ. ಅವರ ಅನುಮತಿ ಪಡೆದು ಹೊರ ನಡೆದಿರುವೆ' ಎನ್ನುತ್ತಾರೆ. ಅದೇ ರೀತಿಯಲ್ಲಿ ಕುಮಾರಸ್ವಾಮಿ ಅವರೂ 'ಅವರಿಗೆ ಅಲ್ಲಿ ಉತ್ತಮ ಅವಕಾಶ ಇರಬಹುದು, ಹೋಗಿ ಎಂದೆ' ಅನ್ನುತ್ತಾರೆ. ಸಾಮಾನ್ಯ ಜನರಿಗೆ ಇದೊಂದು ವಿಚಿತ್ರವಾಗಿ ಕಂಡರೆ ಅಚ್ಚರಿಯಿಲ್ಲ! ಇದು ಹೇಗೆ ಸಾಧ್ಯ, ಹೀಗೇ ಮುಂದುವರಿದರೆ ಇವರು ಪಕ್ಷ ಕಟ್ಟುವುದಾದರೂ ಹೇಗೆ ಎಂಬ ಪ್ರಶ್ನೆಗಳು ಸಾರ್ವಜನಿಕರಲ್ಲಿ ಮೂಡಬಹುದು.

ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಅವರ ರಾಜಕೀಯ ಕಾರ್ಯದರ್ಶಿಯಾಗಿದ್ದ ಕೋನರಡ್ಡಿ ಅವರು ಈಗ ಸಿದ್ದರಾಮಯ್ಯ ಅವರ ಹಿಂದೆ ಕಾಣಿಸಿಕೊಳ್ಳುತ್ತಿದ್ದಾರೆ. ಈಗ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರ ಸರದಿ. ಲೆಕ್ಕಕ್ಕೆ ಜನತಾದಳದಲ್ಲಿದ್ದರೂ ಪಕ್ಷದ ಯಾವುದೇ ಹೊಣೆಯನ್ನು ಹೊರದೇ ತಮ್ಮ ಪಾಡಿಗೆ ತಾವಿದ್ದ ಹೊರಟ್ಟಿ ಈಗ ಮತ್ತಷ್ಟು ಅವಕಾಶವನ್ನರಸಿ ಬಿಜೆಪಿ ಕಡೆಗೆ ಮುಖ ಮಾಡಿದ್ದಾರೆ. ಸಾರ್ವಜನಿಕರು ಹಾಗೂ ಆಯಾ ಪಕ್ಷಗಳ ಕಾರ್ಯಕರ್ತರಿಗೆ ಇದರಿಂದ ಒಂದು ರೀತಿಯಲ್ಲಿ ಕಸಿವಿಸಿ ಅನ್ನಿಸಬಹುದು.

ಈ.ಬಸವರಾಜು, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಉತ್ತರ ಭಾರತ: ನವರಾತ್ರಿ ಅವಧಿಯಲ್ಲಿ ಮಾಂಸದಂಗಡಿ ಬಂದ್‌ಗೆ ಆಗ್ರಹ

‘ನವರಾತ್ರಿ ಸಂದರ್ಭದಲ್ಲಿ ದಕ್ಷಿಣ ದೆಹಲಿಯಲ್ಲಿ ಮಾಂಸದ ಅಂಗಡಿಗಳಲ್ಲಿ ಮಾಂಸ ಮಾರಾಟ ಮಾಡಬಾರದು. ನವರಾತ್ರಿ ಸಂದರ್ಭದಲ್ಲಿ ದೇವಾಲಯಕ್ಕೆ ಹೋಗುವಾಗ, ಮಾಂಸವನ್ನು ನೋಡಿದರೆ ಮತ್ತು ಅದರ ವಾಸನೆಯನ್ನು ಗ್ರಾಹಿಸಿದರೆ ಹಲವರ ಧಾರ್ಮಿಕ ಭಾವನೆಗಳಿಗೆ ನೋವಾಗುತ್ತದೆ. ಹೀಗಾಗಿ ಈ ಅವಧಿಯಲ್ಲಿ ಮಾಂಸದ ಅಂಗಡಿಗಳನ್ನು ಮುಚ್ಚಬೇಕು’ ಎಂದು ದಕ್ಷಿಣ ದೆಹಲಿ ಮಹಾನಗರ ಪಾಲಿಕೆಯ ಬಿಜೆಪಿ ಮೇಯರ್ ಮುಖೇಶ್ ಸೂರ್ಯಾನ್ ಅವರು ದಕ್ಷಿಣ ದೆಹಲಿ ಮಹಾನಗರ ಪಾಲಿಕೆ ಆಯುಕ್ತರಿಗೆ ಬರೆದ ಪತ್ರವು ಈಗ ಚರ್ಚೆಗೆ ಕಾರಣವಾಗಿದೆ. ಪೂರ್ವ ದೆಹಲಿ ಮಹಾನಗರ ಪಾಲಿಕೆಯ ಬಿಜೆಪಿ ಮೇಯರ್ ಸಹ ಇಂಥದ್ದೇ ಪತ್ರ ಬರೆದಿದ್ದಾರೆ. ಇದು ದೇಶದ ಜನರ ಆಹಾರದ ಹಕ್ಕಿನ ಉಲ್ಲಂಘನೆ ಎಂದು ಸಾರ್ವಜನಿಕರು ಮತ್ತು ವಿರೋಧ ಪಕ್ಷಗಳ ನಾಯಕರು ಪ್ರತಿಪಾದಿಸಿದ್ದಾರೆ.

‘ನವರಾತ್ರಿ ಸಂದರ್ಭದಲ್ಲಿ ಹಿಂದೂಗಳು ಈರುಳ್ಳಿ ಮತ್ತು ಬೆಳ್ಳುಳ್ಳಿಯನ್ನೂ ಸೇವಿಸುವುದಿಲ್ಲ. ಮದ್ಯವನ್ನೂ ಸೇವಿಸುವುದಿಲ್ಲ. ಇವೆಲ್ಲಾ ಅವರ ಧಾರ್ಮಿಕ ಭಾವನೆಗಳಿಗೆ ಧಕ್ಕೆಯನ್ನುಂಟು ಮಾಡುತ್ತವೆ’ ಎಂದೂ ಸೂರ್ಯಾನ್ ಅವರು ಆಯುಕ್ತರಿಗೆ ಬರೆದ ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಅವರ ಪತ್ರದಲ್ಲಿನ ಎಲ್ಲಾ ಅಂಶಗಳೂ ಚರ್ಚೆಗೆ ಗ್ರಾಸವಾಗಿವೆ. ಸೂರ್ಯಾನ್ ಪತ್ರ ಬರೆದ ನಂತರ ದೆಹಲಿಯ ಮಾಂಸದ ಅಂಗಡಿಗಳ ಮಾಲೀಕರು, ಅಂಗಡಿಗಳನ್ನು ತೆರೆಯುವ ಗೋಜಿಗೆ ಹೋಗಿಲ್ಲ. ಈ ಬಗ್ಗೆ ಅಧಿಕೃತ ಆದೇಶ ಬರದೇ ಇದ್ದರೂ, ಪಾಲಿಕೆ ಅಧಿಕಾರಿಗಳು ಕ್ರಮ ತೆಗೆದುಕೊಳ್ಳಬಹುದು ಎಂಬ ಭಯದಲ್ಲಿ ಅಂಗಡಿಗಳನ್ನು ಮುಚ್ಚಿದ್ದಾರೆ.

ಸೂರ್ಯಾನ್ ಅವರು ಸೋಮವಾರವೇ ಈ ಪತ್ರ ಬರೆದಿದ್ದರೂ, ಅದು ಹೆಚ್ಚು ಚರ್ಚೆಗೆ ಗುರಿಯಾಗಿದ್ದು ಬುಧವಾರ ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಅವರು ಪ್ರತಿಕ್ರಿಯಿಸಿದ ನಂತರ. ಮಹುವಾ ಅವರು, ‘ನಾನೂ ದಕ್ಷಿಣ ದೆಹಲಿಯ ನಿವಾಸಿ. ನಾನು ಬಯಸಿದಾಗ ಮಾಂಸ ತಿನ್ನುವ ಮತ್ತು ಅಂಗಡಿಯಾತ ಅಂಗಡಿ ನಡೆಸುವ ಹಕ್ಕನ್ನು ಸಂವಿಧಾನ ನೀಡಿದೆ. ಇಲ್ಲಿಗೆ ಪೂರ್ಣ ವಿರಾಮ’ ಎಂದು ಟ್ವೀಟ್ ಮಾಡಿದ್ದರು.

ಮಹುವಾ ಅವರ ಟ್ವೀಟ್‌ನ ನಂತರ ಹಲವರು, ಮಾಂಸಾಹಾರ ನಮ್ಮ ಹಕ್ಕು. ಅದನ್ನು ನವರಾತ್ರಿ ಸಂದರ್ಭದಲ್ಲೂ ನಿಷೇಧಿಸುವಂತಿಲ್ಲ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಒತ್ತಾಯಿಸಿದ್ದಾರೆ. ಇನ್ನು ಕೆಲವರು, ‘ಹಿಂದೂಗಳಲ್ಲಿ ಹಲವರು ಮಾಂಸಾಹಾರ ಸೇವಿಸಿದರೂ ನವರಾತ್ರಿ ಸಂದರ್ಭದಲ್ಲಿ ಸಸ್ಯಾಹಾರ ಮಾತ್ರ ಸೇವಿಸುತ್ತಾರೆ. ಹೀಗಾಗಿ ಮಾಂಸ ಮಾರಾಟವನ್ನು ನಿಷೇಧಿಸಬೇಕು’ ಎಂದು ಒತ್ತಾಯಿಸಿದ್ದಾರೆ.

ಇದರ ಮಧ್ಯೆಯೇ ಬಿಜೆಪಿ ಸಂಸದ ಪರ್ವೇಶ್ ಸಾಹಿಬ್ ಸಿಂಗ್ ವರ್ಮಾ ಅವರು, ‘ದೆಹಲಿ ಮೇಯರ್‌ಗಳ ನಿರ್ಧಾರ ಸರಿಯಾಗಿದೆ. ದೆಹಲಿಗೆ ಮಾತ್ರವಲ್ಲ, ನವರಾತ್ರಿ ಸಂದರ್ಭದಲ್ಲಿ ಇಡೀ ದೇಶದಲ್ಲಿ ಮಾಂಸದ ಅಂಗಡಿಗಳನ್ನು ಮುಚ್ಚಿಸಬೇಕು’ ಎಂದು ಕರೆ ನೀಡಿದ್ದರು.

ಅಲ್ಲಲ್ಲಿ ಕೆಲವರ ಕೂಗು

- ಉತ್ತರ ಪ್ರದೇಶದ ಗಾಜಿಯಾಬಾದ್ ನಗರಾಡಳಿತವು ನವರಾತ್ರಿ ಅಂಗವಾಗಿ ಏ.2ರಿಂದ ಏ.10ರವರೆಗೆ ಮಾಂಸ ಮಾರಾಟ ನಿಷೇಧಿಸಿ ಶುಕ್ರವಾರ ಆದೇಶಿಸಿತ್ತು. ಇದನ್ನು ಪಾಲಿಸಲಾಗುತ್ತದೆಯೇ ಎಂದು ತಪಾಸಣೆ ನಡೆಸಲು ಆರು ತಂಡಗಳನ್ನೂ ರಚಿಸಿತ್ತು. ಇದು ಪ್ರತಿವರ್ಷದಂತೆ ಹೊರಡಿಸುವ ಆದೇಶವಾಗಿದ್ದು, ನವರಾತ್ರಿಗೆ ಮಾತ್ರ ಅನ್ವಯವಾಗುತ್ತದೆ ಎಂದು ಮೇಯರ್ ಸ್ಪಷ್ಟಪಡಿಸಿದ್ದರು. ಜಿಲ್ಲೆಯ ಐದು ವಲಯಗಳಲ್ಲಿರುವ ದೇವಸ್ಥಾನಗಳ ವ್ಯಾಪ್ತಿಯಲ್ಲಿ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವ ಉದ್ದೇಶದಿಂದ ಮಾಂಸ ಮಾರಾಟ ನಿಷೇಧಿಸಲಾಗಿದೆ ಎಂದು ಕಾರಣ ನೀಡಿದ್ದರು.
- ನಗರ ಪಂಚಾಯಿತಿಯಾಗಿ ಕಳೆದ ವರ್ಷ ಬಡ್ತಿ ಪಡೆದಿರುವ ಮಹಾರಾಷ್ಟ್ರದ ದೇಹು ನಗರ ಪಂಚಾಯಿತಿಯು ಹಸಿ ಮಾಂಸ, ಬೇಯಿಸಿದ ಮಾಂಸ ಮತ್ತು ಮೀನು ಮಾರಾಟದ ಮೇಲೆ ಮೂರು ದಿನಗಳ ಹಿಂದೆ ನಿರ್ಬಂಧ ಹೇರಿದೆ. ಈ ಆದೇಶ ಶುಕ್ರವಾರದಿಂದ ಜಾರಿಗೆ ಬರಲಿದೆ. ಪಂಚಾಯಿತಿ ಆಡಳಿತ ಅವಧಿ ಮುಕ್ತಾಯವಾಗುವವರೆಗೂ ಈ ಆದೇಶ ಜಾರಿಯಲ್ಲಿರಲಿದೆ ಎಂದು ನಗರ ಪಂಚಾಯಿತಿ ಸಿಇಒ ಪ್ರಶಾಂತ್ ಜಾಧವ್ ಹೇಳಿದ್ದರು.
- ಮಧ್ಯ ಪ್ರದೇಶದ ಗದ್ವಾರ್‌ನಲ್ಲಿ ಬಜರಂಗದಳ ಕಾರ್ಯಕರ್ತರು ನವರಾತ್ರಿ ವೇಳೆ ಮಾಂಸದಂಗಡಿಗಳನ್ನು ಬಂದ್ ಮಾಡುವಂತೆ ಆಗ್ರಹಿಸಿ ಇತ್ತೀಚೆಗೆ ಮೆರವಣಿಗೆ ನಡೆಸಿದ್ದರು. ಒಂದು ವೇಳೆ ಸರ್ಕಾರವು ಈ ನಿರ್ಧಾರ ತೆಗೆದುಕೊಳ್ಳದಿದ್ದರೆ, ಅಂಗಡಿಗಳನ್ನು ಒತ್ತಾಯಪೂರ್ವಕವಾಗಿ ಖಾಲಿ ಮಾಡಿಸುತ್ತೇವೆ ಎಂದು ಕಾರ್ಯಕರ್ತರು ಬೆದರಿಕೆ ಹಾಕಿದ್ದರು.
- ಉತ್ತರ ಪ್ರದೇಶದ ಲೋನಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ನಂದಕುಮಾರ್ ಗುರ್ಜಾರ್ ಅವರು ‘ಕ್ಷೇತ್ರದಲ್ಲಿ ಒಂದೇ ಒಂದು ಮಾಂಸದಂಗಡಿ ಕಾಣಿಸುವಂತಿಲ್ಲ’ ಎಂದು ಇದೇ ಮಾರ್ಚ್‌ನಲ್ಲಿ ಅಧಿಕಾರಿಗಳಿಗೆ ತಾಕೀತು ಮಾಡಿದ್ದರು. ‘ಲೋನಿಯಲ್ಲಿ ರಾಮರಾಜ್ಯವಿದೆ. ಈ ರಾಮರಾಜ್ಯದಲ್ಲಿ ಮಾಂಸ ಮಾರಾಟ ಮಾಡಬಾರದು. ಅದರ ಬದಲು ಹಾಲು, ತುಪ್ಪ ಸೇವಿಸಿ. ನಿಮ್ಮ ಬಳಿ ಹಸು ಇಲ್ಲದಿದ್ದರೆ ನಾನು ಕಳುಹಿಸಿಕೊಡುತ್ತೇನೆ’ ಎಂದು ಜನರನ್ನು ಉದ್ದೇಶಿಸಿ ಹೇಳಿದ್ದರು.
- 2021ರ ಅಕ್ಟೋಬರ್‌ನಲ್ಲಿ ಉತ್ತರ ಪ್ರದೇಶ ಹಾಗೂ ಹರಿಯಾಣದಲ್ಲಿ ಸಂಯುಕ್ತ ಹಿಂದೂ ಸಂಘರ್ಷ ಸಮಿತಿಯಂತಹ ಬಲಪಂಥೀಯ ಗುಂಪುಗಳು ಮಾಂಸ ಮಾರಾಟಕ್ಕೆ ನಿಷೇಧ ಹೇರುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಿದ್ದವು. ಕೆಲವು ಕಾರ್ಯಕರ್ತರು ಮಾಂಸದಂಗಡಿಗಳ ಮೇಲೆ ದಾಳಿ ನಡೆಸಿ, ಅವುಗಳನ್ನು ಮುಚ್ಚಿಸಿದ್ದರು. ಗುರುಗ್ರಾಮ ಉಪಆಯುಕ್ತರಿಗೆ ಪತ್ರ ಬರೆದಿದ್ದ ಸಂಘರ್ಷ ಸಮಿತಿಯು, ನವರಾತ್ರಿಯ ವೇಳೆ ಮಾಂಸಾಹಾರ ಮಾರಾಟದ ಅಂಗಡಿಗಳನ್ನು ಬಂದ್ ಮಾಡಲು ಆದೇಶಿಸುವಂತೆ ಕೋರಿತ್ತು. ಪರವಾನಗಿ ಇಲ್ಲದೆ ನಡೆಸಲಾಗುತ್ತಿರುವ ಅಂಗಡಿಗಳನ್ನು ಶಾಶ್ವತವಾಗಿ ಮುಚ್ಚಿಸುವಂತೆಯೂ ಆಗ್ರಹಿಸಿತ್ತು.
- ಸಾರ್ವಜನಿಕವಾಗಿ ಕಾಣುವಂತೆ ಮಾಂಸದ ಖಾದ್ಯಗಳನ್ನು ಇಡುವುದರ ಮೇಲೆ ನಿರ್ಬಂಧ ವಿಧಿಸುವಂತೆ ಎಸ್‌ಡಿಎಂಸಿ ಮಂಡಿಸಿದ್ದ ಪ್ರಸ್ತಾವವನ್ನು 2017ರ ನವೆಂಬರ್‌ನಲ್ಲಿ, ದಕ್ಷಿಣ ದೆಹಲಿ ಮಹಾನಗರ ಪಾಲಿಕೆಯ ಆಡಳಿತ ಪಕ್ಷದ ಮುಖ್ಯಸ್ಥೆಯಾಗಿದ್ದ ಬಿಜೆಪಿಯ ಶಿಖಾ ರಾಯ್ ಅನುಮೋದಿಸಿದ್ದರು. ‘ಸ್ವಚ್ಛತೆಯನ್ನು ಕಾಪಾಡುವುದು ಮುಖ್ಯ. ಎಲ್ಲರೂ ಮಾಂಸಾಹಾರಿಗಳು ಆಗಿರುವುದಿಲ್ಲ. ಶಾಖಾಹಾರಿಗಳ ಭಾವನೆಗಳನ್ನು ಗೌರವಿಸಬೇಕು’ ಎಂದು ಅವರು ಪ್ರತಿಪಾದಿಸಿದ್ದರು. ಟಿ.ವಿ ಚರ್ಚೆಗಳಲ್ಲೂ ಭಾಗವಹಿಸಿದ್ದ ಅವರು ತಮ್ಮ ನಡೆಯನ್ನು ಸಮರ್ಥಿಸಿಕೊಂಡು ಸುದ್ದಿಯಾಗಿದ್ದರು.
- ದೆಹಲಿಯ ರೆಸ್ಟೋರೆಂಟ್ ಹಾಗೂ ಹೋಟೆಲ್‌ಗಳಲ್ಲಿ ಗ್ರಾಹಕರಿಗೆ ಉಣಬಡಿಸಲಾಗುತ್ತಿರುವ ಮಾಂಸದ ಖಾದ್ಯಗಳನ್ನು ‘ಹಲಾಲ್’ ಮಾದರಿಯಲ್ಲಿ ಕತ್ತರಿಸಲಾಗಿದೆಯೇ ಅಥವಾ ‘ಜಟ್ಕಾ’ ಮಾದರಿಯಲ್ಲಿ ಕತ್ತರಿಸಲಾಗಿದೆಯೇ ಎಂಬುದನ್ನು ಫಲಕಗಳಲ್ಲಿ ಸ್ಪಷ್ಟವಾಗಿ ನಮೂದಿಸಬೇಕು ಎಂದು 2018ರ ಆಗಸ್ಟ್‌ನಲ್ಲಿ, ಪೂರ್ವ ದೆಹಲಿ ಮಹಾನಗರ ಪಾಲಿಕೆ ನಿಯಮ ಹೊರಡಿಸಿತ್ತು. ನಂತರದ ವರ್ಷಗಳಲ್ಲಿ ಈ ನಿಯಮವನ್ನು ದಕ್ಷಿಣ ಹಾಗೂ ಉತ್ತರ ಮಹಾನಗರ ಪಾಲಿಕೆಗಳೂ ಜಾರಿಗೊಳಿಸಿದವು.

ದಕ್ಷಿಣ ದೆಹಲಿಯ ಐಎನ್‌ಎ ಮಾಂಸ ಮಾರುಕಟ್ಟೆಯಲ್ಲಿರುವ ಮಾಂಸದ ಅಂಗಡಿಗಳನ್ನು ಮಂಗಳವಾರದಿಂದಲೇ ಮುಚ್ಚಲಾಗಿದೆ –ಪಿಟಿಐ ಚಿತ್ರ

ಶೇ 71ಕ್ಕೂ ಹೆಚ್ಚು ಜನರು ಮಾಂಸಾಹಾರಿಗಳು

ದೇಶದ ಶೇ 71ಕ್ಕೂ ಹೆಚ್ಚು ಜನರು ಮಾಂಸಾಹಾರ ಸೇವಿಸುತ್ತಾರೆ ಎನ್ನುತ್ತದೆ ಕೇಂದ್ರ ಸರ್ಕಾರದ ‘ಸ್ಯಾಂಪಲ್ ರೆಜಿಸ್ಟ್ರೇಷನ್ ಸಿಸ್ಟಂ ಬೇಸ್‌ಲೈನ್ ಸಮೀಕ್ಷೆ–2014’ರ ವರದಿ. ದೇಶದಲ್ಲಿ ಸಸ್ಯಾಹಾರ ಮಾತ್ರ ಸೇವಿಸುವವರ ಪ್ರಮಾಣ ಶೇ 30ಕ್ಕಿಂತಲೂ ಕಡಿಮೆ ಇದೆ ಎಂದು ಈ ವರದಿಯ ದತ್ತಾಂಶಗಳು ಹೇಳುತ್ತವೆ. ದಕ್ಷಿಣ ಮತ್ತು ಪೂರ್ವ ದೆಹಲಿಯಲ್ಲಿ ಚೈತ್ರ ನವರಾತ್ರಿಯ ಸಂದರ್ಭದಲ್ಲಿ ಮಾಂಸದ ಅಂಗಡಿಗಳ ಬಾಗಿಲು ಮುಚ್ಚುವಂತೆ ಅಲ್ಲಿನ ಮೇಯರ್‌ಗಳು ಆದೇಶ ಹೊರಡಿಸಿದ ನಂತರ, ಈ ವರದಿಯ ದತ್ತಾಂಶಗಳು ಮತ್ತೆ ಚರ್ಚೆಗೆ ಬಂದಿವೆ. ಬಹುಸಂಖ್ಯಾತ ಮಾಂಸಾಹಾರಿಗಳು ಏನನ್ನು ತಿನ್ನಬೇಕು ಎಂಬುದನ್ನು ಅಲ್ಪಸಂಖ್ಯಾತರಾದ ಸಸ್ಯಾಹಾರಿಗಳು ನಿರ್ಧರಿಸುತ್ತಿದ್ದಾರೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಯಾಗುತ್ತಿದೆ.

ನರೇಂದ್ರ ಮೋದಿ ನೇತೃತ್ವದ ಬಿಜೆಪಿ 2014ರಲ್ಲಿ ಅಧಿಕಾರಕ್ಕೆ ಬಂದ ನಂತರ ಈ ವರದಿಯನ್ನು ಬಿಡುಗಡೆ ಮಾಡಿತ್ತು. ಬಿಜೆಪಿ ಸರ್ಕಾರದ್ದೇ ವರದಿಯ ಸತ್ಯಾಸತ್ಯತೆಯನ್ನು, ಬಿಜೆಪಿಯ ಕಾರ್ಯಕರ್ತರು ಪ್ರಶ್ನಿಸಿದ್ದಾರೆ. ‘ನೀನು ಸಸ್ಯಾಹಾರಿಯೇ ಅಥವಾ ಮಾಂಸಾಹಾರಿಯೇ ಎಂಬುದನ್ನು ಯಾರೂ ಪ್ರಶ್ನಿಸಿಯೇ ಇಲ್ಲ. ಹೀಗಿದ್ದಾಗ ನಾನು ಸಸ್ಯಾಹಾರಿಯೇ ಅಥವಾ ಮಾಂಸಾಹಾರಿಯೇ ಎಂಬುದನ್ನು ಯಾರು ಹೇಗೆ ನಿರ್ಧರಿಸಿದರು’ ಎಂದು ಬಿಜೆಪಿಯ ಹಲವು ಕಾರ್ಯಕರ್ತರು ಪ್ರಶ್ನಿಸಿದ್ದಾರೆ.



- ದಕ್ಷಿಣ ಭಾರತದ ರಾಜ್ಯಗಳು, ಪೂರ್ವ ಕರಾವಳಿಯ ರಾಜ್ಯಗಳಲ್ಲಿ ಮಾಂಸಾಹಾರ ಸೇವಿಸುವವರ ಪ್ರಮಾಣ ಅತ್ಯಧಿಕವಾಗಿದೆ
- ಈಶಾನ್ಯ ಭಾರತದ ಅಸ್ಸಾಂನಲ್ಲೂ ಮಾಂಸಾಹಾರ ಸೇವಿಸುವವರ ಪ್ರಮಾಣ ಹೆಚ್ಚು
- ಉತ್ತರ ಭಾರತದಲ್ಲಿ, ಹಿಂದಿ ಭಾಷಿಕ ರಾಜ್ಯಗಳಲ್ಲಿ ಮಾಂಸಾಹಾರ ಸೇವಿಸುವವರ ಪ್ರಮಾಣ ಕಡಿಮೆ ಇದೆ
- ಗುಜರಾತ್, ರಾಜಸ್ಥಾನ ಮತ್ತು ಪಂಜಾಬ್‌ನಲ್ಲಿ ಮಾಂಸಾಹಾರ ಸೇವಿಸುವವರ ಪ್ರಮಾಣ ತೀರಾ ಕಡಿಮೆ ಇದೆ

ಮಾಂಸಾಹಾರಿಗಳ ಸಂಖ್ಯೆ ಏರುತ್ತಿದೆ ಎಂಬ ಸುದ್ದಿ ನಿಜವೇ?

‘ದೇಶದಲ್ಲಿ ಮಾಂಸಾಹಾರಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದೆ. ಇದನ್ನು ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷಾ (ಎನ್‌ಎಫ್‌ಎಚ್‌ಎಸ್) ವರದಿಗಳು ದೃಢಪಡಿಸಿವೆ’ ಎಂಬ ಸಂದೇಶಗಳು ಸಾಮಾಜಿಕ ಜಾಲತಾಣಗಳಲ್ಲಿ ಓಡಾಡುತ್ತಿವೆ. ‘ಹತ್ತು ವರ್ಷಗಳ ಹಿಂದೆ ದೇಶದಲ್ಲಿ ಮಾಂಸಾಹಾರಿಗಳ ಸಂಖ್ಯೆ ಶೇ 70ರಷ್ಟಿತ್ತು. ಆದರೆ, 2015–16ರ ವೇಳೆಗೆ ಈ ಪ್ರಮಾಣ ಶೇ 78ಕ್ಕೆ ಏರಿಕೆಯಾಗಿದೆ. ಭಾರತವು ಮಾಂಸಾಹಾರಿಗಳ ದೇಶವಾಗಿ ಬದಲಾಗುತ್ತಿದೆ’ ಎಂದು ಕೆಲವು ಸಾಮಾಜಿಕ ಜಾಲತಾಣ ಬಳಕೆದಾರರು ಕಳವಳ ವ್ಯಕ್ತಪಡಿಸಿದ್ದಾರೆ.

ದೇಶದಲ್ಲಿರುವ ಮಾಂಸಾಹಾರಿಗಳು ಹಾಗೂ ಶಾಖಾಹಾರಿಗಳ ಸಂಖ್ಯೆಯನ್ನು ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷಾ ವರದಿ ನೀಡುವುದಿಲ್ಲ. ಮಹಿಳೆಯರು ಹಾಗೂ ಮಕ್ಕಳ ಆರೋಗ್ಯಕ್ಕೆ ಸಂಬಂಧಿಸಿದ ದತ್ತಾಂಶಗಳು, ಸ್ಥೂಲಕಾಯ, ರಕ್ತಹೀನತೆ, ಹೆರಿಗೆ ಹಾಗೂ ಹೆರಿಗೆ ನಂತರದ ಸೌಲಭ್ಯಗಳು, ಲಸಿಕೆ ಮೊದಲಾದ 131 ಅಂಶಗಳ ಬಗ್ಗೆ ವರದಿ ಬೆಳಕು ಚೆಲ್ಲುತ್ತದೆಯೇ ವಿನಾ, ಮಾಂಸಾಹಾರಿಗಳು ಹಾಗೂ ಶಾಖಾಹಾರಿಗಳ ವಿವರ ಉಲ್ಲೇಖ ಮಾಡುವುದಿಲ್ಲ.

ಆಧಾರ: ಪಿಟಿಐ, ಟ್ವಿಟರ್, ಸ್ಯಾಂಪಲ್ ರೆಜಿಸ್ಟ್ರೇಷನ್ ಸಿಸ್ಟಂ ಬೇಸ್‌ಲೈನ್ ಸಮೀಕ್ಷೆ–2014’ರ ವರದಿ, ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ವರದಿಗಳು

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 88

ಶಿವನ ಶಬ್ದಬ್ರಹ್ಮಸ್ವರೂಪ

ಆಗೋಳದಿಂದ ನಾಲ್ಕು ಮುಖಗಳುಳ್ಳ ಬ್ರಹ್ಮ ಜನಿಸಿದ. ಅವನು ಸಕಲ ಜಗತ್ತುಗಳಿಗೆ ಸೃಷ್ಟಿಕರ್ತ ಮತ್ತು ಲಯಸ್ಥಿತಿಗಳನ್ನೂ ಮಾಡುವವನು ಎಂದು ಓಂಕಾರಸ್ವರೂಪದ ಬಗ್ಗೆ ಯಜುರ್ವೇದದಲ್ಲಿ ಹೇಳಿದೆ. ‘ಎಲೈ, ಬ್ರಹ್ಮ ಮತ್ತು ಹರಿಗಳೆ! ಓಂಕಾರಸ್ವರೂಪವು ಹೇಗಿರುವುದೆಂಬುದನ್ನು ಯಜುರ್ವೇದ ವಾಕ್ಯದ ಮೂಲಕ ತಿಳಿದುಕೊಂಡಿರಿ’ ಎಂದು ಲಿಂಗದಲ್ಲಿ ಕಾಣಿಸಿದ ಯೋಗಿಶಿವ ಹೇಳಿದ.

‘ಎಲೈ ನಾರದ, ಇದರ ಮಧ್ಯೆ ನನಗೂ ಜಗತ್ಪಾಲಕನಾದ ಹರಿಗೂ ಇನ್ನೊಂದು ಅದ್ಭುತವಾದ ಸ್ವರೂಪ ಕಾಣಿಸಿತು. ಅದಕ್ಕೆ ಐದು ಮುಖಗಳಿತ್ತು. ಹತ್ತು ಕೈಗಳಿದ್ದವು. ಶರೀರವು ಬಿಳಿಯವರ್ಣದಿಂದ ಕಾಂತಿಯುತವಾಗಿತ್ತು. ಬಗೆಬಗೆಯ ಆಭರಣಗಳಿಂದ ಅಲಂಕೃತವಾಗಿತ್ತು. ಮಹಾಪುರುಷನ ಲಕ್ಷಣಗಳಿಂದ ಶೋಭಿಸುತ್ತಲಿತ್ತು. ಇಂತಹ ಸ್ವರೂಪವನ್ನು ನೋಡಿ ನಾನೂ ಮತ್ತು ಹರಿ ಇಬ್ಬರೂ ಧನ್ಯರಾದೆವು. ನಂತರ ಮಹಾದೇವನು ಪ್ರಸನ್ನನಾಗಿ ದಿವ್ಯವಾದ ತನ್ನ ಶಬ್ದಬ್ರಹ್ಮಸ್ವರೂಪವನ್ನು ಬೀರುತ್ತಾ ಅಲ್ಲಿ ನಿಂತ.

‘ಅಕಾರವು ಶಿವನ ಶಿರಸ್ಸು. ಆಕಾರವು ಹಣೆಯು, ಇಕಾರವು ಬಲಗಣ್ಣು, ಈಕಾರವು ಎಡಗಣ್ಣು, ದೇವದೇವನೂ ಶಬ್ದಬ್ರಹ್ಮಸ್ವರೂಪನೂ ಆದ ಆ ಶಿವನ ಬಲ ಕಿವಿಯು ಉಕಾರವು. ಊಕಾರವು ಎಡಗಿವಿಯು, ಋಕಾರವು ಬಲಗೆನ್ನೆಯು, ಎಡಗೆನ್ನೆಯು ೠಕಾರ. ಏಕಾರವು ಮೆಲುದುಟಿಯು, ಐಕಾರವು ಕೆಳದುಟಿಯು, ಓ ಔಕಾರಗಳೆರಡೂ ಕ್ರಮವಾಗಿ ಮೇಲುಕೆಳಗಿನ ಎರಡು ದಂತಪಂಕ್ತಿಗಳು, ಅಂ ಅಃ ಎಂಬ ಅಕ್ಷರಗಳು ಶಿವನ ಎರಡು ದವಡೆಗಳು. ಕಕಾರಾದಿ ಐದು ಅಕ್ಷರಗಳು ಮಹಾದೇವನ ಐದು ಬಲಗೈಗಳು. ಚಕಾರಾದಿ ಐದು ಅಕ್ಷರಗಳು ಐದು ಎಡಗೈಗಳು. ಟಕಾರಾದಿ ಐದು ಅಕ್ಷರಗಳು ಐದು ಬಲಗಾಲುಗಳು. ತಕಾರಾದಿ ಐದು ಅಕ್ಷರಗಳು ಎಡಗಾಲುಗಳು. ಪಕಾರವು ಹೊಟ್ಟೆಯು. ಫಕಾರವು ಶರೀರದ ಬಲಭಾಗ. ಬಕಾರವು ಎಡಭಾಗವು. ಭಕಾರವು ಭುಜವು. ಮಕಾರವು ಹೃದಯವು. ಯಕಾರ ಮೊದಲುಗೊಂಡು ಸಕಾರದವರೆಗಿನ ಏಳು ಅಕ್ಷರಗಳು ಮಹಾಯೋಗಿಯೂ, ಮಹಾದೇವನು ಆದ ಶಿವನ ಏಳು ಧಾತುಗಳು. ಹಕಾರವು ನಾಭಿಯು. ಕ್ಷಕಾರವು ಘ್ರಾಣೇಂದ್ರಿಯವಾಗಿತ್ತು.

‘ಎಲೈ ನಾರದ. ಹೀಗೆ ನಿರ್ಗುಣನಾದರೂ, ಮಾಯಾಮಯವಾದ ಗುಣಗಳುಳ್ಳ ಶಿವನು ಉಮೆಯೊಡನಿರುವ ಶಬ್ದಬ್ರಹ್ಮಸ್ವರೂಪವನ್ನು ನೋಡಿ ನಾನೂ ಹರಿಯೂ ಕೃತಾರ್ಥರಾದೆವು. ನಂತರ ಮತ್ತೆ ಮೇಲ್ಭಾಗದಲ್ಲಿ ಓಂಕಾರದಿಂದ ಜನಿಸಿದಂತಹ, ಐದು ಕಲೆಗಳುಳ್ಳ, ಮೂವತ್ತೆಂಟು ಅಕ್ಷರಗಳುಳ್ಳ, ಶುದ್ಧಸ್ಫಟಿಕದಂತೆ ಶುಭ್ರವಾದ ಮಂತ್ರಸ್ವರೂಪವನ್ನು ನೋಡಿದೆವು. ಆನಂತರ ಬುದ್ಧಿಸ್ವರೂಪವಾದ, ಸಕಲ ಧರ್ಮ ಮತ್ತು ಅರ್ಥಗಳನ್ನುಂಟು ಮಾಡುವ, ಗಾಯತ್ರಿಯಿಂದ ಜನಿಸಿದಂತಹ ಇಪ್ಪತ್ತ ನಾಲ್ಕು ಅಕ್ಷರಗಳ ಮಂತ್ರಸ್ವರೂಪವೊಂದನ್ನು ನೋಡಿದೆವು. ಅದನ್ನ ಜಪಿಸಿದರೆ ಸಕಲವೂ ವಶವಾಗುವುದು. ಅದಕ್ಕೆ ನಾಲ್ಕು ಪಾದಗಳಿದ್ದವು. ಆ ಮಂತ್ರಕ್ಕೆ ಚತುಷ್ಕಾಲಮಂತ್ರವೆಂದು ಹೆಸರು.

‘ಮತ್ತೆ ಎಂಟು ಪಾದಗಳುಳ್ಳ, ಮೂವತ್ತು ಅಕ್ಷರಗಳುಳ್ಳಂತಹ ಪಂಚಸಿತವೆಂಬ ಮಂತ್ರಸ್ವರೂಪವೊಂದನ್ನು ನೋಡಿದೆವು. ಅದು ಶತ್ರುಹಿಂಸೆ ಮುಂತಾದ ಅಭಿಚಾರಗಳಿಗೆ ಉಪಯೋಗವಾದುದು. ಯಜುರ್ವೇದದಲ್ಲಿ ಪ್ರಸಿದ್ಧವಾದ ಇಪ್ಪತ್ತೈದು ಅಕ್ಷರಗಳುಳ್ಳ, ಎಂಟು ಕಲೆಗಳುಳ್ಳಂತಹ, ಇನ್ನೊಂದು ಶುದ್ಧಮಂತ್ರಸ್ವರೂಪವನ್ನು ನೋಡಿದೆವು. ಅದು ಶಾಂತಿಕರ್ಮದಲ್ಲಿ ಉಪಯುಕ್ತವಾದುದು. ಮೃತ್ಯುಂಜಯಮಂತ್ರ, ಶಿವಪಂಚಾಕ್ಷರೀಮಂತ್ರ, ಚಿಂತಾಮಣಿಮಂತ್ರ, ದಕ್ಷಿಣಾಮೂರ್ತಿಮಂತ್ರ, ‘ತತ್ವಮಸಿ’ ಎಂಬ ಶಿವನ ಅದ್ವೈತ ಮಹಾವಾಕ್ಯಗಳ ಸ್ವರೂಪವೂ ನಮಗೆ ಲಭಿಸಿತು. ಆ ಬಳಿಕ, ಭಗವಾನ್ ಹರಿಯು ಆ ಐದು ಮಂತ್ರಗಳನ್ನು ಪಡೆದು ಜಪಿಸಿದ. ಆನಂತರ ನಾನು ಮತ್ತು ವಿಷ್ಣು ಋಗ್ವೇದ, ಯಜುರ್ವೇದ, ಸಾಮವೇದ ಇವುಗಳ ಸ್ವರೂಪಿಯಾದ ಶಿವನ ಶಬ್ದಬ್ರಹ್ಮಸ್ವರೂಪವನ್ನು ನೋಡಿದೆವು. ಸರ್ವೇಶ್ವರನೂ ಮಾಯಾಮಯವಾದ ಜೀವಸ್ವರೂಪವುಳ್ಳವನೂ ಉತ್ಪತ್ತಿಯಿಲ್ಲದವನೂ ಶಾಂತಸ್ವರೂಪನೂ ಮನೋಹರನೂ ಪರಮರಹಸ್ಯನೂ ಸದಾ ಮಂಗಳಸ್ವರೂಪನೂ ದೇವದೇವನೂ ದುಷ್ಟಶಿಕ್ಷಕನೂ ಸರ್ಪರಾಜನ ಅಲಂಕಾರವುಳ್ಳವನೂ ದಿಕ್ಕುದಿಕ್ಕುಗಳನ್ನು ವ್ಯಾಪಿಸಿದ, ವಿರಾಟ್ ಸ್ವರೂಪನೂ ಸೃಷ್ಟಿಕರ್ತರಾದವನಿಗೂ ಒಡೆಯನೂ ಸೃಷ್ಟಿ-ಸ್ಥಿತಿ-ಲಯಗಳಿಗೆ ಕಾರಣನೂ ಎಲ್ಲಾ ಇಷ್ಟಾರ್ಥಗಳನ್ನು ಭಕ್ತರಿಗೆ ಅನುಗ್ರಹಿಸುವವನೂ ಆದಂತಹ, ಪಾರ್ವತಿಯೊಡನಿರುವ ಶಿವನನ್ನು ಪ್ರಿಯವಾದ ವಾಕ್ಯಗಳಿಂದ ನಾವಿಬ್ಬರು ಸಂತೋಷವಾಗಿ ಸ್ತುತಿಸಿದೆವು ಎಂದು ಬ್ರಹ್ಮನು ನಾರದನಿಗೆ ಹೇಳುವುದರೊಂದಿಗೆ ಸೃಷ್ಟಿಖಂಡದಲ್ಲಿ ಎಂಟನೆಯ ಅಧ್ಯಾಯ ಮುಗಿಯಿತು.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಸಾರ್ಥಕ ಬದುಕಿನ ಲಕ್ಷಣ

ಇರುವ ಕೆಲಸವ ಮಾಡು ಕಿರಿದೆನದೆ ಮನಸಿಟ್ಟು |
ದೊರೆತುದ ಹಸಾದವೆಂದುಣ್ಣು ಗೊಣಗಿಡದೆ ||
ಧರಿಸು ಲೋಕದ ಭರವ ಪರಮಾರ್ಥವನು ಬಿಡದೆ |
ಹೊರಡು ಕರೆ ಬರಲ್ ಅಳದೆ – ಮಂಕುತಿಮ್ಮ
||601||

ಪದ-ಅರ್ಥ: ಕಿರಿದೆನದೆ = ಕಿರಿದು + ಎನದೆ, ದೊರೆತುದ = ದೊರೆತದ್ದು, ಹಸಾದವೆಂದುಣ್ಣು- = ಹಸಾದವೆಂದು(ಪ್ರಸಾದವೆಂದು) + ಉಣ್ಣು, ಗೊಣಗಿಡದೆ = ಗೊಡಗಾಡದೆ. ಭರವ = ಭಾರವನ್ನು, ಬರಲ್ = ಬರಲು.

ವಾಚ್ಯಾರ್ಥ: ನಿನಗೆ ದೊರೆತಿರುವ ಕೆಲಸವನ್ನು, ಸಣ್ಣದೆನದೆ ಮನಸ್ಸಿಟ್ಟು ಮಾಡು. ದೊರೆತದ್ದನ್ನು ದೇವರ ಪ್ರಸಾದವೆಂದು ಸ್ವೀಕರಿಸು, ಗೊಣಗಾಟ ಬೇಡ. ಜಗತ್ತಿನಲ್ಲಿ ಕೆಲಸದ ಭಾರವನ್ನು ಹೊತ್ತು ನಡೆ ಆದರೆ ಪರಮಾರ್ಥವನ್ನು ಮರೆಯಬೇಡ. ಕೊನೆಗೆ ‘ಸಾಕು ಬಾ’ ಎಂದು ಆತ ಕರೆ ನೀಡಿದಾಗ ಅಳದೆ, ಕೊರಗದೆ ಹೊರಟು ಬಿಡು.

ವಿವರಣೆ: ಆಶಾ ಕಂದಾರಾ ರಾಜಸ್ಥಾನದ ಜೋಧಪುರದಲ್ಲಿ ಹುಟ್ಟಿ ಬೆಳೆದ ಹುಡುಗಿ, ಮನೆಯಲ್ಲಿ ಬಡತನ. ಆಕೆಯ ಶಾಲೆಯ ಶಿಕ್ಷಣ ಮುಗಿದ ನಂತರ ಮದುವೆ ಮಾಡಿದರು. ಗಂಡ ಬೇಜವಾಬ್ದಾರಿ ಮನುಷ್ಯ. ಬೇಗ ಬೇಗನೆ ಎರಡು ಮಕ್ಕಳಾದವು. ಅವರನ್ನು ನೋಡಿಕೊಂಡು ಮನೆಯನ್ನು ನಡೆಸುವುದು ಕಷ್ಟವೆನ್ನಿಸಿತು ಆತನಿಗೆ. ಹೆಂಡತಿ ಮತ್ತು ಎರಡು ಮಕ್ಕಳನ್ನು ಬಿಟ್ಟು ಓಡಿಹೋದ. ಎಲ್ಲಿಗೆ ಹೋದನೋ? ಮನೆ ನಡೆಯಬೇಕಲ್ಲ? ಮಕ್ಕಳನ್ನು ಸಾಕುವುದಕ್ಕಾಗಿ ಆಶಾ ಕೆಲಸ ಮಾಡತೊಡಗಿದಳು. ಆಕೆಯ ಶಿಕ್ಷಣಕ್ಕೆ ಯಾವ ಕೆಲಸ ದೊರೆತೀತು? ಜೋಧಪುರ ನಗರಸಭೆಯಲ್ಲಿ ಸಫಾಯಿ ಕರ್ಮಚಾರಿಯಾಗಿ ಸೇರಿದಳು. ಕೈಯಲ್ಲಿ ಪೊರಕೆ ಹಿಡಿದು ದಿನನಿತ್ಯ ಜೋಧಪುರದ ರಸ್ತೆಗಳನ್ನು ಗುಡಿಸುವ ಕೆಲಸ. ಆಕೆಯ ತಂದೆಗೆ ಶಿಕ್ಷಣದ ಮಹತ್ವ ಗೊತ್ತು. ಆಕೆಯನ್ನು ಪ್ರೇರೇಪಿಸಿ ಸಂಜೆಯ ಕಾಲೇಜಿನಲ್ಲಿ ಪದವಿಯನ್ನು ಪಡೆದು, ರಾಜಸ್ಥಾನದ ಆಡಳಿತಾತ್ಮಕ ಪರೀಕ್ಷೆಯನ್ನು ಬರೆದು ಆಯ್ಕೆಯಾಗಿ, ಈಗ ಅದೇ ನಗರಸಭೆಯ ಆಡಳಿತಾಧಿಕಾರಿಯಾಗಿದ್ದಾಳೆ. ಈಗ ನಿಮಗೆ ಹೇಗೆನ್ನಿಸುತ್ತದೆ ಎಂದು ಪತ್ರಕರ್ತರು ಕೇಳಿದಾಗ ಆಶಾಳ ಉತ್ತರ ಮನನೀಯವಾದದ್ದು. ‘ಯಾವ ಕೆಲಸವೂ ನೀಚವಲ್ಲ, ಯಾವ ಕೆಲಸವೂ ಉಚ್ಚವಲ್ಲ. ನಮ್ಮ ವಿದ್ಯಾರ್ಹತೆಗೆ, ಶಕ್ತಿಗೆ ತಕ್ಕಂಥ ಕೆಲಸಗಳು ದೊರೆಯುತ್ತವೆ. ಅವುಗಳನ್ನು ಏಕಮನಸ್ಸಿನಿಂದ, ಶ್ರದ್ಧೆಯಿಂದ ಮಾಡಿದರೆ ಹೆಚ್ಚಿನ ಅವಕಾಶಗಳು ದೊರೆತೇ ತೀರುತ್ತವೆ. ನನಗೆ ಮೊದಲು ವಿದ್ಯಾರ್ಹತೆ ಇರಲಿಲ್ಲ, ಕಸಗುಡಿಸುತ್ತಿದ್ದೆ. ಈಗ ಅದನ್ನು ಪಡೆದಿದ್ದೇನೆ. ಈ ಕೆಲಸವನ್ನೂ ಅಷ್ಟೇ ಆಸಕ್ತಿಯಿಂದ ಮಾಡುತ್ತೇನೆ’.

ಶ್ರದ್ಧೆಯಿಂದ ದುಡಿಯಬೇಕು ದೊರೆತ ಕೆಲಸ ಚಿಕ್ಕದೆನ್ನದೆ ಶ್ರಮಿಸಬೇಕು. ಅದರ ಫಲವಾಗಿ ಬಂದದ್ದನ್ನು ದೇವರ ಪ್ರಸಾದವೆಂದು ಸ್ವೀಕರಿಸಬೇಕು. ಅದರಲ್ಲಿ ಗೊಣಗಾಟ ಬೇಡ. ಹೆಚ್ಚಿನ ಫಲ ಬೇಕು ಎನ್ನುವುದಾದರೆ ಹೆಚ್ಚಿನ ಪರಿಶ್ರಮಕ್ಕೆ, ಸಾಧನೆಗೆ ಸಿದ್ಧರಿರಬೇಕು. ಕರ್ತವ್ಯವನ್ನು ನಡೆಸುತ್ತ, ಆಗ ಬಂದ ಕರ್ತವ್ಯಭಾರವನ್ನು ನಗುನಗುತ್ತ ಹೊರಬೇಕು. ಜೀವನದ ಭಾರವನ್ನು ಹೊರುತ್ತ ಕಳೆದುಹೋಗದೆ, ಪರಮಾರ್ಥವನ್ನು ನೆನೆಯಬೇಕು. ಈ ಬದುಕಿನಾಚೆನೂ ಒಂದು ಪ್ರಪಂಚವಿದೆ. ಇಲ್ಲಿ ಮಾಡಿದ ಒಳ್ಳೆಯ ಕಾರ್ಯ ಮುಂದೆ ಒಳ್ಳೆಯ ನೆಲೆಯನ್ನು ಕಲ್ಪಿಸುತ್ತದೆ. ಅದನ್ನೇ ಬಸವಣ್ಣನವರು, ‘ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ, ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರು’ ಎಂದರು. ಕಗ್ಗ ಹೇಳುತ್ತದೆ, ಇಲ್ಲಿಯ ಬದುಕಿನ ಭರಾಟೆಯಲ್ಲಿ ಅಲ್ಲಿಗೆ ಸಲ್ಲುವುದರ ಬಗೆಗಿನ ಯೋಚನೆ ಮರೆಯದಿರಲಿ. ಪ್ರಪಂಚದಲ್ಲಿ ಸದಾ ಕಾಲ ದುಡಿಯುತ್ತಲೇ, ಅದಕ್ಕೆ ಅಂಟದಂತಿರಬೇಕು. ಪ್ರಪಂಚದ ಯಜಮಾನ ‘ಸಾಕು, ಬಾ ಇನ್ನು’ ಎಂದೊಡನೆ ಕೊರಗದೆ, ಅಳದೆ ಹೊರಡಲು ಸಿದ್ಧನಾಗಿರಬೇಕು. ದೊರೆತ ಕೆಲಸವನ್ನು ಮಾಡಿ, ಬಂದದ್ದನ್ನು ಪ್ರಸಾದವೆಂದು ಸ್ವೀಕರಿಸಿ, ಲೋಕದಲ್ಲಿ ಮತ್ತು ಪರಮಾರ್ಥದಲ್ಲಿ ಸಲ್ಲುವವರಾಗಿ, ನಗುನಗುತ್ತ ಪ್ರಪಂಚದಿಂದ ತೆರಳುವುದು ಸಾರ್ಥಕ ಬದುಕಿನ ಲಕ್ಷಣ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಏಪ್ರಿಲ್ 7, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು - ಮೀನ ಮಾಸದ 24 ನೇ ದಿನ ತಿಥಿ: (ಚೈತ್ರ ಶುದ್ಧ) ಷಷ್ಠಿ ಗಂ. 20-33 ನಕ್ಷತ್ರ: ಮೃಗಶಿರ ಗಂ. 22-41 ಯೋಗ: ಸೌಭಾಗ್ಯ ಗಂ. 09-31, ಕರಣ: ಕೌಲವ ಗಂ. 07-17. ರಾಹುಕಾಲ: ಮಧ್ಯಾಹ್ನ 01:30 – 03:00 ಸೂರ್ಯೋದಯ: 06-26 ಸೂರ್ಯಾಸ್ತ: 06-39 ಮುಸ್ಲಿಂ ದಿನಾಂಕ : 05 ರಂಜಾನ್ ದಿನ ವಿಶೇಷ : ಸ್ಕಂದ ಷಷ್ಠಿ, ಶೃಂಗೇರಿ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ವರ್ಧಂತೀ ಅದೃಷ್ಟ ಸಂಖ್ಯೆ: 5, 11

ಮೇಷ: ಪಾಕಪ್ರವೀಣರಿಗೆ ವೃತ್ತಿಯಲ್ಲಿ ಹೆಸರು ಸಂಪಾದನೆ ಮಾಡುವ ಕಾಲ ಒದಗಿ ಬರಲಿದೆ. ವಿವಿಧ ಧಾರ್ಮಿಕ ಕಾರ್ಯಕ್ರಮ ಮಾಡುವುದರಿಂದ ಅಥವಾ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಮನಸ್ಸಿಗೆ ನೆಮ್ಮದಿ.

ವೃಷಭ: ಇತ್ತೀಚಿನ ದಿನದಲ್ಲಿ ವೈರಾಗ್ಯ ಹೊಂದಿರುವ ನೀವು ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಂಡು ಪರಿಶ್ರಮದಿಂದ ದುಡಿದರೆ ಪ್ರಗತಿಯ ಹಾದಿಯನ್ನು ಕಾಣಬಹುದು. ಕ್ರೀಡಾಪಟುಗಳಿಗೆ ಹೆಚ್ಚಿನ ಅವಕಾಶ ಲಭಿಸಲಿದೆ.

ಮಿಥುನ: ಕಾರ್ಯಕ್ಷೇತ್ರದಲ್ಲಿ ಶಾಂತಚಿತ್ತದಿಂದ ವ್ಯವಹರಿಸಿದರೆ ಹಾದಿ ಸುಗಮ. ಸಾರ್ವಜನಿಕರ ಸೇವೆ ಮಾಡುವವರಿಗೆ ಕೆಲವು ಅನುಯಾಯಿಗಳಿಂದ ಸಹಕಾರ ಕೆಲವರಿಂದ ಅಸಹಕಾರ ಎರಡನ್ನೂ ಸ್ವಾಗತಿಸುವ ಅನಿವಾರ್ಯ.

ಕರ್ಕಾಟಕ: ರಕ್ತ ಸಂಬಂಧೀ ಕಾಯಿಲೆಯಿಂದ ಬಳಲುತ್ತಿರುವವರಿಗೆ ಔಷಧಿಯು ಪ್ರತಿಕ್ರಿಯಿಸುವುದು. ನಿಮ್ಮ ಸಮಸ್ಯೆಗಳನ್ನು ಸೌಹಾರ್ದಯುತವಾಗಿ ಮತ್ತು ನ್ಯಾಯ ಸಮ್ಮತವಾಗಿ ಬಗೆಹರಿಸಿಕೊಳ್ಳುವಲ್ಲಿ ಯಶಸ್ವಿಯಾಗುವಿರಿ.

ಸಿಂಹ: ಕಾರ್ಯ ಸಾಧನೆಗೆ ಅಧಿಕ ತಿರುಗಾಟದಿಂದ ಆಯಾಸ. ಆಹಾರದಲ್ಲಿ ವಿಷದ ಅಂಶವು ಸೇರಿ ಆರೋಗ್ಯ ಹದಗೆಡುವ ಸಾಧ್ಯತೆ. ಎಚ್ಚರ ವಹಿಸುವುದು ಅಗತ್ಯ. ಹಿರಿಯರು ಮಾಡಿದ ಪುಣ್ಯದ ಫಲ ಅನುಭವಕ್ಕೆ ಬರಲಿದೆ.

ಕನ್ಯಾ: ವಿದ್ಯಾಭ್ಯಾಸದಲ್ಲಿ ಒಳ್ಳೆಯ ಫಲಿತಾಂಶವನ್ನು ಪಡೆದು ಹೆಚ್ಚಿನ ವ್ಯಾಸಂಗಕ್ಕೆ ವಿದೇಶಕ್ಕೆ ತೆರಳುವ ಅವಕಾಶ. ವ್ಯವಹಾರದಲ್ಲಿ ಕಠಿಣ ಸವಾಲನ್ನು ಯಶಸ್ವಿಯಾಗಿ ಎದುರಿಸುವ ಸಾಮರ್ಥ್ಯವನ್ನು ದೇವತಾರಾಧನೆಯಿಂದ ಹೊಂದುವಿರಿ.

ತುಲಾ: ಹಿತಶತ್ರುಗಳಿಂದ ವಂಚನಾ ಪ್ರಸಂಗವಿದ್ದರೂ ನಿಮಗೆ ಅನುಭವಕ್ಕೆ ಬರುವುದಿಲ್ಲ. ಸೇವಕ ವರ್ಗದವರಿಂದ ಹೊಸದೊಂದು ಪಾಠ ಕಲಿಯುವ ಕಾಲ ಬರಲಿದೆ. ದಕ್ಷಿಣಾಮೂರ್ತಿಯನ್ನು ಪೂಜಿಸುವುದರಿಂದ ನೆಮ್ಮದಿ.

ವೃಶ್ಚಿಕ: ಏನನ್ನಾದರೂ ಸಾಧಿಸಲೇಬೇಕೆಂಬ ನಿಮ್ಮ ಆಸೆ-ಆಕಾಂಕ್ಷೆಗೆ ಆತ್ಮವಿಶ್ವಾಸದ ಕೊರತೆಯಂತೂ ಕಾಣಿಸದು. ಭೂ ಖರೀದಿಯಂತಹ ಅಥವಾ ಗೃಹನಿರ್ಮಾಣ ಕಾರ್ಯದಂತಹ ಯೋಚನೆಗಳು ಕಾರ್ಯರೂಪಕ್ಕೆ ಬರಲಿದೆ.

ಧನು: ಪರೋಪಕಾರ ಸ್ವಭಾವದಿಂದಾಗಿ ವೈಯಕ್ತಿಕ ಸ್ಥಾನಮಾನಗಳು ಲಭಿಸುವುದು. ಸರ್ಕಾರಿ ಉದ್ಯೋಗದಲ್ಲಿರುವವರಿಗೆ ವರ್ಗಾವಣೆ ಮಾಡಿಸಿಕೊಳ್ಳುವ ಪ್ರಯತ್ನ ಫಲಕೊಡಲಿದೆ. ಬೂದು ಬಣ್ಣ ಶುಭತರಲಿದೆ.

ಮಕರ: ತಾಯಿಯ ಆರೋಗ್ಯದಲ್ಲಿ ಏರಿಳಿತ. ಬಟ್ಟೆ ವ್ಯಾಪಾರ ನಡೆಸುವವರಿಗೆ ಹೆಚ್ಚಿನ ಲಾಭ. ಹಣಕಾಸು ಪರಿಸ್ಥಿತಿ ಉತ್ತಮವಾಗುವುದರಿಂದ ಒತ್ತಡ ತರುವಂತಹ ಯಾವುದೇ ಕೆಲಸಗಳಿದ್ದರೂ ನಿರರ್ಗಳವಾಗಿ ಬಗೆಹರಿಯುವುದು.

ಕುಂಭ: ವಿದ್ಯಾರ್ಥಿಗಳಿಗೆ ಪರಿಶ್ರಮಕ್ಕೆ ಮೀರಿದ ಫಲಗಳು ಪ್ರಾಪ್ತಿಯಾಗುವುದರಿಂದ ಸಂತಸ. ಹಿರಿಯ ಅಧಿಕಾರಿಗಳು ನಿಮ್ಮ ಪರಿಶ್ರಮ ಹಾಗೂ ಜವಾಬ್ದಾರಿಯುತ ನಡವಳಿಕೆಗಳನ್ನು ಗಮನಿಸಿ ಸಹಕಾರ ನೀಡಲಿದ್ದಾರೆ.

ಮೀನ: ಸಹೋದರರಿಂದ ಹಿತವಚನ ಕೇಳಬೇಕಾದೀತು. ಭಿನ್ನಾಭಿಪ್ರಾಯ ಮೂಡಿದಲ್ಲಿ ಶಾಂತ ಸ್ವಭಾವದಿಂದ ವರ್ತಿಸುವುದು ಉತ್ತಮ. ಲೇವಾದೇವಿ ವ್ಯವಹಾರ ಮಾಡುವವರಿಗೆ ಜವಾಬ್ದಾರಿಯ ಹೊರೆ ಹೆಚ್ಚಲಿದೆ.

ಪದಬಂಧ 4920

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಗಟ್ಟಿಯಾದ ಶಬ್ದವಿದು (3)
2.ಮರದಲ್ಲಿ ಚೆಲುವಾದುದು ಅಡಗಿದೆಯಲ್ಲಾ! (4)
4.ಇನ್ನೊಬ್ಬರ ಕಾರ್ಯದಲ್ಲಿ ಮಧ್ಯ ಪ್ರವೇಶಿಸುವಿಕೆ (4)
6.ಮಾನ್ಯವಾಗಿ ಕೊಡುವ ಭೂಮಿ ಗ್ರಾಮ ಇತ್ಯಾದಿ (3)
7.ಬುದ್ಧಿವಂತೆ ಇಲ್ಲಿ ತಿರುಗಿದ್ದಾಳೆ (2)
9.ಸರಸದ ವಿರುದ್ಧ ಪದ (3)
11.ತೃಷೆಯಿಲ್ಲಿ ಉಲ್ಟಾ ಕಾಣುತ್ತಿದೆ (2)
13.ಮಜದಲ್ಲಿರುವ ಮನುಷ್ಯ! (3)
14.ಈತ ಸರ್ವಶ್ರೇಷ್ಠ ವ್ಯಕ್ತಿ (4)
16.ನಡುವೆ ಧ್ವನಿಯಿದ್ದಕ್ಕೇ ಈ ವಿಶ್ವಾಸ! (4)
17.ಮಣ್ಣಿನಲ್ಲಿ ಪಾತ್ರೆ ಮಾಡುವವನು (3)

ಮೇಲಿಂದ ಕೆಳಕ್ಕೆ

1.ದಾಹವಾದಾಗ ನೀಡಿರುವ ದೃಷ್ಟಾಂತ! (5)
2.ವಿಷ್ಣುವಿನ ದಶಾವತಾರಗಳಲ್ಲಿ ಮೊದಲನೆಯದು (2)
3.ಲಲಾಟ ಲಿಖಿತವಿದು (5)
5.ಹಾಡಿನ ಆರಂಭದ ಸಾಲು (3)
8.ಮತ್ತೊಬ್ಬನ ಸಾಲಕ್ಕೆ ಹೊಣೆ ನಿಂತ ವ್ಯಕ್ತಿ (5)
10.ತಿರುಗಿರುವ ದೊರೆ! (3)
12.ಸಂಕೋಚವುಳ್ಳವ ದಾರದೊಳಗೆ ನುಸುಳಿದ್ದಾನಲ್ಲ! (5)
15.ಹಾವಸೆಯಿರುವ ಜಾಗದಲ್ಲಿ ಬಿಡಿಸಿದ ರಂಗೋಲಿ (2)

1			■	■	2		3	
	■	■	■	■		■		■
4			5	■	■	6		
	■	■		■	■	■		■
7	8	■	9		10	■	11	12
■		■	■	■		■	■	
13			■	■	14			
■		■	15	■	■	■	■	
16				■	■	17		

4919ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪರಿಣಿತ 3.ಸಂಪ್ರತಿ
5.ಗುಣಕಥನ 7.ಸಿಪ್ಪೆ
9.ಮರಣ 11.ರಂಪ
13.ವಿಚಾರವಂತ 15.ಮಹಡಿ
16.ನವಸುಮ

ಮೇಲಿಂದ ಕೆಳಕ್ಕೆ:
1.ಪಡಪೋಸಿ 2.ತರಗು
4.ಪ್ರಧಾನ 6.ಕಲ್ಯಾಣ
8.ಪ್ವೆಕ 9.ಮಧುರ
10.ಗುರಂ 12.ಪರಂಧಾಮ
13.ವಿಗ್ರಹ 14.ತಲ್ಲೀನ

ಸುಡೊಕು 5306

		7	1		2		6	
				3		8		9
2	9	4				1		7
	6	8		5			4	1
						7	9	
9	4			2				
3	7			8		9		5
		6					8	
	8		3		5	6		2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5305 ಸುಡೊಕು

4	5	7	3	6	8	9	1	2
9	8	1	5	7	2	3	4	6
6	3	2	9	4	1	7	5	8
3	7	4	2	8	9	1	6	5
5	2	9	4	1	6	8	3	7
1	6	8	7	3	5	2	9	4
2	9	3	8	5	4	6	7	1
7	4	6	1	2	3	5	8	9
8	1	5	6	9	7	4	2	3

ಪರಸ್ಪರ ಅಂತರ ಕಾಯ್ದುಕೊಳ್ಳಿ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

9ನೇ ವರ್ಷದ ಪುಣ್ಯಸ್ಮರಣೆ
ಶ್ರೀ ಹೆಚ್. ಹೆಚ್. ಮುನಿಸ್ವಾಮಿ ಗೌಡ
DGM (Rtd)
(Karnataka State Agro Corn Products Ltd, Hebbal, Bangalore)
ಜನನ: 3-10-1937 ಮರಣ: 7-04-2013
ಇಂತಿ ದುಃಖತಪ್ತರು – ಕುಟುಂಬದವರು

1 ನೇ ವರ್ಷದ ಪುಣ್ಯಸ್ಮರಣೆ
ಮರಣ: 07.04.2021
ಕೆ.ಎನ್. ಬಸವರಾಜು
ಕೆ.ಇ.ಬಿ. ದೊಡ್ಡಬಳ್ಳಾಪುರ
ನೀವು ನಮ್ಮನ್ನು ಅಗಲಿ ವರ್ಷವಾಯಿತು. ನಿಮ್ಮ ಪ್ರೀತಿ, ನೆನಪುಗಳು ಸದಾ ನಮ್ಮಲ್ಲಿ ಜೀವಂತವಾಗಿವೆ ಮತ್ತು ನೀವು ನಮ್ಮನ್ನು ಸದಾಕಾಲ ಮುನ್ನಡೆಸುತ್ತಿದ್ದೀರಿ ಎಂದು ಭಾವಿಸಿದ್ದೇವೆ.
ನಿಮ್ಮ ಆತ್ಮಕ್ಕೆ ಶಾಂತಿಯನ್ನು ಕೋರುವವರು
ಪತ್ನಿ: ಕಲಾವತಿ, ಮಕ್ಕಳು
ಅಳಿಯಂದಿರು, ಸೊಸೆ ಮತ್ತು ಮೊಮ್ಮಕ್ಕಳು



ಷೇರುಪೇಟೆ ವಹಿವಾಟು

566



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,957
ಇಂದಿನ ಅಂತ್ಯ	17,807
▼	150
ದಿನದ ಕನಿಷ್ಠ	17,779

ವಿನಿಮಯ ದರ

$ ಡಾಲರ್	75.84
£ ಪೌಂಡ್	99.24
€ ಯುರೊ	82.68
¥ ಯೆನ್ (100ಕ್ಕೆ)	61

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹405
12 ಮೊಟ್ಟೆಗೆ	₹54
ಮೈಸೂರು	
100 ಮೊಟ್ಟೆಗೆ	₹420

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1610 (1610)
ಸೋಯಾ (ರಿಫೈನ್ಡ್)	₹1500 (1492)
ಸೂರ್ಯಕಾಂತಿ (ರಿಫೈನ್ಡ್)	₹1680 (1680)
ಪಾಮೋಲಿನ್	₹1460 (1457)

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹10000-15000

ಜಿಡಿಪಿ ಬೆಳವಣಿಗೆ ಶೇ 7.5ರಷ್ಟು: ಎಡಿಬಿ

ನವದೆಹಲಿ (ಪಿಟಿಐ): ಅತ್ಯಂತ ವೇಗವಾಗಿ ಬೆಳವಣಿಗೆ ಕಾಣುತ್ತಿರುವ ಪ್ರಮುಖ ಆರ್ಥಿಕತೆ ಎಂದು ಹೆಗ್ಗಳಿಕೆಯನ್ನು ಭಾರತ ಉಳಿಸಿಕೊಳ್ಳಲಿದ್ದು, 2022–23ರಲ್ಲಿ ಶೇಕಡ 7.5ರಷ್ಟು ಬೆಳವಣಿಗೆ ಸಾಧಿಸಲಿದೆ ಎಂದು ಏಷ್ಯಾ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ಹೇಳಿದೆ.

2023–24ನೇ ಹಣಕಾಸು ವರ್ಷದಲ್ಲಿ ಭಾರತದ ಆರ್ಥಿಕತೆಯು ಶೇ 8ರಷ್ಟು ಬೆಳವಣಿಗೆ ಕಾಣಲಿದೆ. ಆದರೆ, ಚೀನಾದ ಆರ್ಥಿಕ ಬೆಳವಣಿಗೆಯು ಶೇ 4.8ಕ್ಕೆ ಇಳಿಯಲಿದೆ ಎಂದು ತಿಳಿಸಿದೆ. ರಷ್ಯಾ–ಉಕ್ರೇನ್ ಸಂಘರ್ಷದಿಂದಾಗಿ ಸರಕುಗಳ ಬೆಲೆ ಏರಿಕೆ ಆಗುತ್ತಿದ್ದು ಹಣದುಬ್ಬರ ಹೆಚ್ಚಾಗುವ ಆತಂಕ ವ್ಯಕ್ತಪಡಿಸಿದೆ.

2021–22ರಲ್ಲಿ ದಾಖಲೆಯ ಬಂಡವಾಳ ಹಿಂತೆಗೆತ

ಎಫ್‌ಪಿಐ ಹೊರಹರಿವು ₹ 1.40 ಲಕ್ಷ ಕೋಟಿ

ಮುಖ್ಯ ಕಾರಣಗಳು

- ಕೋವಿಡ್ ಪ್ರಕರಣಗಳ ಹೆಚ್ಚಳ
- ರಷ್ಯಾ–ಉಕ್ರೇನ್ ಸಂಘರ್ಷ
- ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಏರಿಕೆ

ನವದೆಹಲಿ (ಪಿಟಿಐ): ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಮಾರ್ಚ್ 31ಕ್ಕೆ ಕೊನೆಗೊಂಡ 2021–22ನೇ ಹಣಕಾಸು ವರ್ಷದಲ್ಲಿ ಭಾರತದ ಬಂಡವಾಳ ಮಾರುಕಟ್ಟೆಗಳಿಂದ ಒಟ್ಟು ₹ 1.4 ಲಕ್ಷ ಕೋಟಿ ಬಂಡವಾಳ ಹಿಂದಕ್ಕೆ ಪಡೆದಿದ್ದಾರೆ.

ವಿದೇಶಿ ಬಂಡವಾಳ ಹೂಡಿಕೆದಾರರು ಇಷ್ಟು ದೊಡ್ಡ ಮೊತ್ತವನ್ನು ಒಂದೇ ವರ್ಷದಲ್ಲಿ ಹಿಂದಕ್ಕೆ ಪಡೆದಿರುವುದು ಇದೇ ಮೊದಲು. ವಿದೇಶಿ ಬಂಡವಾಳ ಹೂಡಿಕೆದಾರರು 2020–21ನೇ ಹಣಕಾಸು ವರ್ಷದಲ್ಲಿ ₹ 2.7 ಲಕ್ಷ ಕೋಟಿ ಬಂಡವಾಳ ಹೂಡಿಕೆ ಮಾಡಿದ್ದರು.

ಕೋವಿಡ್ ಪ್ರಕರಣಗಳ ಸಂಖ್ಯೆಯಲ್ಲಿ ಹೆಚ್ಚಳ, ಆರ್ಥಿಕ ಚೇತರಿಕೆಗೆ ಸಂಬಂಧಿಸಿದಂತೆ ಮೂಡಿದ ಆತಂಕ ಹಾಗೂ ಉಕ್ರೇನ್–ರಷ್ಯಾ ಸಂಘರ್ಷದಿಂದ ಜಾಗತಿಕ ಮಟ್ಟದಲ್ಲಿ ಸೃಷ್ಟಿಯಾಗಿರುವ ಬಿಕ್ಕಟಿನ ಕಾರಣಗಳಿಂದಾಗಿ ಈ ಪ್ರಮಾಣದಲ್ಲಿ ಬಂಡವಾಳ ಹೊರಹರಿವು ಕಂಡುಬಂದಿದೆ ಎಂದು ತಜ್ಞರು ಹೇಳಿದ್ದಾರೆ.

ವಿದೇಶಿ ಬಂಡವಾಳ ಹೂಡಿಕೆದಾರರು ಈ ಹಿಂದೆ, 2018–19ರಲ್ಲಿ ₹ 88 ಕೋಟಿ, 2015–16ರಲ್ಲಿ ₹ 14,171 ಕೋಟಿ ಮತ್ತು 2008–09ರಲ್ಲಿ ₹ 47,706 ಕೋಟಿ ಬಂಡವಾಳ ಹಿಂದಕ್ಕೆ ಪಡೆದಿದ್ದರು.

ಕಚ್ಚಾ ತೈಲ ದರ ಏರಿಕೆ ಮತ್ತು ಹಣದುಬ್ಬರ ಹೆಚ್ಚಳದ ಕಾರಣದಿಂದಾಗಿ ಅಲ್ಪಾವಧಿಯಲ್ಲಿ ವಿದೇಶಿ ಬಂಡವಾಳ ಹೂಡಿಕೆದಾರರ ವಹಿವಾಟುಗಳು ಅಸ್ಥಿರವಾಗಿ ಇರುವ ನಿರೀಕ್ಷೆ ಇದೆ ಎಂದು ತಜ್ಞರು ಹೇಳಿದ್ದಾರೆ.

2021ರ ಏಪ್ರಿಲ್‌ನಿಂದ 2022ರ ಮಾರ್ಚ್‌ವರೆಗಿನ 12 ತಿಂಗಳ ಅವಧಿಯಲ್ಲಿ 9 ತಿಂಗಳು ಮಾರಾಟಕ್ಕೆ ಹೆಚ್ಚಿನ ಒತ್ತು ನೀಡಿದ್ದಾರೆ. '2021ರ ಏಪ್ರಿಲ್–ಮೇ ಅವಧಿಯಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಭಾರಿ ಹೆಚ್ಚಳ ಮತ್ತು ಕೋವಿಡ್‌ನ ಎರಡನೇ ಅಲೆ ಬಂಡವಾಳ ಹೊರಹರಿವು ಆಗುವಂತೆ ಮಾಡಿದವು' ಎಂದು ಮಾರ್ನಿಂಗ್‌ಸ್ಟಾರ್ ಇಂಡಿಯಾದ ಸಹಾಯಕ ನಿರ್ದೇಶಕ ಹಿಮಾಂಶು ಶ್ರೀವಾಸ್ತವ ಹೇಳಿದ್ದಾರೆ.

'ಹಲವು ಕಾರಣಗಳಿಂದಾಗಿ ಭಾರತದ ಮಾರುಕಟ್ಟೆಯು ವಿದೇಶಿ ಬಂಡವಾಳ ಹೂಡಿಕೆದಾರರರಿಗೆ ದುಬಾರಿ ಆಗಿ ಪರಿಣಮಿಸಿದೆ. ಕಚ್ಚಾ ತೈಲ ದರ ಏರಿಕೆ, ರೂಪಾಯಿ ಮೌಲ್ಯ ದುರ್ಬಲವಾಗಿರುವುದು, ರಷ್ಯಾ–ಉಕ್ರೇನ್ ಸಂಘರ್ಷವು ಪ್ರಮುಖ ಕಾರಣಗಳಾಗಿವೆ. ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿದರ ಏರಿಕೆಯನ್ನು ಮುಂದೂಡಿದ್ದರೆ ಎಲ್ಲವೂ ಸರಿಹೋಗುತ್ತಿತ್ತು. ಈ ಪ್ರಮಾಣದಲ್ಲಿ ಷೇರುಗಳ ಮಾರಾಟ ಆಗುತ್ತಿರಲಿಲ್ಲ' ಎಂದು ಅಪ್‌ಸೈಡ್ ಎಐ ಕಂಪನಿಯ ಸಹ ಸ್ಥಾಪಕ ಅತನು ಅಗರ್‌ವಾಲ್ ತಿಳಿಸಿದ್ದಾರೆ.

ವಿದೇಶಿ ಹೂಡಿಕೆದಾರರು, ಭಾರತದ ಮಾರುಕಟ್ಟೆಗಳಿಂದ ಹಣವನ್ನು ಹಿಂದಕ್ಕೆ ಪಡೆದು, ಒಂದಿಷ್ಟು ಹಣವನ್ನು ಚೀನಾ ಮತ್ತು ಇತರ ದೇಶಗಳಲ್ಲಿ ಹೂಡಿಕೆ ಮಾಡುತ್ತಿರಬಹುದು ಎಂದು ಜೆರೊದಾ ಕಂಪನಿಯ ಸಹ–ಸಂಸ್ಥಾಪಕ ನಿಖಿಲ್ ಕಾಮತ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಸುದ್ದಿ 2 ನಿಮಿಷ

ಲಾಭಗಳಿಕೆ ಒತ್ತಡ: ಷೇರುಪೇಟೆ ಸೂಚ್ಯಂಕ ಇಳಿಕೆ

ಮುಂಬೈ (ಪಿಟಿಐ): ಬ್ಯಾಂಕಿಂಗ್ ಮತ್ತು ಐ.ಟಿ. ವಲಯದ ಷೇರುಗಳು ಲಾಭಗಳಿಕೆಯ ಒತ್ತಡಕ್ಕೆ ಒಳಗಾಗಿದ್ದರಿಂದ ದೇಶದ ಷೇರುಪೇಟೆಗಳಲ್ಲಿ ಸತತ ಎರಡನೇ ದಿನವೂ ವಹಿವಾಟು ಇಳಿಕೆ ಕಂಡಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 566 ಅಂಶ ಇಳಿಕೆಯಾಗಿ 59,610 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 150 ಅಂಶ ಇಳಿಕೆ ಕಂಡು 17,807 ಅಂಶಗಳಲ್ಲಿ ವಹಿವಾಟು ಅಂತ್ಯಗೊಳಿಸಿತು.

ಅತ್ಯಂತ ತ್ವರಿತವಾಗಿ ಬಡ್ಡಿದರ ಹೆಚ್ಚಳ ಮಾಡುವ ಮಾತುಗಳನ್ನು ಅಮೆರಿಕದ



ಕೇಂದ್ರೀಯ ಬ್ಯಾಂಕ್ ಫೆಡರಲ್ ರಿಸರ್ವ್ ಗವರ್ನರ್ ಲೇಲ್ ಬ್ರೈನ್ನಾರ್ಡ್ ಅವರು ಆಡಿದ್ದಾರೆ. ಇದರ ಜೊತೆಗೆ ಅಮೆರಿಕವು ರಷ್ಯಾದ ಮೇಲೆ ಇನ್ನಷ್ಟು ನಿರ್ಬಂಧಗಳನ್ನು ಹೇರುವ ಸಾಧ್ಯತೆಯು ಹೂಡಿಕೆದಾರರ ಮೇಲೆ ಪರಿಣಾಮ ಬೀರಿತು ಎಂದು ರೆಲಿಗೇರ್ ಬ್ರೋಕಿಂಗ್ ಲಿಮಿಟೆಡ್‌ನ ಉಪಾಧ್ಯಕ್ಷ ಅಜಿತ್ ಮಿಶ್ರಾ ಹೇಳಿದ್ದಾರೆ.

ರೂಪಾಯಿ ಮೌಲ್ಯ ಇಳಿಕೆ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 55 ಪೈಸೆ ಇಳಿಕೆ ಆಗಿ ಒಂದು ಡಾಲರ್‌ಗೆ ₹ 75.84ರಂತೆ ವಿನಿಮಯಗೊಂಡಿತು. ಒಂದು ತಿಂಗಳಿನಲ್ಲಿ ದಿನದ ವಹಿವಾಟಿನಲ್ಲಿ ಅತ್ಯಂತ ಗರಿಷ್ಠ ಮಟ್ಟದ ಇಳಿಕೆ ಇದಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 0.93ರಷ್ಟು ಹೆಚ್ಚಾಗಿ ಒಂದು ಬ್ಯಾರಲ್‌ಗೆ 107.6 ಡಾಲರ್‌ಗಳಿಗೆ ತಲುಪಿದೆ.

'ಮಾರುಕಟ್ಟೆಯ ಅಸ್ಥಿರತೆಯಿಂದ ಪೇಟಿಎಂ ಷೇರು ಮೌಲ್ಯ ಇಳಿಕೆ'

ನವದೆಹಲಿ (ಪಿಟಿಐ): ಪೇಟಿಎಂ ಷೇರುಗಳ ಮೌಲ್ಯ ಇಳಿಕೆ ಕಾಣಲು ಮಾರುಕಟ್ಟೆಯಲ್ಲಿನ ಅಸ್ಥಿರ ಸ್ಥಿತಿಯೇ ಕಾರಣ ಎಂದು ಸಿಇಒ ವಿಜಯ್ ಶೇಖರ ಶರ್ಮ ಬುಧವಾರ ಹೇಳಿದ್ದಾರೆ.

ಮುಂದಿನ ಒಂದೂವರೆಗೆ ವರ್ಷದಲ್ಲಿ ಕಂಪನಿಯ ತೆರಿಗೆ, ಬಡ್ಡಿ, ಸಾಲ ತೀರುವಳಿ (ಇಬಿಐಟಿಡಿಎ) ನಂತರದ ಆದಾಯವು ವೆಚ್ಚಕ್ಕೆ ಸರಿಸಮ ಆಗಲಿದೆ ಎಂದು ಅವರು ಅಂದಾಜು ಮಾಡಿದ್ದಾರೆ.

ಬಹುತೇಕ ವಿಶ್ಲೇಷಕರ ಅಂದಾಜನ್ನು ಮೀರಿ, ಮುಂದಿನ ಆರು ತ್ರೈಮಾಸಿಕಗಳಲ್ಲಿ ಈ ಹಂತ ತಲುಪಲಾಗುವುದು. ಬೆಳವಣಿಗೆಗೆ ಸಂಬಂಧಿಸಿದ ಯೋಜನೆಗಳಲ್ಲಿ ಯಾವುದೇ ಹೊಂದಾಣಿಕೆ ಮಾಡಿಕೊಳ್ಳದೇ ಇದನ್ನು ಸಾಧಿಸಲಾಗುವುದು ಎಂದು ಹೇಳಿದ್ದಾರೆ.

ಯಶಸ್ವಿ, ಲಾಭದಾಯಕ ಕಂಪನಿಯನ್ನು ನಿರ್ಮಿಸಲು ಮತ್ತು ಷೇರುದಾರರಿಗೆ ದೀರ್ಘಾವಧಿಯಲ್ಲಿ ಸಂಪತ್ತು ತಂದುಕೊಡಲು ಪೇಟಿಎಂನ ಇಡೀ ತಂಡವು ಬದ್ಧವಾಗಿದೆ ಎಂದು ಅವರು ಹೇಳಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಮಾರುತಿ ಕಾರು ಬೆಲೆ ಏರಿಕೆ

ನವದೆಹಲಿ (ಪಿಟಿಐ): ಎಲ್ಲ ಮಾದರಿಯ ಕಾರುಗಳ ಬೆಲೆಯನ್ನು ಹೆಚ್ಚಳ ಮಾಡುತ್ತಿರುವುದಾಗಿ ಮಾರುತಿ ಸುಜುಕಿ ಇಂಡಿಯಾ ಲಿಮಿಟೆಡ್ ಬುಧವಾರ ತಿಳಿಸಿದೆ. ತಯಾರಿಕಾ ವೆಚ್ಚ ಜಾಸ್ತಿ ಆಗಿರುವ ಕಾರಣ ಕಾರಿನ ಬೆಲೆ ಹೆಚ್ಚಿಸುತ್ತಿರುವುದಾಗಿ ಅದು ಹೇಳಿದೆ.

ಈ ತಿಂಗಳಲ್ಲಿಯೇ ಕಾರುಗಳ ಬೆಲೆ ಹೆಚ್ಚಾಗಲಿದ್ದು, ಮಾದರಿಯಿಂದ ಮಾದರಿಗೆ ಬೆಲೆ ಹೆಚ್ಚಳದಲ್ಲಿ ವ್ಯತ್ಯಾಸ ಇರಲಿದೆ.

2021ರ ಜನವರಿಯಿಂದ 2022ರ ಮಾರ್ಚ್‌ವರೆಗಿನ ಅವಧಿಯಲ್ಲಿ ಕಂಪನಿಯು ಕಾರುಗಳ ಬೆಲೆಯನ್ನು ಶೇಕಡ 8.8ರಷ್ಟು ಹೆಚ್ಚಿಸಿದೆ.

ಇಕೊ ಮಾದರಿಯ ರಿಮ್ ಗಾತ್ರ ಅಚ್ಚು ಹಾಕುವಲ್ಲಿ ಲೋಪ

ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಕಂಪನಿಯು ಇಕೊ ಮಾದರಿಯ 19,731 ವ್ಯಾನ್‌ಗಳನ್ನು ಹಿಂದಕ್ಕೆ ಪಡೆದು, ತಪ್ಪಾಗಿ ಅಚ್ಚುಹಾಕಿರುವ ಚಕ್ರದ ರಿಮ್ ಗಾತ್ರವನ್ನು ಸರಿಪಡಿಸಲಿದೆ.

2021ರ ಜುಲೈ 19ರಿಂದ ಅಕ್ಟೋಬರ್ 5ರ ನಡುವೆ ತಯಾರಾದ ಇಕೊ ವ್ಯಾನ್‌ಗಳಲ್ಲಿ ರಿಮ್ ಗಾತ್ರವನ್ನು ತಪ್ಪಾಗಿ ಅಚ್ಚು ಹಾಕಲಾಗಿದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಗ್ರಾಹಕರಿಗೆ ಮಾರುತಿ ಸುಜುಕಿ ಅಧಿಕೃತ ವರ್ಕ್‌ಶಾಪ್ ಕಡೆಯಿಂದ ಮಾಹಿತಿ ರವಾನೆ ಆಗಲಿದೆ. ಗ್ರಾಹಕರು ಕಂಪನಿಯ ವೆಬ್‌ಸೈಟ್‌ಗೆ ಭೇಟಿ ನೀಡಿ, ತಮ್ಮ ವಾಹನದ ಚಾಸಿ ಸಂಖ್ಯೆ ನಮೂದಿಸಿ, ಲೋಪ ಇರುವ ವಾಹನಗಳಲ್ಲಿ ಅದೂ ಸೇರಿದೆಯೇ ಎಂಬುದನ್ನು ಪರಿಶೀಲಿಸಬಹುದು ಎಂದು ಕಂಪನಿ ಹೇಳಿದೆ.

'ಕೂ'ನಲ್ಲಿ ಸ್ವಯಂ ದೃಢೀಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಕ್ರೊ ಬ್ಲಾಗಿಂಗ್ ವೇದಿಕೆ ಆಗಿರುವ 'ಕೂ', ಪ್ರೊಫೈಲ್ ಅನ್ನು ಸ್ವಯಂ ದೃಢೀಕರಿಸುವ ವೈಶಿಷ್ಟ್ಯಕ್ಕೆ ಚಾಲನೆ ನೀಡಿದೆ.

ಬಳಕೆದಾರರು ಸರ್ಕಾರ ಅನುಮೋದಿಸಿರುವ ಯಾವುದೇ ಗುರುತಿನ ಚೀಟಿಯ ಮೂಲಕ ಸ್ವಯಂ ದೃಢೀಕರಣ ಮಾಡಬಹುದು. ಗುರುತಿನ ಸಂಖ್ಯೆ ನೀಡಿದ ಬಳಿಕ ಬರುವ 'ಒಟಿಪಿ'ಯನ್ನು ನಮೂದಿಸಿ ಪ್ರಕ್ರಿಯೆ ಪೂರ್ಣಗೊಳಿಸಬೇಕು. ಇದನ್ನು ಖಾತರಿಪಡಿಸಲು ಪ್ರೊಫೈಲ್‌ನಲ್ಲಿ ಹೆಸರಿನ ಮುಂದೆ ಹಸಿರು ಟಿಕ್ ಮಾರ್ಕ್ ಕಾಣಿಸುತ್ತದೆ.

ಸಾಮಾಜಿಕ ಮಾಧ್ಯಮದಲ್ಲಿ ನಂಬಿಕೆ ಮತ್ತು ಸುರಕ್ಷತೆಯನ್ನು ಉತ್ತೇಜಿಸುವಲ್ಲಿ 'ಕೂ' ಮುಂಚೂಣಿಯಲ್ಲಿದೆ. ಸ್ವಯಂ ದೃಢೀಕರಣ ವ್ಯವಸ್ಥೆಯನ್ನು ಪ್ರಾರಂಭಿಸಿದ ವಿಶ್ವದ ಮೊದಲ ಸಾಮಾಜಿಕ ಮಾಧ್ಯಮ ವೇದಿಕೆ ಇದಾಗಿದೆ. ವೇದಿಕೆಯಲ್ಲಿ ಜವಾಬ್ದಾರಿಯುತ ನಡವಳಿಕೆಯನ್ನು ಉತ್ತೇಜಿಸುವಲ್ಲಿ ಇದು ಮಹತ್ವದ ಹೆಜ್ಜೆ ಎಂದು 'ಕೂ' ಸಹ ಸ್ಥಾಪಕ ಅಪ್ರಮೇಯ ರಾಧಾಕೃಷ್ಣ ತಿಳಿಸಿದರು.

ದೃಢೀಕರಣ ಪ್ರಕ್ರಿಯೆಯನ್ನು ಸರ್ಕಾರದಿಂದ ಒಪ್ಪಿಗೆ ಪಡೆದಿರುವ ಥರ್ಡ್ ಪಾರ್ಟಿ ಸೇವೆಗಳನ್ನು ನೀಡುವವರು ನಿರ್ವಹಿಸುತ್ತಾರೆ. ಬಳಕೆದಾರರ ಯಾವುದೇ ಮಾಹಿತಿಯನ್ನು ಕಂಪನಿ ಸಂಗ್ರಹಿಸುವುದಿಲ್ಲ ಎಂದರು.

ಮಾಹಿತಿ ತಂತ್ರಜ್ಞಾನ (ಮಧ್ಯವರ್ತಿ ಮಾರ್ಗಸೂಚಿಗಳು ಮತ್ತು ಡಿಜಿಟಲ್ ಮಾಧ್ಯಮ ನೀತಿ ಸಂಹಿತೆ) ನಿಯಮ 2021ರ ಸೆಕ್ಷನ್ 4(7)ಕ್ಕೆ ಅನುಗುಣವಾಗಿ ಈ ವೈಶಿಷ್ಟ್ಯವನ್ನು ಚಾಲ್ತಿಗೆ ತರಲಾಗಿದೆ ಎಂದು ಕಂಪನಿ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

6-4-2022

ಜಾವಾ 70/80(ಹೊಸ)	10550-10600
ಜಾವಾ 80/90(ಹೊಸ)	10250-10300
ದಪ್ಪ ಮಧ್ಯಪ್ರದೇಶ(ಹೊಸ)	11100-11200
ದಪ್ಪ ಗುಜರಾತ್(ಹೊಸ)	10000-10100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1620 (1620)
ಒಂದು ವಾರದ ಡೆಲಿವರಿ	1615 (1615)
ಸೋಯಾ ಕಚ್ಚಾ	1450 (1440)
ಪಾಮ್ ವಾರದ ಡೆಲಿವರಿ	1458 (1455)
ಸೂರ್ಯಕಾಂತಿ ಎಣ್ಣೆ ಕಚ್ಚಾ	1600 (1625)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,400 (51,350)
ಬೆಳ್ಳಿ ಕೆ.ಜಿ 66,000 (66,550)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	530
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಕಾರ್ಕಳ	
ಹೊಸತು	41000-53000
ಹಳತು	41000-53000
ಪುತ್ತೂರು	
ಕೋಕ	11000-26000
ಹೊಸತು	27500-45000
ಕುಮಟ	
ಚಿಪ್ಪು	24019-29999
ಕೋಕ	17089-27009
ಫ್ಯಾಕ್ಟರಿ	13019-20569
ಹಳೆಚಾಲಿ	48509-49899
ಹೊಸಚಾಲಿ	43500-44500
ಶಿರಸಿ	
ಬೆಟ್ಟೆ	38299-42818
ಬಿಳಿಗೋಟು	20199-32014
ಚಾಲಿ	37518-40599
ರಾಶಿ	44079-46599
ಶಿವಮೊಗ್ಗ	
ಗೊರಬಲು	17109-34555
ರಾಶಿ	44009-47799
ಸರಕು	63299-76510
ಸಿದ್ದಾಪುರ	
ಬಿಳಿಗೋಟು	23899-31099
ಕೋಕ	21299-33391
ಹೊಸಚಾಲಿ	34599-40599
ಕೆಂಪುಗೋಟು	24289-33699
ರಾಶಿ	43599-47599
ತಟ್ಟಿಬೆಟ್ಟೆ	35880-46559
ಶಿರಸಿ	
ಬೆಟ್ಟೆ	37401-45309
ಬಿಳಿಗೋಟು	21169-33076
ಚಾಲಿ	32899-41099
ರಾಶಿ	26896-47839
ಯಲ್ಲಾಪುರ	
ಬಿಳಿಗೋಟು	26212-32611
ಚಾಲಿ	36399-40801
ಕೋಕ	18899-30412
ಕೆಂಪುಗೋಟು	32199-36969
ರಾಶಿ	46200-51299
ತಟ್ಟಿಬೆಟ್ಟೆ	38499-44770
ಎನ್.ಆರ್.ಪುರ ರಬ್ಬರ್	
ಆರ್‌ಎಸ್‌ಎಸ್4	171
ಆರ್‌ಎಸ್‌ಎಸ್5	165
ಗುಡ್ ಲಾಟ್	161
ರಾಮನಗರ ರೇಷ್ಮೆಗೂಡು	
ಮಿಶ್ರತಳಿ	400-733
ದ್ವಿತಳಿ	100-806

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15900	15850	15950	231.30 ಸೆಂಟ್ಸ್
ಎಸಿ	8260	8000	8450	
ಆರ್‌ಪಿ	9000	9000	9125	ಲಂಡನ್
ಆರ್‌ಸಿ	4200	4000	4125	2117 ಡಾಲರ್ಸ್

ರಷ್ಯಾದಿಂದ 20 ಲಕ್ಷ ಬ್ಯಾರೆಲ್ ತೈಲ ಖರೀದಿಸಿದ ಬಿಪಿಸಿಎಲ್

ನವದೆಹಲಿ (ರಾಯಿಟರ್ಸ್): ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್) 20 ಲಕ್ಷ ಯೂರಲ್ಸ್ ಕಚ್ಚಾ ತೈಲವನ್ನು ರಷ್ಯಾದಿಂದ ಖರೀದಿಸಿದೆ. ಇದು ಮೇ ತಿಂಗಳಲ್ಲಿ ಸಾಗಣೆ ಆಗಲಿದೆ ಎಂದು ಮೂಲಗಳು ಹೇಳಿವೆ.

ರಷ್ಯಾ ಸೇನೆಯು ಉಕ್ರೇನ್ ಮೇಲೆ ದಾಳಿ ನಡೆಸಿದ ನಂತರದಲ್ಲಿ ಭಾರತದ ತೈಲ ಸಂಸ್ಕರಣಾ ಕಂಪನಿಗಳು ರಷ್ಯಾದಿಂದ ರಿಯಾಯಿತಿ ದರದಲ್ಲಿ ಕಚ್ಚಾ ತೈಲ ಖರೀದಿಸುತ್ತಿವೆ. ಪಶ್ಚಿಮದ ಹಲವು ದೇಶಗಳು ರಷ್ಯಾದಿಂದ ತೈಲ ಖರೀದಿ ನಿಲ್ಲಿಸಿವೆ.

ಬಿಪಿಸಿಎಲ್ ಕಂಪನಿಯು ರಷ್ಯಾದ ಯೂರಲ್ಸ್ ಕಚ್ಚಾ ತೈಲದ ಕಾಯಂ ಗ್ರಾಹಕ. ಈಗಿನ ಖರೀದಿಯನ್ನೂ ಪರಿಗಣಿಸಿದರೆ, ಭಾರತವು ಫೆಬ್ರುವರಿ 24ರ ನಂತರ ರಷ್ಯಾದಿಂದ ಒಟ್ಟು 1.60 ಕೋಟಿ ಬ್ಯಾರೆಲ್ ತೈಲ ಖರೀದಿಸಿದಂತಾಗಿದೆ.

ರಷ್ಯಾ ಜೊತೆಗಿನ ಆರ್ಥಿಕ ವ್ಯವಹಾರಗಳನ್ನು ಸ್ಥಿರವಾಗಿಸಲು ಸರ್ಕಾರ ಯತ್ನಿಸುತ್ತಿದೆ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಬುಧವಾರ ಹೇಳಿದ್ದಾರೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, 'ರಿಯಾಯಿತಿ ದರದಲ್ಲಿ ದೊರೆತರೆ ರಷ್ಯಾದಿಂದ ಕಚ್ಚಾ ತೈಲ ಖರೀದಿಸಲಾಗುತ್ತದೆ' ಎಂದು ಈಚೆಗೆ ಹೇಳಿದ್ದರು.

ಸೌದಿಯಿಂದ ಖರೀದಿ ಇಳಿಕೆ?

ನವದೆಹಲಿ (ರಾಯಿಟರ್ಸ್): ದೇಶದ ಎರಡು ತೈಲ ಸಂಸ್ಕರಣಾ ಕಂಪನಿಗಳು ಮೇ ತಿಂಗಳಲ್ಲಿ ಸೌದಿ ಅರೇಬಿಯಾದಿಂದ ಕಡಿಮೆ ಪ್ರಮಾಣದಲ್ಲಿ ಕಚ್ಚಾ ತೈಲ ಖರೀದಿಸುವ ಆಲೋಚನೆಯಲ್ಲಿವೆ ಎಂದು ಮೂಲಗಳು ತಿಳಿಸಿವೆ.

ಸೌದಿ ಆರಾಮ್ಕೊ ಕಂಪನಿಯು ಮೇ ತಿಂಗಳಲ್ಲಿ ಏಷ್ಯಾಕ್ಕೆ ಪೂರೈಕೆ ಆಗುವ ಕಚ್ಚಾ ತೈಲದ ಬೆಲೆಯನ್ನು ಗರಿಷ್ಠ ಮಟ್ಟಕ್ಕೆ ಏರಿಸಿದ ನಂತರದಲ್ಲಿ ಈ ಬೆಳವಣಿಗೆ ನಡೆದಿದೆ. ಭಾರತವು ರಷ್ಯಾದಿಂದ ರಿಯಾಯಿತಿ ದರದಲ್ಲಿ ಕಚ್ಚಾ ತೈಲ ಖರೀದಿಸುವುದನ್ನು ಹೆಚ್ಚಿಸಿದೆ.

ಭಾರತಕ್ಕೆ ಕಚ್ಚಾ ತೈಲ ಪೂರೈಸುವ ದೇಶಗಳ ಸಾಲಿನಲ್ಲಿ ಸೌದಿ ಅರೇಬಿಯಾ ಮತ್ತು ಇರಾಕ್ ಮೊದಲ ಎರಡು ಸ್ಥಾನಗಳಲ್ಲಿವೆ.

ತೈಲ ಸಂಸ್ಕರಣಾ ಕಂಪನಿಗಳು ಖರೀದಿ ಪ್ರಮಾಣವನ್ನು ಅಲ್ಪ ಮಟ್ಟದಲ್ಲಿ ಮಾತ್ರ ತಗ್ಗಿಸಲಿವೆ. ಏಕೆಂದರೆ, ವಾರ್ಷಿಕ ಗುತ್ತಿಗೆಯಲ್ಲಿ ನಮೂದಿಸಿದಷ್ಟು ಮೌಲ್ಯದ ತೈಲವನ್ನು ಕಂಪನಿಗಳು ಖರೀದಿಸಲೇಬೇಕು ಎಂದು ಮೂಲಗಳು ವಿವರಿಸಿವೆ.

ಪೆಟ್ರೋಲ್, ಡೀಸೆಲ್ ದರ ಏರಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಬುಧವಾರ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಲೀಟರಿಗೆ ತಲಾ 80 ಪೈಸೆ ಹೆಚ್ಚಿಸಿವೆ.

ಈ ಹೆಚ್ಚಳದಿಂದಾಗಿ ದೆಹಲಿಯಲ್ಲಿ ಪೆಟ್ರೋಲ್ ಬೆಲೆಯು ₹ 105.41ಕ್ಕೆ, ಡೀಸೆಲ್ ಬೆಲೆಯು ₹ 96.67ಕ್ಕೆ ತಲುಪಿದೆ.

ಎಚ್‌ಪಿಸಿಎಲ್ ಜಾಲತಾಣದಲ್ಲಿ ಇರುವ ಮಾಹಿತಿಯ ಪ್ರಕಾರ ಬೆಂಗಳೂರಿನಲ್ಲಿ ಪೆಟ್ರೋಲ್ ದರ ಲೀಟರಿಗೆ ₹ 111.07 ಮತ್ತು ಡೀಸೆಲ್ ದರ ಲೀಟರಿಗೆ ₹ 94.78ಕ್ಕೆ ಏರಿಕೆ ಆಗಿದೆ. ಮಾರ್ಚ್ 22ರಿಂದ ಏಪ್ರಿಲ್ 6ರವರೆಗೆ ಬೆಂಗಳೂರಿನಲ್ಲಿ ಪೆಟ್ರೋಲ್ ದರ ಲೀಟರಿಗೆ ₹ 10.49 ಮತ್ತು ಡೀಸೆಲ್ ದರ ಲೀಟರಿಗೆ ₹ 9.77ರಷ್ಟು ಹೆಚ್ಚಳ ಆದಂತಾಗಿದೆ.

ಮಾರ್ಚ್‌ನಲ್ಲಿ ಸೇವಾ ಚಟುವಟಿಕೆ ಸುಧಾರಣೆ

ನವದೆಹಲಿ (ಪಿಟಿಐ): ದೇಶದ ಸೇವಾ ವಲಯದ ಚಟುವಟಿಕೆಗಳು ಮಾರ್ಚ್‌ನಲ್ಲಿ ಸುಧಾರಣೆ ಕಂಡಿದೆ. ಎಸ್‌ಆ್ಯಂಡ್‌ಪಿ ಗ್ಲೋಬಲ್ ಇಂಡಿಯಾ ಸರ್ವಿಸಸ್ ಪಿಎಂಐ ಸೂಚ್ಯಂಕವು ಮಾರ್ಚ್‌ನಲ್ಲಿ 53.6ಕ್ಕೆ ಏರಿಕೆ ಆಗಿದೆ. ಇದು ಫೆಬ್ರುವರಿಯಲ್ಲಿ 51.8ರಷ್ಟು ಇತ್ತು.

ಇದರಿಂದಾಗಿ ಸೇವಾ ವಲಯ ಸತತ ಎಂಟು ತಿಂಗಳಿಂದ ಬೆಳವಣಿಗೆಯ ಹಾದಿಯಲ್ಲಿ ಇದ್ದಂತೆ ಆಗಿದೆ. 'ರಷ್ಯಾ–ಉಕ್ರೇನ್ ಸಮರವು ಪೂರೈಕೆ ವ್ಯವಸ್ಥೆ, ಹಣದುಬ್ಬರದ ಸಮಸ್ಯೆಗಳನ್ನು ಹೆಚ್ಚಿಸಿತು. ಆದರೆ, ಇದು ಮಾರ್ಚ್‌ನಲ್ಲಿ ಸೇವಾ ವಲಯದ ಚೇತರಿಕೆಗೆ ಅಡ್ಡಿಯಾಗಿ ಪರಿಣಮಿಸಲಿಲ್ಲ' ಎಂದು ಎಸ್‌ಆ್ಯಂಡ್‌ಪಿ ಗ್ಲೋಬಲ್ ಸಂಸ್ಥೆಯ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನಾ ಡಿ ಲಿಮಾ ಹೇಳಿದ್ದಾರೆ.

ಕಂಪನಿಗಳು ತಮ್ಮ ಸೇವೆಗಳ ಮಾರಾಟದಲ್ಲಿ ಈ ವರ್ಷದ ಮಾರ್ಚ್‌ನಲ್ಲಿ ತ್ವರಿತಗತಿಯ ಬೆಳವಣಿಗೆಯನ್ನು ದಾಖಲಿಸಿವೆ. ಆದರೆ, ಹಣದುಬ್ಬರ ಹೆಚ್ಚಳ ಆಗುತ್ತಿರುವ ಕಾರಣ ವಾಣಿಜ್ಯ ವಹಿವಾಟು ನಡೆಸುವ ವಿಶ್ವಾಸದ ಮಟ್ಟವು ಕಡಿಮೆ ಇದೆ.

ದೇಶದ ಸೇವಾ ವಲಯ ಹಾಗೂ ತಯಾರಿಕಾ ವಲಯದ ಚಟುವಟಿಕೆಗಳನ್ನು ಒಟ್ಟಾಗಿ ಹೇಳುವ ಎಸ್‌ಆ್ಯಂಡ್‌ಪಿ ಗ್ಲೋಬಲ್ ಇಂಡಿಯಾ ಕಾಂಪೊಸಿಟ್ ಪಿಎಂಐ ಔಟ್‌ಪುಟ್ ಸೂಚ್ಯಂಕವು ಮಾರ್ಚ್‌ನಲ್ಲಿ 54.3ಕ್ಕೆ ತಲುಪಿದೆ. ಇದು ಫೆಬ್ರುವರಿಯಲ್ಲಿ 53.5ರಷ್ಟು ಇತ್ತು. ಸೂಚ್ಯಂಕವು 50ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇದ್ದರೆ ಅದನ್ನು ಬೆಳವಣಿಗೆ ಎಂದು ಪರಿಗಣಿಸಲಾಗುತ್ತದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Cook

ಹೋಟೆಲಿಗೆ ಸಸ್ಯಾಹಾರ, ಮಾಂಸಾಹಾರ ಅಡುಗೆ ಮಾಡುವವರು ಬೇಕಾಗಿದ್ದಾರೆ ಸಂಬಳ 20000/ to 25000K Contact: 9606701007/ 8892501007

ಡೆಲಿವರಿ_ಬಾಯ್ಸ್_ಬೇಕಾಗಿದ್ದಾರೆ ಫರ್ನಿಚರ್ ಗೋಡೌನ್ ನಲ್ಲಿ ಕೆಲಸಕ್ಕೆ. ಕೆಲಸದ ಸಮಯ ಸೋಮವಾರದಿಂದ ಶನಿವಾರ ಬೆಳಗ್ಗೆ 10 ರಿಂದ ಸಂಜೆ 6.30. ಆಧಾರ್ ಕಾರ್ಡ್ ಮತ್ತು ಫೋಟೋವಿನೊಂದಿಗೆ ಖುದ್ದಾಗಿ ವಾರದ ದಿನದಂದು ಭೇಟಿ ನೀಡಿ ಪ್ಯಾನ್ ಆಫೀಸ್ ಸಿಸ್ಟಮ್ಸ್ ಪ್ರೈ. ಲಿ., ನಂ. 5, 1ನೇ ಎ ಕ್ರಾಸ್, ಬಿಸ್ಮಿಲ್ಲಾ ನಗರ, ಬನ್ನೇರುಘಟ್ಟ ರೋಡ್ ಕ್ರಾಸ್, ಬೆಂಗಳೂರು 560029 ಫೋನ್: 9341221125

ಕನ್ನಡ ಮತ್ತು ಇಂಗ್ಲೀಷ್ ಓದಲು, ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೇ ಕುಳಿತು, ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

General

✓ TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

✓ ಕಂಪನಿಗಳಿಗೆ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC,PUC, Degree ಯವರು ITI ನವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,100-56,000/- ವಸತಿಯೂಟದೊಂದಿಗೆ. 7899778278, 9611715755

✓ ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC, Degree ಸಂಬಳ15000 to 28000 ಸಂಪರ್ಕಿಸಿರಿ 9980814578, 9980812378

✓ ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ ಹಾಗೂ ಆಫೀಸ್ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ OT. 17,800-68,000/-. 9538811223, 9538811104.

Part-Time Jobs

ಮನೆಯಿಂದಲೆ ಅಣಬೆ ಬೇಸಾಯ, ಕಡಿಮೆ ಜಾಗ ಹಾಗೂ ಕಡಿಮೆ ಖರ್ಚಿನಲ್ಲಿಯೇ ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ. 8431781442/ 8095555516

ಭವಿಷ್ಯ

Astrology

ಸೂರ್ಯರಶ್ಮಿ ಚಿಕಿತ್ಸೆ ಯಶಸ್ವಿ ಜೀವನಕ್ಕೆ, ಉದ್ಯೋಗ, ವ್ಯವಹಾರ, ವ್ಯಾಪಾರಕ್ಕೆ, ಉತ್ತಮ ಮೈತ್ರಿಭಾವಕ್ಕೆ, ವಿದ್ಯಾರ್ಥಿಗಳಲ್ಲಿ ನಿಪುಣತೆಗೆ ಭಾವಚಿತ್ರದ ಮುಲಕ ಚಿಕಿತ್ಸೆ. ವರದರಾಜ್ ಪೈ 9482603396/ 9591773396

ನಂ.1 ವಶೀಕರಣ ಸ್ಪೆಷಲಿಸ್ಟ್ ತಾಂತ್ರಿಕ್: ಸ್ತ್ರೀಪುರುಷ ವಶೀಕರಣ, ಪ್ರೀತಿಯಲ್ಲಿ ನಂಬಿಮೋಸ, ಗಂಡಹೆಂಡತಿ ಕಲಹ, ನಾಗಸಾಧುಗಳಿಂದ ವಶೀಕರಣ 3ದಿನಗಳಲ್ಲಿ ಪರಿಹಾರ 6360611244

ಸ್ತ್ರೀ-ಪುರುಷ ವಶೀಕರಣ ಇಷ್ಟಪಟ್ಟವರು ನಿಮ್ಮಂತಾಗಲು ನಿಮ್ಮ ಯಾವುದೇ ಕಠಿಣ ಸಮಸ್ಯೆಗಳಿಗೆ ಕಡಿಮೆ ಖರ್ಚಿನಲ್ಲಿ ಒಂದು ದಿನದಲ್ಲಿ ಕೇರಳದಿಂದ ನೇರ ಪರಿಹಾರ.9148890039

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಪ್ರವಾಸ

Travel

7 ದಿನಗಳ ಪ್ರವಾಸಗಳು 11.05.2022 ಕಾಶಿ,ಗಯಾ,ಅಯೋಧ್ಯ 27.04.2022, 18.05.2022 26.05.2022 ಶಿಮ್ಲಾ,ಮನಾಲಿ 19.05.2022 15.06.2022 ಗ್ಯಾಂಗ್‌ಟಾಕ್ ಡಾರ್ಜಲಿಂಗ್ 19.05.2022 31.05.2022 ನೇಪಾಳ ಪ್ರವಾಸಗಳು. 21.04.2022 05.05.2022 19.05.2022 ಧರ್ಮಸ್ಥಳ ಹೊರನಾಡು 4 ದಿನಗಳು. 19.05.2022 ರಾಮೇಶ್ವರ ಕುಂಭಕೋಣಂ 6 ದಿನಗಳು. ಜೈನ್ ಟ್ರಾವಲ್ಸ್ ಬೆಂಗಳೂರು 9448402248 7022547922

★13.5.2022 ರಿಂದ★ 16ದಿನಗಳ ಯಾತ್ರೆ ಭುವನೇಶ್ವರ, ಕಾಶಿ, ಗಯಾ, ಅಲಹಾಬಾದ್, ಅಯೋಧ್ಯೆ, ಅಮೃತಸರ, ವೈಷ್ಣೋದೇವಿ. ಜೈ ಕರ್ನಾಟಕ ಟೂರ್ಸ್: 9480588568

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್. 02/04/22 ದೆಹಲಿ, ವೈಷ್ಣೋದೇವಿ. 14/04/22 ರಾಮೇಶ್ವರಂ, ಕನ್ಯಾಕುಮಾರಿ. 26/05/22 ಕಾಶಿ ವಿಶ್ವನಾಥ, ಜಾರ್ಖಂಡ್ ವೈದ್ಯನಾಥ, ಗಯ. 9964527782

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB LOST REAL ESTATE NAME CHANGE EDU HEALTH
MATRI AUTO ASTRO NOTICE TRAVEL
condition apply*
WWW.DHCLASSIFIEDS.COM
For more information Contact:
9880856233 | 9731810277 | 9901641752 | 9845114560 | 9886213331
Email: dhclassifieds@deccanherald.co.in

ಥಾಯ್ಲೆಂಡ್ ಓಪನ್ ಬಾಕ್ಸಿಂಗ್ ಟೂರ್ನಿ: ಮೋನಿಕಾ ಜಯಭೇರಿ

ಫೈನಲ್‌ಗೆ ಆಶಿಶ್, ಗೋವಿಂದ್

ನವದೆಹಲಿ: ಭಾರತದ ಆಶಿಶ್ ಕುಮಾರ್, ಗೋವಿಂದ್ ಸಹಾನಿ, ವರಿಂದರ್ ಸಿಂಗ್ ಮತ್ತು ಮೋನಿಕಾ ಅವರು ಥಾಯ್ಲೆಂಡ್ ಓಪನ್ ಅಂತರರಾಷ್ಟ್ರೀಯ ಬಾಕ್ಸಿಂಗ್ ಟೂರ್ನಿಯ ಫೈನಲ್ ತಲುಪಿದ್ದಾರೆ.

ಥಾಯ್ಲೆಂಡ್‌ನ ಫುಕೆಟ್‌ನಲ್ಲಿ ನಡೆಯುತ್ತಿರುವ ಸ್ಪರ್ಧೆಯ 81 ಕೆಜಿ ವಿಭಾಗದ ನಾಲ್ಕರ ಘಟ್ಟದ ಬೌಟ್‌ನಲ್ಲಿ ಆಶಿಶ್ 5–0ಯಿಂದ ಇಂಡೊನೇಷ್ಯಾದ ಮೈಕೆಲ್ ರಾಬರ್ಟ್ ಮುಸ್ಕಿಟಾ ಅವರನ್ನು ಪರಾಭವಗೊಳಿಸಿದರು. ಆಶಿಶ್ ಅವರು ಕಳೆದ ಆವೃತ್ತಿಯಲ್ಲಿ 75 ಕೆಜಿ ವಿಭಾಗದ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದರು.

48 ಕೆಜಿ ವಿಭಾಗದ ಸೆಮಿಫೈನಲ್‌ನಲ್ಲಿ ಗೋವಿಂದ್ ಬೆವರು ಹರಿಸಬೇಕಾಯಿತು. ವಿಯೆಟ್ನಾಂನ ಎನ್‌ಗುಯೆನ್ ಲಿನ್ ಫುಂಗ್ ಮತ್ತು ಭಾರತ ಬಾಕ್ಸರ್ ನಡುವಣ ಬೌಟ್‌ನಲ್ಲಿ ಬಿರುಸಿನ ಪಂಚ್‌ಗಳು ವಿನಿಮಯಗೊಂಡವು. ಆದರೆ ಒತ್ತಡ ಮೀರುವಲ್ಲಿ ಯಶಸ್ವಿಯಾದ ಗೋವಿಂದ್ 4–1ರಿಂದ ಜಯ ತಮ್ಮದಾಗಿಸಿಕೊಂಡರು.

ಎದುರಾಳಿಗೆ ಪಂಚ್ ಮಾಡಿದ ಆಶಿಶ್ ಕುಮಾರ್ (ಬಲ)– ಟ್ವಿಟರ್ ಚಿತ್ರ

60 ಕೆಜಿ ವಿಭಾಗದಲ್ಲಿ ವರಿಂದರ್ ಅವರಿಗೆ ಪ್ಯಾಲೆಸ್ಟೀನ್‌ನ ಅಬ್ದೆಲ್ ರೆಹಮಾನ್ ಅಬುನಾಬ್ ವಿರುದ್ಧ ವಾಕ್‌ಓವರ್ ಲಭಿಸಿತು.

ಮಹಿಳೆಯರ 48 ಕೆಜಿ ವಿಭಾಗದ ಸೆಮಿಫೈನಲ್ ಹಣಾಹಣಿಯಲ್ಲಿ 26 ವರ್ಷದ ಮೋನಿಕಾ ಅವರು ವಿಯೆಟ್ನಾಂನ ಟ್ರಾನ್ ಥಿ ಡಿಯೆಮ್ ಕಿವ್ ಅವರನ್ನು ಏಕಪಕ್ಷೀಯವಾಗಿ ಮಣಿಸಿದರು.


ಗೋವಿಂದ್ ಸಹಾನಿ– ಟ್ವಿಟರ್ ಚಿತ್ರ

75 ಕೆಜಿ ವಿಭಾಗದ ಸೆಣಸಾಟದಲ್ಲಿ ಥಾಯ್ಲೆಂಡ್‌ನ ಪಾರ್ನಿಪಾ ಚುಟಿ ಅವರನ್ನು 5–0ಯಿಂದ ಸೋಲಿಸಿದ ಭಾಗ್ಯವತಿ ಕಚಾರಿ ಕೂಡ ನಾಲ್ಕರ ಘಟ್ಟಕ್ಕೆ ಕಾಲಿಟ್ಟರು.

ಪುರುಷರ 52 ಕೆಜಿ ವಿಭಾಗದ ಕ್ವಾರ್ಟರ್‌ಫೈನಲ್ ಬೌಟ್‌ನಲ್ಲಿ ಅಮಿತ್ ಪಂಘಲ್ ಥಾಯ್ಲೆಂಡ್‌ನ ಥಾಂಕೊನ್ ಓನಾಯೆಮ್ ಅವರನ್ನು ಸೋಲಿಸಿದರು. ಆದರೆ ರೋಹಿತ್ ಮೋರ್ (57 ಕೆಜಿ ವಿಭಾಗ) ಥಾಯ್ಲೆಂಡ್‌ನ ರುಜಾಕ್ರನ್ ಜುಂಟ್‌ರಾಂಗ್ ಎದುರು ಎಡವಿದರು.

ಬಾತ್ರಾ ವಿರುದ್ಧ ಸಿಬಿಐ ತನಿಖೆ


ನರಿಂದರ್ ಬಾತ್ರಾ

ನವದೆಹಲಿ (ಪಿಟಿಐ): ಹಾಕಿ ಇಂಡಿಯಾ ಖಾತೆಗೆ ಸಂಬಂಧಿಸಿದ ₹ 35 ಲಕ್ಷ ಮೊತ್ತವನ್ನು ದುರ್ಬಳಕೆ ಮಾಡಿದ ಆರೋಪದ ಮೇಲೆ ಭಾರತ ಒಲಿಂಪಿಕ್ ಸಂಸ್ಥೆಯ ಅಧ್ಯಕ್ಷ ನರಿಂದರ್ ಬಾತ್ರಾ ವಿರುದ್ಧ ಸಿಬಿಐ ಪ್ರಾಥಮಿಕ ವಿಚಾರಣೆಯನ್ನು ದಾಖಲಿಸಿಕೊಂಡಿದೆ.

ಸಂಸ್ಥೆಯ ಮೊತ್ತವನ್ನು ಖಾಸಗಿ ಅಗತ್ಯಗಳಿಗೆ ಬಾತ್ರಾ ಬಳಸಿಕೊಂಡಿದ್ದಾರೆ. ಅವರು ತಪ್ಪಿತಸ್ಥರು ಎಂಬುದನ್ನು ಮೇಲ್ನೋಟಕ್ಕೆ ಖಚಿತಪಡಿಸಿಕೊಳ್ಳಲು ಪ್ರಾಥಮಿ ವಿಚಾರಣೆ ಅತ್ಯಗತ್ಯ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಈಚಿನ ಟೂರ್ನಿಗಳಲ್ಲಿ ಭಾರತ ಪುರುಷ ಹಾಕಿ ತಂಡ ನಿರೀಕ್ಷಿತ ಸಾಮರ್ಥ್ಯ ತೋರದೇ ಇರುವುದರ ಬಗ್ಗೆ ಬಾತ್ರಾ ಕಠಣ ಮಾತುಗಳಲ್ಲಿ ಪ್ರತಿಕ್ರಿಯಿಸಿದ್ದರು. ಹಾಕಿ ಇಂಡಿಯಾಗೆ ಈ ಕುರಿತು ಸ್ಪಷ್ಟ ಸಂದೇಶವನ್ನೂ ನೀಡಿದ್ದರು. ಈ ಹಿನ್ನೆಲೆಯಲ್ಲಿ ಅವರೊಂದಿಗೆ ಹಾಕಿ ಇಂಡಿಯಾದ ಹಗ್ಗ ಜಗ್ಗಾಟ ನಡೆದಿತ್ತು. ಅಸ್ಲಾಂ ಶೇರ್ ಖಾನ್ ಅವರಂಥ ಹಿರಿಯ ಆಟಗಾರರು ಅವರನ್ನು ತರಾಟೆಗೆ ತೆಗೆದುಕೊಂಡಿದ್ದರು.

ಕೊರಿಯಾ ಓಪನ್ ಬ್ಯಾಡ್ಮಿಂಟನ್: ಸಾತ್ವಿಕ್– ಚಿರಾಗ್‌ಗೆ ಜಯ

ಪ್ರೀಕ್ವಾರ್ಟರ್‌ಗೆ ಸಿಂಧು, ಶ್ರೀಕಾಂತ್

ಸಂಚಿಯೊನ್, ದಕ್ಷಿಣ ಕೊರಿಯಾ (ಪಿಟಿಐ): ಭಾರತದ ಪಿ.ವಿ.ಸಿಂಧು ಮತ್ತು ಕಿದಂಬಿ ಶ್ರೀಕಾಂತ್ ಅವರು ಕೊರಿಯಾ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಪ್ರೀಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ.

ಪಾಲ್ಮಾ ಕ್ರೀಡಾಂಗಣದಲ್ಲಿ ನಡೆದ ಮಹಿಳಾ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಹಣಾಹಣಿಯಲ್ಲಿ ಬುಧವಾರ ಸಿಂಧು 21-15, 21-14ರಿಂದ ಅಮೆರಿಕದ ಲಾರೆನ್ ಲ್ಯಾಮ್ ಅವರನ್ನು ಪರಾಭವಗೊಳಿಸಿದರು.

ಮೊದಲ ಗೇಮ್‌ನ ಆರಂಭದಲ್ಲಿ 7–2ರಿಂದ ಮುನ್ನಡೆ ಸಾಧಿಸುವ ಮೂಲಕ ಸಿಂಧು ಹಿಡಿತ ಸಾಧಿಸಿದರು. ಒಂದು ಹಂತದಲ್ಲಿ ಈ ಮುನ್ನಡೆಯನ್ನು 16–9ಕ್ಕೆ ಕೊಂಡೊಯ್ದು ಅವರು ಸುಲಭವಾಗಿ ಗೇಮ್ ತಮ್ಮದಾಗಿಸಿಕೊಂಡರು.

ಎರಡನೇ ಗೇಮ್‌ನ ಆರಂಭದಲ್ಲೂ ಉಭಯ ಆಟಗಾರ್ತಿಯರ ಮಧ್ಯೆ ಜಿದ್ದಾಜಿದ್ದಿ ಪೈಪೋಟಿ ನಡೆಯಿತು. ವಿರಾಮದ ವೇಳೆಗೆ ಸಿಂಧು ಒಂದು ಪಾಯಿಂಟ್‌ನಿಂದ ಮುನ್ನಡೆಯಲ್ಲಿದ್ದರು. ಬಳಿಕ ಸತತ ಆರು ಪಾಯಿಂಟ್ಸ್ ಕಲೆಹಾಕುವುದರೊಂದಿಗೆ ಗೇಮ್ ಹಾಗೂ ಪಂದ್ಯ ಗೆದ್ದ ಸಂತಸದಲ್ಲಿ ತೇಲಿದರು.

ಪಿ.ವಿ.ಸಿಂಧು– ಎಎಫ್‌ಪಿ ಚಿತ್ರ

ಇಲ್ಲಿ ಮೂರನೇ ಶ್ರೇಯಾಂಕ ಪಡೆದಿರುವ ಸಿಂಧು, ಮುಂದಿನ ಪಂದ್ಯದಲ್ಲಿ ಜಪಾನ್‌ನ ಆಯಾ ಒಹೊರಿ ಅವರನ್ನು ಎದುರಿಸುವರು.

ಪುರುಷರ ಸಿಂಗಲ್ಸ್‌ನಲ್ಲಿ ಶ್ರೀಕಾಂತ್ 22–20, 21–11ರಿಂದ ಮಲೇಷ್ಯಾದ ಡ್ಯಾರೆನ್ ಲೀವ್ ಅವರನ್ನು ಮಣಿಸಿದರು.

ಐದನೇ ಶ್ರೇಯಾಂಕದ ಶ್ರೀಕಾಂತ್ ಇಸ್ರೇಲ್‌ನ ಮಿಶಾ ಜಿಲ್ಬರ್‌ಮನ್ ಅವರಿಗೆ ಮುಖಾಮುಖಿಯಾಗುವರು.

ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್‌ಶೆಟ್ಟಿ ಮತ್ತು ಎಂ.ಆರ್. ಅರ್ಜುನ್– ಧ್ರುವ ಕಪಿಲ ಅವರು ಎರಡನೇ ಸುತ್ತು ಪ್ರವೇಶಿಸಿದರು. ಸಾತ್ವಿಕ್– ಚಿರಾಗ್ 21-16, 21-15ರಿಂದ ಕೊರಿಯಾದ ಟೇ ಯಾಂಗ್ ಶಿನ್ ಮತ್ತು ವಾಂಗ್ ಚಾನ್ ಅವರನ್ನು ಪರಾಭವಗೊಳಿಸಿದರು. ಅರ್ಜುನ್– ಧ್ರುವಗೆ ವಾಕ್‌ಓವರ್ ಲಭಿಸಿತು.

ಮಹಿಳಾ ಸಿಂಗಲ್ಸ್ ಹಣಾಹಣಿಯಲ್ಲಿ ಶ್ರೀಕೃಷ್ಣಪ್ರಿಯಾ ಕುದರವಳ್ಳಿ 5–21, 13–21ರಿಂದ ಕೊರಿಯಾದ ಆ್ಯನ್ ಸೆಯುಂಗ್ ಎದುರು ಎಡವಿದರು.

‘ದೇವರ ಕೈ’ ಜೆರ್ಸಿ ಹರಾಜಿಗೆ ನಿರ್ಧಾರ

ನ್ಯೂಯಾರ್ಕ್ (ಎಎಫ್‌ಪಿ): ಫುಟ್‌ಬಾಲ್ ದಂತಕತೆ ಡಿಯೆಗೊ ಮರಡೋನಾ ಅವರಿಗೆ ‘ದೇವರ ಕೈ’ ಖ್ಯಾತಿ ತಂದುಕೊಟ್ಟ ಗೋಲು ಗಳಿಸಿದ ಪಂದ್ಯದಲ್ಲಿ ಧರಿಸಿದ್ದ ಜೆರ್ಸಿಯನ್ನು ಈ ತಿಂಗಳ ಅಂತ್ಯದಲ್ಲಿ ಹರಾಜು ಮಾಡಲು ನಿರ್ಧರಿಸಲಾಗಿದೆ.

1986ರ ವಿಶ್ವಕಪ್ ಟೂರ್ನಿಯ ಇಂಗ್ಲೆಂಡ್ ಎದುರಿನ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಅರ್ಜೆಂಟೀನಾ ಪರವಾಗಿ ಮರಡೋನಾ ಎರಡು ಗೋಲು ಗಳಿಸಿದ್ದರು. ಇದರಲ್ಲಿ ಒಂದು ಗೋಲು ಅವರ ಕೈಯನ್ನು ಸೋಕಿ ಗೋಲುಪೆಟ್ಟಿಗೆಯ ಒಳಗೆ ಸೇರಿತ್ತು. ಅದನ್ನು ಗೋಲಾಗಿ ಪರಿಗಣಿಸಲಾಗಿತ್ತು. ಹೀಗಾಗಿ ದೇವರ ಕೈ ಗೋಲು ಎಂದು ಹೆಸರು ಗಳಿಸಿತ್ತು. ಇಂಗ್ಲೆಂಡ್ ಎದುರು 2–1ರ ಜಯ ಗಳಿಸಲು ಅರ್ಜೆಂಟೀನಾಗೆ ಆ ಗೋಲು ನಿರ್ಣಾಯಕವಾಗಿತ್ತು.

ಮರಡೋನಾ

ಅಂದು 10ನೇ ಸಂಖ್ಯೆಯ ಜೆರ್ಸಿ ತೊಟ್ಟು ಮರಡೋನಾ ಆಡಿದ್ದರು. ಫೈನಲ್‌ನಲ್ಲಿ ಅರ್ಜೆಂಟೀನಾ ಜಯ ಗಳಿಸಿತ್ತು. ಆ ಮೂಲಕ ಎಂಟು ವರ್ಷಗಳಲ್ಲಿ ಎರಡು ಬಾರಿ ಪ್ರಶಸ್ತಿ ಗೆದ್ದುಕೊಂಡಿತ್ತು. ಮೊದಲೇ ಸೂಪರ್ ಸ್ಟಾರ್ ಆಗಿದ್ದ ಮರಡೋನಾ ಆ ವಿಶ್ವಕಪ್ ನಂತರ ಅರ್ಜೆಂಟೀನಾದಲ್ಲಿ ‘ದೇವರು’ ಆಗಿದ್ದರು. 2020ರಲ್ಲಿ ಮರಡೋನಾ ಹೃದಯಾಘಾತದಿಂದ ಸಾವಿಗೀಡಾದ ನಂತರ ಅರ್ಜೆಂಟೀನಾದಲ್ಲಿ ಮೂರು ದಿನ ರಾಷ್ಟ್ರೀಯ ಶೋಕಾಚರಣೆ ಮಾಡಲಾಗಿತ್ತು.

ಕ್ವಾರಂಟೈನ್ ಮುಕ್ತ ಮಹಿಳಾ ಟ್ವೆಂಟಿ20

ನವದೆಹಲಿ (ಪಿಟಿಐ): ಈ ಬಾರಿ ಮಹಿಳೆಯರ ದೇಶಿ ಟ್ವೆಂಟಿ20 ಕ್ರಿಕೆಟ್ ಟೂರ್ನಿಯಲ್ಲಿ ಆಡುವವರು ಕ್ವಾರಂಟೈನ್‌ಗೆ ಒಳಗಾಗಬೇಕಾದ ಅಗತ್ಯವಿಲ್ಲ. ಆದರೆ ಬಯೊಬಬಲ್ ವ್ಯವಸ್ಥೆಯನ್ನು ಮುಂದುವರಿಸಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ನಿರ್ಧರಿಸಿದೆ.

ಮಹಿಳೆಯರ ಟ್ವೆಂಟಿ20 ಟೂರ್ನಿ ಇದೇ 18ರಂದು ಆರಂಭವಾಗಲಿದೆ. ದೇಶದ ಆರು ಕ್ರೀಡಾಂಗಣಗಳಲ್ಲಿ ಟೂರ್ನಿಯ ಪಂದ್ಯಗಳು ನಡೆಯಲಿವೆ. ಕೋವಿಡ್ –19ರಿಂದಾಗಿ ಹಿಂದಿನ ಎರಡು ವರ್ಷಗಳಿಂದ ಕ್ವಾರಂಟೈನ್ ಕಡ್ಡಾಯವಾಗಿತ್ತು. ಎರಡು ವರ್ಷಗಳ ನಂತರ ಫೆಬ್ರುವರಿ ಮತ್ತು ಮಾರ್ಚ್ ತಿಂಗಳಲ್ಲಿ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಮೊದಲ ಹಂತದ ಪಂದ್ಯಗಳು ನಡೆದಿದ್ದವು. ಆಗ ಆಟಗಾರರಿಗೆ ಐದು ದಿನಗಳ ಕ್ವಾರಂಟೈನ್ ಕಡ್ಡಾಯವಾಗಿತ್ತು.

ಕೆಲವು ತಿಂಗಳಿಂದ ಕೋವಿಡ್ ಪ್ರಕರಣಗಳು ಕಡಿಮೆಯಾಗುತ್ತಿರುವುದರಿಂದ ಸದ್ಯ ಕ್ವಾರಂಟೈನ್ ಕೈಬಿಡಲು ಬಿಸಿಸಿಐ ನಿರ್ಧರಿಸಿದೆ.

ಐದು ಎಲೀಟ್ ಗುಂಪುಗಳಲ್ಲಿ ತಲಾ ಆರು ತಂಡಗಳು ಇರಲಿದ್ದು ಪ್ಲೇಟ್ ಗುಂಪಿನಲ್ಲಿ ಏಳು ತಂಡಗಳು ಇರಲಿವೆ. ಪುದುಚೇರಿ, ತಿರುವನಂತಪುರ, ರಾಜ್‌ಕೋಟ್, ಮೊಹಾಲಿ, ರಾಂಚಿ ಮತ್ತು ಗುವಾಹಟಿಯಲ್ಲಿ ಪಂದ್ಯಗಳು ನಡೆಯಲಿವೆ. ನಾಕೌಟ್ ಹಂತದ ಹಣಾಹಣಿಗೆ ಸೂರತ್ ಆತಿಥ್ಯ ವಹಿಸಲಿದೆ. ಪ್ರತಿ ನಗರದ ಎರಡು ಕ್ರೀಡಾಂಗಣಗಳಲ್ಲಿ ಪ್ರತಿ ದಿನ ಮೂರು ಪಂದ್ಯಗಳು ನಡೆಯಲಿವೆ.

ಬಯೊಪಿಕ್: ಹ್ಯಾಮಿಲ್ಟನ್ ಸಂತಸ

ಮೆಲ್ಬರ್ನ್ (ಎಎಫ್‌ಪಿ): ತಮ್ಮ ಬಗ್ಗೆ ಬಯೊಪಿಕ್ ಮಾಡುವುದಾದರೆ ಒಪ್ಪಿಗೆ ಕೊಡಲು ಸಿದ್ಧವಿರುವುದಾಗಿ ಮೋಟರ್ ರೇಸಿಂಗ್ ಪಟು ಲೂಯಿಸ್ ಹ್ಯಾಮಿಲ್ಟನ್ ತಿಳಿಸಿದ್ದಾರೆ.

ಟೆನಿಸ್ ಪಟುಗಳಾದ ವೀನಸ್ ವಿಲಿಯಮ್ಸ್, ಸೆರೆನಾ ವಿಲಿಯಮ್ಸ್ ಮತ್ತು ಅವರ ತಂದೆಯ ಕುರಿತ ‘ಕಿಂಗ್ ರಿಚರ್ಡ್’ ಚಿತ್ರದ ಮಾದರಿಯಲ್ಲಿ ಲೂಯಿಸ್ ಹ್ಯಾಮಿಲ್ಟನ್ ಜೀವನಾಧಾರಿತ ಚಿತ್ರ ನಿರ್ಮಿಸಲು ಸಿದ್ಧತೆ ನಡೆಯುತ್ತಿದೆ.

ವಿಶ್ವ ಮೋಟರ್ ರೇಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಏಳು ಬಾರಿ ಪ್ರಶಸ್ತಿ ಗೆದ್ದಿರುವ ಬ್ರಿಟನ್‌ನ ಹ್ಯಾಮಿಲ್ಟನ್ ಸದ್ಯ ತಮ್ಮ ಜೀವನ ಮತ್ತು ವೃತ್ತಿಯ ಕುರಿತು ಸಾಕ್ಷ್ಯಚಿತ್ರ ನಿರ್ಮಿಸುತ್ತಿದ್ದಾರೆ.

ಚಿತ್ರ ನಿರ್ಮಿಸುವುದರ ಕುರಿತು ತಿಳಿದು ಸಂತೋಷವಾಗಿರುವುದಾಗಿ ಲೂಯಿಸ್ ಹ್ಯಾಮಿಲ್ಟನ್ ಅವರು ಹೇಳಿದ್ದಾರೆ.

ರೋಹಿತ್, ಶುಭಾಂಗ್‌ಗೆ 5 ವಿಕೆಟ್

ಬೆಂಗಳೂರು: ಎ.ಸಿ. ರೋಹಿತ್ ಕುಮಾರ್ ಹಾಗೂ ಶುಭಾಂಗ್ ಹೆಗ್ಡೆ ತಲಾ ಐದು ವಿಕೆಟ್ ಗಳಿಸಿದರು. ಅವರ ಪರಿಣಾಮಕಾರಿ ಬೌಲಿಂಗ್ ನೆರವಿನಿಂದ ಕರ್ನಾಟಕ ತಂಡವು ಸಿ.ಕೆ. ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಉತ್ತರಾಖಂಡ ಎದುರು ಬುಧವಾರ ಮುನ್ನಡೆ ಗಳಿಸಿತು.

ಜೈಪುರದ ಸವಾಯ್ ಮಾನಸಿಂಗ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಉತ್ತರಾಖಂಡ 236 ರನ್‌ಗಳಿಗೆ ಎಲ್ಲ ವಿಕೆಟ್ ಕಳೆದುಕೊಂಡಿತು. ಇದರೊಂದಿಗೆ ಕರ್ನಾಟಕ ತಂಡಕ್ಕೆ 10 ರನ್‌ಗಳ ಮುನ್ನಡೆ ಸಿಕ್ಕಿತ್ತು.

ಎರಡನೇ ಇನಿಂಗ್ಸ್ ಆರಂಭಿಸಿರುವ ಕರ್ನಾಟಕ 32 ಓವರ್‌ಗಳಲ್ಲಿ 4 ವಿಕೆಟ್‌ಗೆ 88 ರನ್ ಗಳಿಸಿದೆ. ರಾಜ್ಯ ತಂಡಕ್ಕೆ ಒಟ್ಟು 98 ರನ್‌ಗಳ ಮುನ್ನಡೆ ಲಭಿಸಿದೆ.

ಶುಭಾಂಗ್ ಹೆಗ್ಡೆ

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಕರ್ನಾಟಕ 66 ಓವರ್‌ಗಳಲ್ಲಿ 246. ಉತ್ತರಾಖಂಡ: 84.1 ಓವರ್‌ಗಳಲ್ಲಿ 236 (ವಿ. ಕಶ್ಯಪ್ 58, ಅಜಿತ್ ಸಿಂಗ್ 58; ಎ.ಸಿ. ರೋಹಿತ್ ಕುಮಾರ್ 77ಕ್ಕೆ 5, ಶುಭಾಂಗ್ ಹೆಗ್ಡೆ 70ಕ್ಕೆ 5). ಎರಡನೇ ಇನಿಂಗ್ಸ್: ಕರ್ನಾಟಕ: 32 ಓವರ್‌ಗಳಲ್ಲಿ 4 ವಿಕೆಟ್‌ಗೆ 32 (ಕಿಶನ್ ಬೆದಾರೆ ಬ್ಯಾಟಿಂಗ್ 23, ಕೃತಿಕ್ ಕೃಷ್ಣ 22).

ಬ್ಯಾಸ್ಕೆಟ್‌ಬಾಲ್: ಕರ್ನಾಟಕ ತಂಡಗಳಿಗೆ ಸೋಲು

ಚೆನ್ನೈ: ಕರ್ನಾಟಕದ ಪುರುಷ ಮಹಿಳಾ ತಂಡಗಳು ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಸೀನಿಯರ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಬುಧವಾರ ಸೋಲು ಅನುಭವಿಸಿದವು.

ಚಾಂಪಿಯನ್‌ಷಿಪ್‌ನ ಎರಡನೇ ಸುತ್ತಿನ ಪಂದ್ಯದಲ್ಲಿ ಕರ್ನಾಟಕದ ಪುರುಷರ ತಂಡವು 71–81ರಿಂದ ಕೇರಳ ತಂಡಕ್ಕೆ ಮಣಿಯಿತು. ವಿಜೇತ ತಂಡದ ಆ್ಯಂಟನಿ ಜಾನ್ಸನ್ 27, ಸೆಜಿನ್ ಮ್ಯಾಥ್ಯು 15 ಪಾಯಿಂಟ್ಸ್ ಕಲೆಹಾಕಿದರು. ಕರ್ನಾಟಕದ ಪರ ಶಶಾಂಕ್ ರೈ 21, ಪ್ರತ್ಯಾಂಶು 20 ಪಾಯಿಂಟ್ಸ್ ದಾಖಲಿಸಿದರು. ಅರವಿಂದ್ (12) ಕೂಡ ಉತ್ತಮ ಆಟವಾಡಿದರು.

ಮಹಿಳೆಯರ ವಿಭಾಗದಲ್ಲಿ ಕರ್ನಾಟಕ 53–90ರಿಂದ ತೆಲಂಗಾಣ ತಂಡಕ್ಕೆ ಸೋತಿತು.

ಅಥ್ಲೆಟಿಕ್ಸ್: ಅಮ್ಲಾನ್ ರಾಷ್ಟ್ರೀಯ ದಾಖಲೆ

ಕೋಯಿಕ್ಕೋಡ್ (ಪಿಟಿಐ): ಟ್ರ್ಯಾಕ್‌ನಲ್ಲಿ ಮಿಂಚು ಹರಿಸಿದ ಅಸ್ಸಾಂನ ಅಮ್ಲಾನ್ ಬೋರ್ಗೊಹೇನ್ 200 ಮೀಟರ್ಸ್ ಓಟದಲ್ಲಿ ರಾಷ್ಟ್ರೀಯ ದಾಖಲೆ ಬರೆದರು.

ಇಲ್ಲಿ ಬುಧವಾರ ಮುಕ್ತಾಯಗೊಂಡ ಫೆಡರೇಷನ್ ಕಪ್ ಅಥ್ಲೆಟಿಕ್ ಕೂಟದಲ್ಲಿ ಅವರು 20.52 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಈ ಮೂಲಕ ಮುಹಮ್ಮದ್ ಅನಾಸ್ ಯಾಹಿಯಾ (20.63 ಸೆಕೆಂಡು) ಅವರ ದಾಖಲೆ ಮುರಿದರು. ಇದು ಅಮ್ಲಾನ್ ಅವರ ಚೊಚ್ಚಲ ಕೂಟವಾಗಿದೆ. ಏಷ್ಯನ್ ಗೇಮ್ಸ್‌ಗೆ ಅರ್ಹತೆ ಪಡೆದುಕೊಳ್ಳುವಲ್ಲಿ ಅವರು ಯಶಸ್ವಿಯಾದರು.

ಪುರುಷರ 5000 ಮೀಟರ್ಸ್ ಓಟದಲ್ಲಿ 13:39.43 ಸಾಧನೆಯೊಂದಿಗೆ ಅವಿನಾಸ್ ಸಬ್ಲೆ ಕೂಟ ದಾಖಲೆ ನಿರ್ಮಿಸಿದರು. ಟ್ರಿಪಲ್ ಜಂಪ್‌ನಲ್ಲಿ ಕೇರಳದ ಎಲ್ಡೋಸ್ ಪೌಲ್ 16.99 ಮೀಟರ್ ಸಾಧನೆಯೊಂದಿಗೆ 10 ವರ್ಷಗಳ ಹಿಂದಿನ ಕೂಟ ದಾಖಲೆ ಮುರಿದರು. ತಮಿಳುನಾಡಿನ ಪ್ರವೀಣ್ ಚಿತ್ರವೇಲ್ ಮತ್ತು ಕೇರಳದ ಕಾರ್ತಿಕ ಉಣ್ಣಿಕೃಷ್ಣನ್ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿ ಎಲ್ಡೋಸ್ ಜೊತೆ ಏಷ್ಯನ್ ಗೇಮ್ಸ್ ಮತ್ತು ಕಾಮನ್ವೆಲ್ತ್ ಗೇಮ್ಸ್‌ಗೆ ಅರ್ಹತೆ ಪಡೆದರು.

ಪ್ರಿಯಾ ಮೋಹನ್ ಉತ್ತಮ ಸಾಧನೆ: ಮಹಿಳೆಯರ 200 ಮೀಟರ್ಸ್ ಓಟದಲ್ಲಿ ಅಸ್ಸಾಂನ ಹಿಮಾ ದಾಸ್ 23.63 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಚಿನ್ನಕ್ಕೆ ಮುತ್ತಿಕ್ಕಿದರು. ಸೆಕೆಂಡಿನ ನೂರನೇ ಒಂದು ಭಾಗದಲ್ಲಿ ಮಹಾರಾಷ್ಟ್ರದ ಕೈಲಾಶ್ ಮಿಶ್ರಾ ಅವರನ್ನು ಹಿಮಾ ಹಿಂದಿಕ್ಕಿದರು. ಕರ್ನಾಟಕದ ಪ್ರಿಯಾ ಮೋಹನ್ ಕಂಚಿನ ಪದಕ ಗೆದ್ದುಕೊಂಡರು. ಆದರೆ ಇಲ್ಲಿ ಅವರ ವೈಯಕ್ತಿಕ ಶ್ರೇಷ್ಠ ಸಾಧನೆ ಮೂಡಿಬಂತು.

ಸಂಕ್ಷಿಪ್ತ ಸುದ್ದಿ

ಹಾಕಿ: ಕರ್ನಾಟಕ ಪಿಎಜಿ ಫೈನಲ್‌ಗೆ

ಬೆಂಗಳೂರು: ಪಿಎಜಿ ಆಡಿಟ್ ಆಯೋಜಿಸಿದ್ದ ಹಾಕಿ ಟೂರ್ನಿಯಲ್ಲಿ ಕರ್ನಾಟಕ ತಂಡ ಭರ್ಜರಿ ಜಯ ಗಳಿಸಿ ಫೈನಲ್ ಪ್ರವೇಶಿಸಿತು.

ನಗರದಲ್ಲಿ ಬುಧವಾರ ನಡೆದ ಸೆಮಿಫೈನಲ್‌ನಲ್ಲಿ ಕರ್ನಾಟಕ ಪಿಎಜಿ 7–0ಯಿಂದ ತಮಿಳುನಾಡು ಎಜಿಯನ್ನು ಮಣಿಸಿತು. ನಿತಿನ್ 4, ನಯಿಮುದ್ದೀನ್, ಜಯಪ್ರಕಾಶ್ ಮತ್ತು ಬೆಳ್ಳಿಯಪ್ಪ ತಲಾ ಒಂದೊಂದು ಗೋಲು ಗಳಿಸಿದರು. ಗುರುವಾರ ನಡೆಯಲಿರುವ ಫೈನಲ್‌ನಲ್ಲಿ ಕರ್ನಾಟಕ ಮತ್ತು ಆಂಧ್ರ ತಂಡಗಳು ಸೆಣಸಲಿವೆ.

ಗಾಲ್ಫ್: ವುಡ್ಸ್ ಕಣಕ್ಕೆ

ಅಗಸ್ಟಾ (ಎಎಫ್‌ಪಿ): ಗಾಲ್ಫ್ ಆಟಗಾರ ಟೈಗರ್ ವುಡ್ಸ್ 17 ತಿಂಗಳುಗಳ ಬಳಿಕ ಮಾಸ್ಟರ್ಸ್ ಟೂರ್ನಿಯಲ್ಲಿ ಕಣಕ್ಕಿಳಿಯಲು ಸಜ್ಜಾಗಿದ್ದಾರೆ.

ಗುರುವಾರ ಇಲ್ಲಿ ಆರಂಭವಾಗಲಿರುವ ಅಗಸ್ಟಾ ನ್ಯಾಷನಲ್ ಮಾಸ್ಟರ್ಸ್‌ನಲ್ಲಿ ಅಮೆರಿಕದ ಆಟಗಾರ ಆಡಲಿದ್ದಾರೆ. ದಾಖಲೆಯ ಆರನೇ ಬಾರಿಗೆ ಪ್ರಶಸ್ತಿಗೆ ಪೈಪೋಟಿ ನಡೆಸಲಿದ್ದಾರೆ.

2021ರ ಫೆಬ್ರುವರಿಯಲ್ಲಿ ಟೈಗರ್ ವುಡ್ ಕಾರು ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದರು. ಮೂರು ತಿಂಗಳ ಕಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು.

ಚಾಂಪಿಯನ್ಸ್ ಲೀಗ್: ಲಿವರ್‌ಪೂಲ್‌ಗೆ ಜಯ

ಲಿಸ್ಬನ್ (ಎಎಫ್‌ಪಿ): ಲಿವರ್‌ಪೂಲ್ ತಂಡವು ಯುಇಎಫ್‌ಎ ಚಾಂಪಿಯನ್ಸ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಬೆನ್ಫಿಕಾ ತಂಡವನ್ನು ಸೋಲಿಸಿತು.ಇಲ್ಲಿ ನಡೆದ ಕ್ವಾರ್ಟರ್‌ಫೈನಲ್ ಮೊದಲ ಲೆಗ್‌ನಲ್ಲಿ ಲಿವರ್‌ಪೂಲ್ 3–1ರಿಂದ ಗೆದ್ದಿತು. ತಂಡದ ಪರ ಇಬ್ರಾಹಿಂ ಕೊನೇಟ್ (17ನೇ ನಿಮಿಷ), ಸ್ಯಾಡಿಯೊ ಮಾನೆ (34ನೇ ನಿ.) ಮತ್ತು ಡಿಯಾಜ್ (87ನೇ ನಿ.) ಗೋಲು ದಾಖಲಿಸಿದರು. ಬೆನ್ಫಿಕಾ ಪರ ಡಾರ್ವಿನ್ ನ್ಯೂನೆಜ್ (49ನೇ ನಿ.) ಗೋಲು ಹೊಡೆದರು.

ಸ್ನೇಹಪರ ಫುಟ್‌ಬಾಲ್ ಪಂದ್ಯ: ಪ್ರಿಯಾಂಕಾ ಕಾಲ್ಚಳಕ

ಭಾರತಕ್ಕೆ ಮಣಿದ ಈಜಿಪ್ಟ್

ಜಾರ್ಕಾ, ಜೋರ್ಡಾನ್ (ಪಿಟಿಐ): ಪ್ರಿಯಾಂಕಾ ದೇವಿ ಗಳಿಸಿದ ಏಕೈಕ ಗೋಲು ಭಾರತಕ್ಕೆ ಜಯ ತಂದುಕೊಟ್ಟಿತು.

ಬುಧವಾರ ಇಲ್ಲಿ ನಡೆದ ಮೊದಲ ಸ್ನೇಹಪರ ಪಂದ್ಯದಲ್ಲಿ ಭಾರತದ ಮಹಿಳಾ ತಂಡ 1–0ಯಿಂದ ಈಜಿಪ್ಟ್ ತಂಡಕ್ಕೆ ಸೋಲುಣಿಸಿತು. ಪ್ರಿಯಾಂಕಾ 30ನೇ ನಿಮಿಷದಲ್ಲಿ ಕಾಲ್ಚಳಕ ತೋರಿದರು.

ವಿಶ್ವ ರ್‍ಯಾಂಕಿಂಗ್‌ನಲ್ಲಿ 95ನೇ ಸ್ಥಾನದಲ್ಲಿರುವ ಈಜಿಪ್ಟ್ ವಿರುದ್ಧ ಪ್ರಿಯಾಂಕಾ ಗಳಿಸಿದ ಮೊದಲ ಗೋಲು ಇದು. ಭಾರತ ರ್‍ಯಾಂಕಿಂಗ್‌ನಲ್ಲಿ 59ನೇ ಸ್ಥಾನದಲ್ಲಿದೆ.

ಆರಂಭದಲ್ಲೇ ಪಂದ್ಯದ ಮೇಲೆ ಹಿಡಿತ ಸಾಧಿಸಲು ಯತ್ನಿಸಿದ ಭಾರತಕ್ಕೆ 18ನೇ ನಿಮಿಷದಲ್ಲಿ ಗೋಲು ಗಳಿಕೆಯ ಅವಕಾಶವೊಂದು ಲಭಿಸಿತ್ತು. ಆದರೆ ನಾಯಕಿ ಆಶಾಲತಾ ದೇವಿ ಪಾಸ್ ಮಾಡಿದ ಚೆಂಡಿನಲ್ಲಿ ಗೋಲು ಗಳಿಸುವ ಅಂಜು ಅವರ ಪ್ರಯತ್ನಕ್ಕೆ ಫಲ ಸಿಗಲಿಲ್ಲ. ಇದಾದ ಎರಡು ನಿಮಿಗಳ ಬಳಿಕವೂ ಭಾರತದ ಅವಕಾಶವೊಂದು ಕೈತಪ್ಪಿತು.

30ನೇ ನಿಮಿಷದಲ್ಲಿ ದಲಿಮಾ ನೀಡಿದ ಪಾಸ್‌ನಲ್ಲಿ ಸೊಗಸಾದ ಗೋಲು ಗಳಿಸುವಲ್ಲಿ ಯಂಗ್ ಫೀಲ್ಡರ್ ಪ್ರಿಯಾಂಕಾ ತಪ್ಪು ಮಾಡಲಿಲ್ಲ. ದ್ವಿತೀಯಾರ್ಧದಲ್ಲಿ ಭಾರತ ತಂಡಕ್ಕೆ ಹೆಚ್ಚು ಅವಕಾಶಗಳು ಲಭಿಸಿದರೂ ಗೋಲು ಗಳಿಕೆ ಸಾಧ್ಯವಾಗಲಿಲ್ಲ.

ಜೋರ್ಡಾನ್‌ನಲ್ಲಿ ಭಾರತ ತಂಡಕ್ಕೆ ಒಲಿದ ಮೊದಲ ಗೆಲುವು ಇದು.

ನಾರಿ ಕಾಂಟ್ರ್ಯಾಕ್ಟರ್‌ಗೆ ಶಸ್ತ್ರಚಿಕಿತ್ಸೆ

ಬೆಂಗಳೂರು: ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ನಾರಿಮನ್ (ನಾರಿ) ಕಾಂಟ್ರ್ಯಾಕ್ಟರ್ ಅವರ ತಲೆಯೊಳಗೆ 60 ವರ್ಷಗಳ ಹಿಂದೆ ಅಳವಡಿಸಿದ್ದ ಟೈಟಾನಿಯಂ ಪ್ಲೇಟ್ ಅನ್ನು ಶಸ್ತ್ರಚಿಕಿತ್ಸೆಯ ಮೂಲಕ ಮುಂಬೈನ ಆಸ್ಪತ್ರೆಯಲ್ಲಿ ಹೊರತೆಗೆಯಲಾಗಿದೆ.

1962ರಲ್ಲಿ ವೆಸ್ಟ್ ಇಂಡೀಸ್ ಪ್ರವಾಸದ ವೇಳೆ ವೇಗಿ ಚಾರ್ಲಿ ಗ್ರಿಫಿತ್ ಅವರ ಬೌನ್ಸರ್ ಎಸೆತ ಕಾಂಟ್ರ್ಯಾಕ್ಟರ್ ಅವರ ತಲೆಗೆ ಬಡಿದಿತ್ತು. ಆ ನಂತರ ಅನೇಕ ಶಸ್ತ್ರಚಿಕಿತ್ಸೆಗಳಿಗೆ ಒಳಗಾಗಿದ್ದರು.

ಕೇರಳದ ಕಣ್ಣೂರಿನಲ್ಲಿ ಬುಧವಾರ ಆರಂಭಗೊಂಡ ಸಿಪಿಎಂನ 23ನೇ ಸಮಾವೇಶದಲ್ಲಿ ಮುಖಂಡರಾದ ಎಸ್‌.ರಾಮಚಂದ್ರನ್ ಪಿಳ್ಳೈ ಹಾಗೂ ಸೀತಾರಾಂ ಯೆಚೂರಿ ಅವರು ಪಕ್ಷದ ಧ್ವಜಾರೋಹಣ ನೆರವೇರಿಸಿದರು. –ಪಿಟಿಐ ಚಿತ್ರ

‘ಎಡಪಕ್ಷಗಳು ಒಂದಾಗಲಿ’

ಕಣ್ಣೂರು (ಪಿಟಿಐ): ದೇಶದಲ್ಲಿನ ಪ್ರಸಕ್ತ ರಾಜಕೀಯ ಪರಿಸ್ಥಿತಿ ಹಾಗೂ ಸವಾಲುಗಳನ್ನು ಎದುರಿಸಲು ಕಮ್ಯುನಿಸ್ಟ್ ಚಳವಳಿಯ ಭಾಗವಾಗಿರುವ ಎಲ್ಲ ಪಕ್ಷಗಳು ಮತ್ತೆ ಒಂದಾಗಬೇಕು ಎಂಬ ಪ್ರತಿಪಾದನೆ ಇಲ್ಲಿ ಆರಂಭವಾದ ಸಿಪಿಎಂನ 23ನೇ ಮಹಾಸಮಾವೇಶದಲ್ಲಿ ಬುಧವಾರ ಪ್ರತಿಧ್ವನಿಸಿತು.

‘ತಮ್ಮ ಇತಿಹಾಸದಲ್ಲಿಯೇ ಎಡಪಕ್ಷಗಳು ಕೆಟ್ಟ ದಿನಗಳನ್ನು ಎದುರಿಸುತ್ತಿವೆ. ಇಂತಹ ದುಃಸ್ಥಿತಿಯನ್ನು ಗೆಲ್ಲಲು ಎಡಪಂಥೀಯ ಪಕ್ಷಗಳು ಮತ್ತೆ ಒಂದಾಗಬೇಕು’ ಎಂದು ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ.ರಾಜಾ ಹೇಳಿದರು.

ಈ ಮಾತಿಗೆ ದನಿಗೂಡಿಸಿದ ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ, ‘ಕಮ್ಯುನಿಸ್ಟ್ ಚಳವಳಿ ಪುನರುಜ್ಜೀವನವು ತತ್ವಾಧಾರಿತವಾಗಿರಬೇಕು. ಈಗಿನ ಸವಾಲುಗಳನ್ನು ಎದುರಿಸಲು ಎಡಪಕ್ಷಗಳು ಒಂದಾಗುವುದು ಮುಖ್ಯ’ ಎಂದರು.

‘ಆರ್‌ಎಸ್‌ಎಸ್ ಮತ್ತು ಬಿಜೆಪಿ ವಿರುದ್ಧ ಒಗ್ಗಟ್ಟಿನ ಹೋರಾಟ ಅಗತ್ಯ ಇದೆ. ಆರ್‌ಎಸ್‌ಎಸ್‌ಅನ್ನು ಸೈದ್ಧಾಂತಿಕವಾಗಿ ಎದುರಿಸಲು ಹಾಗೂ ಪರ್ಯಾಯ ಶಕ್ತಿಯಾಗಿ ಹೊರಹೊಮ್ಮಲು ಎಡಪಂಥಕ್ಕೆ ಮಾತ್ರ ಸಾಧ್ಯ’ ಎಂದು ಉಭಯ ನಾಯಕರು ಹೇಳಿದರು.

‘ಈ ಉದ್ದೇಶ ಸಾಧನೆಗಾಗಿ ಎಲ್ಲ ಪ್ರಗತಿಪರ, ಜಾತ್ಯತೀತ ಹಾಗೂ ಪ್ರಜಾತಾಂತ್ರಿಕ ಶಕ್ತಿಗಳನ್ನು ಒಗ್ಗೂಡಿಸಲು ನಾವು ಶ್ರಮಿಸಬೇಕು. ಆರ್‌ಎಸ್‌ಎಸ್ ಪ್ರಭಾವದಿಂದಾಗಿ ಸಮಾಜದಲ್ಲಿ ಕಂಡುಬರುತ್ತಿರುವ ದ್ವೇಷಪೂರಿತ ಸಿದ್ಧಾಂತಗಳು ಹಾಗೂ ತಾರತಮ್ಯ ಮಾಡುತ್ತಿರುವ ಆಡಳಿತವನ್ನು ಕಿತ್ತೊಗೆಯಲು ಹೋರಾಟ ಅಗತ್ಯ’ ಎಂದರು.

ಅಖಿಲ ಭಾರತ ಫಾರ್ವರ್ಡ್ ಬ್ಲಾಕ್‌ನ ಪ್ರಧಾನ ಕಾರ್ಯದರ್ಶಿ ದೇವವ್ರತ ಬಿಸ್ವಾಸ್ ಮತ್ತಿತರರು ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ಬಿಜೆಪಿಯದ್ದು ‘ರಾಷ್ಟ್ರ ಭಕ್ತಿ’,ಪ್ರತಿಸ್ಪರ್ಧಿಗಳದ್ದು ‘ಪರಿವಾರ ಭಕ್ತಿ’: ಮೋದಿ ವಾಗ್ದಾಳಿ

ನವದೆಹಲಿ (ಪಿಟಿಐ): ಬಿಜೆಪಿ ‘ರಾಷ್ಟ್ರ ಭಕ್ತಿ’ಗೆ ಸಮರ್ಪಿತವಾದ ಪಕ್ಷವಾಗಿದ್ದರೆ, ಪ್ರತಿಸ್ಪರ್ಧಿಗಳದ್ದು ‘ಪರಿವಾರ ಭಕ್ತಿ’ಯನ್ನು ರೂಢಿಸಿಕೊಂಡಿರುವ ಪಕ್ಷಗಳಾಗಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಪ್ರತಿಪಾದಿಸಿದರು.

ಬಿಜೆಪಿಯ 42ನೇ ಸಂಸ್ಥಾಪನಾ ದಿನದಂದು ಬಿಜೆಪಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಅವರು, ವಂಶ ಪಾರಂಪರ್ಯ ಪಕ್ಷಗಳು ಪ್ರಜಾಪ್ರಭುತ್ವಕ್ಕೆ ‘ದೊಡ್ಡ ಶತ್ರುಗಳು’ ಎಂಬುದು ದೇಶದ ಜನರಿಗೆ ಕ್ರಮೇಣ ಮನವರಿಕೆಯಾಗುತ್ತಿದೆ ಎಂದು ತಿಳಿಸಿದರು.

ಕುಟುಂಬ ಆಡಳಿತಕ್ಕೆ ಮೀಸಲಾಗಿರುವ ಪಕ್ಷಗಳು ಸಾಂವಿಧಾನಿಕ ಮಾನದಂಡಗಳ ಬಗ್ಗೆ ಕಿಂಚಿತ್ತೂ ಗಮನ ಹರಿಸುವುದಿಲ್ಲ. ವಿವಿಧ ರಾಜ್ಯಗಳಲ್ಲಿ ಸಕ್ರಿಯವಾಗಿರುವ ಆ ಪಕ್ಷಗಳು ಪರಸ್ಪರ ಭ್ರಷ್ಟಾಚಾರ ಮತ್ತು ದುಷ್ಕೃತ್ಯಗಳನ್ನು ಮುಚ್ಚಿಹಾಕುತ್ತಿವೆ ಎಂದು ದೂರಿದರು.

> **ಪ್ರಧಾನಿ ನರೇಂದ್ರ ಮೋದಿ ನಾಯಕತ್ವದಲ್ಲಿ ಬಿಜೆಪಿಯು ಬಡವರ, ಹಿಂದುಳಿದವರ, ದಲಿತರ ಪಕ್ಷವಾಗಿ ಹೊರಹೊಮ್ಮಿದೆ**
> **ಜೆ.ಪಿ.ನಡ್ಡಾ,** ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ

ದೇಶದ ಯುವ ಪ್ರತಿಭೆಗಳಿಗೆ ಬೆಳೆಯಲು ಅವಕಾಶ ನೀಡದ ಅವರು, ದ್ರೋಹ ಬಗೆದರು ಎಂದು ಮೋದಿ ಯಾವುದೇ ಪಕ್ಷವನ್ನು ಹೆಸರಿಸದೆ ವಾಗ್ದಾಳಿ ನಡೆಸಿದರು.

ಕೇಂದ್ರ ಮತ್ತು ರಾಜ್ಯಗಳಲ್ಲಿರುವ ಬಿಜೆಪಿ ನೇತೃತ್ವದ ಸರ್ಕಾರಗಳು ಯಾವುದೇ ಪಕ್ಷಪಾತವಿಲ್ಲದೆ ಪ್ರತಿಯೊಬ್ಬ ಫಲಾನುಭವಿಗೆ ಕಲ್ಯಾಣ ಯೋಜನೆಗಳನ್ನು ತಲುಪಿಸಲು ಕೆಲಸ ಮಾಡಿವೆ ಎಂದು ಮೋದಿ ಪ್ರತಿಪಾದಿಸಿದರು, ಇದು ‘ಸಬ್ ಕಾ ಸಾಥ್, ಸಬ್ ಕಾ ವಿಕಾಸ್’ ಧ್ಯೇಯವಾಕ್ಯವನ್ನು ಪ್ರತಿಬಿಂಬಿಸುತ್ತದೆ ಎಂದರು.

ಈ ಹಿಂದೆ ಅಧಿಕಾರದಲ್ಲಿದ್ದ ಪಕ್ಷಗಳು ಮತಬ್ಯಾಂಕ್ ರಾಜಕಾರಣ ಮಾಡುತ್ತಿದ್ದವು, ಇದರಲ್ಲಿ ಸಮಾಜದ ಕೆಲವು ವರ್ಗಗಳಿಗೆ ಭರವಸೆಗಳನ್ನು ನೀಡಿ, ಇತರರನ್ನು ನಿರ್ಲಕ್ಷಿಸುತ್ತಿದ್ದರು. ತಾರತಮ್ಯ ಮತ್ತು ಭ್ರಷ್ಟಾಚಾರವು ಮತಬ್ಯಾಂಕ್ ರಾಜಕಾರಣದ ಅಡ್ಡ ಪರಿಣಾಮಗಳಾಗಿವೆ ಎಂದು ಅವರು ಟೀಕಿಸಿದರು.

ರಾಷ್ಟ್ರೀಯ ಹಿತಾಸಕ್ತಿ ಮುಖ್ಯ: ಉಕ್ರೇನ್ ಮೇಲೆ ರಷ್ಯಾದ ಆಕ್ರಮಣದ ಕುರಿತು ಮಾತನಾಡಿದ ಪ್ರಧಾನಿ, ಜಗತ್ತು ಎರಡು ವಿರುದ್ಧ ಧ್ರುವಗಳಲ್ಲಿ ವಿಭಜನೆಯಾದಾಗ ಭಾರತವು ತನ್ನ ರಾಷ್ಟ್ರೀಯ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಕಾರ್ಯನಿರ್ವಹಿಸುತ್ತದೆ ಎಂದರು.

ಸಿಬಿಐ ವಶಕ್ಕೆ ಅನಿಲ್ ದೇಶಮುಖ್

ಮುಂಬೈ(ಪಿಟಿಐ): ಭ್ರಷ್ಟಾಚಾರ ಪ್ರಕರಣ ಸಂಬಂಧ ಮಹಾರಾಷ್ಟ್ರ ಮಾಜಿ ಸಚಿವ ಅನಿಲ್ ದೇಶಮುಖ್ ಅವರನ್ನು ಸಿಬಿಐ ವಿಶೇಷ ನ್ಯಾಯಾಲಯ ಏಪ್ರಿಲ್ 11ರವರೆಗೆ ಕೇಂದ್ರೀಯ ತನಿಖಾ ದಳ(ಸಿಬಿಐ)ದ ವಶಕ್ಕೆ ನೀಡಿದೆ.

ಇಲ್ಲಿನ ಸರ್ಕಾರಿ ಸ್ವಾಮ್ಯದ ಜೆ.ಜೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅವರನ್ನು ಸಿಬಿಐ ಮಂಗಳವಾರ ತನ್ನ ವಶಕ್ಕೆ ಪಡೆದು, ಬುಧವಾರ ವಿಶೇಷ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿತ್ತು. ಈ ವೇಳೆ ಅವರನ್ನು ಏಪ್ರಿಲ್ 11ರವರೆಗೆ ಸಿಬಿಐ ವಶಕ್ಕೆ ನೀಡಲಾಗಿದೆ.

ಅಕ್ರಮ ಹಣ ವರ್ಗಾವಣೆ ತಡೆ (ಪಿಎಂಎಲ್‌ಎ) ಕಾಯ್ದೆಯಡಿ ಕಳೆದ ವರ್ಷ ದೇಶಮುಖ್ ಸೇರಿದಂತೆ ಇತರರ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು. ಆ ಬಳಿಕ ಜಾರಿ ನಿರ್ದೇಶನಾಲಯದಿಂದ ಬಂಧನವಾದಾಗಿನಿಂದಲೂ ಅವರು ನ್ಯಾಯಾಂಗ ವಶದಲ್ಲಿದ್ದರು.

ದೇಶಮುಖ್ ಅವರು ಗೃಹ ಸಚಿವರಾಗಿದ್ದಾಗ ಬಾರ್ ಮತ್ತು ರೆಸ್ಟೊರೆಂಟ್‌ಗಳಿಂದ ಮಾಸಿಕ ₹100 ಕೋಟಿ ಸಂಗ್ರಹಿಸಿಕೊಡಬೇಕು ಎಂಬ ಗುರಿ ನೀಡಿದ್ದರು ಎಂದು ಆಗ ಮುಂಬೈ ಪೊಲೀಸ್ ಆಯುಕ್ತರಾಗಿದ್ದ ಪರಂ ಬೀರ್ ಸಿಂಗ್ ಅವರು ಆರೋಪಿಸಿದ್ದರು. ಇದೇ ಪ್ರಕರಣದಲ್ಲಿ ಇದೀಗ ದೇಶಮುಖ್ ಅವರನ್ನು ಸಿಬಿಐ ಬಂಧಿಸಿದೆ.

ಎಜಿಯುಎಚ್, ಎಲ್‌ಇಟಿಯ ಇಬ್ಬರು ಉಗ್ರರ ಹತ್ಯೆ

ಶ್ರೀನಗರ: ದಕ್ಷಿಣ ಕಾಶ್ಮೀರದ ಪುಲ್ವಾಮ ಜಿಲ್ಲೆಯ ತ್ರಾಲ್ ಪ್ರದೇಶದಲ್ಲಿ ಬುಧವಾರ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ಅಲ್‌ಖೈದಾ ಸಂಘಟನೆಯ ಸಂಯೋಜಿತ ಅನ್ಸರ್ ಘಜ್ವತ್–ಉಲ್–ಹಿಂದ್ (ಎಜಿಯುಎಚ್) ಹಾಗೂ ಲಷ್ಕರ್–ಎ–ತೈಬಾ (ಎಲ್‌ಇಟಿ) ಇಬ್ಬರು ಉಗ್ರರು ಹತರಾಗಿದ್ದಾರೆ.

ಹತ್ಯೆಯಾದವರನ್ನು ಸಫತ್ ಮುಜಾಫ್ಫರ್ ಸೋಫಿ ಅಲಿಯಾಸ್ ಮುವಾವಿಯಾ ಹಾಗೂ ಉಮರ್ ತೇಲಿ ಅಲಿಯಾಸ್ ತಲ್ಹಾ ಎಂದು ಗುರುತಿಸಲಾಗಿದೆ. ಈ ಇಬ್ಬರು ಶ್ರೀನಗರದ ಖೋನ್ ಮೋಹ್ ಪ್ರದೇಶದಲ್ಲಿ ಇತ್ತೀಚೆಗೆ ನಡೆದ ಸರಪಂಚರೊಬ್ಬರ ಹತ್ಯೆ ಸೇರಿದಂತೆ ಹಲವು ಭಯೋತ್ಪಾದನಾ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದರು.

5 ವರ್ಷ: 2 ಲಕ್ಷ ಕೇಂದ್ರ ಉದ್ಯೋಗ’

ನವದೆಹಲಿ(ಪಿಟಿಐ): ಕಳೆದ ಐದು ವರ್ಷಗಳ ಅವಧಿಯಲ್ಲಿ ಸುಮಾರು 2 ಲಕ್ಷ ಅಭ್ಯರ್ಥಿಗಳನ್ನು ಕೇಂದ್ರ ಸರ್ಕಾರದ ನೌಕರಿಗೆ ನೇಮಿಸಿಕೊಳ್ಳಲಾಗಿದೆ ಎಂದು ಕೇಂದ್ರ ಸಿಬ್ಬಂದಿ ಖಾತೆಯ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಬುಧವಾರ ಹೇಳಿದರು.

ಈ ಅವಧಿಯಲ್ಲಿ ಎಸ್‌ಎಸ್‌ಸಿ, ಯುಪಿಎಸ್‌ಸಿಯಿಂದ 1,74,744 ಮತ್ತು 24,836 ಅಭ್ಯರ್ಥಿಗಳನ್ನುನೇಮಿಸಿಕೊಳ್ಳಲಾಗಿದೆ ಎಂದು ತಿಳಿಸಿದರು.

ಪುರಾಣಗಳಲ್ಲಿ ಅತ್ಯಾಚಾರ ಉಲ್ಲೇಖ: ಅಮಾನತು

ಲಖನೌ: ಅತ್ಯಾಚಾರದ ಬಗ್ಗೆ ಉದಾಹರಣೆ ನೀಡುವಾಗ ಹಿಂದೂ ಪುರಾಣಗಳನ್ನು ಉಲ್ಲೇಖಿಸಿದ ಆರೋಪದ ಮೇಲೆ ಅಲಿಗಡ ಮುಸ್ಲಿಂ ವಿಶ್ವವಿದ್ಯಾಲಯದ (ಎಎಂಯು) ಅಡಿಯಲ್ಲಿ ಕಾರ್ಯ ನಿರ್ವಹಿಸುವ ಜವಾಹರಲಾಲ್ ನೆಹರೂ ವೈದ್ಯಕೀಯ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ. ಜಿತೇಂದ್ರ ಕುಮಾರ್ ಎಂಬುವವರನ್ನು ಅಮಾನತು ಮಾಡಲಾಗಿದೆ.

ವಿಧಿವಿಜ್ಞಾನ ಔಷಧ ವಿಭಾಗದ ವಿದ್ಯಾರ್ಥಿಗಳಿಗೆ ಉಪನ್ಯಾಸ ನೀಡುತ್ತಿದ್ದ ಜಿತೇಂದ್ರ ಅವರು, ಹಿಂದೂ ಪುರಾಣಗಳಿಂದ ಅತ್ಯಾಚಾರದ ಉದಾಹರಣೆಗಳನ್ನು ಎತ್ತಿಕೊಂಡರು ಎಂದು ಆರೋಪಿಸಲಾಗಿದೆ.

ತಿಲಕ್ ವರ್ಮಾ–ಸೂರ್ಯಕುಮಾರ್ ಯಾದವ್ 83 ರನ್‌ಗಳ ಜೊತೆಯಾಟ ವ್ಯರ್ಥ

ಕಮಿನ್ಸ್ ಮಿಂಚು; ಕೋಲ್ಕತ್ತ ಜಯಭೇರಿ

ಪುಣೆ (ಪಿಟಿಐ): ಆರಂಭಿಕ ಬ್ಯಾಟರ್ ವೆಂಕಟೇಶ್ ಅಯ್ಯರ್ ಅವರ ಅಮೋಘ ಅರ್ಧಶತಕದ ಬೆನ್ನಲ್ಲೇ ಏಳನೇ ಕ್ರಮಾಂಕದ ಪ್ಯಾಟ್ ಕಮಿನ್ಸ್ ಸ್ಫೋಟಕ ಬ್ಯಾಟಿಂಗ್ ಮೂಲಕ ಮಿಂಚಿದರು. ಇವರಿಬ್ಬರ ಅಬ್ಬರದ ಆಟದ ಬಲದಿಂದ ಕೋಲ್ಕತ್ತ ನೈಟ್ ರೈಡರ್ಸ್ ಭರ್ಜರಿ ಜಯ ಸಾಧಿಸಿತು.

ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆ ಅಂಗಣದಲ್ಲಿ ಬುಧವಾರ ರಾತ್ರಿ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ ಕೋಲ್ಕತ್ತ ನೈಟ್ ರೈಡರ್ಸ್ 5 ವಿಕೆಟ್‌ಗಳ ಜಯ ಗಳಿಸಿತು.

162 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಕೋಲ್ಕತ್ತ 24 ಎಸೆತಗಳು ಬಾಕಿ ಇರುವಾಗಲೇ ದಡ ಸೇರಿತು. ಆರಂಭಿಕ ಬ್ಯಾಟರ್ ಅಜಿಂಕ್ಯ ರಹಾನೆ ಬೇಗನೇ ಔಟಾಗಿದ್ದರು. ನಾಯಕ ಶ್ರೇಯಸ್ ಅಯ್ಯರ್, ವಿಕೆಟ್ ಕೀಪರ್ ಸ್ಯಾಮ್ ಬಿಲಿಂಗ್ಸ್, ನಿತೀಶ್ ರಾಣಾ ಮತ್ತು ಆ್ಯಂಡ್ರೆ ರಸೆಲ್ ಕೂಡ ಬೇಗನೇ ಔಟಾದರು. ಆದರೆ ವೆಂಕಟೇಶ್ ಅಯ್ಯರ್ ಕ್ರೀಸ್‌ನಲ್ಲಿ ಉಳಿದು ಇನಿಂಗ್ಸ್‌ಗೆ ಬಲ ತುಂಬಿದರು. 101 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡಿದ್ದಾಗ ವೆಂಕಟೇಶ್ ಜೊತೆಗೂಡಿದ ಪ್ಯಾಟ್ ಕಮಿನ್ಸ್ 15 ಎಸೆತಗಳಲ್ಲಿ 56 ರನ್ ಗಳಿಸಿ ಸುಲಭ ಜಯಕ್ಕೆ ಕಾರಣರಾದರು. ಅವರ ಬ್ಯಾಟಿನಿಂದ 6 ಸಿಕ್ಸರ್‌ಗಳು ಮತ್ತು 4 ಬೌಂಡರಿಗಳು ಸಿಡಿದವು.

ಮಿಂಚಿದ ಸೂರ್ಯಕುಮಾರ್: ಟಾಸ್ ಗೆದ್ದ ಕೋಲ್ಕತ್ತ ಎದುರಾಳಿ ತಂಡವನ್ನು ಬ್ಯಾಟಿಂಗ್‌ಗೆ ಆಹ್ವಾನಿಸಿತು. ನಾಯಕ ರೋಹಿತ್ ಶರ್ಮಾ ಸೇರಿದಂತೆ ಅಗ್ರ ಕ್ರಮಾಂಕದ ಬ್ಯಾಟರ್‌ಗಳು ವೈಫಲ್ಯ ಕಂಡರು. ಆದರೆ ಸೂರ್ಯಕುಮಾರ್ ಯಾದವ್, ತಿಲಕ್ ವರ್ಮಾ ಮತ್ತು ಕೀರನ್ ಪೊಲಾರ್ಡ್ ತಂಡಕ್ಕೆ ಆಸರೆಯಾದರು. ಇಶಾನ್ ಕಿಶನ್ ಜೊತೆ ಇನಿಂಗ್ಸ್ ಆರಂಭಿಸಿದ ನಾಯಕ ರೋಹಿತ್ ಶರ್ಮಾ ಮೊದಲು ವಿಕೆಟ್ ಒಪ್ಪಿಸಿದರು. ಉಮೇಶ್ ಯಾದವ್ ಹಾಕಿದ ಮೊದಲ ಓವರ್‌ನಲ್ಲಿ ಕೇವಲ ಒಂದು ರನ್ ಮಾತ್ರ ಗಳಿಸಲು ಅವರಿಗೆ ಸಾಧ್ಯವಾಯಿತು. ಉಮೇಶ್ ಯಾದವ್ ಹಾಕಿದ ಇನಿಂಗ್ಸ್‌ನ ಮೂರನೇ ಓವರ್‌ನಲ್ಲಿ ಶಾರ್ಟ್ ಎಸೆತವನ್ನು ಪುಲ್ ಮಾಡಲು ಪ್ರಯತ್ನಿಸಿದ ರೋಹಿತ್ ಅವರ ಬ್ಯಾಟಿನ ಅಂಚಿಗೆ ಸೋಕಿದ ಚೆಂಡು ಫೈನ್ ಲೆಗ್ ನತ್ತ ಚಿಮ್ಮಿತು. ವಿಕೆಟ್ ಕೀಪರ್ ಸ್ಯಾಮ್ ಬಿಲಿಂಗ್ಸ್ ಸುಲಭ ಕ್ಯಾಚ್ ಪಡೆದರು.

ನಾಲ್ಕನೇ ಓವರ್‌ನ ಮೊದಲ ಎಸೆತದಲ್ಲಿ ಇನಿಂಗ್ಸ್‌ನ ಮೊದಲ ಬೌಂಡರಿ ಮೂಡಿಬಂತು. ನಂತರ ಇಶಾನ್ ಮತ್ತು ಡಿವಾಲ್ಡ್ ಬ್ರೆವಿಸ್ ನಿಧಾನಕ್ಕೆ ರನ್ ಗತಿ ಏರಿಸಿದರು. ಆರನೇ ಓವರ್‌ನಲ್ಲಿ ಒಂದು ಬೌಂಡರಿ ಮತ್ತು ಒಂದು ಸಿಕ್ಸರ್ ಗಳಿಸುವಲ್ಲಿ ಬ್ಯಾಟರ್‌ಗಳು ಯಶಸ್ವಿಯಾದರು. ಸ್ಪಿನ್ನರ್‌ಗಳಾದ ಸುನಿಲ್ ನಾರಾಯಣ್ ಮತ್ತು ವರುಣ್ ಚಕ್ರವರ್ತಿ ಅವರನ್ನು ದಾಳಿಗೆ ಇಳಿಸಿದ ಕೋಲ್ಕತ್ತ ನಾಯಕ ಶ್ರೇಯಸ್ ಅಯ್ಯರ್ ರನ್ ಗಳಿಕೆಗೆ ನಿಯಂತ್ರಣ ಹೇರಿದರು.

ವರುಣ್ ಎಸೆತದಲ್ಲಿ ಮಿಂಚಿನ ಸ್ಟಂಪಿಂಗ್ ಮಾಡಿದ ಬಿಲಿಂಗ್ಸ್, ಬ್ರೆವಿಸ್ ಅವರನ್ನು ವಾಪಸ್ ಕಳುಹಿಸಿದರು. 11ನೇ ಓವರ್ ಮುಕ್ತಾಯಗೊಂಡಾಗ 55 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿದ್ದ ತಂಡಕ್ಕೆ ಸೂರ್ಯಕುಮಾರ್ ಯಾದವ್ ಆಸರೆಯಾದರು. 13ನೇ ಓವರ್‌ನ ಕೊನೆಯ ಎರಡು ಎಸೆತಗಳನ್ನು ಕ್ರಮವಾಗಿ ಬೌಂಡರಿ ಮತ್ತು ಸಿಕ್ಸರ್‌ಗೆ ಅಟ್ಟಿದ ಅವರು ಮುಂದಿನ ಓವರ್‌ನಲ್ಲೂ ಬೌಂಡರಿ ಗಳಿಸಿದರು. ತಿಲಕ್ ವರ್ಮಾ ಅವರಿಂದ ಸೂರ್ಯಕುಮಾರ್‌ಗೆ ಉತ್ತಮ ಬೆಂಬಲ ಲಭಿಸಿತು. ಇಬ್ಬರೂ 83 ರನ್‌ಗಳ ಜೊತೆಯಾಟದ ಮೂಲಕ ಭರವಸೆ ಮೂಡಿಸಿದರು.

ಕೀರನ್ ಪೊಲಾರ್ಡ್ ಬೌಂಡರಿ ಭರ್ಜರಿ ಸಿಕ್ಸರ್‌ಗಳ ಮೂಲಕ ಮಿಂಚಿದರು.

ಪ್ಯಾಟ್ ಕಮಿನ್ಸ್ ಬ್ಯಾಟಿಂಗ್ ವೈಖರಿ– ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಮುಂಬೈ ಇಂಡಿಯನ್ಸ್ 4ಕ್ಕೆ 161 (20 ಓವರ್)

ರೋಹಿತ್ ಸಿ ಬಿಲಿಂಗ್ಸ್ ಬಿ ಉಮೇಶ್ 3 (12 ಎ), ಇಶಾನ್ ಸಿ ಶ್ರೇಯಸ್ ಬಿ ಕಮಿನ್ಸ್ 14 (21 ಎ, 4x1), ಬ್ರೆವಿಸ್ ಸ್ಟಂಪ್ಡ್ ಬಿಲಿಂಗ್ಸ್ ಬಿ ವರುಣ್ 29 (19 ಎ, 4x2, 6x2), ಸೂರ್ಯಕುಮಾರ್ ಸಿ ಬಿಲಿಂಗ್ಸ್ ಬಿ ಕಮಿನ್ಸ್ 52 (36 ಎ, 4x5, 6x2) ತಿಲಕ್ ಔಟಾಗದೆ 38 (27 ಎ, 4x3, 6x2), ಪೊಲಾರ್ಡ್ ಔಟಾಗದೆ 22 (5 ಎ, 6x3)

ಇತರೆ (ಲೆಗ್‌ಬೈ 2, ವೈಡ್1) 3

ವಿಕೆಟ್ ಪತನ: 1-6 (ರೋಹಿತ್ ಶರ್ಮಾ, 2.5), 2-45 (ಡಿವಾಲ್ಡ್ ಬ್ರೆವಿಸ್, 7.5), 3-55 (ಇಶಾನ್ ಕಿಶನ್, 10.6), 4-138 (ಸೂರ್ಯಕುಮಾರ್ ಯಾದವ್, 19.1)

ಬೌಲಿಂಗ್: ಉಮೇಶ್ ಯಾದವ್ 4–0–25–1, ರಸಿಕ್ ಸಲಾಮ್ 3–0–18–0, ಪ್ಯಾಟ್ ಕಮಿನ್ಸ್ 4–0–49–2, ಸುನಿಲ್ ನಾರಾಯಣ್ 4–0–26–0, ವರುಣ್ ಚಕ್ರವರ್ತಿ 4–0–32–1,ಆ್ಯಂಡ್ರೆ ರಸೆಲ್ 1–0–9–0

ಕೋಲ್ಕತ್ತ ನೈಟ್ ರೈಡರ್ಸ್ 5ಕ್ಕೆ 162 (16 ಓವರ್)

ಅಜಿಂಕ್ಯ ಸಿ ಸ್ಯಾಮ್ಸ್ ಬಿ ಮಿಲ್ಸ್ 7 (11ಎ), ವೆಂಕಟೇಶ್ ಔಟಾಗದೆ 50 (41ಎ, 4X6, 6X1), ಶ್ರೇಯಸ್ ಸಿ ತಿಲಕ್ ಬಿ ಸ್ಯಾಮ್ಸ್ 10 (6ಎ, 4X2), ಬಿಲಿಂಗ್ಸ್ ಸಿ ಬಾಸಿಲ್ ಬಿ ಅಶ್ವಿನ್ 17 (12ಎ, 6X2), ನಿತೀಶ್ ಸಿ ಸ್ಯಾಮ್ಸ್ ಬಿ ಅಶ್ವಿನ್ 8 (7ಎ, 6X1), ರಸೆಲ್ ಸಿ ಬ್ರೆವಿಸ್ ಬಿ ಮಿಲ್ಸ್ 11 (5ಎ, 4X1, 6X1), ಪ್ಯಾಟ್ ಕಮಿನ್ಸ್ ಔಟಾಗದೆ 56 (15ಎ, 4X4, 6X6)

ಇತರೆ (ಲೆಗ್‌ಬೈ 2, ನೋಬಾಲ್ 1) 3

ವಿಕೆಟ್ ಪತನ: 1-16 (ಅಜಿಂಕ್ಯ ರಹಾನೆ, 4.1), 2-35 (ಶ್ರೇಯಸ್ ಅಯ್ಯರ್, 5.6), 3-67 (ಸ್ಯಾಮ್ ಬಿಲಿಂಗ್ಸ್, 9.5), 4-83 (ನಿತೀಶ್ ರಾಣಾ, 11.4), 5-101 (ಆ್ಯಂಡ್ರೆ ರಸೆಲ್, 13.1)

ಬೌಲಿಂಗ್: ಬಾಸಿಲ್ ಥಂಪಿ 3–0–15–0, ಡೇನಿಯಲ್ ಸ್ಯಾಮ್ಸ್ 3–0–50–1, ಜಸ್‌ಪ್ರೀತ್ ಬೂಮ್ರಾ 3–0–26–0, ಟೈಮಿಲ್ ಮಿಲ್ಸ್ 3–0–38–2, ತಿಲಕ್ ವರ್ಮಾ 1–0–6–0, ಮುರುಗನ್ ಅಶ್ವಿನ್ 3–0–25–2

ಫಲಿತಾಂಶ: ಕೋಲ್ಕತ್ತ ನೈಟ್ ರೈಡರ್ಸ್‌ಗೆ 5 ವಿಕೆಟ್‌ಗಳ ಜಯ

ಜಂಟಿ ವೇಗದ ಅರ್ಧಶತಕ

ಕ್ವಾರಂಟೈನ್ ಮುಗಿಸಿದ ನಂತರ ಮೊದಲ ಪಂದ್ಯ ಆಡಿದ ಪ್ಯಾಟ್ ಕಮಿನ್ಸ್ ಅವರು ಐಪಿಎಲ್‌ನಲ್ಲಿ ವೇಗದ ಅರ್ಧಶತಕ ಗಳಿಸಿದ ಜಂಟಿ ದಾಖಲೆ ಮಾಡಿದರು. 14 ಎಸೆತಗಳಲ್ಲಿ 50 ರನ್ ಪೂರ್ಣಗೊಳಿಸಿದರು. 2018ರಲ್ಲಿ ಕೆ.ಎಲ್.ರಾಹುಲ್ ಪಂಜಾಬ್ ಕಿಂಗ್ಸ್ ತಂಡದ ಪರ 14 ಎಸೆತಗಳಲ್ಲಿ 50 ರನ್ ಗಳಿಸಿದ್ದರು. ಗೆಲುವಿನ ಸಿಕ್ಸರ್ ಸೇರಿದಂತೆ 6 ಸಿಕ್ಸರ್‌ಗಳು ಅವರ ಬ್ಯಾಟಿನಿಂದ ಸಿಡಿದಿದ್ದವು.

ಆತ್ಮಸಾಕ್ಷಿಗೆ ನ್ಯಾಯ ಒದಗಿಸಿರುವೆ: ಕಾರ್ತಿಕ್

ಮುಂಬೈ (ಪಿಟಿಐ): ‘ನನ್ನ ಆತ್ಮಸಾಕ್ಷಿಗೆ ನ್ಯಾಯ ಒದಗಿಸಲು ಪ್ರಾಮಾಣಿಕ ಮತ್ತು ಪ್ರಜ್ಞಾಪೂರ್ವಕ ಪ್ರಯತ್ನ ಮಾಡಿದ್ದೇನೆ. ಇದರ ಫಲವಾಗಿ ಹಿಂದಿನ ಕೆಲವು ವರ್ಷಗಳಲ್ಲಿ ಉತ್ತಮ ಸಾಮರ್ಥ್ಯ ತೋರಲು ಸಾಧ್ಯವಾಗಿದೆ’ ಎಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದ ದಿನೇಶ್ ಕಾರ್ತಿಕ್ ಅಭಿಪ್ರಾಯಪಟ್ಟರು.

ದಿನೇಶ್ ಕಾರ್ತಿಕ್

ವಾಂಖೆಡೆ ಕ್ರೀಡಾಂಗಣದಲ್ಲಿ ಮಂಗಳವಾರ ರಾತ್ರಿ ನಡೆದ ರಾಜಸ್ಥಾನ್ ರಾಯಲ್ಸ್ ಎದುರಿನ ಪಂದ್ಯದಲ್ಲಿ ದಿನೇಶ್ ಕಾರ್ತಿಕ್ ಮತ್ತು ಶಹಬಾಜ್ ನದೀಮ್ ಅವರ ಹೋರಾಟಕಾರಿ ಬ್ಯಾಟಿಂಗ್ ನೆರವಿನಿಂದ ಆರ್‌ಸಿಬಿ 4 ವಿಕೆಟ್‌ಗಳ ಜಯ ಸಾಧಿಸಿತ್ತು.

‘ನನಗೆ ಸಿಕ್ಕಿದ ತರಬೇತಿ ವಿಶಿಷ್ಟವಾಗಿತ್ತು. ಪ್ರತಿ ಪಂದ್ಯದ ನಂತರವೂ ಸಂಪೂರ್ಣ ಸಾಮರ್ಥ್ಯ ಸಾಬೀತು ಮಾಡಲು ಸಾಧ್ಯವಾಗಲಿಲ್ಲ ಎಂದು ನನಗೆ ನಾನೇ ಹೇಳಿಕೊಳ್ಳುತ್ತಿದ್ದೆ. ಗುರಿ ಇದೆ. ಗುರಿ ಸಾಧಿಸುವ ಪ್ರಯತ್ನದಲ್ಲಿದ್ದೇನೆ’ ಎಂದು ದಿನೇಶ್ ಹೇಳಿದರು.

ನೇಥನ್ ಕಾಲ್ಟರ್‌ನೈಲ್ ಅಲಭ್ಯ

ನವದೆಹಲಿ (ಪಿಟಿಐ): ರಾಜಸ್ಥಾನ್ ರಾಯಲ್ಸ್‌ನಲ್ಲಿ ಆಡುತ್ತಿರುವ ಆಸ್ಟ್ರೇಲಿಯಾದ ವೇಗದ ಬೌಲಿಂಗ್ ಆಲ್‌ರೌಂಡರ್ ನೇಥನ್ ಕಾಲ್ಟರ್‌ನೈಲ್ ಅವರು ಐಪಿಎಲ್‌ನ ಉಳಿದ ಪಂದ್ಯಗಳಿಗೆ ಅಲಭ್ಯರಾಗಲಿದ್ದಾರೆ. ಸನ್‌ರೈಸರ್ಸ್ ಹೈದರಾಬಾದ್ ಎದುರು ನಡೆದ ಪಂದ್ಯದಲ್ಲಿ ಅವರು ಪಕ್ಕೆಲುಬಿನ ಗಾಯಕ್ಕೆ ಒಳಗಾಗಿದ್ದರು. ‘ನೇಥನ್ ಚಿಕಿತ್ಸೆ ಮತ್ತು ಪುನಶ್ಚೇತನ ಶಿಬಿರದಲ್ಲಿ ಪಾಲ್ಗೊಳ್ಳುವುದಕ್ಕಾಗಿ ತಾಯ್ನಾಡಿಗೆ ಮರಳಿದ್ದಾರೆ. ಬೇಗನೇ ಗುಣಮುಖರಾಗಲಿ’ ಎಂಬುದಾಗಿ ತಂಡದ ಫಿಜಿಯೊ ಜಾನ್ ಗ್ಲಾಸ್ಟರ್ ಟ್ವೀಟ್ ಮಾಡಿರುವ ವಿಡಿಯೊದಲ್ಲಿ ಹೇಳಿದ್ದಾರೆ.

ರಾಹುಲ್-ರಿಷಭ್ ಕದನ ಕುತೂಹಲ

ಡೆಲ್ಲಿ ಕ್ಯಾಪಿಟಲ್ಸ್– ಲಖನೌ ಸೂಪರ್‌ಜೈಂಟ್ಸ್ ಹಣಾಹಣಿ

ಮುಂಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ಭವಿಷ್ಯದ ನಾಯಕರೆಂದೇ ಪರಿಗಣಿಸಲಾಗಿರುವ ಕೆ.ಎಲ್. ರಾಹುಲ್ ಮತ್ತು ರಿಷಭ್ ಪಂತ್ ಅವರ ಮುಖಾಮುಖಿಗೆ ವೇದಿಕೆ ಸಜ್ಜುಗೊಂಡಿದೆ. ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ರಾಹುಲ್ ನಾಯಕತ್ವದ ಲಖನೌ ಸೂಪರ್ ಜೈಂಟ್ಸ್ ಮತ್ತು ರಿಷಭ್ ಮುನ್ನಡೆಸುತ್ತಿರುವ ಡೆಲ್ಲಿ ಕ್ಯಾಪಿಟಲ್ಸ್ ತಂಡಗಳು ಗುರುವಾರ ಮುಖಾಮುಖಿಯಾಗಲಿವೆ.

ರಿಷಭ್ ಪಂತ್

ಸ್ಫೋಟಕ ಮತ್ತು ತಂತ್ರಶಾಲಿ ಬ್ಯಾಟಿಂಗ್ ಮೂಲಕ ಪಂದ್ಯ ಗೆಲ್ಲಿಸಿಕೊಡಬಲ್ಲ ಸಾಮರ್ಥ್ಯ ಹೊಂದಿರುವವರು ರಾಹುಲ್ ಮತ್ತು ರಿಷಭ್ ಪಂತ್. ನಿರ್ಧಾರ ಕೈಗೊಳ್ಳುವುದು ಸೇರಿದಂತೆ ನಾಯಕತ್ವ ಗುಣವನ್ನು ಸಾಬೀತುಪಡಿಸುವುದಕ್ಕೆ ಇಬ್ಬರಿಗೂ ಐಪಿಎಲ್ ಉತ್ತಮ ವೇದಿಕೆಯಾಗಿದೆ.

ಗುರುವಾರದ ಪಂದ್ಯಕ್ಕೆ ಎನ್ರಿಚ್ ನಾರ್ಕಿಯಾ ಮತ್ತು ಡೇವಿಡ್ ವಾರ್ನರ್ ಅವರು ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಲಭ್ಯವಾಗಲಿದ್ದು ಲಖನೌ ಸೂಪರ್ ಜೈಂಟ್ಸ್ ತಂಡದಲ್ಲಿ ಮಾರ್ಕಸ್ ಸ್ಟೋಯಿನಿಸ್ ಕಾಣಿಸಿಕೊಳ್ಳಲಿದ್ದಾರೆ. ಆದ್ದರಿಂದ ಎರಡೂ ತಂಡಗಳು ಹುಮ್ಮಸ್ಸಿನಲ್ಲಿವೆ.

ಡೇವಿಡ್ ವಾರ್ನರ್ ಅವರ ಕ್ವಾರಂಟೈನ್ ಅವಧಿ ಮುಗಿದಿದ್ದು ಆಯ್ಕೆಗೆ ಲಭ್ಯ ಇದ್ದಾರೆ. ನಾರ್ಕಿಯಾ ಅವರು ಫಿಟ್‌ನೆಸ್ ಟೆಸ್ಟ್‌ನಲ್ಲಿ ತೇರ್ಗಡೆಯಾಗಿದ್ದಾರೆ. ವಾರ್ನರ್‌ಗಾಗಿ ಟಿಮ್ ಸೀಫರ್ಟ್ ಅವರನ್ನು ಅಂತಿಮ 11ರಿಂದ ಹೊರಗಿಡುವ ಸಾಧ್ಯತೆಗಳಿದ್ದು ರೋವ್ಮನ್ ಪೊವೆಲ್ ಅಥವಾ ಮುಸ್ತಫಿಜುರ್ ರಹಮಾನ್ ಬದಲಿಗೆ ನಾರ್ಕಿಯಾ ಅವರನ್ನು ಕರೆಸಿಕೊಳ್ಳುವ ಸಾಧ್ಯತೆ ಇದೆ.ಲಖನೌ ತಂಡದ ಆಡಳಿತವು ಆಲ್‌ರೌಂಡರ್ ಸ್ಟೋಯಿನಿಸ್‌ಗಾಗಿ ಆ್ಯಂಡ್ರ್ಯೂ ಟೈ ಅಥವಾ ಎವಿನ್ ಲೂಯಿಸ್ ಅವರನ್ನು ಹೊರಗಿಡುವುದು ಖಚಿತ.

ಕಾಡುತ್ತಿರುವ ಬೌಲಿಂಗ್ ಸಮಸ್ಯೆ: ಎರಡೂ ತಂಡಗಳಿಗೆ ಬೌಲಿಂಗ್ ಸಮಸ್ಯೆ ಕಾಡುತ್ತಿದೆ. ಲಖನೌ ಈ ಸಮಸ್ಯೆಯನ್ನು ತಕ್ಕ ಮಟ್ಟಿಗೆ ಪರಿಹರಿಸಿಕೊಂಡಿದೆ. ಜೇಸನ್ ಹೋಲ್ಡರ್ ಅವರ ಉಪಸ್ಥಿತಿ ತಂಡಕ್ಕೆ ಬಲ ತುಂಬಿದೆ. ವಾರ್ನರ್ ತಂಡದಲ್ಲಿದ್ದರೆ ಡೆಲ್ಲಿಗೂ ಬಲ ಬಂದಂತೆ.

ಈ ಬಾರಿ ಉಭಯ ನಾಯಕರ ಬಲಾಬಲ

ಆಟಗಾರ	ಪಂದ್ಯ	ರನ್	ಗರಿಷ್ಠ	ಅರ್ಧಶತಕ	ಬೌಂಡರಿ	ಸಿಕ್ಸರ್
ರಿಷಭ್ ಪಂತ್	2	44	43	-	7	-
ರಾಹುಲ್	3	108	68	1	8	4

ಕೆ.ಎಲ್ ರಾಹುಲ್ –ಪಿಟಿಐ ಚಿತ್ರ

ಪಂದ್ಯ ಆರಂಭ ರಾತ್ರಿ 7.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ಕೋಲ್ಕತ್ತ	4	3	1	0	0	6
ರಾಜಸ್ಥಾನ	3	2	1	0	0	4
ಗುಜರಾತ್	2	2	0	0	0	4
ಪಂಜಾಬ್	3	2	1	0	0	4
ಲಖನೌ	3	2	1	0	0	4
ಬೆಂಗಳೂರು	3	2	1	0	0	4
ಡೆಲ್ಲಿ	2	1	1	0	0	2
ಚೆನ್ನೈ	3	0	3	0	0	0
ಮುಂಬೈ	3	0	3	0	0	0
ಹೈದರಾಬಾದ್	2	0	2	0	0	0

*ಬುಧವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜಾಸ್ ಬಟ್ಲರ್	ರಾಜಸ್ಥಾನ	205
ಇಶಾನ್	ಮುಂಬೈ	149
ಡುಪ್ಲೆಸಿ	ಬೆಂಗಳೂರು	122

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಉಮೇಶ್	ಕೋಲ್ಕತ್ತ	9
ಯಜುವೇಂದ್ರ	ರಾಜಸ್ಥಾನ	7
ಆವೇಶ್ ಖಾನ್	ಲಖನೌ	7